# ಅಧ್ಯಾಯ–೧೬

# ಇತರ ಸಮಾಜ ಸೇವಾ ಸೌಲಭ್ಯಗಳು

ದೇಶದ ದುರ್ಬಲ ವರ್ಗದವರನ್ನು ಮತ್ತು ಮಹಿಳೆಯರನ್ನು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಮೇಲೆತ್ತುವ ಮೂಲಕ ಯಾವುದೇ ದೇಶದ ಅಭಿವೃದ್ಧಿ ಸಾಧ್ಯ. ಮೇಲು–ಕೀಳು, ಸ್ತ್ರೀ–ಪುರುಷ, ಮೇಲ್ಜಾತಿ–ಕೆಳಜಾತಿ ಎಂಬ ಭೇದಗಳನ್ನು ನಿವಾರಿಸಿ, ಸಮಾನತೆಯನ್ನು ಸಾಧಿಸಿದಲ್ಲಿ, ಅಂತಹ ದೇಶ ಸಂಪೂರ್ಣವಾಗಿ ಮುಂದುವರಿದಂತಹ ದೇಶವೆಂಬ ಪರಿಗಣನೆಗೆ ಬರಲು ಸಾಧ್ಯ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮಾಜ ಕಲ್ಯಾಣದ ವಿವಿಧ ಯೋಜನೆಗಳ ಮೂಲಕ ರಾಷ್ಟ್ರವನ್ನು ಅಭಿವೃದ್ಧಿಗೊಳಿಸಲು ಪ್ರಯತ್ನಿಸುತ್ತಿವೆ. ಇದೇ ರೀತಿಯಲ್ಲಿ ರಾಜ್ಯದ ಜನತೆಯ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸ್ಥಾನಮಾನದಲ್ಲಿ ಸಮಾನತೆಯನ್ನು ಸ್ಥಾಪಿಸುವುದು ಕರ್ನಾಟಕ ಸರ್ಕಾರದ ಧ್ಯೇಯವೂ ಆಗಿದೆ. ದಲಿತರು, ಹಿಂದುಳಿದವರು, ಮಹಿಳೆಯರು, ಮಕ್ಕಳು, ಕಾರ್ಮಿಕರು, ವಿಕಲಚೇತನರು ಮುಂತಾದವರ ಏಳಿಗೆಗಾಗಿ ಕೈಗೊಳ್ಳುವ ಕಾರ್ಯಗಳೆಲ್ಲವೂ ಸಮಾಜ ಸೇವೆಯ ವಿವಿಧ ವಿಧಾನಗಳಾಗಿವೆ. ಸರ್ಕಾರದೊಂದಿಗೆ ಖಾಸಗಿ ಸಂಸ್ಥೆಗಳೂ ಈ ನಿಟ್ಟಿನಲ್ಲಿ ತಮ್ಮ ಕಾರ್ಯ ಯೋಜನೆಯನ್ನು ರೂಪಿಸಿಕೊಂಡು, ಕರ್ನಾಟಕವನ್ನು ಪ್ರಗತಿಪರ ಹಾಗೂ ಸರ್ವ ಸಮಾನತೆಯ ರಾಜ್ಯವನ್ನಾಗಿಸಲು ಪ್ರಯತ್ನಿಸುತ್ತಿವೆ.

ತುಮಕೂರು ಜಿಲ್ಲೆಯ ಜನತೆಗೆ ಸರ್ಕಾರದ ವತಿಯಿಂದ ಹಾಗೂ ಖಾಸಗಿ ಸಂಸ್ಥೆಗಳು ಅನುಷ್ಠಾನಗೊಳಿಸುತ್ತಿರುವ ವಿಭಿನ್ನ ಕಲ್ಯಾಣ ಕಾರ್ಯಕ್ರಮಗಳು ಹಾಗೂ ಅವುಗಳ ಸಫಲತೆಯ ಕುರಿತ ಒಂದು ಕಿರು ಪರಿಚಯವನ್ನು ಈ ಅಧ್ಯಾಯದಲ್ಲಿ ನೀಡಲು ಪ್ರಯತ್ನಿಸಲಾಗಿದೆ.

## ಕಾರ್ಮಿಕ ಕಲ್ಯಾಣ

ಕಾರ್ಮಿಕ ಕಾನೂನುಗಳು ಸ್ವಾತಂತ್ರ್ಯಪೂರ್ವದಲ್ಲಿ ಬಹಳ ಕಡಿಮೆಯಿದ್ದವು. ಕೈಗಾರಿಕಾ ಅಭಿವೃದ್ಧಿಯು ಮಿತಿಯಲ್ಲಿತ್ತು. ಕಾರ್ಮಿಕ ಸಂಘಟನೆಯೂ ಸೀಮಿತವಾಗಿತ್ತು. ಕರ್ನಾಟಕದಲ್ಲಿ ಮೊದಲ ಮಹಾಯುದ್ಧದ ಅಂತ್ಯದ ವೇಳೆಗೆ ಆಧುನಿಕ ಕೈಗಾರಿಕೆಗಳು ತಲೆದೋರಿದ್ದವಾದರೂ ಕಾರ್ಮಿಕ ಸಂಘಟನೆಯಾಗಿರಲಿಲ್ಲ. ಬ್ರಿಟಿಷ್ ಸರ್ಕಾರವು ಭಾರತದಲ್ಲಿ ೧೯೩೧ರ ಕೊನೆಯ ದಶಕದಲ್ಲಿ ಕಾರ್ಮಿಕ ನಿಯೋಜನೆ ಸಮಿತಿಯೊಂದನ್ನು ರಚಿಸಿ ಅನಿಯಂತ್ರಿತ ಕೈಗಾರಿಕಾ ವ್ಯವಹಾರಗಳನ್ನು ಮತ್ತು ಕೂಲಿಕಾರರ ಪರಿಸ್ಥಿತಿಗಳನ್ನು ವರದಿ ಮಾಡುವಂತೆ ಆದೇಶಿಸಿತು. ೧೯೨೬ರಲ್ಲಿ ಕೇಂದ್ರದಲ್ಲಿ ಮನ್ನಣೆ ಪಡೆದ ಕಾರ್ಮಿಕ ಸಂಘಗಳ ಅಧಿನಿಯಮವು, ಹಳೆಯ ಮೈಸೂರು ಪ್ರದೇಶಗಳಿಗೆ ೧೯೪೧ರ ವರೆಗೆ ಅನ್ವಯವಾಗಲಿಲ್ಲ. ಆದರೂ ಕಾಂಗ್ರೆಸ್ ಮುಖಂಡರು ಮೊದಲ ಬಾರಿಗೆ ಕೆಲಸಗಾರರ ಸಂಘಟನೆಯೊಂದನ್ನು ಬೆಂಗಳೂರಿನಲ್ಲಿ ಕೈಗೊಂಡರು.

ಕರ್ನಾಟಕದಲ್ಲಿ ಕೆಲವು ಉದ್ದಿಮೆದಾರರು ಸ್ವಪ್ರೇರಣೆಯಿಂದ ತಮ್ಮ ಕಾರ್ಖಾನೆಗಳಲ್ಲಿ ಹಲವಾರು ಕಾರ್ಮಿಕ ಕಲ್ಯಾಣ ಸೌಲಭ್ಯಗಳನ್ನು ಒದಗಿಸಿದ್ದರು. ಆದರೆ ಈ ಸೌಲಭ್ಯಗಳು ಹೆಚ್ಚು ಪರಿಣಾಮಕಾರಿಯಾಗಿರಲಿಲ್ಲ. ಕಾರ್ಮಿಕ ಸಂಘಗಳಿಗೂ, ಕಾರ್ಮಿಕ ಕಲ್ಯಾಣ ಸೌಲಭ್ಯಗಳನ್ನು ಜಾರಿಗೊಳಿಸುವ ಕುರಿತು ಸರಿಯಾದ ತಿಳುವಳಿಕೆ ಇರಲಿಲ್ಲ. ಆದ್ದರಿಂದ ಸರ್ಕಾರದ ಮಧ್ಯಪ್ರವೇಶ ಅವಶ್ಯಕವಾಯಿತು. ಇದರೊಂದಿಗೆ ಭಾರತ ಸರ್ಕಾರದ ೧೯೪೭ರ ಔದ್ಯೋಗಿಕ ವ್ಯಾಜ್ಯ ಕಾಯ್ದೆಯೂ ಜಾರಿಗೆ ಬಂದಿತು. ಸಂಧಾನ ಮತ್ತು ಕಡ್ಡಾಯ ಮಧ್ಯಸ್ಥಿಕೆ ಮುಖಾಂತರ ಔದ್ಯೋಗಿಕ ಶಾಂತಿಯನ್ನು ದೊರಕಿಸಿಕೊಡುವುದು, ಸಂಘಟಿತ ಕಾರ್ಮಿಕರ ವ್ಯಾಜ್ಯಗಳಿಗೆ ಪರಿಹಾರವನ್ನು ನೀಡುವುದು ಈ ಕಾಯ್ದೆಯ ಮುಖ್ಯ ಉದ್ದೇಶಗಳಾಗಿದ್ದವು. ಅದರಂತೆ ಕೇಂದ್ರ ಸರ್ಕಾರದ ೧೯೪೮ರ ಕಾರ್ಖಾನೆಯ ಕಾನೂನಿನನ್ವಯದಿಂದಾಗಿ ರಾಜ್ಯದಲ್ಲಿ ೧೯೫೦ ರಿಂದ ಪ್ರತಿಯೊಬ್ಬ ಉದ್ಯಮಿಯೂ ತನ್ನ ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕೆಲವು ಸೌಲಭ್ಯಗಳನ್ನು ಕಡ್ಡಾಯವಾಗಿ ಒದಗಿಸಬೇಕಾಯಿತು. ಈ ಯೋಜನೆಯಡಿ ತಂಪಾದ ಮತ್ತು ಶುದ್ಧವಾದ ಕುಡಿಯುವ ನೀರು, ಶೌಚಾಲಯ, ೨೫೦ಕ್ಕೂ ಹೆಚ್ಚು ಕಾರ್ಮಿಕರಿರುವ ಕಾರ್ಖಾನೆಗಳಲ್ಲಿ ಉಪಹಾರ ಮಂದಿರ, ೧೫೦ಕ್ಕೂ ಹೆಚ್ಚು ಕಾರ್ಮಿಕರಿರುವ ಪ್ರತಿ ಕಾರ್ಖಾನೆಯಲ್ಲೂ ಉಪಹಾರ ಕೋಣೆಯ ವ್ಯವಸ್ಥೆ ಮಾಡಬೇಕೆಂಬ ಮತ್ತು ೫೦ಕ್ಕೂ ಹೆಚ್ಚು ಮಹಿಳಾ ಕಾರ್ಮಿಕರಿರುವ ಪ್ರತಿಯೊಂದು ಕಾರ್ಖಾನೆಯಲ್ಲೂ ವಿಶ್ರಾಂತಿ ಗೃಹ, ನೌಕರರ ಮಕ್ಕಳಿಗೆ ಶಿಶು ವಿಹಾರ, ಒದಗಿಸಬೇಕೆಂಬ ನಿರ್ಬಂಧವನ್ನು ತರಲಾಯಿತು. ಕಾರ್ಯಾಗಾರದಲ್ಲಿ ಕೆಲಸ ಮಾಡುವ ಕಾರ್ಮಿಕರ ಸುರಕ್ಷತೆ ಮತ್ತು ಆರೋಗ್ಯದ ದೃಷ್ಟಿಯಿಂದ ಪ್ರತಿಯೊಂದು ಕಾರ್ಖಾನೆಯಲ್ಲೂ ಆವಿ, ಹೊಗೆ ಮತ್ತು ಧೂಳು ಹೊರಗೆ ಹೋಗಲು ಸೂಕ್ತ ವ್ಯವಸ್ಥೆ, ಆಕಸ್ಮಿಕ ಅಪಘಾತಗಳನ್ನು ತಡೆಗಟ್ಟಲು ಯಂತ್ರಗಳಿಗೆ ಬೇಲಿ ನಿರ್ಮಾಣ, ಕಾರ್ಮಿಕರಿಗೆ ಸುರಕ್ಷತೆಯಿಂದ ಕೂಡಿದ ಸಮವಸ್ತ್ರಗಳ ಪೂರೈಕೆ, ಪಾದರಕ್ಷೆಗಳು ಹಾಗೂ ಕನ್ನಡಕಗಳನ್ನು ಒದಗಿಸುವಿಕೆ, ಇವೇ ಮುಂತಾದ ಅಗತ್ಯ ಸೌಲಭ್ಯಗಳನ್ನು ವ್ಯವಸ್ಥೆ ಮಾಡಲೇಬೇಕೆಂಬ ಕಡ್ಡಾಯ ನೀತಿ ಜಾರಿಗೆ ಬಂದಿತು.

ವೃತ್ತಿ ಸಂಘಗಳಿಗೆ ನೋಂದಣಿ ಮಾಡಿಸುವ, ಅವುಗಳಿಗೆ ವ್ಯಾಖ್ಯೆ ಕೊಡುವ ಉದ್ದೇಶದಿಂದ ಸರ್ಕಾರ ಟ್ರೇಡ್ ಯೂನಿಯನ್ ಕಾಯ್ದೆಯನ್ನು ಜಾರಿಗೆ ತಂದಿತು. ಆ ನಂತರ ರಾಜ್ಯದಲ್ಲಿ ಅಲ್ಲಲ್ಲಿ ಕಾರ್ಮಿಕರು ಸಂಘಟನೆಗೊಂಡು, ಕಾರ್ಮಿಕ ಸಂಘಗಳು ಅಸ್ತಿತ್ವಕ್ಕೆ ಬರತೊಡಗಿದವು. ಕಾರ್ಮಿಕರು ತಮ್ಮ ತೊಂದರೆ ಮತ್ತು ಸಮಸ್ಯೆಗಳ ನಿವಾರಣೆಗಾಗಿ ಒಗ್ಗೂಡಿ ಟ್ರೇಡ್ ಯೂನಿಯನ್‌ಗಳನ್ನು ಸಂಸ್ಥಾಪಿಸಿಕೊಳ್ಳುವ ಹಕ್ಕನ್ನು, ಈ ಟ್ರೇಡ್ ಯೂನಿಯನ್ ಕಾಯ್ದೆಯು ಗುರುತಿಸುತ್ತದೆ. ನೋಂದಣಿಗೊಂಡ ಟ್ರೇಡ್ ಯೂನಿಯನ್‌ಗಳು ಕೆಲವು ಹಕ್ಕು ಹಾಗೂ ನಿರ್ಬಂಧಗಳಿಗೆ ಒಳಪಡುತ್ತಿದ್ದು, ಸ್ವತಂತ್ರ ಸಂಸ್ಥೆಗಳಾಗಿ ಕಾರ್ಯ ನಿರ್ವಹಿಸಬಲ್ಲವಾಗಿರುತ್ತವೆ. ಆದ್ದರಿಂದ ಕೈಗಾರಿಕಾ ಕಾರ್ಮಿಕರು, ಈ ಕಾಯ್ದೆಯಡಿ ಮಾಡಲಾದ ನಿಯಮಗಳ ಮತ್ತು ಅವಕಾಶಗಳ ಅನುಕೂಲವನ್ನು ಪಡೆದುಕೊಂಡಿದ್ದಾರೆ. ೧೯೬೭-೬೮ರ ಸಾಲಿನಲ್ಲಿ ತುಮಕೂರು ಜಿಲ್ಲೆಯಲ್ಲಿ ಹೀಗೆ ನೋಂದಣಿಗೊಂಡ ಹತ್ತು ಟ್ರೇಡ್ ಯೂನಿಯನ್‌ಗಳು ಕಾರ್ಯ ನಿರ್ವಹಿಸುತ್ತಿದ್ದವು. ಅವುಗಳ ವಿವರಗಳನ್ನು ಕೋಷ್ಟಕ ೧೬.೧ರಲ್ಲಿ ನೀಡಿದೆ.

## ಕೋಷ್ಟಕ ೧೬.೧: ಜಿಲ್ಲೆಯಲ್ಲಿ ೧೯೬೭-೬೮ರಲ್ಲಿದ್ದ ಟ್ರೇಡ್ ಯೂನಿಯನ್‌ಗಳ ವಿವರ

| ಕ್ರ ಸಂ | ಟ್ರೇಡ್ ಯೂನಿಯನ್‌ಗಳ ಹೆಸರು ಮತ್ತು ವಿಳಾಸ | ಸದಸ್ಯತ್ವ |
|---|---|---|
| ೧ | ದಿ ತುಮಕೂರು ಡಿಸ್ಟ್ರಿಕ್ಟ್ ಆಟೋ-ವೆಹಿಕಲ್ಸ್ ಬಾಡಿ ಬಿಲ್ಡಿಂಗ್, ಬಿ.ಜಿ. ಪಾಳ್ಯ ಸರ್ಕಲ್, ತುಮಕೂರು. | ೨೩ |
| ೨ | ತುಮಕೂರು ಡಿಸ್ಟ್ರಿಕ್ಟ್ ಜನರಲ್ ವರ್ಕರ್ಸ್ ಯೂನಿಯನ್, ಮೇಲ್ಮಹಡಿ, ಚನ್ನಪ್ಪಯ್ಯ ಚೌಲ್ಟ್ರಿ, ತುಮಕೂರು. | ३२ |
| ೩ | ಗವರ್ನಮೆಂಟ್ ಸ್ಟಡ್ ಫಾರ್ಮ್ ವರ್ಕರ್ಸ್ ಯೂನಿಯನ್, ಚೆಲುವೇಗೌಡ ಬಿಲ್ಡಿಂಗ್, ಬಿ.ಎಂ. ರೋಡ್, ಕುಣಿಗಲ್. | ೫೦ |
| ೪ | ಕುಣಿಗಲ್ ಬೀಡಿ ವರ್ಕರ್ಸ್ ಯೂನಿಯನ್, ಬಿದನಗೆರೆ, ಅಹಮದ್ ಖಾನ್ ಬಿಲ್ಡಿಂಗ್, ಕುಣಿಗಲ್. | ೧೫೦ |
| ೫ | ಕುಣಿಗಲ್ ಟೌನ್ ಮುನ್ಸಿಪಲ್ ಎಂಪ್ಲಾಯೀಸ್ ಅಸೋಸಿಯೇಷನ್, ಮೇಲ್ಮಹಡಿ, ರೆಹಮಾನಿಯಾ ಬಿಲ್ಡಿಂಗ್, ಬಿ.ಎಂ. ರೋಡ್, ಕುಣಿಗಲ್. | ೨೯ |
| ೬ | ದಿ ಮೈಸೂರು ಸಿಮೆಂಟ್ಸ್ ಎಂಪ್ಲಾಯೀಸ್ ಅಸೋಸಿಯೇಷನ್, ಫ್ಯಾಕ್ಟರಿ ಸೈಟ್, ಅಮ್ಮಸಂದ್ರ, ತುರುವೇಕೆರೆ ತಾಲೂಕು. | ೪೨೬ |
| ೭ | ತಿಪಟೂರು ಹೋಟೆಲ್ ವರ್ಕರ್ಸ್ ಯೂನಿಯನ್, ನಂ.೫, ಜಯದೇವ ಹಾಸ್ಟೆಲ್ ಬಿಲ್ಡಿಂಗ್, ಬಿ.ಎಂ. ರೋಡ್, ತಿಪಟೂರು. | ೩೦ |
| ೮ | ತುಮಕೂರು ಡಿಸ್ಟ್ರಿಕ್ಟ್ ಮೋಟಾರ್ ವರ್ಕರ್ಸ್ ಯೂನಿಯನ್, ಕನ್ನಿಕಾ ಪರಮೇಶ್ವರಿ ದೇವಸ್ಥಾನದ ರಸ್ತೆ, ಮಂಡೀಪೇಟೆ, ತುಮಕೂರು. | ೭೫ |
| ೯ | ದಿ ಮಂಡಿ ಕೆಲಸಗಾರರ ಸಂಘ, ರೆಗ್ಯೂಲೇಟೆಡ್ ಮಾರ್ಕೆಟ್ ಯಾರ್ಡ್, ತಿಪಟೂರು. | ೫೩ |
| ೧೦ | ತುಮಕೂರು ವರ್ಕರ್ಸ್ ಯೂನಿಯನ್, ಶಿವಾನಿ ರಸ್ತೆ, ತುಮಕೂರು | ೧೩೫ |

ಕೆಲಸದ ವೇಳೆಗೆ ಮಿತಿ, ವೇತನ ಪಾವತಿ, ಸೇವಾ ನಿಯಮಗಳು, ಹೆರಿಗೆ ಭತ್ಯೆ ಮುಂತಾದ ಸೌಲಭ್ಯಗಳನ್ನು ಒದಗಿಸಲು ವಿವಿಧ ಕಾರ್ಮಿಕ ಕಾಯ್ದೆಗಳನ್ನು ಜಾರಿಗೆ ತರಲಾಯಿತು. ೧೯೭೬ರಲ್ಲಿ 'ಸಮಾನ ಕೆಲಸಕ್ಕೆ ಸಮಾನ ವೇತನ ಎಂಬ ಶಾಸನವೊಂದನ್ನು ಮಾಡಲಾಯಿತು. ಈ ಶಾಸನವು ಪುರುಷ ಹಾಗೂ ಮಹಿಳಾ ಕಾರ್ಮಿಕರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ಸಲ್ಲಬೇಕು ಎಂದು ಸ್ಪಷ್ಟ ಪಡಿಸಿತು. ಅಲ್ಲದೆ ಕೆಲಸಕ್ಕೆ ಸೇರಿಸಿಕೊಳ್ಳುವ ಸಮಯದಲ್ಲಾಗಲೀ, ಕೆಲಸದ ಇತರೇ ವಿಷಯಗಳಿಗೆ ಸಂಬಂಧಿಸಿದಂತಾಗಲಿ ಲಿಂಗಾಧಾರದ ಮೇಲೆ ಮಹಿಳಾ ಕಾರ್ಮಿಕರ ವಿರುದ್ಧ ಭೇದಭಾವ ಮಾಡುವುದನ್ನು ಇದು ತಪ್ಪಿಸಿತು. ಈ ಕಾಯ್ದೆಗಳಿಂದಾಗಿ ಮಹಿಳಾ ಕಾರ್ಮಿಕರೂ ಸೇರಿದಂತೆ ಎಲ್ಲಾ ಕಾರ್ಮಿಕರಿಗೆ ಹಲವು ರೀತಿಯಲ್ಲಿ ತುಂಬಾ ಸಹಾಯವಾಯಿತು.

## ಕಾರ್ಮಿಕ ಇಲಾಖೆ

ಕಾರ್ಮಿಕರ ಕಲ್ಯಾಣಕ್ಕಾಗಿ ಕೇಂದ್ರ ಹಾಗೂ ರಾಜ್ಯಗಳು ರಚಿಸಿರುವ ಕಾರ್ಮಿಕ ಕಾಯ್ದೆಗಳು ಮತ್ತು ನಿಯಮಗಳನ್ನು ಕಾರ್ಮಿಕ ಇಲಾಖೆಯು ಕಾರ್ಯಗತಗೊಳಿಸುತ್ತದೆ. ಕೈಗಾರಿಕೆಗಳಲ್ಲಿ ಮುಷ್ಕರಗಳು, ಬೀಗಮುದ್ರೆಗಳು, ಕೆಲಸ ನಿಲುಗಡೆ, ಕಾರ್ಮಿಕ ಮತ್ತು ಮಾಲೀಕರ ನಡುವೆ ವ್ಯಾಜ್ಯ–ವಿವಾದಗಳು – ಇವುಗಳನ್ನು ಸಂಧಾನದ ಮೂಲಕ ಬಗೆಹರಿಸಿ ಶಾಂತಿ ಮತ್ತು ಸೌಹಾರ್ದತೆ ನೆಲೆಸುವಂತೆ ಮಾಡುವುದು; ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠ ವೇತನ ಸಲಹಾ ಮಂಡಳಿ ಮತ್ತು ಸಮಿತಿಯ ಸಹಾಯದಿಂದ ಕನಿಷ್ಠ ವೇತನ ಕಾಯ್ದೆ ಅಡಿಯಲ್ಲಿ ಕನಿಷ್ಠ ವೇತನವನ್ನು ನಿಗದಿ ಪಡಿಸುವುದು ಅಥವಾ ಪರಿಷ್ಕರಿಸುವುದು; ಕಾರ್ಮಿಕ ಸಂಘಗಳ ಚುನಾವಣೆಯನ್ನು ನಡೆಸುವುದು; ಇವರು ಕೆಲಸ ಮಾಡುತ್ತಿರುವ ಸ್ಥಳಗಳನ್ನು ಗುರುತಿಸಿ ಕೇಂದ್ರ ಮತ್ತು ರಾಜ್ಯ ಕಾರ್ಮಿಕ ನಿಗಮಗಳ ಮುಖಾಂತರ ಆಡಳಿತ ಯೋಜನೆಗಳನ್ನು ಪ್ರಚಾರ ಮಾಡಿಸುವುದು; ಆರೋಗ್ಯಕ್ಕೆ ಸಂಬಂಧಿಸಿದ ಸೌಲಭ್ಯಗಳನ್ನು ಕಾರ್ಮಿಕರಿಗೆ ಒದಗಿಸಿ ಕೊಡುವುದರ ಮೂಲಕ ಆರೋಗ್ಯಕರ ವಾತಾವರಣವನ್ನು ಕೆಲಸದ ಸ್ಥಳದಲ್ಲಿ ಕಲ್ಪಿಸಿಕೊಡುವುದು; ಇವು ಈ ಇಲಾಖೆಯ ಮುಖ್ಯ ಉದ್ದೇಶಗಳಾಗಿವೆ.

ತುಮಕೂರು ಜಿಲ್ಲಾ ಒಂದನೇ ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತರ ನಿಯಂತ್ರಣಕ್ಕೆ ಈ ಜಿಲ್ಲಾ ಕಚೇರಿಯು ಒಳಪಟ್ಟಿದೆ. ರಾಜ್ಯ ಮಟ್ಟದಲ್ಲಿ, ಬೆಂಗಳೂರಿನ ಕೇಂದ್ರ ಕಚೇರಿಯ ಕಾರ್ಮಿಕ ಆಯುಕ್ತರು ಇಲಾಖಾ ಮುಖ್ಯಸ್ಥರಾಗಿರುತ್ತಾರೆ.

ಕೇಂದ್ರದ ಕಾರ್ಮಿಕ ಕಾನೂನುಗಳಾದ ೧೯೪೭ ರ ಔದ್ಯೋಗಿಕ ವ್ಯಾಜ್ಯ ಕಾಯ್ದೆ, ಕನಿಷ್ಠ ವೇತನ ಕಾಯ್ದೆ ೧೯೪೮, ಔದ್ಯೋಗಿಕ ನೇಮಕಾತಿ (ಸ್ಥಾಯಿ ಆದೇಶ) ಕಾಯ್ದೆ ೧೯೪೬, ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಕಾಯ್ದೆ ೧೯೬೧, ಇಂಡಿಯನ್ ಟ್ರೇಡ್ ಯೂನಿಯನ್ ಆಕ್ಟ್, ದುಡಿಯುವ ಪತ್ರಕರ್ತರ ಕಾಯ್ದೆ, ವೇತನ ಪಾವತಿ ಕಾಯ್ದೆ ೧೯೩೬, ಮುಂತಾದ ಕಾಯ್ದೆಗಳನ್ನು ತುಮಕೂರು ಜಿಲ್ಲೆಗೂ ಅನ್ವಯಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ: ೧೬.೨ ಅನ್ನು ನೋಡಿ.

### ಕೋಷ್ಟಕ: ೧೬.೨: ತುಮಕೂರು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕ ಸಂಘಗಳ ವಿವರ

| ಕ್ರ ಸಂ | ಸಂಘಟನೆಯ ಹೆಸರು | ಸ್ಥಾಪನೆಯ ವರ್ಷ | ಸದಸ್ಯರ ಸಂಖ್ಯೆ |
|---|---|---|---|
| ೧ | ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಒಕ್ಕೂಟ, ಬ್ರಹ್ಮೇಂದ್ರ ಧಾಮ, ದೇವನೂರು ರಸ್ತೆ, ಉಪ್ಪಾರಹಳ್ಳಿ ಲೇಔಟ್, ಚೆನ್ನಪ್ಪನಪಾಳ್ಯದ ಎದುರು, ವಿಜಯನಗರ, ತುಮಕೂರು–೦೨ | ೨೦/೦೫/೨೦೦೯ | ೨೦ |
| ೨ | ತುಮಕೂರು ಜಿಲ್ಲಾ ರೈಸ್ ಮಿಲ್ಸ್ ಕಾರ್ಮಿಕರ ಸಂಘ, ಟಿ.ಆರ್.ರೇವಣ್ಣ ಭವನ, ಶಿವಮೂಕಾಂಬಿಕ ನಗರ, ಉಪ್ಪಾರಹಳ್ಳಿ, ತುಮಕೂರು–೦೨ | ೦೫/೦೯/೨೦೦೯ | ೧೫ |
| ೩ | ತುಮಕೂರು ವಿಶ್ವವಿದ್ಯಾನಿಲಯದ ಬೋಧಕೇತರ(ಸಂಚಿತ ವೇತನ) ನೌಕರರ ಸಂಘ, ಡಾ:ಬಿ.ಆರ್. ಅಂಬೇಡ್ಕರ್ ಭವನ, ಎಂ.ಜಿ.ರಸ್ತೆ, ತುಮಕೂರು. | ೧೨/೧೦/೨೦೦೯ | ೧೭ |
| ೪ | ಪುರಿ ಭಟ್ಟಿ ಕಾರ್ಮಿಕರ ಸಂಘ, ಅಗ್ರಹಾರ ಶಿಶುವಿಹಾರ ರಸ್ತೆ, ಸಂತೇಪೇಟೆ, ತುಮಕೂರು. | ೧೦/೦೫/೨೦೧೦ | ೨೪ |
| ೫ | ಸಿಪ್ಪ ಎಂಪ್ಲಾಯೀಸ್ ಟ್ರೇಡ್ ಯೂನಿಯನ್, ಪ್ಲಾಟ್ ನಂ.೭ ಮತ್ತು ೮, ಹಿರೇಹಳ್ಳಿ ಕೈಗಾರಿಕಾ ಪ್ರದೇಶ, ತುಮಕೂರು. | ೨೬/೦೬/೨೦೧೦ | ೦೭ |

**ಕೋಷ್ಟಕ: ೧೬.೨ ಮುಂದು....**

| ಕ್ರ ಸಂ | ಸಂಘಟನೆಯ ಹೆಸರು | ಸ್ಥಾಪನೆಯ ವರ್ಷ | ಸದಸ್ಯರ ಸಂಖ್ಯೆ |
|---|---|---|---|
| ೬ | ತಿಪಟೂರು ತಾಲ್ಲೂಕು ಕಟ್ಟಡ ನಿರ್ಮಾಣ ಕಾರ್ಮಿಕರ ನೆರವು ಸೇವಾ ಸಂಘ, ಸಾರ್ಥಹಳ್ಳಿ, ತುಮಕೂರು ಜಿಲ್ಲೆ. | ೦೫/೦೮/೨೦೧೦ | ೧೧ |
| ೭ | ಸಿದ್ಧಾರ್ಥ ವಿದ್ಯಾಸಂಸ್ಥೆಯ ಕಾಲೇಜ್ ಹಾಸ್ಟೆಲ್ ನೌಕರರ ಸಂಘ, ಟಿ.ಆರ್.ಬಾಬು ಬಿಲ್ಡಿಂಗ್, ಮಂಜುನಾಥ ನಿಲಯ, ಸಪ್ತಗಿರಿ ಟಾಕೀಸ್ ಹಿಂಭಾಗ, ಉಪ್ಪಾರಹಳ್ಳಿ, ತುಮಕೂರು. | ೩೧/೦೮/೨೦೧೦ | ೧೮ |
| ೮ | ಮನ್ ಮತ್ತು ಹ್ಯೂಮ್ಮೆಲ್ ಫಿಲ್ಟರ್ ಪ್ರೈ.ಲಿ. ವರ್ಕರ್ಸ್ ಯೂನಿಯನ್, ಕೇರಾಫ್ ಸಿಐಟಿಯು ಕಮಿಟಿ ಆಫೀಸ್, ನಜರಾಬಾದ್, ತುಮಕೂರು–೦೧ | ೩೧/೦೮/೨೦೧೦ | ೦೮ |
| ೯ | ಎಂ.ಹೆಚ್.ಬಿ.ಫಿಲ್ಟರ್ ಇಂಡಿಯಾ ಪ್ರೈ.ಲಿ., ವರ್ಕರ್ಸ್ ಯೂನಿಯನ್, ಕೇರಾಫ್ ಸಿಐಟಿಯು ಕಮಿಟಿ ಆಫೀಸ್, ನಜರಾಬಾದ್, ತುಮಕೂರು–೦೧ | ೩೧/೦೮/೨೦೧೦ | ೦೮ |
| ೧೦ | ವಿಸಾಕಾ ಇಂಡಸ್ಟ್ರೀಸ್ ಲಿ., ವರ್ಕರ್ಸ್ ಯೂನಿಯನ್, ಕೇರಾಫ್ ಸಿಐಟಿಯು ಕಮಿಟಿ ಆಫೀಸ್, ೩ನೇ ಕ್ರಾಸ್, ನಜರಾಬಾದ್, ತುಮಕೂರು–೦೧ | ೦೯/೧೧/೨೦೧೦ | ೦೯ |
| ೧೧ | ಸಿಪ್ಪ ಆರ್.ಐ.ಸಿ. ವರ್ಕರ್ಸ್ ಯೂನಿಯನ್, ಪ್ಲಾಟ್ ನಂ.೭ ಮತ್ತು ೮, ಕೆ.ಐ.ಎ.ಡಿ.ಬಿ. ಇಂಡಸ್ಟ್ರೀಯಲ್ ಏರಿಯಾ, ಹಿರೇಹಳ್ಳಿ, ತುಮಕೂರು. | ೩೦/೧೧/೨೦೧೦ | ೨೨ |
| ೧೨ | ರೋಮರ್ಷ್ ಎಲ್‌ಕಾಂಪೋನಿಕ್ಸ್ ಎಂಪ್ಲಾಯೀಸ್ ಅಸೋಸಿಯೇಷನ್, ಪ್ಲಾಟ್ ನಂ.೨೯–ಪಿ ೧, ಹಿರೇಹಳ್ಳಿ ಇಂಡಸ್ಟ್ರೀಯಲ್ ಏರಿಯಾ, ತುಮಕೂರು. | ೩೦/೧೨/೨೦೧೦ | ೧೬ |
| ೧೩ | ಕಾಲೇಶ್ವರಿ ರಿಫೈನರಿ ಎಂಪ್ಲಾಯೀಸ್ ಅಸೋಸಿಯೇಷನ್, ಪ್ಲಾಟ್ ನಂ.೨, ಅಂತರಸನಹಳ್ಳಿ ಕೈಗಾರಿಕಾ ಪ್ರದೇಶ, ಲಿಂಗಾಪುರ, ಶಿರಾ ಗೇಟ್ ಪೋಸ್ಟ್, ತುಮಕೂರು– ೫೭೩ ೧೦೬ | ೩೦/೧೨/೨೦೧೦ | ೧೦ |
| ೧೪ | ಪಾವಗಡ ತಾಲ್ಲೂಕು ಲಾರಿಗೆ ಹೊಟ್ಟು ತುಂಬಿ ಲೋಡ್ ಮಾಡುವ ಹಮಾಲರ ಸಂಘ(ಸಿ.ಐ.ಟಿ.ಯು), ಆದರ್ಶ ನಗರ, ಪಾವಗಡ ಟೌನ್, ತುಮಕೂರು ಜಿಲ್ಲೆ. | ೦೮/೦೨/೨೦೧೧ | ೨೩ |
| ೧೫ | ಕರ್ನ್ ಲಿಬರ್ಸ್ ಸ್ಪ್ರಿಂಗ್ಸ್ ಅಂಡ್ ಸ್ಟಾಂಪಿಂಗ್ಸ್ ಪ್ರೈ.ಲಿ. ವರ್ಕರ್ಸ್ ಯೂನಿಯನ್, ಕೇರಾಫ್ ಸಿಐಟಿಯು ಯೂನಿಯನ್ ಆಫೀಸ್, ೩ನೇ ಕ್ರಾಸ್, ನಜರಾಬಾದ್, ತುಮಕೂರು–೦೧ | ೦೪/೧೦/೨೦೧೧ | ೧೯ |
| ೧೬ | ಟೆಡಿಮೇಟಿ ಏರೋಮೆಟಿಕ್ಸ್ ಪ್ರೈ.ಲಿ., ವರ್ಕರ್ಸ್ ಯೂನಿಯನ್ ಕೇರಾಫ್, ಪುಟ್ಟಣ್ಣಯ್ಯ, ೨ನೇ ಕ್ರಾಸ್, ಗಿರಿನಗರ, ಕ್ಯಾತಸಂದ್ರ, ತುಮಕೂರು –೫೭೦ ೦೮೯ | ೧೪/೧೨/೨೦೧೧ | ೯ |
| ೧೭ | ಶ್ರೀ ವಿದ್ಯಾಗಣಪತಿ ಕಟ್ಟಡ ಕಾರ್ಮಿಕ ಕೆಲಸಗಾರರ ಅಸೋಸಿಯೇಷನ್, ತುರುವೇಕೆರೆ ಟೌನ್, ತುರುವೇಕೆರೆ ತಾ:, ತುಮಕೂರು ಜಿಲ್ಲೆ. | ೧೪/೦೫/೨೦೧೨ | ೧೪ |
| ೧೮ | ಹುಳಿಯಾರು ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘ, ಅಂಬೇಡ್ಕರ್ ಭವನದ ರಸ್ತೆ, ವಸಂತನಗರ, ಹುಳಿಯಾರು, ಚಿಕ್ಕನಾಯಕನಹಳ್ಳಿ ತಾ:, ತುಮಕೂರು ಜಿಲ್ಲೆ. | ೧೪/೦೫/೨೦೧೨ | ೧೫ |
| ೧೯ | ಮಧುಗಿರಿ ತಾಲ್ಲೂಕು ಬೀಡಿ ವರ್ಕರ್ಸ್ ಅಸೋಸಿಯೇಷನ್, ಸಿದ್ಧನಾಯಕನ ಬೀದಿ, ೩ನೇ ವಾರ್ಡ್, ಮಧುಗಿರಿ, ತುಮಕೂರು ಜಿಲ್ಲೆ. | ೧೬/೦೬/೨೦೧೨ | ೧೫ |
| ೨೦ | ಶ್ರೀ ಕಲ್ಪತರು ಕಟ್ಟಡ ಕಾರ್ಮಿಕ ಕೆಲಸಗಾರರ ಸಂಘ, ಕಾಸ್ಮೊಪಾಲಿಟನ್ ಕ್ಲಬ್ ಹಿಂಭಾಗ, ಕೆ.ಆರ್.ಬಡಾವಣೆ, ೧ನೇ ಮುಖ್ಯ ರಸ್ತೆ, ೮ನೇ ಅಡ್ಡರಸ್ತೆ, ತಿಪಟೂರು, ತುಮಕೂರು – ೫೭೨ ೨೦೧. | ೧೪/೦೨/೨೦೧೩ | ೯ |

**ಆಧಾರ: ಸಹಾಯಕ ಕಾರ್ಮಿಕ ಆಯುಕ್ತರು, ವಿಭಾಗ–೧,ಬೆಂಗಳೂರು**

ಹೆಚ್ಚಿನ ವ್ಯಾಪಾರಸ್ಥರು ಯಾರದೇ ಸಹಾಯವಿಲ್ಲದೆ, ತಾವೇ ನಿರ್ವಹಿಸುತ್ತಿದ್ದುದರಿಂದ, ಉದ್ಯೋಗಿಗಳ ಸಂಖ್ಯೆ ಎಪ್ಪತ್ತರ ದಶಕದಲ್ಲಿ ಬಹಳ ಕಡಿಮೆ ಇತ್ತು. ಆದರೆ ನಂತರದ ವರ್ಷಗಳಲ್ಲಿ ಉದ್ದಿಮೆಗಳ ಸಂಖ್ಯೆಯೂ, ಅವುಗಳಲ್ಲಿ ದುಡಿಯುವ ಕಾರ್ಮಿಕರ ಸಂಖ್ಯೆಯೂ ಗಣನೀಯವಾಗಿ ಹೆಚ್ಚಿದೆ. ಜಿಲ್ಲೆಯಲ್ಲಿ ೨೦೦೮ರಿಂದ ೨೦೧೨ರ ವರೆಗಿನ ಅವಧಿಯಲ್ಲಿರುವ ಅಂಗಡಿ ಮುಂಗಟ್ಟುಗಳು ಮತ್ತು ಅವುಗಳಲ್ಲಿರುವ ಕಾರ್ಮಿಕರ ಸಂಖ್ಯೆಯನ್ನು ಕೋಷ್ಟಕ ೧೬.೩, ೧೬.೪, ೧೬.೫ ಹಾಗೂ ೧೬.೬ರಲ್ಲಿ ನೀಡಿದೆ.

## ಕೋಷ್ಟಕ ೧೬.೩: ಜಿಲ್ಲೆಯಲ್ಲಿ ೨೦೦೮ರಿಂದ ೨೦೧೨ರ ವರೆಗೆ ಇರುವ ಅಂಗಡಿ ಮುಂಗಟ್ಟುಗಳು ಮತ್ತು ಅವುಗಳಲ್ಲಿರುವ ಉದ್ಯೋಗಿಗಳ ಸಂಖ್ಯೆಯ ವಿವರ

| ಕ್ರ. ಸಂ. | ವಿವರಗಳು | ೨೦೦೮ | ೨೦೦೯ | ೨೦೧೦ | ೨೦೧೧ | ೨೦೧೨ |
|---|---|---|---|---|---|---|
| ೧ | ಅಂಗಡಿಗಳ ಸಂಖ್ಯೆ | ೩೪೦೭ | ೩೭೬೬ | ೪೦೯೭ | ೪೨೩೩ | ೪೫೨೪ |
| ೨ | ಅದರಲ್ಲಿ ನೇಮಕಗೊಂಡ ಉದ್ಯೋಗಿಗಳ ಸಂಖ್ಯೆ | ೩೫೦೭ | ೩೯೫೪ | ೪೪೦೪ | ೪೯೪೧ | ೫೨೧೦ |
| ೧ | ವಾಣಿಜ್ಯ ಉದ್ದಿಮೆಗಳ ಸಂಖ್ಯೆ | ೧೭೯೦ | ೧೯೧೪ | ೨೦೭೧ | ೨೧೨೭ | ೨೨೬೩ |
| ೨ | ಅದರಲ್ಲಿ ನೇಮಕಗೊಂಡ ಉದ್ಯೋಗಿಗಳ ಸಂಖ್ಯೆ | ೨೪೩೦ | ೨೭೫೮ | ೩೨೪೬ | ೪೧೬೫ | ೫೦೨೫ |
| ೧ | ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳ ಸಂಖ್ಯೆ | ೧೩೯ | ೧೪೯ | ೧೫೭ | ೧೬೬ | ೧೬೮ |
| ೨ | ಅದರಲ್ಲಿ ನೇಮಕಗೊಂಡ ಉದ್ಯೋಗಿಗಳ ಸಂಖ್ಯೆ | ೫೨೨ | ೫೭೯ | ೬೨೯ | ೭೯೭ | ೭೮೦ |
| ೧ | ಥಿಯೇಟರ್ ಸಂಖ್ಯೆ | ೨೬ | ೨೬ | ೨೪ | ೨೩ | ೨೨ |
| ೨ | ಅದರಲ್ಲಿ ನೇಮಕಗೊಂಡ ಉದ್ಯೋಗಿಗಳ ಸಂಖ್ಯೆ | ೧೭೦ | ೧೭೨ | ೧೫೪ | ೧೩೮ | ೧೩೧ |

**ಆಧಾರ: ಕಾರ್ಮಿಕ ಅಧಿಕಾರಿ, ತುಮಕೂರು.**

## ಕೋಷ್ಟಕ ೧೬.೪: ೨೦೦೮-೦೯ರಿಂದ ೨೦೧೧-೧೨ರ ವರೆಗೆ ಕನಿಷ್ಠ ವೇತನ ಕಾಯ್ದೆಯಡಿ ಬರುವ ಉದ್ದಿಮೆಗಳ ಸಂಖ್ಯೆ, ವಾಣಿಜ್ಯ ಸಂಸ್ಥೆಗಳ ಮತ್ತು ಕಾರ್ಮಿಕರ ಸಂಖ್ಯೆಯ ವಿವರ

| ವರ್ಷ | ಉದ್ದಿಮೆಗಳ ಸಂಖ್ಯೆ | ವಾಣಿಜ್ಯ ಸಂಸ್ಥೆಗಳ ಸಂಖ್ಯೆ | ಕಾರ್ಮಿಕರ ಸಂಖ್ಯೆ |
|---|---|---|---|
| ೨೦೦೮-೦೯ | ೧,೧೯೮ | ೧,೮೪೦ | ೧೦,೮೭೨ |
| ೨೦೦೯-೧೦ | ೧,೩೭೦ | ೨,೦೦೩ | ೧೨,೦೬೫ |
| ೨೦೧೦-೧೧ | ೧,೪೨೬ | ೨,೨೪೧ | ೧೦,೫೯೨ |
| ೨೦೧೧-೧೨ | ೧,೫೪೨ | ೨,೨೦೮ | ೧,೨೭೨ |

**ಆಧಾರ: ಕಾರ್ಮಿಕ ಅಧಿಕಾರಿ, ತುಮಕೂರು.**

## ಕೋಷ್ಟಕ ೧೬.೫: ೨೦೦೮-೦೯ರಿಂದ ೨೦೧೧-೧೨ರ ವರೆಗಿನ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಹೊಸ ನೋಂದಣಿ ಹಾಗೂ ನವೀಕರಣದಿಂದ ಸಂದಾಯವಾದ ಹಣದ ವಿವರ

(ರೂ. ಗಳಲ್ಲಿ)

| ವರ್ಷ | ಹೊಸ ನೋಂದಣಿಗಳ ಸಂಖ್ಯೆ | ಸಂದಾಯವಾದ ಹಣ | ನವೀಕರಣದಿಂದ ಬಂದ ಹಣ |
|---|---|---|---|
| ೨೦೦೮-೦೯ | ೪೮೭ | ೨,೪೮,೨೭೫ | ೩,೯೯,೩೧೦ |
| ೨೦೦೯-೧೦ | ೫೯೭ | ೨,೫೮,೭೦೩ | ೧,೮೫,೨೯೦ |
| ೨೦೧೦-೧೧ | ೭೭೫ | ೩,೫೯,೫೭೫ | ೨,೫೭,೩೬೦ |
| ೨೦೧೧-೧೨ | ೯೧೩ | ೫,೫೯,೦೦೦ | ೨,೭೯,೦೭೫ |

**ಆಧಾರ: ಕಾರ್ಮಿಕ ಅಧಿಕಾರಿ, ತುಮಕೂರು.**

**ಕೋಷ್ಟಕ ೧೬.೬: ೧೯೨೩ರ ಕಾರ್ಮಿಕ ಪರಿಹಾರ ಕಾಯ್ದೆಯ ಪ್ರಕಾರ ಜಿಲ್ಲೆಯ ಕೈಗಾರಿಕೆಗಳಲ್ಲಿ, ಸಮುದಾಯ ಭವನದಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು ಪಡೆದ ಪರಿಹಾರದ ವಿವರ**

(ರೂ.ಗಳಲ್ಲಿ)

| ವರ್ಷ | ತಾತ್ಕಾಲಿಕ ಅಂಗಹೀನತೆ | | ಶಾಶ್ವತ ಅಂಗಹೀನತೆ | | ಆಕಸ್ಮಿಕ ಮರಣ | | ಒಟ್ಟು ಪರಿಹಾರ ಧನ | |
|---|---|---|---|---|---|---|---|---|
| | ಪ್ರಕರಣಗಳ ಸಂಖ್ಯೆ | ನೀಡಿದ ಪರಿಹಾರ | ಪ್ರಕರಣಗಳ ಸಂಖ್ಯೆ | ನೀಡಿದ ಪರಿಹಾರ | ಪ್ರಕರಣಗಳ ಸಂಖ್ಯೆ | ನೀಡಿದ ಪರಿಹಾರ | ಒಟ್ಟು ಪ್ರಕರಣಗಳ ಸಂಖ್ಯೆ | ನೀಡಿದ ಪರಿಹಾರ |
| ೨೦೦೮-೦೯ | – | – | ೩೯ | ೩೨,೮೦,೦೨೩ | ೩೪ | ೧,೪೧,೮೪,೦೦೩ | ೭೩ | ೧,೭೪,೬೪,೦೨೬ |
| ೨೦೦೯-೧೦ | – | – | ೩೧ | ೨೮,೯೨,೫೯೩ | ೨೯ | ೧,೦೫,೫೯,೬೦೮ | ೬೦ | ೧,೩೪,೩೨,೦೦೧ |
| ೨೦೧೦-೧೧ | – | – | ೪೮ | ೪೦,೦೩,೩೬೩ | ೩೮ | ೧,೦೨,೪೧,೬೩೨ | ೮೬ | ೧,೪೨,೪೪,೯೯೮ |
| ೨೦೧೧-೧೨ | – | – | ೩೧ | ೩೧,೬೭,೩೧೫ | ೨೨ | ೧,೨೭,೯೫,೬೮೫ | ೫೩ | ೧,೫೯,೬೩,೦೦೪ |

ಆಧಾರ: ಕಾರ್ಮಿಕ ಅಧಿಕಾರಿ, ತುಮಕೂರು.

ಬಾಲ ಕಾರ್ಮಿಕರಾಗಿ ದುಡಿಯುತ್ತಿರುವವರನ್ನು ಪತ್ತೆ ಮಾಡಿ, ಅವರನ್ನು ಅಲ್ಲಿಂದ ಬಿಡಿಸಿ ಕರೆ ತಂದು, ಸರ್ಕಾರದಿಂದ ನಿಯೋಜಿತವಾಗಿರುವ ತರಬೇತಿ ಶಾಲೆಗೆ ಸೇರಿಸುವುದು; ಅಲ್ಲಿ ಅವರಿಗೆ 'ಬ್ರಿಜ್ ಕೋರ್ಸ್' ಅಂದರೆ ಅವರವರ ವಯೋಮಾನಕ್ಕೆ ಆಗಬೇಕಾಗಿದ್ದ ವಿದ್ಯಾಭ್ಯಾಸದ ಕೊರತೆಯನ್ನು, ಆರು ತಿಂಗಳಿನಿಂದ ಹಿಡಿದು ಒಂದು ವರ್ಷದ ತರಬೇತಿಯ ಮೂಲಕ ಪೂರೈಸುವುದು; ನಂತರ ಮಕ್ಕಳ ಮಾನಸಿಕ, ಶೈಕ್ಷಣಿಕ ಬೆಳವಣಿಗೆಗೆ ಸಹಕಾರಿಯಾಗುವ ಕ್ರಮಗಳನ್ನು ಕೈಗೊಂಡು ಅವರವರ ವಯೋಮಾನಕ್ಕೆ ಹೊಂದುವ ಶಾಲೆಗಳಿಗೆ ಸೇರಿಸುವುದು, ಕಾರ್ಮಿಕ ಇಲಾಖೆಯ ಕೆಲಸವಾಗಿರುತ್ತದೆ. ಮುಂದೆ, ಈ ಮಕ್ಕಳ ಮುಂದಿನ ವಿದ್ಯಾಭ್ಯಾಸ, ವಸತಿ, ಪಠ್ಯ ಪುಸ್ತಕಗಳ ಪೂರೈಕೆ, ಊಟ_ಇವೇ ಮುಂತಾದವನ್ನು ಶಿಕ್ಷಣ ಇಲಾಖೆಯು ನೋಡಿಕೊಳ್ಳಬೇಕಾಗುತ್ತದೆ. ಬಾರ್ ಬೆಂಡಿಂಗ್, ಗ್ರೀಸಿಂಗ್, ಮಣ್ಣು ಮತ್ತು ಜೆಲ್ಲಿಕಲ್ಲು ಹೊರುವುದು, ಕಟ್ಟಡ ನಿರ್ಮಾಣ ಕಾರ್ಯದಲ್ಲಿ ತೊಡಗಿಸುವುದು ಮುಂತಾಗಿ ಕೆಲವಾರು ಕೆಲಸಗಳನ್ನು ಅಪಾಯಕಾರಿ ಕೆಲಸಗಳೆಂದೂ; ಅಂಗಡಿಗಳಲ್ಲಿ ಸಾಮಾನು ಪ್ಯಾಕ್ ಮಾಡುವುದು, ಬೀಡಿ ಕಟ್ಟುವುದು, ಹೋಟೆಲ್‌ಗಳಲ್ಲಿ ಆಹಾರ ವಿತರಿಸುವುದು, ಇತ್ಯಾದಿಗಳನ್ನು ಅಪಾಯಕಾರಿಯಲ್ಲದ ಕೆಲಸಗಳೆಂದೂ ವಿಂಗಡಿಸಿದ್ದು ಈ ಎರಡೂ ವಿಧದ ಕೆಲಸಗಳಿಗೆ ಬಳಸಿಕೊಳ್ಳುವ ಮಾಲೀಕರ ಮೇಲೆ ನಿಯಮ ಪ್ರಕಾರ ದಂಡ ವಿಧಿಸಿ, ಶಿಕ್ಷೆಯನ್ನು ವಿಧಿಸಲಾಗುವುದು. ಬಾಲ ಕಾರ್ಮಿಕರನ್ನು ಕೆಲಸದಿಂದ ಬಿಡಿಸಿ ಶಾಲೆಗೆ ಸೇರಿಸುವುದರಿಂದ, ಕೆಲಸ ಮಾಡುತ್ತಿದ್ದ ಆ ಮಗುವಿನ ದುಡಿಮೆ ಮತ್ತು ಅದರಿಂದ ಸಿಗುವ ಆದಾಯಗಳು ಆ ಕುಟುಂಬದಲ್ಲಿ ನಿಂತು ಹೋಗುವುದರಿಂದ, ಆ ಕುಟುಂಬದ ಯಾವುದೇ ವ್ಯಕ್ತಿಗೆ ಅವರ ಅರ್ಹತೆಯ ಆಧಾರದ ಮೇಲೆ, ಸರ್ಕಾರದ ನಾನಾ ಯೋಜನೆಗಳಡಿಯ ಯಾವುದಾದರೂ ಒಂದರಲ್ಲಿ ಕೆಲಸ ಕೊಡಿಸಿ, ಜೀವನ ನಿರ್ವಹಣೆಗೆ ದಾರಿ ಮಾಡಿ ಪರಿಹಾರ ಒದಗಿಸಿ ಕೊಡುವುದಕ್ಕೂ ಇಲಾಖೆಯ ಕಾನೂನಿನಲ್ಲಿ ಅವಕಾಶವಿದೆ. ಜಿಲ್ಲೆಯಲ್ಲಿ ಸಮೀಕ್ಷೆ ನಡೆಸಿ, ಬಾಲ ಕಾರ್ಮಿಕರನ್ನು ಗುರುತಿಸಿ ಅವರಿಗೆ ಪುನರ್ವಸತಿ ಕಲ್ಪಿಸುವ ಕಾರ್ಯವನ್ನು ಮಾಡಲಾಗುತ್ತಿದ್ದು, ನಿಯಮಗಳನ್ವಯ ಪುನರ್ವಸತಿ ಕಲ್ಪಿಸಲ್ಪಟ್ಟ ವಿವರಗಳನ್ನು ಕೋಷ್ಟಕ ೧೬.೭ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೭: ಜಿಲ್ಲೆಯಲ್ಲಿ ಬಾಲ ಕಾರ್ಮಿಕರಿಗೆ ಪುನರ್ವಸತಿ ಕಲ್ಪಿಸಲ್ಪಟ್ಟ ವಿವರ**

| ಅವಧಿ | ಅವಧಿಯಲ್ಲಿ ಪುನರ್ವಸತಿಗೊಳಿಸಿದ ಬಾಲ ಕಾರ್ಮಿಕರ ಸಂಖ್ಯೆ | | | |
|---|---|---|---|---|
| | ಮುಖ್ಯ ವಾಹಿನಿಗೆ | | ವಿಶೇಷ ವಸತಿ ಶಾಲೆಗೆ | |
| | ಅಪಾಯ ಕಾರಿ | ಅಪಾಯಕಾರಿ ಯಲ್ಲದ | ಅಪಾಯ ಕಾರಿ | ಅಪಾಯಕಾರಿ ಯಲ್ಲದ |
| ೨೦೦೮-೦೯ | ೦೩ | ೦೯ | ೦೩ | – |
| ೨೦೦೯-೧೦ | ೦೩ | ೦೧ | ೦೩ | – |
| ೨೦೧೦-೧೧ | ೧೮ | ೦೮ | ೧೩ | – |
| ೨೦೧೧-೧೨ | ೦೫ | ೦೪ | ೦೫ | – |

ಆಧಾರ: ಕಾರ್ಮಿಕ ಅಧಿಕಾರಿ, ತುಮಕೂರು.

## ಕಾರ್ಖಾನೆ ಮತ್ತು ಬಾಯ್ಲರುಗಳ ಇಲಾಖೆ

ಕಾರ್ಖಾನೆ ಮತ್ತು ಬಾಯ್ಲರುಗಳ ಇಲಾಖೆಯ ಮುಖ್ಯ ಪರಿವೀಕ್ಷಕರು ಇಲಾಖೆಯ ಮುಖ್ಯಸ್ಥರಾಗಿದ್ದು, ಆಡಳಿತ ಹಾಗೂ ತಾಂತ್ರಿಕ ವಿಭಾಗಗಳೆರಡೂ ಅವರ ನಿಯಂತ್ರಣದಲ್ಲಿವೆ. ಜಿಲ್ಲಾ ಮಟ್ಟದಲ್ಲಿ ಕಾರ್ಖಾನೆ ಮತ್ತು ಬಾಯ್ಲರುಗಳ ನಿರ್ವಹಣೆ ಪ್ರತ್ಯೇಕವಾಗಿದ್ದು, ಆ ವಿಭಾಗಗಳಿಗೆ ಪ್ರತ್ಯೇಕ ಪರಿವೀಕ್ಷಕರಿರುತ್ತಾರೆ.

## ಕಾರ್ಖಾನೆಗಳ ಇಲಾಖೆ.

ಹೊಸದಾಗಿ ಆರಂಭಗೊಂಡ ಕಾರ್ಖಾನೆಗಳ ತಪಾಸಣೆ, ಕಾರ್ಖಾನೆಗಳ ಕಾಯ್ದೆ ೧೯೪೮ ಮತ್ತು ಕರ್ನಾಟಕ ಕಾರ್ಖಾನೆಗಳ ನಿಯಮಾವಳಿ ೧೯೬೯ರಂತೆ ನೋಂದಣಿ, ಸುರಕ್ಷತೆ, ಪರಿಸರ ಮಾಲಿನ್ಯ ನಿವಾರಣೆ, ಪ್ರಸೂತಿ ಸೌಲಭ್ಯ, ಕ್ಯಾಂಟೀನ್ ಸೌಲಭ್ಯ, ಬಾಲ ಕಾರ್ಮಿಕರ ತಪಾಸಣೆ, ಮುಂತಾದ ಪರಿವೀಕ್ಷಣಾ ಕಾರ್ಯವು ಸುಗಮವಾಗಿ ಆಗಬೇಕೆಂಬ ಉದ್ದೇಶದಿಂದ, ಕಾರ್ಖಾನೆ ಮತ್ತು ಬಾಯ್ಲರುಗಳ ಇಲಾಖೆಯ ವಿಭಾಗವು, ತುಮಕೂರು ಜಿಲ್ಲೆಯಲ್ಲಿ ಸ್ಥಾಪನೆಗೊಂಡಿದೆ. ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರು, ಈ ವಿಭಾಗದ ಮುಖ್ಯಸ್ಥರಾಗಿರುತ್ತಾರೆ.

ಕಾರ್ಖಾನೆಗಳಿಗೆ ಸಂಬಂಧಿಸಿದ ಕಾರ್ಯ ನಿರ್ವಹಣೆಗೆ ಅನುಕೂಲವಾಗುವಂತೆ, ಕಾರ್ಖಾನೆಗಳ ಒಟ್ಟು ಸಂಖ್ಯೆಗಳ ಆಧಾರದ ಮೇಲೆ, ರಾಜ್ಯದಲ್ಲಿ ವಿವಿಧ ವಿಭಾಗಗಳನ್ನು ರಚಿಸಿಕೊಳ್ಳಲಾಗಿದೆ. ಒಂದು ವಿಭಾಗದ ಅಡಿ, ಮುನ್ನೂರಕ್ಕಿಂತ ಹೆಚ್ಚು ಕಾರ್ಖಾನೆಗಳಿರುವ ಅಥವಾ ಅದಕ್ಕಿಂತ ಕಡಿಮೆ ಇದ್ದರೂ ಅತಿ ಅಪಾಯಕಾರಿ ಕಾರ್ಖಾನೆಗಳ ಸಂಖ್ಯೆ ಹೆಚ್ಚಾಗಿರುವ ಪ್ರದೇಶವನ್ನು ಒಂದು ವಿಭಾಗವಾಗಿ ವಿಂಗಡಿಸಿಕೊಳ್ಳಲಾಗಿದೆ. ಅದರಂತೆ ತುಮಕೂರು ಜಿಲ್ಲೆಯು, ಮೈಸೂರು ವಿಭಾಗದ ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರ ಅಧೀನಕ್ಕೆ ಒಳಪಟ್ಟಿದೆ. ಕೆಳಕಂಡ ಕಾಯ್ದೆಗಳನ್ನು ಈ ಇಲಾಖೆಯ ಮೂಲಕ ಕಾರ್ಯಗತಗೊಳಿಸಲಾಗುತ್ತದೆ.

ಕಾರ್ಖಾನೆಗಳ ಕಾಯ್ದೆ ೧೯೪೮, ಪ್ರಸೂತಿ ಸೌಲಭ್ಯ ಕಾಯ್ದೆ ೧೯೬೧, ವೇತನ ಸಂದಾಯ ಕಾಯ್ದೆ ೧೯೩೬, ಬಾಲ ಕಾರ್ಮಿಕರ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ ೧೯೮೬, ಪರಿಸರ (ಸಂರಕ್ಷಣೆ) ಕಾಯ್ದೆ ೧೯೮೬ (ಭಾಗಶಃ ಮತ್ತು ಇದರಡಿ ರೂಪಿತವಾದ ನಿಯಮಗಳು). ಸೀಮಾ ರೂಲ್ಸ್ (ಕೆಮಿಕಲ್ ಇಂಡಸ್ಟ್ರಿಯಲ್ ಮೇಜರ್ ಆಕ್ಸಿಡೆಂಟ್ ರೂಲ್ಸ್ ೧೯೬೬ (CIMA Rules - Chemical Industrial Major Accident Rules 1966) ಮತ್ತು ಮೇಜರ್ ಹಸಾರ್ಡಸ್ ರೂಲ್ಸ್ ೧೯೯೪. (Major Hazardous Rules 1994).

ಕಾರ್ಖಾನೆಗಳಲ್ಲಿನ ಕಾರ್ಮಿಕರ ಆರೋಗ್ಯ, ಸುರಕ್ಷತೆ ಮತ್ತು ಪ್ರಗತಿಯ ಹಿತದೃಷ್ಟಿಯು ಈ ಕಛೇರಿಯ ಕಾರ್ಯ ನಿರ್ವಹಣೆಯ ಪ್ರಮುಖ ಉದ್ದೇಶವಾಗಿರುತ್ತದೆ. ಇದಕ್ಕಾಗಿ ಯಾವುದೇ ಕಾರ್ಖಾನೆಯ ನಿವೇಶನ, ಕಟ್ಟಡ ಮತ್ತು ಯಂತ್ರ ಸ್ಥಾಪನಾ ವಿನ್ಯಾಸದ ನಕ್ಷೆಗಳನ್ನು, ಬೆಳಕು, ಓಡಾಡುವ ಸ್ಥಳ, ಸುತ್ತಮುತ್ತಲಿನ ಚಟುವಟಿಕೆಗಳು ಮತ್ತು ಜನವಸತಿಯನ್ನು ಪರಿಗಣನೆಗೆ ತೆಗೆದುಕೊಂಡು ಕಾರ್ಖಾನೆಯ ನೋಂದಣಿ ಮತ್ತು ನಕ್ಷೆಗೆ ಅನುಮೋದನೆ ನೀಡಲಾಗುತ್ತದೆ. ನೋಂದಣಿಯಾಗಿಲ್ಲದ ಕಾರ್ಖಾನೆಗಳನ್ನು ಪತ್ತೆ ಹಚ್ಚಿ ನೋಂದಾಯಿಸಿಕೊಳ್ಳಲಾಗುತ್ತದೆ. ಕಾರ್ಖಾನೆಗಳನ್ನು ರ್‍ಯಾಂಡಂ ಸ್ಯಾಂಪ್ಲಿಂಗ್ ಆಧಾರದ ಮೇಲೆ ಪರಿವೀಕ್ಷಿಸುವುದು, ಕಾರ್ಖಾನೆಗಳಲ್ಲಿ ಸಂಭವಿಸಿರುವ ಮರಣಾಂತಿಕ ಅಪಘಾತಗಳ ಬಗ್ಗೆ ತನಿಖೆ ಮಾಡುವುದು, ಅಂತಹ ಅಪಘಾತಗಳು ಪುನರ್ಘಟಿಸದ ಹಾಗೆ ಸೂಕ್ತ ಸುರಕ್ಷತೆಗಳನ್ನು ಮಾಡುವುದು, ರಾಸಾಯನಿಕ ಕಾರ್ಖಾನೆಗಳಲ್ಲಿ ಯಾವುದೇ ದುರಂತ ಸಂಭವಿಸದಂತೆ ನಿಗಾ ವಹಿಸುವುದು, ಅತೀ ಅಪಾಯಕಾರಿ ಕಾರ್ಖಾನೆಗಳಲ್ಲಿ ನಿಯತಕಾಲಿಕವಾಗಿ ಅನುಮೋದಿಸಲ್ಪಟ್ಟ ಆನ್‌ಸೈಟ್ ಎಮರ್ಜೆನ್ಸಿ ಪ್ಲಾನಿನಂತೆ ಅಣುಕು ಪ್ರದರ್ಶನ ಏರ್ಪಡಿಸಿ, ಸಾಮರ್ಥ್ಯ ಮತ್ತು ಗುಣಮಟ್ಟಗಳ ಕುರಿತು ಪರಿಶೀಲಿಸಿ, ಸೂಕ್ತ ಮಾರ್ಗದರ್ಶನವನ್ನು ನೀಡುವುದು, ಹೆಚ್ಚು ಸುರಕ್ಷತಾ ದೃಷ್ಟಿಯಿಂದ ಕಾರ್ಯ ನಿರ್ವಹಿಸಲು ಕಾರ್ಖಾನೆಗಳ ಕಾರ್ಮಿಕರಿಗೆ ತರಬೇತಿ ನೀಡುವುದು, ಇವೇ ಮುಂತಾದ ಕೆಲಸಗಳನ್ನು ಈ ಇಲಾಖೆಯಿಂದ ಪರಿಣಾಮಕಾರಿಯಾಗಿ ಮಾಡಲಾಗುತ್ತದೆ. ನಕ್ಷೆ ಅನುಮೋದನೆ, ಕಾರ್ಖಾನೆಗಳ ನೋಂದಣಿ, ಕಾರ್ಖಾನೆ ಲೈಸೆನ್ಸ್, ಪರವಾನಗಿ ನವೀಕರಣ, ವಾರ್ಷಿಕ ಮೊತ್ತ, ಅರ್ಧ ವಾರ್ಷಿಕ ವರದಿ ತಯಾರಿಕೆ, ಅಪಘಾತಗಳ ತನಿಖೆ, ಮಾಹಿತಿ ಹಕ್ಕು ಅಧಿನಿಯಮಗಳನ್ವಯ ಮಾಹಿತಿ ಪೂರೈಕೆ, ಕಾರ್ಖಾನೆಗಳ ಪರಿವೀಕ್ಷಣೆ, ದೂರುಗಳ ಪರಿಹಾರ ಇವೇ ಮುಂತಾದುವು ಈ ಕಛೇರಿಯ ಇನ್ನಿತರ ಕಾರ್ಯ ಚಟುವಟಿಕೆಗಳಾಗಿರುತ್ತವೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೧೬.೮ ಹಾಗೂ ಕೋಷ್ಟಕ ೧೬.೯ ಅನ್ನು ನೋಡಿ.

**ಕೋಷ್ಟಕ ೧೬.೮: ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಖಾನೆಗಳ ಸಂಖ್ಯೆ ಮತ್ತು ಕಾರ್ಮಿಕರ ಸಂಖ್ಯೆಯ ವಿವರ**

| ವರ್ಷ | ನೋಂದಾಯಿತ ಕಾರ್ಖಾನೆಗಳ ಸಂಖ್ಯೆ | ಕಾರ್ಮಿಕರ ಸಂಖ್ಯೆ |
|---|---|---|
| ೨೦೦೮-೦೯ | ೩೪ | ೩೧೬೫ |
| ೨೦೦೯-೧೦ | ೨೭ | ೨೧೦೫ |
| ೨೦೧೦-೧೧ | ೨೭ | ೧೬೫೯ |
| ೨೦೧೧-೧೨ | ೫೫ | ೨೧೭೨ |

ಆಧಾರ: ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರು, ತುಮಕೂರು.

**ಕೋಷ್ಟಕ ೧೬.೯: ಜಿಲ್ಲೆಯಲ್ಲಿ ಮಾಡಿರುವ ಪರಿವೀಕ್ಷಣೆಗಳ ವಿವರಗಳು**

| ವರ್ಷ | ಜಂಟಿ ಪರಿವೀಕ್ಷಣೆ | ಉಪನಿರ್ದೇಶಕ ಪರಿವೀಕ್ಷಣೆ | ಸುರಕ್ಷತಾ ತರಬೇತಿ |
|---|---|---|---|
| ೨೦೦೮-೦೯ | - | ೩೩೦ | ೦೩ |
| ೨೦೦೯-೧೦ | - | ೩೩೬ | ೦೩ |
| ೨೦೧೦-೧೧ | - | ೩೧೭ | ೦೫ |
| ೨೦೧೧-೧೨ | - | ೨೯೩ | ೦೫ |

ಆಧಾರ: ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರು, ತುಮಕೂರು.

## ಅಪಾಯಕಾರಿ ಕಾರ್ಯ ಚಟುವಟಿಕೆ ಹೊಂದಿರುವ ಕಾರ್ಖಾನೆಗಳು

ಕರ್ನಾಟಕ ಕಾರ್ಖಾನೆಗಳ ಕಾಯ್ದೆ ೧೯೪೮ರ ಅಡಿಯಲ್ಲಿ ಅಪಾಯಕಾರಿ ಪ್ರಕ್ರಿಯೆಯುಳ್ಳ ಕಾರ್ಖಾನೆಗಳ ಪಟ್ಟಿ ಮಾಡಲಾಗಿದೆ. ಆ ಪ್ರಕಾರ ಗಾಜು ತಯಾರಿಕೆ, ಜಲ ವಿದ್ಯುತ್ ವಿಭಜನೆಯಿಂದ ಆಮ್ಲಜನಕ ಮತ್ತು ಜಲಜನಕಗಳ ಒತ್ತುವಿಕೆ ಅಥವಾ ತಯಾರಿಕೆ; ಕಲ್ನಾರು ನಿರ್ವಹಣೆ, ಸಂಸ್ಕರಣ, ಕಲ್ನಾರು ಬಳಸಿ ಯಾವುದೇ ವಸ್ತುಗಳ ತಯಾರಿಕೆ, ಎರಕ ಶಾಲೆಗಳು (ಫೆರ್ರಸ್ ಅಂಡ್ ನಾನ್ ಫೆರ್ರಸ್); ಅಪಾಯಕಾರಿ ಕೀಟ ನಿಯಂತ್ರಕಗಳ ತಯಾರಿಕೆ ಅಥವಾ ಅವುಗಳ ಕೌಶಲಿಕ ನಿಯಂತ್ರಣ; ಮುಕ್ತ ಸಿಲಿಕ ಇರುವ ಕಲ್ಲು ಅಥವಾ ಯಾವುದೇ ವಸ್ತುವಿನ ಸಂಪೂರ್ಣ ನಿಯಂತ್ರಣ; ಕ್ವಾರೀಯ ವಸ್ತುಗಳ ನಿರ್ವಹಣೆ ಅಥವಾ ಸಂಪೂರ್ಣ ನಿಯಂತ್ರಣ; ಕಲ್ಲಿದ್ದಲು, ಕಲ್ಲಿದ್ದಲ ಕಿಟ್ಟ,(ಕೋಕ್) ಮತ್ತು ಇದರ ಸಂಯುಕ್ತಗಳು; ಚರ್ಮ ಹದಗೊಳಿಸುವಿಕೆ; ಸಿಮೆಂಟ್; ಸ್ನೇಹಕ ಎಣ್ಣೆ (ಲೂಬ್ರಿಕೆಂಟ್ ಆಯಿಲ್) ಮತ್ತು ಗ್ರೀಸ್; ರಾಸಾಯನಿಕ ಕಾರ್ಖಾನೆಗಳು_ ಇವೇ ಮುಂತಾಗಿ, ಇನ್ನೂ ಅನೇಕ ಅಪಾಯಕಾರಿ ತಯಾರಿಕಾ ಕಾರ್ಯ ಚಟುವಟಿಕೆಗಳನ್ನು ಹೊಂದಿರುವಂತಹ ಕಾರ್ಖಾನೆಗಳನ್ನು ೧೯೪೮ರ ಕಾಯ್ದೆಯಲ್ಲಿ ಅಪಾಯಕಾರಿ ತಯಾರಿಕಾ ಚಟುವಟಿಕೆಗಳುಳ್ಳ ಕಾರ್ಖಾನೆಗಳೆಂದು ಪಟ್ಟಿ ಮಾಡಲಾಗಿದೆ. ತುಮಕೂರು ಜಿಲ್ಲೆಯಲ್ಲಿ ಇಂಥ ಅಪಾಯಕಾರಿ ಕಾರ್ಯಗಳನ್ನು ನಿರ್ವಹಿಸುವಂತಹ ಕೆಲವು ಕಾರ್ಖಾನೆಗಳಿದ್ದು, ಅವುಗಳ ವಿವರಗಳನ್ನು ಕೋಷ್ಟಕ ೧೬.೧೦ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೧೦: ಜಿಲ್ಲೆಯಲ್ಲಿರುವ ಅಪಾಯಕಾರಿ ಚಟುವಟಿಕೆಗಳನ್ನು ಹೊಂದಿರುವ ಕಾರ್ಖಾನೆಗಳ ವಿವರಗಳು**

| ವರ್ಷ | ಕಾರ್ಖಾನೆಗಳ ಸಂಖ್ಯೆ | ಕಾರ್ಖಾನೆಗಳ ಹೆಸರು | ಪರಿವೀಕ್ಷಣೆಗಳು |
|---|---|---|---|
| ೨೦೦೮-೦೯ | ೦೨ | ೧.ಮೆ//ಟಿ.ಟಿ.ಪಿ.ಟೆಕ್ನಾಲಜೀಸ್ ಪ್ರೈ.ಲಿ<br>೨.ಮೆ//ಎನ್.ಕೆ.ಇಂಡಸ್ಟ್ರೀಸ್ | ೩೯ |
| ೨೦೦೯-೧೦ | ೦೧ | ೧.ಮೆ//ವಿನರ್ ಬರ್ಗರ್ ಬ್ರಿಕ್ ಇಂಡಸ್ಟ್ರೀಸ್ ಪ್ರೈ.ಲಿ | ೪೩ |
| ೨೦೧೦-೧೧ | ೦೩ | ೧.ಮೆ//ಸಿಮ್ಕೋ ಇಂಡಸ್ಟ್ರೀಸ್<br>೨.ಮೆ//ಆದರ್ಶ ಸ್ಪೆಶಾಲಿಟಿ ಕೆಮಿಕಲ್ಸ್ ಪ್ರೈ.ಲಿ.<br>೩.ಮೆ//ಯುನಿವರ್ಸಲ್ ಏರ್ ಪ್ರಾಡೆಕ್ಟ್ಸ್ ಪ್ರೈ.ಲಿ. | ೩೧ |
| ೨೦೧೧-೧೨ | ೦೨ | ೧.ಮೆ//ವೆಕ್ಸ್ ಫೋರ್ಡ್ ಲ್ಯಾಬೋರೇಟರೀಸ್ ಪ್ರೈ.ಲಿ.<br>೨.ಮೆ//ಚಾಮುಂಡಿ ಆಲ್ಡಿಹೈಡ್ಸ್ | ೨೮ |

ಆಧಾರ: ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರು, ತುಮಕೂರು.

## ಬಾಯ್ಲರುಗಳ ಇಲಾಖೆ

ಬಾಯ್ಲರುಗಳಿಂದ ಆಗಬಹುದಾದ ಅಪಘಾತಗಳನ್ನು ತಡೆದು, ಸುರಕ್ಷತೆಗೆ ಉತ್ತೇಜನ ನೀಡಿ, ಸಾರ್ವಜನಿಕರ ಜೀವ ಮತ್ತು ಆಸ್ತಿ–ಪಾಸ್ತಿಗಳನ್ನು ಸಂರಕ್ಷಿಸುವುದು ಬಾಯ್ಲರು ಇಲಾಖೆಯ ಕರ್ತವ್ಯವಾಗಿರುತ್ತದೆ. ಬಾಯ್ಲರುಗಳ ಡಿಸೈನ್, ಮೆಟೀರಿಯಲ್, ತಯಾರಿಕಾ ಗುಣಮಟ್ಟ, ಬಾಯ್ಲರಿನ ತಯಾರಿಕೆಯ ಸಮಯದಲ್ಲಿ ವಿವಿಧ ಹಂತದ ಪರಿವೀಕ್ಷಣೆ, ವೆಲ್ಡರ್‌ಗಳ ಅರ್ಹತಾ ಪರೀಕ್ಷೆ ಮುಂತಾದವುಗಳ ಬಗ್ಗೆ ಭಾರತೀಯ ಬಾಯ್ಲರ್ ರೆಗ್ಯುಲೇಷನ್ ೧೯೫೦ರ ನಿಯಮಗಳಲ್ಲಿ ಮಾರ್ಗದರ್ಶನವಿದೆ. ಅದರಂತೆ ಬಾಯ್ಲರುಗಳ, ಹಬೆ ಕೊಳವೆಗಳ ಮತ್ತು ಎಕನಾಮೈಸರ್‌ಗಳ ಪರಿವೀಕ್ಷಣೆ ಹಾಗೂ ಪ್ರಮಾಣ ಪತ್ರ ನೀಡಿಕೆ, ಅಗತ್ಯವಿದ್ದಲ್ಲಿ ದುರಸ್ತಿಗೆ ಸಲಹೆ, ಬಾಯ್ಲರುಗಳ ನಿರ್ವಹಣೆ ಬಗ್ಗೆ ತರಬೇತಿ ನೀಡಿಕೆ, ಮುಂತಾದವು ಈ ಇಲಾಖೆಯ ಪ್ರಕಾರ್ಯಗಳಲ್ಲಿ ಸೇರಿವೆ.

ಬಾಯ್ಲರುಗಳ ಪರಿವೀಕ್ಷಕರ ವ್ಯಾಪ್ತಿಯಲ್ಲಿ ಕೆಳಕಂಡ ನಿಯಮಗಳನ್ನು ಜಾರಿಗೊಳಿಸಲಾಗುತ್ತದೆ. ದಿ ಇಂಡಿಯನ್ ಬಾಯ್ಲರ್ ಆಕ್ಟ್ ೧೯೨೩, ದಿ ಇಂಡಿಯನ್ ಬಾಯ್ಲರ್ ರೆಗ್ಯುಲೇಷನ್ ೧೯೫೦, ದಿ ಕರ್ನಾಟಕ ಬಾಯ್ಲರ್ ರೂಲ್ಸ್ ೧೯೮೨, ದಿ ಕರ್ನಾಟಕ ಎಕನಾಮೈಸರ್ಸ್ ರೂಲ್ಸ್ ೧೯೫೬, ದಿ ಕರ್ನಾಟಕ ಬಾಯ್ಲರ್ ಆಪರೇಷನ್ ಎಂಜಿನಿಯರ್ಸ್ ರೂಲ್ಸ್ ೧೯೫೯ ಹಾಗೂ ದಿ ಕರ್ನಾಟಕ ಬಾಯ್ಲರ್ ಅಟೆಂಡೆಂಟ್ಸ್ ರೂಲ್ಸ್ ೧೯೬೨.

ಜಿಲ್ಲಾ ಮಟ್ಟದ ಅಧಿಕಾರಿಗಳು, ಬಾಯ್ಲರುಗಳನ್ನು ಪ್ರಮಾಣೀಕರಿಸುವ ಅಧಿಕಾರಿಗಳಂತೆ ಕಾರ್ಯ ನಿರ್ವಹಿಸುತ್ತಾರೆ. ಜಿಲ್ಲಾ ಮಟ್ಟದ ಅಧಿಕಾರಿಗಳಲ್ಲದೆ, ಸರ್ಕಾರದಿಂದ ರಚನೆಗೊಂಡ ಆಪರೇಶನ್ ಎಂಜಿನಿಯರ್ ಎಕ್ಸಾಮಿನೇಶನ್ ಬೋರ್ಡ್ ಮತ್ತು ಬಾಯ್ಲರ್ ಅಟೆಂಡೆಂಟ್ಸ್ ಬೋರ್ಡ್ ಎಂಬ ಎರಡು ಪ್ರತ್ಯೇಕ ಮಂಡಳಿಗಳಿದ್ದು, ಈ ಎರಡೂ ಮಂಡಳಿಗಳಿಗೆ ಇಲಾಖೆಯ ನಿರ್ದೇಶಕರೇ ಅಧ್ಯಕ್ಷರಾಗಿ ಇನ್ನಿತರ ಐದೈದು ಸದಸ್ಯರು ನೇಮಕಗೊಂಡಿರುತ್ತಾರೆ. ಎಂಜಿನಿಯರ್ ಎಕ್ಸಾಮಿನೇಶನ್ ಬೋರ್ಡ್‌ಗೆ ಇಲಾಖೆಯ ಜಂಟಿ ನಿರ್ದೇಶಕರು ಮತ್ತು ಬಾಯ್ಲರ್ ಅಟೆಂಡೆಂಟ್ಸ್ ಬೋರ್ಡ್‌ಗೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರು ಕಾರ್ಯದರ್ಶಿಗಳಾಗಿ ನೇಮಕಗೊಂಡವರಾಗಿರುತ್ತಾರೆ. ವಿವರಗಳಿಗೆ ಕೋಷ್ಟಕ ೧೬.೧೧ ಹಾಗೂ ೧೬.೧೨ ಅನ್ನು ನೋಡಿ.

**ಕೋಷ್ಟಕ ೧೬.೧೧: ನೋಂದಣಿಯಾದ ಬಾಯ್ಲರುಗಳು, ಎಕನಾಮೈಸರ್‌ಗಳು ಮತ್ತು ಹಬೆ ಕೊಳವೆಗಳ ವಿವರ**

| ವರ್ಷ | ವರ್ಷದ ಪ್ರಾರಂಭದಲ್ಲಿ ನೋಂದಣಿಯಾಗಿದ್ದ ಬಾಯ್ಲರುಗಳ ಸಂಖ್ಯೆ | ಸದರಿ ಅವಧಿಯಲ್ಲಿ ನೋಂದಣಿ ಯಾದವು | ವರ್ಷಾಂತ್ಯಕ್ಕೆ ನೋಂದಣಿ ಯಾಗಿರುವ ಒಟ್ಟು ಬಾಯ್ಲರು ಗಳು | ವರ್ಷದ ಪ್ರಾರಂಭ ದಲ್ಲಿ ನೋಂದಣಿ ಯಾಗಿದ್ದ ಎಕನಾಮೈ ಸರ್‌ಗಳ ಸಂಖ್ಯೆ | ಸದರಿ ಅವಧಿ ಯಲ್ಲಿ ನೋಂ ದಣಿ ಯಾದವು | ವರ್ಷಾಂತ್ಯಕ್ಕೆ ನೋಂದಣಿ ಯಾಗಿರುವ ಒಟ್ಟು ಎಕನಾಮೈ ಸರ್‌ಗಳು | ವರ್ಷದ ಪ್ರಾರಂಭ ದಲ್ಲಿ ನೋಂದಣಿಯಾ ಗಿದ್ದ ಹಬೆ ಕೊಳವೆ ಗಳ ಸಂಖ್ಯೆ | ಸದರಿ ಅವಧಿ ಯಲ್ಲಿ ನೋಂ ದಣಿ ಯಾದವು |
|---|---|---|---|---|---|---|---|---|
| ೨೦೦೮-೦೯ | ೯೨ | ೬ | ೯೮ | – | – | – | ೮೦ | ೮ |
| ೨೦೦೯-೧೦ | ೯೮ | ೧೩ | ೧೧೧ | – | – | – | ೮೮ | ೧೨ |
| ೨೦೧೦-೧೧ | ೧೧೧ | ೬ | ೧೧೭ | – | – | – | ೧೦೦ | ೫ |
| ೨೦೧೧-೧೨ | ೧೧೭ | ೧೫ | ೧೩೨ | – | – | – | ೧೦೫ | ೧೦ |

ಆಧಾರ : ಬಾಯ್ಲರುಗಳ ಸಹಾಯಕ ನಿರ್ದೇಶಕರು, ತುಮಕೂರು.

**ಕೋಷ್ಟಕ ೧೬.೧೨: ಬಾಯ್ಲರುಗಳು, ಎಕನಾಮೈಸರ್‌ಗಳು ಮತ್ತು ಹಬೆಕೊಳವೆಗಳ ಪರಿವೀಕ್ಷಣೆಗೆ ಸಂದಾಯವಾದ ಶುಲ್ಕದ ವಿವರ**

(ರೂ. ಗಳಲ್ಲಿ)

| ವರ್ಷ | ಬಾಯ್ಲರುಗಳ ಪರಿವೀಕ್ಷಣೆಗೆ ಸಂದಾಯವಾದ ಶುಲ್ಕ | ಎಕನಾಮೈಸರ್‌ಗಳ ಪರಿವೀಕ್ಷಣೆಗೆ ಸಂದಾಯವಾದ ಶುಲ್ಕ | ಹಬೆ ಕೊಳವೆಗಳ ಪರಿವೀಕ್ಷಣೆಗೆ ಸಂದಾಯವಾದ ಶುಲ್ಕ | ಬಾಯ್ಲರುಗಳ ಬಿಡಿ ಭಾಗಗಳ ತಯಾರಿಕೆಯ ಪರಿವೀಕ್ಷಣೆಗೆ ಸಂದಾಯವಾದ ಶುಲ್ಕ |
|---|---|---|---|---|
| ೨೦೦೮-೦೯ | ೧,೧೩,೭೫೦-೦೦ | – | ೬೮,೩೦೦-೦೦ | – |
| ೨೦೦೯-೧೦ | ೯೮,೪೬೦-೦೦ | – | ೫೪,೩೫೦-೦೦ | – |
| ೨೦೧೦-೧೧ | ೧,೨೪,೫೫೦-೦೦ | – | ೬೮,೯೫೦-೦೦ | – |
| ೨೦೧೧-೧೨ | ೧,೦೧,೮೮೦-೦೦ | – | ೬೭,೫೩೦-೦೦ | – |

ಆಧಾರ: ಬಾಯ್ಲರುಗಳ ಸಹಾಯಕ ನಿರ್ದೇಶಕರು, ತುಮಕೂರು ವಿಭಾಗ, ತುಮಕೂರು

## ಸಮಾಜ ಕಲ್ಯಾಣ ಇಲಾಖೆ

ಸಾಮಾಜಿಕ ಅಸಮತೋಲನವನ್ನು ಹೋಗಲಾಡಿಸಿ ಎಲ್ಲ ನಾಗರಿಕರಿಗೂ ಸಮಾನ ಅವಕಾಶ ಮತ್ತು ಹಕ್ಕು ಇರಬೇಕೆಂಬ ಉದ್ದೇಶದಿಂದ ಭಾರತದ ಸಂವಿಧಾನದಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಸಂವಿಧಾನಾತ್ಮಕ ರಕ್ಷಣೆ ಒದಗಿಸಲಾಗಿದೆ. ರಾಜ್ಯಗಳ ಪುನರ್‌ವಿಂಗಡಣೆಯ ಮುನ್ನ ರಾಜ್ಯದಲ್ಲಿ ಶಿಕ್ಷಣ ಇಲಾಖೆಯ ಮೂಲಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಕಾರ್ಯಗಳನ್ನು ನಿರ್ವಹಿಸಲಾಗುತ್ತಿತ್ತು. ಹತ್ತೊಂಬತ್ತನೆಯ ಶತಮಾನದ ಮಧ್ಯ ಭಾಗದಲ್ಲಿ ನಿಮ್ನ ವರ್ಗದ ಜನತೆಯ ಶಿಕ್ಷಣ ಮಟ್ಟವನ್ನು ಸುಧಾರಿಸುವ ದೃಷ್ಟಿಯಿಂದ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಶಾಲೆಗಳನ್ನು ತೆರೆಯಲಾಯಿತಲ್ಲದೆ, ಖಾಸಗಿ ವಿದ್ಯಾರ್ಥಿ ನಿಲಯಗಳಿಗೆ ಸಹಾಯ ಧನವನ್ನೂ ಬಿಡುಗಡೆ ಮಾಡಲಾಯಿತು. ಬೋಧನಾ ಶುಲ್ಕ ವಿನಾಯಿತಿ, ವಿದ್ಯಾರ್ಥಿವೇತನ, ಪುಸ್ತಕ ಹಾಗೂ ಇತರ ಸಲಕರಣೆಗಳ ವಿತರಣೆ, ಸರ್ಕಾರಿ ಪ್ರೌಢಶಾಲೆ ಮತ್ತು ಕಾಲೇಜುಗಳಲ್ಲಿ ಪ್ರವೇಶಕ್ಕೆ ಮೀಸಲಾತಿ ಮೊದಲಾದ ಸೌಲಭ್ಯಗಳನ್ನು ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿತ್ತು.

ನಿಮ್ನ ವರ್ಗಗಳ ಕಮೀಷನರ್‌ರವರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣಕ್ಕಾಗಿ ಆರ್ಥಿಕ ಅಭಿವೃದ್ಧಿ, ಆರೋಗ್ಯ, ಶಿಕ್ಷಣ, ವಸತಿ ಮೊದಲಾದ ಕಾರ್ಯಕ್ರಮಗಳನ್ನು ಜಾರಿಗೆ ತರುತ್ತಿದ್ದರು. ಸ್ವಾತಂತ್ರ್ಯಾನಂತರದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸರ್ವತೋಮುಖ ಪ್ರಗತಿಯ ಉದ್ದೇಶದಿಂದ ಸಮಾಜ ಕಲ್ಯಾಣ ಇಲಾಖೆಯು ಆರಂಭಗೊಂಡು, ಹಲವಾರು ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತರಲು ಆರಂಭಿಸಿತು. ರಾಜ್ಯಗಳ ಪುನರ್ವಿಂಗಡಣೆಯ ನಂತರವೂ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು, ಹಿಂದುಳಿದ ವರ್ಗಗಳು ಹಾಗೂ ಅಲ್ಪ ಸಂಖ್ಯಾತರು – ಈ ಎಲ್ಲ ವರ್ಗಗಳ ಅಭಿವೃದ್ಧಿ ಕಾರ್ಯಗಳನ್ನೂ ಸಮಾಜ ಕಲ್ಯಾಣ ಇಲಾಖೆಯಿಂದಲೇ ನಿರ್ವಹಿಸಲಾಗುತ್ತಿತ್ತು. ೧೯೭೭ರ ಅಕ್ಟೋಬರ್ ತಿಂಗಳಲ್ಲಿ ಹಿಂದುಳಿದ ವರ್ಗಗಳ ಇಲಾಖೆಯೂ; ೧೯೯೮ ಡಿಸೆಂಬರ್‌ನ ಆದೇಶದಲ್ಲಿ ಅಲ್ಪ ಸಂಖ್ಯಾತರ ಇಲಾಖೆಯೂ ಮತ್ತು ೧೯೯೯ರಲ್ಲಿ ಪರಿಶಿಷ್ಟ ವರ್ಗಗಳ ಇಲಾಖೆಯೂ ಸ್ಥಾಪಿಸಲ್ಪಟ್ಟಿದ್ದರಿಂದ, ಆಯಾ ವರ್ಷಗಳ ಆ ನಂತರದಿಂದ ಸಮಾಜ ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳು, ಪರಿಶಿಷ್ಟ ಜಾತಿಯವರ ಅಭಿವೃದ್ಧಿಗೆ ಮಾತ್ರವೇ ಸೀಮಿತಗೊಂಡಿವೆ.

ಆಯುಕ್ತರು, ಸಮಾಜ ಕಲ್ಯಾಣ ಇಲಾಖೆಯ ಮುಖ್ಯಸ್ಥರಾಗಿದ್ದು ಇವರ ಸಹಾಯಕ್ಕೆ ಮೂರು ಜಂಟಿ ನಿರ್ದೇಶಕರು, ಐದು ಉಪ ನಿರ್ದೇಶಕರು, ಒಬ್ಬ ಲೆಕ್ಕಾಧಿಕಾರಿಗಳು ಮತ್ತು ಒಬ್ಬ ಸಹಾಯಕ ನಿರ್ದೇಶಕರು (ಸಾಂಖ್ಯಿಕ ಮತ್ತು ಸಂಶೋಧನೆ), ಇವರುಗಳು ಕೇಂದ್ರ ಸ್ಥಾನದಲ್ಲಿ ಇರುತ್ತಾರೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಇಲಾಖೆಗೆ ಸಂಬಂಧಿಸಿದ ಎಲ್ಲ ವಿಷಯಗಳಲ್ಲಿ, ಆಯಾ ಜಿಲ್ಲೆಯ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಕಾರ್ಯ ನಿರ್ವಹಿಸುತ್ತಾರೆ. ತಾಲೂಕು ಮಟ್ಟದಲ್ಲಿಯೂ ಇಲಾಖೆಯ ಕಛೇರಿಗಳನ್ನು ಪ್ರಾರಂಭಿಸಲಾಗಿದ್ದು, ತಾಲೂಕು ಸಮಾಜ ಕಲ್ಯಾಣಾಧಿಕಾರಿಗಳು ಕಛೇರಿಯ ಮುಖ್ಯಸ್ಥರಾಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವವರಾಗಿದ್ದಾರೆ. ೧೯೬೧ರ ಜನಗಣತಿಯ ಪ್ರಕಾರ, ತುಮಕೂರು ಜಿಲ್ಲೆಯಲ್ಲಿ, ಪರಿಶಿಷ್ಟ ಜಾತಿಯವರ ಸಂಖ್ಯೆ ೨,೩೨,೬೮೪ ಆಗಿತ್ತು, ೨೦೧೧ರ ಜನಗಣತಿಯಲ್ಲಿ ಒಟ್ಟು ಜಿಲ್ಲೆಯ ಜನಸಂಖ್ಯೆಯು ೨೬,೭೮,೯೮೦ ಇದ್ದು, ಇದರಲ್ಲಿ ಪರಿಶಿಷ್ಟ ಜಾತಿ ಜನಸಂಖ್ಯೆಯು ೫೦೬೯೦೧ ಆಗಿರುತ್ತದೆ. ಇದು, ಜಿಲ್ಲೆಯ ಒಟ್ಟಾರೆ ಜನಸಂಖ್ಯೆಯ ಶೇಕಡ ೬.೯೩ ಆಗುತ್ತದೆ. ತಾಲೂಕುವಾರು ಜನಸಂಖ್ಯೆ ವಿಂಗಡಣೆಯನ್ನು ಕೋಷ್ಟಕ ೧೬.೧೩ರಲ್ಲಿ ನೀಡಿದೆ.

**ಕೋಷ್ಟಕ ೧೬.೧೩: ಜನಗಣತಿಯ ಪ್ರಕಾರ ತುಮಕೂರು ಜಿಲ್ಲೆಯ ಪರಿಶಿಷ್ಟ ಜಾತಿ ಜನಸಂಖ್ಯೆಯ ತಾಲೂಕುವಾರು ವಿವರ**

| ಕ್ರ ಸಂ | ತಾಲೂಕು | ೧೯೬೧ | ೨೦೦೧ | ೨೦೧೧ |
|---|---|---|---|---|
| ೧ | ಚಿಕ್ಕನಾಯಕನಹಳ್ಳಿ | ೧೭,೬೧೨ | ೩೫೯೭೧ | ೩೮೮೦೫ |
| ೨ | ಗುಬ್ಬಿ | ೨೧,೮೫೨ | ೪೮೯೦೨ | ೪೩೫೯೬ |
| ೩ | ಕೊರಟಗೆರೆ | ೧೭,೭೧೮ | ೩೫೪೬೩ | ೩೮೫೦೦ |
| ೪ | ಕುಣಿಗಲ್ | ೧೮,೫೧೯ | ೩೦೬೬೩ | ೩೧೧೨೩ |
| ೫ | ಮಧುಗಿರಿ | ೩೩,೧೯೭ | ೬೧೧೮೨ | ೬೪೬೦೮ |

| ಕೋಷ್ಟಕ ೧೬.೧೩ ಮುಂದು.... | | | | |
|---|---|---|---|---|
| ಕ್ರ ಸಂ | ತಾಲೂಕು | ೧೯೬೧ | ೨೦೦೧ | ೨೦೧೧ |
| ೬ | ಪಾವಗಡ | ೩೦,೧೩೫ | ೬೬೬೯೩ | ೬೭೪೨೭ |
| ೭ | ಶಿರಾ | ೩೦,೪೯೭ | ೬೫೨೧೦ | ೬೯೯೩೦ |
| ೮ | ತಿಪಟೂರು | ೧೪,೬೦೩ | ೩೦೪೮೪ | ೩೧೩೭೧ |
| ೯ | ತುಮಕೂರು | ೩೬,೨೯೫ | ೮೪೫೪೯ | ೯೮೫೩೧ |
| ೧೦ | ತುರುವೇಕೆರೆ | ೧೨,೨೫೬ | ೨೨೯೦೭ | ೨೩೦೧೧ |
| ಒಟ್ಟು | | ೨,೩೨,೬೮೪ | ೪೭೪೦೪೪ | ೫೦೬೯೦೧ |

೨೦೧೧ರ ಜನಗಣತಿಯಂತೆ ರಾಜ್ಯದಲ್ಲಿ ಒಟ್ಟು ಜನಸಂಖ್ಯೆಯು ೫,೨೮,೫೦,೫೬೨ ಆಗಿದ್ದು, ಇದರಲ್ಲಿ ಪರಿಶಿಷ್ಟ ಜಾತಿ ಜನಸಂಖ್ಯೆಯು ೮೫,೬೩,೯೩೦ ಆಗಿತ್ತು. ತುಮಕೂರು ಜಿಲ್ಲೆಯಲ್ಲಿ ೨೦೧೧ರ ಜನಗಣತಿಯಂತೆ ಒಟ್ಟು ಜನಸಂಖ್ಯೆಯು ೨೬,೭೮,೯೮೦ ಇದ್ದು, ಇದರಲ್ಲಿ ಪರಿಶಿಷ್ಟ ಜಾತಿ ಜನಸಂಖ್ಯೆಯು ೫,೦೬,೯೦೧ ಆಗಿರುತ್ತದೆ. ಇದು, ಜಿಲ್ಲೆಯ ಒಟ್ಟಾರೆ ಜನಸಂಖ್ಯೆಯ ಶೇಕಡ ೬.೯೩ ಆಗುತ್ತದೆ. ೨೦೧೧ರ ಜನಗಣತಿಯ ಪ್ರಕಾರ, ಪರಿಶಿಷ್ಟ ಜಾತಿಯ ತಾಲೂಕುವಾರು ಜನಸಂಖ್ಯೆಯನ್ನು ಕೋಷ್ಟಕ ೧೬.೧೪ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೧೪: ಪರಿಶಿಷ್ಟ ಜಾತಿಯ ತಾಲೂಕುವಾರು ಜನಸಂಖ್ಯೆ (೨೦೧೧ರ ಜನಗಣತಿಯಂತೆ) ವಿವರ**

| ಕ್ರ ಸಂ | ತಾಲೂಕು | ಒಟ್ಟು ಜನ ಸಂಖ್ಯೆ | ಪ.ಜಾತಿಯವರ ಸಂಖ್ಯೆ | ಪ.ಜಾತಿಯ ಶೇಕಡ ಜನ ಸಂಖ್ಯೆ |
|---|---|---|---|---|
| ೧ | ಚಿಕ್ಕನಾಯಕನಹಳ್ಳಿ | ೨,೧೨,೧೩೦ | ೩೮,೮೦೫ | ೧೮.೨೯ |
| ೨ | ಗುಬ್ಬಿ | ೨,೬೨,೫೧೮ | ೪೩,೫೯೬ | ೧೬.೬೧ |
| ೩ | ಕೊರಟಗೆರೆ | ೧,೬೭,೫೯೧ | ೩೮,೫೦೦ | ೨೨.೯೭ |
| ೪ | ಕುಣಿಗಲ್ | ೨,೨೫,೭೮೩ | ೩೧,೧೨೩ | ೧೩.೭೮ |
| ೫ | ಮಧುಗಿರಿ | ೨,೬೭,೮೬೬ | ೬೪,೬೦೮ | ೨೪.೧೨ |
| ೬ | ಪಾವಗಡ | ೨,೪೫,೧೯೪ | ೬೭,೪೨೭ | ೨೭.೫೦ |
| ೭ | ಶಿರಾ | ೩,೧೩,೭೫೮ | ೬೯,೯೩೦ | ೨೨.೨೯ |
| ೮ | ತಿಪಟೂರು | ೨,೨೨,೭೪೯ | ೩೧,೩೭೧ | ೧೪.೦೮ |
| ೯ | ತುಮಕೂರು | ೫,೯೨,೩೯೭ | ೯೮,೫೩೧ | ೧೬.೬೩ |
| ೧೦ | ತುರುವೇಕೆರೆ | ೧,೬೮,೯೪ | ೨೩,೦೧೧ | ೧೩.೬೨ |
| ಒಟ್ಟು | | ೨೬,೭೮,೯೮೦ | ೫,೦೬,೯೦೧ | ೧೮.೯೨ |

**ಆಧಾರ: ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ತುಮಕೂರು**

ಆರಂಭದ ಎರಡು ಪಂಚವಾರ್ಷಿಕ ಯೋಜನೆಗಳಲ್ಲಿ, ಮನೆ, ವ್ಯವಸಾಯ, ಅಸ್ಪೃಶ್ಯತಾ ನಿವಾರಣೆ, ಆರ್ಥಿಕ ಅಭಿವೃದ್ಧಿ, ಶೈಕ್ಷಣಿಕ ಅಭಿವೃದ್ಧಿ, ಭೂಮಿ ಖರೀದಿ ಮುಂತಾದವುಗಳ ಕಡೆ ಗಮನ ಕೊಟ್ಟು ಪರಿಶಿಷ್ಟ ಜಾತಿಯವರ ಪ್ರಗತಿಗೆ ಪ್ರಯತ್ನಿಸಲಾಯಿತು. ಅದರಂತೆ, ಜಿಲ್ಲೆಯಲ್ಲಿ ಪ್ರಥಮ ಹಾಗೂ ದ್ವಿತೀಯ ಪಂಚವಾರ್ಷಿಕ ಯೋಜನೆಗಳಲ್ಲಿ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲಾಯಿತು. ವಿವರಗಳನ್ನು ಕೋಷ್ಟಕ ೧೬.೧೫ರಲ್ಲಿ ನೀಡಿದೆ.

**ಕೋಷ್ಟಕ ೧೬.೧೫: ಜಿಲ್ಲೆಯಲ್ಲಿ ಪ್ರಥಮ ಹಾಗೂ ದ್ವಿತೀಯ ಪಂಚವಾರ್ಷಿಕ ಯೋಜನೆಗಳಲ್ಲಿ ಅನುಷ್ಠಾನಕ್ಕೆ ತರಲಾದ ಸಮಾಜಕಲ್ಯಾಣ ಕಾರ್ಯಕ್ರಮಗಳು ಹಾಗೂ ನೀಡಿದ ಅನುದಾನಗಳ ವಿವರ**

(ರೂ. ಗಳಲ್ಲಿ)

| ಕ್ರ ಸಂ | ಯೋಜನೆಯ ಹೆಸರು | ನೀಡಿದ ಅನುದಾನ |
|---|---|---|
| ೧ | ಗೃಹ (ಹೌಸಿಂಗ್) | ೧೯,೬೬,೦೭೮ |
| ೨ | ಕೃಷಿಗಾಗಿ ಆರ್ಥಿಕ ನೆರವು | ೯೨,೫೬೦ |
| ೩ | ಕಲಾ ಪ್ರಕಾರಗಳ ಬೆಳವಣಿಗೆಗೆ ಆರ್ಥಿಕ ನೆರವು | ೯,೪೩೦ |
| ೪ | ಶಿಕ್ಷಣ | ೩೩,೬೭೯ |
| ೫ | ಕುಡಿಯುವ ನೀರಿನ ಬಾವಿಗಳು (೫೩) | ೬೩,೯೫೩ |
| ೬ | ಸಮುದಾಯ ಮನರಂಜನಾ ಕೇಂದ್ರ ಕಟ್ಟಡಗಳು (೨೬) | ೬೦,೦೭೬ |
| ೭ | ಮಹಿಳಾ ಕಲ್ಯಾಣ ಕೇಂದ್ರಗಳು | ೨೩,೯೬೦ |
| ೮ | ಹಳೆಯ ವಿದ್ಯಾರ್ಥಿ ನಿಲಯಗಳ ನಿರ್ವಹಣೆ | ೩೩,೯೬೫ |
| ೯ | ಹೊಸ ಕಟ್ಟಡಗಳ ನಿರ್ಮಾಣ | ೨೫,೦೦೦ |
| ೧೦ | ಶಾಲಾ ವಿದ್ಯಾರ್ಥಿಗಳಿಗೆ ಡೆಸ್ಕ್‌ಗಳು | ೧೫,೦೦೦ |
| ೧೧ | ಹೊಲಿಗೆ ಕೇಂದ್ರ  (೧) | ೮,೧೫೦ |
| ೧೨ | ಕೃಷಿ ಕಾಲೋನಿಗಳು (೮) | ೧,೩೧,೭೯೪ |
| ೧೩ | ಪ್ರಚಾರ | ೧,೫೦೫ |
| ೧೪ | ಅಸ್ಪೃಶ್ಯತಾ ನಿವಾರಣೆ | ೭,೯೧೯ |
| ೧೫ | ಬೀಜಗಳು, ಉಪಕರಣಗಳು ಮತ್ತು ಗೊಬ್ಬರ | ೪೪,೩೩೦ |
| ೧೬ | ಎತ್ತುಗಳ ಖರೀದಿ | ೧,೪೭೫ |
| ೧೭ | ಭೂಮಿಯ ಮರುಗಳಿಕೆ | ೧,೪೭೫ |
| ೧೮ | ಪರಿಶಿಷ್ಟ ಜಾತಿ ಸಹಕಾರಿ ಸಂಘಗಳು | ೭,೬೧೨ |
| ೧೯ | ಭೂಮಿಯ ಗಳಿಕೆ  (೨೨೭ ಎಕರೆಗಳು) | ೧,೦೯,೫೨೫ |
| ೨೦ | ಶೈಕ್ಷಣಿಕ ವಿದ್ಯಾರ್ಥಿ ವೇತನಗಳು | ೩,೦೦೦ |
| ೨೧ | ಹಿಂದುಳಿದ ವರ್ಗಗಳಿಗೆ ಆರ್ಥಿಕ ನೆರವು | ೧,೦೦೦ |
| **ಒಟ್ಟು** | | **೨೬,೯೭,೫೯೩** |

ಮೂರನೇ ಪಂಚವಾರ್ಷಿಕ ಯೋಜನೆ ಅಡಿಯಲ್ಲಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣಕ್ಕೆ ಸಂಬಂಧಿಸಿದ ಕೆಲವಾರು ಪ್ರಗತಿಪರ ಯೋಜನೆಗಳ ಅನುಷ್ಠಾನಕ್ಕಾಗಿ, ತುಮಕೂರು ಜಿಲ್ಲೆಗೆ, ರೂ.೨೬,೧೩,೬೦೦ ಗಳ ಮೊತ್ತವನ್ನು ಮಂಜೂರು ಮಾಡಲಾಯಿತು.

ರಾಜ್ಯದ ಎಲ್ಲ ಪರಿಶಿಷ್ಟ ಜಾತಿಯ ಪ್ರಗತಿಗಾಗಿ ಸರ್ಕಾರವು ೧೯೫೧ರಿಂದ ೧೯೫೬ರ ವರೆಗಿನ ಮೊದಲನೇ ಯೋಜನಾವಧಿಯಲ್ಲಿ ರೂ. ೧೧೫.೯೦ ಲಕ್ಷಗಳನ್ನು ಒದಗಿಸಿದ್ದು, ಈ ಮೊತ್ತವನ್ನು ಹಂತ ಹಂತವಾಗಿ ಹೆಚ್ಚಿಸುತ್ತ ೨೦೦೨ ರಿಂದ ೨೦೦೭ರ ವರೆಗಿನ ಹತ್ತನೇ ಯೋಜನಾವಧಿಯಲ್ಲಿ ರೂ. ೬೦೨೧೮.೨೭ ಲಕ್ಷಗಳನ್ನು ಒದಗಿಸಿದೆ.

೨೦೦೭–೦೮ನೇ ಸಾಲಿನ ಆಯವ್ಯಯದಲ್ಲಿ, ಯೋಜನಾ ಕಾರ್ಯಕ್ರಮಗಳಿಗಾಗಿ, ಡಾ. ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಮತ್ತು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳಿಗೆ ನಿಗದಿ ಪಡಿಸಿದ ಆಯವ್ಯಯವನ್ನು ಹೊರತು ಪಡಿಸಿ,

ಒಟ್ಟು ರೂ. ೪೦,೭೮೪.೫೪ ಲಕ್ಷಗಳನ್ನು ಒದಗಿಸಲಾಗಿದೆ. ಇದರಲ್ಲಿ ಯೋಜನಾ ಕಾರ್ಯಕ್ರಮದಡಿಯಲ್ಲಿ, ರಾಜ್ಯದ ಪಾಲು ರೂ. ೨೮೩೫೯.೪೯ ಲಕ್ಷಗಳು ಹಾಗೂ ಕೇಂದ್ರದ ಪಾಲು ರೂ. ೧೨೪೨೫.೦೫ ಲಕ್ಷಗಳು. ಯೋಜನೇತರ ಕಾರ್ಯಕ್ರಮಗಳಿಗಾಗಿ ರಾಜ್ಯ ವಲಯ ಮತ್ತು ಜಿಲ್ಲಾ ವಲಯ ಸೇರಿದಂತೆ ಒಟ್ಟಾರೆಯಾಗಿ ರೂ. ೨೭,೯೨೮.೯೦ ಲಕ್ಷಗಳನ್ನು ಒದಗಿಸಲಾಗಿದೆ. ಆಯವ್ಯಯದ ಈ ಮೊತ್ತದಂತೆಯೇ ಇವರಿಗಾಗಿ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳನ್ನೂ ಈ ಜಾತಿಯವರ ಶೈಕ್ಷಣಿಕ, ಆರ್ಥಿಕ ಮತ್ತು ಇತರ ರೀತಿಯ ಬೆಳವಣಿಗೆಗಾಗಿ ಕ್ರಮೇಣ ಹೆಚ್ಚಿಸುತ್ತ ಬರಲಾಗಿದೆ. ಹಲವು ರೀತಿಯ ಉಪಕಾರ್ಯಕ್ರಮಗಳೂ ಜಾರಿಗೊಳ್ಳುತ್ತಿವೆ. ಕಾರ್ಯಗತವಾಗುತ್ತಿರುವ ಹಲವಾರು ಕಾರ್ಯಕ್ರಮಗಳಲ್ಲಿ, ಕೆಲವು ಪ್ರಮುಖ ಕಾರ್ಯಕ್ರಮಗಳ ಕುರಿತಾದ ಮಾಹಿತಿಯನ್ನು ಕೋಷ್ಟಕ ೧೬.೧೬ರಲ್ಲಿ ನೀಡಿದೆ.

**ಕೋಷ್ಟಕ ೧೬.೧೬: ತುಮಕೂರು ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಯೋಜನೆ ಹಾಗೂ ಯೋಜನೇತರ ಲೆಕ್ಕದಲ್ಲಿ ಬಿಡುಗಡೆಯಾದ ಹಣ ಮತ್ತು ವೆಚ್ಚದ ವಿವರ**

| ಕಾರ್ಯ ಕ್ರಮದ ವಿವರ | ೨೦೦೯–೧೦ | | | ೨೦೧೦–೧೧ | | | ೨೦೧೧–೧೨ | | |
|---|---|---|---|---|---|---|---|---|---|
| | ನಿಗದಿ | ಬಿಡುಗಡೆ | ಖರ್ಚು | ನಿಗದಿ | ಬಿಡುಗಡೆ | ಖರ್ಚು | ನಿಗದಿ | ಬಿಡುಗಡೆ | ಖರ್ಚು |
| ಯೋಜನೆ | ೧೮೩೫.೬೨ | ೧೬೧೨.೬೪ | ೧೫೭೪.೮೨ | ೧೯೦೭.೭೦ | ೨೨೨೦.೦೪ | ೧೭೧೯.೫೬ | ೧೭೨೮.೬೦ | ೧೩೧೦.೭೯ | ೧೬೨೩.೬೯ |
| ಯೋಜನೇತರ | ೧೩೨೫.೧೯ | ೧೩೨೫.೧೯ | ೧೧೪೬.೯೭ | ೧೩೮೬.೭೯ | ೧೩೮೬.೭೯ | ೧೩೫೩.೫೩ | ೧೪೦೭.೦೬ | ೧೪೦೭.೦೬ | ೧೪೦೧.೭೪ |
| ಒಟ್ಟು | ೩೧೬೦.೮೧ | ೨೯೩೭.೮೩ | ೨೭೨೧.೭೯ | ೩೨೯೪.೪೯ | ೩೬೦೬.೮೩ | ೩೦೭೩.೦೯ | ೩೧೩೫.೬೬ | ೨೭೧೭.೮೫ | ೩೦೨೫.೪೩ |

**ಆಧಾರ: ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ತುಮಕೂರು ಜಿಲ್ಲೆ**

## ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು

ಐದರಿಂದ ಹತ್ತನೇ ತರಗತಿಯಲ್ಲಿ ಓದುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿ ಸೌಕರ್ಯಗಳನ್ನು ಕಲ್ಪಿಸಲು ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳನ್ನು ಇಲಾಖೆಯ ವತಿಯಿಂದ ನಡೆಸಲಾಗುತ್ತಿದೆ. ಈ ನಿಲಯಗಳಲ್ಲಿ ಪ್ರತಿ ವಿದ್ಯಾರ್ಥಿಗೆ ತಿಂಗಳಿಗೆ ರೂ. ೮೫೦ರ ಲೆಕ್ಕದಲ್ಲಿ ಭೋಜನವನ್ನು ಒದಗಿಸಲಾಗುತ್ತದೆ. ಪ್ರತಿ ವರ್ಷಕ್ಕೆ ರೂ. ೨೫೦ ರಂತೆ ಉಚಿತ ಪಠ್ಯ ಪುಸ್ತಕ ಮತ್ತು ಲೇಖನ ಸಾಮಗ್ರಿ, ವಾರ್ಷಿಕ ರೂ. ೪೦೦ರ ದರದಲ್ಲಿ ಎರಡು ಜೊತೆ ಸಮವಸ್ತ್ರ, ರೂ. ೪೦೦ ದರದಲ್ಲಿ ಹಾಸಿಗೆ–ಹೊದಿಕೆ ಮೂರು ವರ್ಷಗಳಿಗೊಮ್ಮೆ, ಮಾಹೆಯಾನ ರೂ. ೪೦ ರ ದರದಲ್ಲಿ ಸೋಪು, ಎಣ್ಣೆ, ವೈದ್ಯಕೀಯ ವೆಚ್ಚ ಮುಂತಾದ ಅಗತ್ಯಗಳು ಮತ್ತು ಪುಸ್ತಕ ಭಂಡಾರದ ನೆರವು ಹಾಗೂ ಕ್ರೀಡಾ ಸಾಮಗ್ರಿಗಳನ್ನು ಮತ್ತು ಇತರ ಅಗತ್ಯಗಳನ್ನು ಇಲ್ಲಿಯ ನಿಲಯಾರ್ಥಿಗಳಿಗೆ ಪೂರೈಸಲಾಗುತ್ತದೆ.

ಜಿಲ್ಲೆಯಲ್ಲಿ ೫೫ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯಗಳನ್ನೂ, ಮತ್ತು. ೧೫ ಬಾಲಕಿಯರ ವಿದ್ಯಾರ್ಥಿ ನಿಲಯಗಳನ್ನೂ ನಡೆಸಲಾಗುತ್ತಿದೆ. ಸರ್ಕಾರದಿಂದ ನಡೆಸುವ ನಿಲಯಗಳಲ್ಲದೆ ಪರಿಶಿಷ್ಟ ಜಾತಿಯವರಿಗಾಗಿ ಸ್ವಯಂ ಸೇವಾ ಸಂಸ್ಥೆಗಳು ನಡೆಸುತ್ತಿರುವ ಮೆಟ್ರಿಕ್ ಪೂರ್ವ ನಿಲಯಗಳೂ ಇದ್ದು ಇವುಗಳಿಗೆ ಉತ್ತೇಜನ ನೀಡಲು, ಸರ್ಕಾರವು ಧನ ಸಹಾಯ ನೀಡುತ್ತದೆ. ಜಿಲ್ಲೆಯಲ್ಲಿರುವ ಸರ್ಕಾರಿ ಮತ್ತು ಅನುದಾನಿತ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು ಮತ್ತು ವಿದ್ಯಾರ್ಥಿಗಳ ಸಂಖ್ಯೆಯ ವಿವರಗಳನ್ನು ಕೋಷ್ಟಕ ೧೬.೧೭ರಲ್ಲಿ ನೀಡಿದೆ.

**ಕೋಷ್ಟಕ ೧೬.೧೭: ೨೦೧೩-೧೪ ರ ಸರ್ಕಾರಿ ಮತ್ತು ಅನುದಾನಿತ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು ಮತ್ತು ವಿದ್ಯಾರ್ಥಿಗಳ ಸಂಖ್ಯೆಯ ವಿವರ**

| ತಾಲೂಕಿನ ಹೆಸರು | ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ಸಂಖ್ಯೆ | | | ವಿದ್ಯಾರ್ಥಿಗಳ ಸಂಖ್ಯೆ | | |
|---|---|---|---|---|---|---|
| | ಬಾಲಕರದು | ಬಾಲಕಿಯರದು | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು |
| ತುಮಕೂರು | ೬ | ೩ | ೯ | ೫೨೯ | ೧೩೪ | ೬೬೩ |
| ಗುಬ್ಬಿ | ೪ | ೨ | ೬ | ೨೩೬ | ೯೪ | ೩೩೦ |
| ಕುಣಿಗಲ್ | ೮ | ೧ | ೯ | ೨೭೯ | ೩೩ | ೩೧೨ |
| ತಿಪಟೂರು | ೨ | ೨ | ೪ | ೭೧ | ೪೯ | ೧೨೦ |
| ತುರುವೇಕೆರೆ | ೪ | ೧ | ೫ | ೨೧೫ | ೨೪ | ೨೩೯ |
| ಚಿಕ್ಕನಾಯಕನಹಳ್ಳಿ | ೭ | ೧ | ೮ | ೨೭೧ | ೪೨ | ೩೧೩ |
| ಶಿರಾ | ೯ | ೧ | ೧೦ | ೪೮೪ | ೧೦೯ | ೫೯೩ |
| ಕೊರಟಗೆರೆ | ೨ | ೧ | ೩ | ೮೬ | ೪೫ | ೧೩೧ |
| ಮಧುಗಿರಿ | ೧೮ | ೧ | ೧೯ | ೧೦೪೮ | ೧೨೦ | ೧೨೬೮ |
| ಪಾವಗಡ | ೬ | ೧ | ೭ | ೫೧೬ | ೯೦ | ೬೦೬ |
| **ಒಟ್ಟು** | **೬೬** | **೧೪** | **೮೦** | **೩೭೩೫** | **೭೪೦** | **೪೪೭೫** |

**ಆಧಾರ: ತುಮಕೂರು ಜಿಲ್ಲಾ ಅಂಕಿ ಅಂಶಗಳ ನೋಟ-೨೦೧೩-೧೪**

## ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು

ಗ್ರಾಮಾಂತರ ಪ್ರದೇಶಗಳಿಂದ ಬಂದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮುಂದುವರಿಸಲು ಅನುಕೂಲ ಮಾಡಿಕೊಡುವುದಕ್ಕಾಗಿ ಇಲಾಖಾವತಿಯಿಂದ ಮೆಟ್ರಿಕ್‌ನಂತರದ ವಿದ್ಯಾರ್ಥಿ ನಿಲಯಗಳನ್ನು ನಿರ್ವಹಿಸಲಾಗುತ್ತಿದೆ. ಈ ಜಿಲ್ಲೆಯಲ್ಲಿ ೨೭ ಸರ್ಕಾರಿ ಮತ್ತು ಅನುದಾನಿತ ಮೆಟ್ರಿಕ್‌ನಂತರದ ಬಾಲಕರ ವಿದ್ಯಾರ್ಥಿ ನಿಲಯಗಳೂ ಹಾಗೂ ೧೧ ಸರ್ಕಾರಿ ಮತ್ತು ಅನುದಾನಿತ ಮೆಟ್ರಿಕ್‌ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯಗಳು ಇದ್ದು, ಈ ನಿಲಯಗಳ ಮತ್ತು ನಿಲಯಾರ್ಥಿಗಳ ತಾಲೂಕುವಾರು ವಿವರಗಳನ್ನು ಕೋಷ್ಟಕ ೧೬.೧೮ ಹಾಗೂ ಪ್ರಯೋಜನ ಪಡೆದವರ ವಿವರಗಳನ್ನು ೧೬.೧೯ರಲ್ಲಿ ನೀಡಿದೆ.

**ಕೋಷ್ಟಕ ೧೬.೧೮: ಜಿಲ್ಲೆಯಲ್ಲಿರುವ ೨೦೧೩-೧೪ರ ಸರ್ಕಾರಿ ಹಾಗೂ ಅನುದಾನಿತ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ವಿವರ**

| ಕ್ರ ಸಂ | ತಾಲೂಕಿನ ಹೆಸರು | ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಸಂಖ್ಯೆ | | | ವಿದ್ಯಾರ್ಥಿಗಳ ಸಂಖ್ಯೆ | | |
|---|---|---|---|---|---|---|---|
| | | ಬಾಲಕರದು | ಬಾಲಕಿಯರದು | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು |
| ೧ | ತುಮಕೂರು | ೧೦ | ೪ | ೧೪ | ೧೫೭೬ | ೭೦೦ | ೧೯೦೧ |
| ೨ | ಗುಬ್ಬಿ | ೧ | – | ೧ | ೮೦ | – | ೮೦ |
| ೩ | ಕುಣಿಗಲ್ | ೧ | – | ೧ | ೩೬ | – | ೩೬ |
| ೪ | ತಿಪಟೂರು | ೩ | ೧ | ೪ | ೨೦೭ | ೮೪ | ೨೯೧ |
| ೫ | ತುರುವೇಕೆರೆ | ೦೧ | – | ೦೧ | ೨೧ | – | ೨೧ |
| ೬ | ಚಿಕ್ಕನಾಯಕನಹಳ್ಳಿ | ೧ | ೦೧ | ೨ | ೧೪೨ | ೩೬ | ೧೭೮ |
| ೭ | ಶಿರಾ | ೨ | ೧ | ೩ | ೩೬೦ | ೧೧೦ | ೪೭೦ |
| ೮ | ಕೊರಟಗೆರೆ | ೧ | ೧ | ೨ | ೧೫೨ | ೪೪ | ೧೯೬ |
| ೯ | ಮಧುಗಿರಿ | ೩ | ೧ | ೪ | ೩೮೮ | ೧೮೧ | ೫೬೯ |
| ೧೦ | ಪಾವಗಡ | ೪ | ೨ | ೬ | ೭೬೭ | ೧೭೦ | ೯೩೭ |
| **ಒಟ್ಟು** | | **೨೭** | **೧೧** | **೩೮** | **೩೭೨೯** | **೧೩೨೫** | **೫೦೫೪** |

**ಆಧಾರ: ತುಮಕೂರು ಜಿಲ್ಲಾ ಅಂಕಿ ಅಂಶಗಳ ನೋಟ-೨೦೧೩-೧೪.**

### ಕೋಷ್ಟಕ ೧೬.೧೯: ಪರಿಶಿಷ್ಟ ಜಾತಿಯವರಿಗಾಗಿ ಜಿಲ್ಲೆಯಲ್ಲಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಪ್ರಯೋಜನ ಪಡೆದವರ ಮತ್ತು ಖರ್ಚಿನ ವಿವರ (ಯೋಜನೆ + ಯೋಜನೇತರ)

(ಲಕ್ಷ ರೂ. ಗಳಲ್ಲಿ)

| ವರ್ಷ | ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಸಂಖ್ಯೆ | | | ವಿದ್ಯಾರ್ಥಿಗಳ ಸಂಖ್ಯೆ | | | ವೆಚ್ಚ |
|---|---|---|---|---|---|---|---|
| | ಬಾಲಕರು | ಬಾಲಕಿಯರು | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು | |
| ೨೦೦೮-೦೯ | ೧೮ | ೯ | **೨೭** | ೨೫೯೭ | ೮೩೭ | ೩೪೩೪ | ೨೬೬.೬೩ |
| ೨೦೦೯-೧೦ | ೧೮ | ೯ | **೨೭** | ೨೬೦೪ | ೯೭೬ | ೩೫೮೦ | ೨೭೩.೭೯ |
| ೨೦೧೦-೧೧ | ೧೮ | ೯ | **೨೭** | ೨೮೫೦ | ೯೭೨ | ೩೮೨೨ | ೩೩೧.೬೦ |
| ೨೦೧೧-೧೨ | ೧೮ | ೯ | **೨೭** | ೩೦೫೯ | ೧೦೭೫ | ೪೧೩೪ | ೩೭೯.೫೬ |
| **ಒಟ್ಟು** | **೭೨** | **೩೬** | **೧೦೮** | **೧೧೧೧೦** | **೩೮೬೦** | **೧೪೯೭೦** | **೧೨೫೧.೫೮** |

**ಆಧಾರ : ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ತುಮಕೂರು.**

## ಕೇಂದ್ರ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ

ಇದು ಕೇಂದ್ರ ಸರ್ಕಾರದ ಒಂದು ಕಾರ್ಯಕ್ರಮವಾಗಿದ್ದು, ಭಾರತ ಸರ್ಕಾರದ ನಿಯಮಾವಳಿಯನ್ವಯ ಕುಟುಂಬದ ವಾರ್ಷಿಕ ವರಮಾನ ರೂ. ಒಂದು ಲಕ್ಷಕ್ಕಿಂತ ಹೆಚ್ಚಿಲ್ಲದ ಎಲ್ಲಾ ಅರ್ಹ ಪರಿಶಿಷ್ಟ ಜಾತಿಯ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ನಿರ್ವಹಣಾ ವೆಚ್ಚ ಭರಿಸಲು ಹಾಗೂ ಶುಲ್ಕ ಮರು ಪಾವತಿಸುವ ಸಲುವಾಗಿ ಪೂರ್ಣ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತದೆ. ಈ ವಿದ್ಯಾರ್ಥಿ ವೇತನವು ವಿದ್ಯಾರ್ಥಿಗಳು ಓದುತ್ತಿರುವ ತರಗತಿಯ ಮಟ್ಟಕ್ಕನುಸಾರವಾಗಿ ನಿಗದಿತವಾಗಿರುವ ದರಗಳಲ್ಲಿ ಮಂಜೂರು ಮಾಡಲಾಗುತ್ತದೆ. ವಿವಿಧ ಕೋರ್ಸ್‌ಗಳಿಗೆ ನಿಗದಿಸಿರುವ ವಿದ್ಯಾರ್ಥಿ ವೇತನದ ತಿಂಗಳ ದರಗಳನ್ನು ಕೋಷ್ಟಕ ೧೬.೨೦ರಲ್ಲಿ ಕೊಡಲಾಗಿದೆ.

### ಕೋಷ್ಟಕ ೧೬.೨೦: ವಿವಿಧ ಕೋರ್ಸ್‌ಗಳಿಗೆ ನಿಗದಿಪಡಿಸಿರುವ ಮಾಸಿಕ ವಿದ್ಯಾರ್ಥಿ ವೇತನದ ದರಗಳು

(ರೂ. ಗಳಲ್ಲಿ)

| ಕೋರ್ಸ್‌ಗಳ ವಿವರ | ನಿಲಯಾರ್ಥಿ ಗಳಲ್ಲದವರಿಗೆ | ನಿಲಯಾರ್ಥಿಗಳಿಗೆ |
|---|---|---|
| **ಗ್ರೂಪ್ ೧:** ವೈದ್ಯಕೀಯ, ತಾಂತ್ರಿಕ (ಬಿ.ಇ.), ವ್ಯವಸಾಯ(ಬಿ.ಎಸ್‌ಸಿ (ಎಜಿ),ಪಶುವೈದ್ಯ, ಬಿ.ಡಿ.ಎಸ್. ಮುಂತಾದುವು, (ಎಂ.ಫಿಲ್ ಹಾಗೂ ಪಿ.ಹೆಚ್.ಡಿ.ಗಳು ಸೇರಿದಂತೆ) | ೫೫೦ | ೧೨೦೦ |
| **ಗ್ರೂಪ್ ೨:** ಮೊದಲನೇ ಗ್ರೂಪ್‌ನಲ್ಲಿ ಸೇರದಿರುವ ವಿಜ್ಞಾನ, ವಾಣಿಜ್ಯ, ಕಲೆ ಮುಂತಾದ ಸ್ನಾತಕೋತ್ತರ ಪದವಿ ಕೋರ್ಸ್‌ಗಳು ಹಾಗೂ ಇತರ ಡಿಮೊ ಕೋರ್ಸ್‌ಗಳು ಮುಂತಾದುವು. | ೫೩೦ | ೮೨೦ |
| **ಗ್ರೂಪ್೩:** ಪದವಿ ಕೋರ್ಸ್‌ಗಳು (ಬಿ.ಎ.,ಬಿ.ಕಾಂ, ಬಿ.ಎಸ್.ಸಿ, ಇತ್ಯಾದಿ) | ೩೦೦ | ೫೭೦ |
| **ಗ್ರೂಪ್ ೪:** ಇತರ ಸಾಮಾನ್ಯ ವೃತ್ತಿಪರ ಪದವಿ ಕೋರ್ಸ್‌ಗಳು ಮತ್ತು ಪಿ.ಯು.ಸಿ | ೨೩೦ | ೩೮೦ |

**ಆಧಾರ: ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ತುಮಕೂರು.**

## ರಾಜ್ಯ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ

ಭಾರತ ಸರ್ಕಾರದ ವಿದ್ಯಾರ್ಥಿ ವೇತನ ಪಡೆಯಲು ಅನರ್ಹರಾದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮುಂದುವರಿಸಲು ಅನುಕೂಲವಾಗುವಂತೆ ರಾಜ್ಯ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನವನ್ನು ಖಾಸಗಿ ಅಥವಾ ಸರ್ಕಾರಿ ವಿದ್ಯಾರ್ಥಿ ನಿಲಯಗಳಲ್ಲಿ ನಿಲಯಾರ್ಥಿಗಳಾಗಿಲ್ಲದ ವಿದ್ಯಾರ್ಥಿಗಳಿಗೆ ಇಲಾಖೆಯ ಮೂಲಕ ಮಂಜೂರು ಮಾಡಲಾಗುತ್ತದೆ. ವಿವಿಧ ಕೋರ್ಸ್‌ಗಳಿಗೆ ವಿವಿಧ ವಿದ್ಯಾರ್ಥಿ ವೇತನದ ಮೊತ್ತವನ್ನು ನಿಗದಿಸಲಾಗಿದೆ. ಐದರಿಂದ ಏಳನೇ ತರಗತಿಯವರೆಗೆ ತಿಂಗಳಿಗೆ ರೂ. ೭೫, ಎಂಟರಿಂದ ಹತ್ತನೇ ತರಗತಿಯವರೆಗೆ ರೂ. ೧೦೦ ನೀಡಲಾಗುತ್ತದೆ.

**ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು**

ಪರಿಶಿಷ್ಟ ಜಾತಿಗೆ ಸೇರಿದ ಪ್ರತಿಭಾನ್ವಿತ ಮಕ್ಕಳ ವಿದ್ಯಾಭ್ಯಾಸಕ್ಕೆ, ಉತ್ತಮ ವಾತಾವರಣವನ್ನು ಕಲ್ಪಿಸಿಕೊಟ್ಟು, ಉತ್ತಮ ಶಿಕ್ಷಣವನ್ನು ನೀಡುವ ಉದ್ದೇಶದಿಂದ ಶ್ರೀ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ನಿರ್ವಹಿಸಲಾಗುತ್ತಿದೆ. ಈ ಶಾಲೆಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ತಿಂಗಳಿಗೆ ರೂ. ೫೦೦ರ ಮೊತ್ತದಲ್ಲಿ ಭೋಜನವನ್ನು; ರೂ. ೮೦೦ರ ಮೊತ್ತದಲ್ಲಿ ಸಮವಸ್ತ್ರ, ಸಾಕ್ಸ್ ಹಾಗೂ ಷೂಗಳನ್ನು: ಪ್ರತಿ ಹೊಸ ವಿದ್ಯಾರ್ಥಿಗೆ ರೂ. ೬೦೦ ಗಳಲ್ಲಿ ಹಾಸಿಗೆ–ಹೊದಿಕೆಯನ್ನು; ರೂ. ೫೦೦ರ ಮೊತ್ತದಲ್ಲಿ ಪಠ್ಯ ಪುಸ್ತಕಗಳು ಮತ್ತು ಲೇಖನ ಸಾಮಗ್ರಿಗಳನ್ನು; ಮತ್ತು ರೂ. ೧೦೦ ಗಳಲ್ಲಿ ಪ್ರತಿ ವಿದ್ಯಾರ್ಥಿಗೆ ಬ್ರಶ್, ಪೇಸ್ಟ್, ಎಣ್ಣೆ, ಸೋಪು ಇತ್ಯಾದಿಗಳನ್ನು ನೀಡುವ ವ್ಯವಸ್ಥೆ ಇರುತ್ತದೆ. ವೈದ್ಯರ ಮೂಲಕ ನಿಯಮಿತವಾಗಿ, ವಿದ್ಯಾರ್ಥಿಗಳ ಆರೋಗ್ಯ ತಪಾಸಣೆಯನ್ನು ಮಾಡಿಸಲಾಗುತ್ತದೆ. ಇವಲ್ಲದೆ ಗ್ರಂಥಾಲಯ, ದಿನ ಪತ್ರಿಕೆ, ವಾರ ಪತ್ರಿಕೆ, ಕ್ರೀಡಾ ಸಾಮಗ್ರಿಗಳ ವ್ಯವಸ್ಥೆಗಳೂ ಈ ಶಾಲೆಗಳಲ್ಲಿ ಮಕ್ಕಳಿಗಾಗಿ ಇರುತ್ತವೆ.

ತುಮಕೂರು ಜಿಲ್ಲೆಯ ಮಧುಗಿರಿ ತಾಲೂಕಿನ ಬೇಡತ್ತೂರು ಗ್ರಾಮದಲ್ಲಿ; ಪಾವಗಡ ತಾಲೂಕಿನ ದೊಡ್ಡಹಳ್ಳಿಯಲ್ಲಿ; ಕುಣಿಗಲ್ ತಾಲೂಕಿನ ಮಲ್ಲನಾಯಕನ ಹಳ್ಳಿಯಲ್ಲಿ; ಗುಬ್ಬಿ ತಾಲೂಕಿನ ಹೂವಿನ ಕಟ್ಟೆಯಲ್ಲಿ; ಶಿರಾ ತಾಲೂಕಿನ ಚಿಕ್ಕನಹಳ್ಳಿ ಮತ್ತು ಶಿರಾ ಪಟ್ಟಣದಲ್ಲಿ ಪರಿಶಿಷ್ಟ ಜಾತಿಯವರಿಗಾಗಿ ಶ್ರೀ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ನಡೆಸಲಾಗುತ್ತಿದೆ. ಕೊರಟಗೆರೆ ತಾಲೂಕಿನ ಸಿದ್ದರ ಬೆಟ್ಟದಲ್ಲಿರುವ ಶ್ರೀ ಮೊರಾರ್ಜಿ ದೇಸಾಯಿ ವಸತಿ ಶಾಲೆಯು ಇಲಾಖೆಯ ವತಿಯಿಂದ ಸಾಮಾನ್ಯರಿಗಾಗಿ ನಡೆಸಲಾಗುತ್ತಿರುವ ಶಾಲೆಯಾಗಿದೆ. ಹೆಬ್ಬೂರು, ತುಮಕೂರು ತಾಲ್ಲೂಕು, ಬಿಕ್ಕೇಗುಡ್ಡ (ಕಟ್ಟಡದ ಕೊರತೆಯಿಂದ ಹೂವಿನಕಟ್ಟೆಯಲ್ಲಿ ತಾತ್ಕಾಲಿಕವಾಗಿ ನಡೆಸಲಾಗುತ್ತದೆ), ಗುಬ್ಬಿ ತಾಲ್ಲೂಕುಗಳಲ್ಲಿ ಶ್ರೀ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ನಡೆಸಲಾಗುತ್ತದೆ.

**ಅನೈರ್ಮಲ್ಯ ಕಸುಬುಗಳಲ್ಲಿ ತೊಡಗಿರುವವರ ಮಕ್ಕಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ**

ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳಲ್ಲಿ ಚರ್ಮ ಹದ ಮಾಡುವ, ಚರ್ಮ ಸುಲಿಯುವ, ಕಸ ಗುಡಿಸುವ ಮತ್ತು ಇತರ ರೀತಿಯ ಅನೈರ್ಮಲ್ಯ ಕಸುಬುಗಳನ್ನು ಮಾಡುವವರ ಮಕ್ಕಳು, ಉತ್ತಮ ವಿದ್ಯಾಭ್ಯಾಸವನ್ನು ಹೊಂದಲು ಮತ್ತು ವಿದ್ಯೆ ಗಳಿಸುವಲ್ಲಿ ಅವರಿಗೆ ಆರ್ಥಿಕವಾಗಿ ನೆರವಾಗಲು, ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತದೆ.

ಇಲಾಖೆಯ ನಿಲಯಾರ್ಥಿಗಳಲ್ಲದವರಿಗೆ, ಒಂದರಿಂದ ಐದನೇ ತರಗತಿಯಲ್ಲಿರುವವರಿಗೆ ತಿಂಗಳಿಗೆ ರೂ. ೪೦ರಂತೆ; ಆರರಿಂದ ಎಂಟನೇ ತರಗತಿಯಲ್ಲಿರುವವರಿಗೆ ತಿಂಗಳಿಗೆ ರೂ. ೬೦ರಂತೆ; ಒಂಬತ್ತನೇ ತರಗತಿಯಲ್ಲಿ ಇರುವವರಿಗೆ ತಿಂಗಳಿಗೆ ರೂ.೭೫ರಂತೆ ಈ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನವನ್ನು ಹತ್ತು ತಿಂಗಳ ಅವಧಿಗೆ ಮಂಜೂರು ಮಾಡಲಾಗುತ್ತದೆ. ನಿಲಯಾರ್ಥಿಗಳಾಗಿದ್ದರೆ ಮೂರನೇ ತರಗತಿಯಿಂದ ಎಂಟನೇ ತರಗತಿಯಲ್ಲಿರುವವರಿಗೆ ತಿಂಗಳಿಗೆ ರೂ. ೩೦೦ ರಂತೆ; ಒಂಬತ್ತನೇ ತರಗತಿಯಿಂದ ಹತ್ತನೇ ತರಗತಿಯಲ್ಲಿರುವವರಿಗೆ ತಿಂಗಳಿಗೆ ರೂ. ೩೭೫ ರಂತೆ ಹತ್ತು ತಿಂಗಳ ಅವಧಿಗೆ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಲಾಗುತ್ತದೆ. ವಾರ್ಷಿಕ ಅಡ್‌ಹಾಕ್ ಗ್ರ್ಯಾಂಟ್ ರೂ. ೫೫೦ ರಂತೆ ಡೇ ಸ್ಕಾಲರ್‌ಗೆ ರೂ. ೬೦೦ ರಂತೆ ನಿಲಯದಲ್ಲಿರುವ ಪ್ರತಿಯೊಬ್ಬ ನಿಲಯಾರ್ಥಿಗೂ ನೀಡಲಾಗುತ್ತದೆ.

**ಪ್ರತಿಭಾ ಪುರಸ್ಕಾರ**

ವಿದ್ಯಾರ್ಥಿಗಳಿಗೆ ಓದಿನಲ್ಲಿ ಉತ್ಸಾಹ ಹೆಚ್ಚಿಸಲು ಮತ್ತು ಚೆನ್ನಾಗಿ ಓದುವವರಿಗೆ ಉತ್ತೇಜನ ನೀಡಿ ಓದು ಮುಂದುವರಿಸುವಲ್ಲಿ ಇನ್ನೂ ಹೆಚ್ಚಿನ ಆಸಕ್ತಿ ಮೂಡಿಸುವ ಉದ್ದೇಶದಿಂದ, ಪಬ್ಲಿಕ್ ಪರೀಕ್ಷೆಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗುವ ವಿದ್ಯಾರ್ಥಿಗಳಿಗೆ, ಆಯಾ ತರಗತಿಗಳಿಗೆ ಸರ್ಕಾರವು ನಿಗದಿಸಿದ ದರಗಳಲ್ಲಿ ಬಹುಮಾನವನ್ನು ನೀಡಲಾಗುತ್ತದೆ. ಹೆಚ್ಚಿನ ವಿವರಗಳನ್ನು ಕೋಷ್ಟಕ ೧೬.೨೧ರಲ್ಲಿ ನೀಡಿದೆ.

**ಕೋಷ್ಟಕ ೧೬.೨೧: ೨೦೧೧–೧೨ನೇ ಸಾಲಿನಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ ಮಾಡಲಾದ ಖರ್ಚು ಮತ್ತು ಪಡೆದ ಫಲಾನುಭವಿಗಳ ವಿವರ**

| ಪರೀಕ್ಷೆಗಳ ವಿವರ | ನಿಗದಿತ ಬಹುಮಾನದ ಮೊತ್ತ ರೂ. ಗಳಲ್ಲಿ | ಖರ್ಚಾದ ಮೊತ್ತ ರೂ. ಲಕ್ಷಗಳಲ್ಲಿ | ಫಲಾನುಭವಿಗಳ ಸಂಖ್ಯೆ |
|---|---|---|---|
| ದ್ವಿತೀಯ ಪಿ.ಯು.ಸಿ/ಮೂರು ವರ್ಷದ ಡಿಪ್ಲೊಮಾ | ೭೫೦ | ೩.೬೫ | ೪೮೭ |
| ಪದವಿ ಪರೀಕ್ಷೆಗಳು | ೧೦೦೦ | ೧.೮೩ | ೧೮೩ |
| ಸ್ನಾತಕೋತ್ತರ ಪದವಿಗಳು | ೧೨೫೦ | ೦.೮೩ | ೬೬ |
| ವೈದ್ಯಕೀಯ | ೧೫೦೦ | – | – |
| ತಾಂತ್ರಿಕ ಪದವಿ, ವ್ಯವಸಾಯ ಮತ್ತು ಪಶುವೈದ್ಯಕೀಯ, ಇಂಜಿನಿಯರಿಂಗ್, ವೈದ್ಯಕೀಯ ಪದವಿಗಳು | ೧೫೦೦ | – | – |

## ನರ್ಸರಿ ಮತ್ತು ಮಹಿಳಾ ಕಲ್ಯಾಣ ಕೇಂದ್ರಗಳು

ಚಿಕ್ಕವಯಸ್ಸಿನಲ್ಲಿಯೇ ಶಾಲೆಗೆ ಹೋಗುವ ಅಭ್ಯಾಸ, ಅಕ್ಷರಾಭ್ಯಾಸ ಮತ್ತು ಕ್ರಮಬದ್ಧವಾಗಿ ಸರಿಯಾದ ಸಮಯಕ್ಕೆ ಆಹಾರ ಸೇವಿಸುವ ಅಭ್ಯಾಸಗಳನ್ನು ರೂಢಿಸಲು, ನರ್ಸರಿ ಮತ್ತು ಮಹಿಳಾ ಕಲ್ಯಾಣ ಕೇಂದ್ರಗಳನ್ನು ಇಲಾಖೆಯು ನಡೆಸುತ್ತಿದೆ. ಮೂರ ರಿಂದ ಐದು ವರ್ಷ ವಯಸ್ಸಿನೊಳಗಿನ ಮಕ್ಕಳನ್ನು ಇಲ್ಲಿ ದಾಖಲಿಸಿಕೊಳ್ಳಲಾಗುತ್ತದೆ. ಪ್ರತಿ ಕೇಂದ್ರದಲ್ಲಿ ಐವತ್ತು ಮಕ್ಕಳಿಗೆ ಪ್ರವೇಶ ನೀಡಲಾಗುತ್ತದೆ. ಈ ಕೇಂದ್ರಗಳಲ್ಲಿ ಪ್ರಾಥಮಿಕ ಪೂರ್ವ ಶಿಕ್ಷಣವನ್ನು ನೀಡಲಾಗುತ್ತದೆ. ಅಲ್ಲದೆ ಪ್ರತಿ ಮಧ್ಯಾಹ್ನ ಉಪಹಾರವನ್ನೂ, ಸೋಪು ಮತ್ತು ಎಣ್ಣೆ ಹಾಗೂ ವರ್ಷಕ್ಕೆ ಎರಡು ಜೊತೆ ಉಡುಪುಗಳನ್ನು ಮಕ್ಕಳ ಬಳಕೆಗೆ ಉಚಿತವಾಗಿ ನೀಡಲಾಗುತ್ತದೆ.

## ಶೈಕ್ಷಣಿಕ ಪ್ರವಾಸಕ್ಕೆ ನೆರವು

ಶೈಕ್ಷಣಿಕ ಪ್ರವಾಸವು ಕಡ್ಡಾಯವಾಗಿದ್ದು, ಹಣವಿಲ್ಲದೇ ಈ ಪ್ರವಾಸದಿಂದ ದೊರೆಯುವ ಅನುಭವವನ್ನು ಮತ್ತು ಜ್ಞಾನಗಳನ್ನು ಪಡೆಯದೇ ಉಳಿಯುವಂತಾಗಬಾರದೆಂಬ ದೃಷ್ಟಿಯಿಂದ, ತಾಂತ್ರಿಕ ಮತ್ತು ಇತರ ವೃತ್ತಿ–ತರಗತಿಗಳಲ್ಲಿ ಓದುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ, ಪ್ರವಾಸ ಕಡ್ಡಾಯವಾಗಿದ್ದರೆ, ರೂ. ಒಂದು ಸಾವಿರಗಳಿಗೆ ಮೀರದಂತೆ ಈ ಕಾರ್ಯಕ್ರಮದಡಿ ಅಧ್ಯಯನ ಪ್ರವಾಸ ವೆಚ್ಚವೆಂದು ಮಂಜೂರು ಮಾಡಲಾಗುತ್ತದೆ. ೨೦೧೦–೧೧ರಲ್ಲಿ ೪೨೫ ಫಲಾನುಭವಿಗಳು ಈ ಸೌಲಭ್ಯವನ್ನು ಪಡೆದಿದ್ದು, ರೂ. ೪.೮೦ ಲಕ್ಷಗಳನ್ನು ಖರ್ಚು ಮಾಡಲಾಗಿದೆ.

## ಕಾನೂನು ಪದವೀಧರರಿಗೆ ಶಿಷ್ಯವೇತನ ಹಾಗೂ ವಕೀಲ ವೃತ್ತಿ ಆರಂಭಿಸಲು ಧನ ಸಹಾಯ

ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧಿಕರಣದಲ್ಲಿ ಹೆಚ್ಚಿನ ಜ್ಞಾನ ಹೊಂದುವಂತೆ ಮಾಡಲು, ಪ್ರತಿ ಮಾಸಿಕ ಒಂದು ಸಾವಿರ ರೂ. ಗಳಂತೆ ಶಿಷ್ಯವೇತನವನ್ನು ನೀಡಿ, ನಾಲ್ಕು ವರ್ಷಗಳ ಕಾಲ ತರಬೇತಿ ನೀಡಲಾಗುತ್ತದೆ. ಸ್ವತಂತ್ರವಾಗಿ ವಕೀಲಿ ವೃತ್ತಿ ಪ್ರಾರಂಭಿಸುವುದಕ್ಕೆ ಮತ್ತು ಈ ಸಂಬಂಧ ವಕೀಲರ ಸಂಘದಲ್ಲಿ ಹೆಸರು ನೋಂದಾಯಿಸಿಕೊಳ್ಳಲು, ಕಾನೂನು ಗ್ರಂಥಗಳನ್ನು ಕೊಳ್ಳಲು ಹಾಗೂ ಪೀಠೋಪಕರಣಗಳನ್ನು ಖರೀದಿಸಲು ಒಂದು ಸಲ ರೂ. ೫೦೦ಗಳ ಸಹಾಯ ಧನ ನೀಡುವ ಕಾರ್ಯಕ್ರಮವೂ ಜಾರಿಯಲ್ಲಿದೆ. ಫಲಾನುಭವಿಗಳ ವಿವರಗಳಿಗೆ ಕೋಷ್ಟಕ ೧೬.೨೨ ನ್ನು ನೋಡಬಹುದು.

## ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸಾಧನ ಸಾಮಗ್ರಿಗಳ ಸರಬರಾಜು

ತಾಂತ್ರಿಕ ತರಗತಿಗಳಲ್ಲಿ ಓದುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಅಗತ್ಯ ಸಾಧನಾ ಸಾಮಗ್ರಿಗಳನ್ನು ಕೊಂಡುಕೊಳ್ಳುವುದರಲ್ಲಿ ಆಗಬಹುದಾದ ಸಮಸ್ಯೆಗಳನ್ನು ತಪ್ಪಿಸಲು ಮತ್ತು ನಿರಾಳವಾಗಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಲು, ಡ್ರಾಯಿಂಗ್ ಬೋರ್ಡ್, ಕ್ಯಾಲ್ಕುಲೇಟರ್ ಮುಂತಾಗಿ ಅವರ ಓದಿಗೆ ಅವಶ್ಯಕವಾದ ಪರಿಕರಗಳನ್ನು ಕೊಳ್ಳಲು ಮೊದಲ ವರ್ಷದ ವಿದ್ಯಾರ್ಥಿಗಳಿಗೆ ರೂ. ೭೦೦ ರ ಮಿತಿಗೆ ಒಳಪಟ್ಟು ಸಾಧನ ಸಾಮಗ್ರಿಗಳನ್ನು ಒದಗಿಸುವ ಕಾರ್ಯಕ್ರಮವೂ ಈ ಇಲಾಖೆಯಲ್ಲಿದೆ.

## ಸ್ವಯಂ ಉದ್ಯೋಗ ತರಬೇತಿ ಕಾರ್ಯಕ್ರಮಗಳು

ಪರಿಶಿಷ್ಟ ಜಾತಿಗೆ ಸೇರಿದ ನಿರುದ್ಯೋಗಿ ಅಭ್ಯರ್ಥಿಗಳು ಸ್ವಂತ ಉದ್ಯೋಗವನ್ನು ಕೈಗೊಳ್ಳಲು ಅನುಕೂಲ ಮಾಡಿಕೊಡುವ ಉದ್ದೇಶದಿಂದ, ಜಿಲ್ಲಾ ಯೋಜನೆಯಡಿಯಲ್ಲಿ ಲಘು ವಾಹನ ಚಾಲನೆ ಮತ್ತು ಆಟೋ ರಿಕ್ಷಾ ಚಾಲನೆ ಕಲಿಸಲು ಮೂರು ತಿಂಗಳ ತರಬೇತಿ ಕೊಡಿಸಿ, ಅವರಿಗೆ ವಾಹನ ಪರವಾನಗಿಯನ್ನೂ ಕೊಡಿಸಿ ಕೊಡಲಾಗುವುದು. ಅಲ್ಲದೆ ತರಬೇತಿಯ ಅವಧಿಯಲ್ಲಿ ನಗರದವರಿಗೆ ರೂ. ೧೫೦ರಂತೆ ಹಾಗೂ ಗ್ರಾಮೀಣ ವಾಸಿಗಳಿಗೆ ರೂ. ೩೦೦ರಂತೆ ಶಿಷ್ಯ ವೇತನವನ್ನೂ ಕೊಡಲಾಗುವುದು. ಜಿಲ್ಲೆಯ ಪ್ರಾದೇಶಿಕ ಅಧಿಕಾರಿಗಳು ನಿಗದಿ ಪಡಿಸುವ ದರಗಳಲ್ಲಿ ತರಬೇತಿ ಶುಲ್ಕವನ್ನು ತರಬೇತಿ ನೀಡಿದ ಡ್ರೈವಿಂಗ್ ಶಾಲೆಗಳಿಗೆ ಇಲಾಖೆಯು ನೀಡುತ್ತದೆ. ಇದರಡಿ ೨೦೧೦–೧೧ ಮತ್ತು ೨೦೧೧–೧೨ ನೇ ಸಾಲುಗಳಲ್ಲಿ ಪ್ರಯೋಜನ ಪಡೆದವರ ವಿವರಗಳನ್ನು ಕೋಷ್ಟಕ ೧೬.೨೨ರಲ್ಲಿ ಕೊಡಲಾಗಿದೆ.

ಮೇಲಿನವಲ್ಲದೆ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಇಂಗ್ಲಿಷ್, ಗಣಿತ, ವಿಜ್ಞಾನ ಮತ್ತು ಇತರ ಸಾಮಾನ್ಯ ವಿಷಯಗಳ ಬಗ್ಗೆ ಅಂಶಕಾಲಿಕ ಬೋಧಕರನ್ನು ನೇಮಿಸಿ ವಿಶೇಷ ಬೋಧನೆ; ಎಂ.ಫಿಲ್ ಹಾಗೂ ಪಿ.ಎಚ್.ಡಿ ವಿದ್ಯಾರ್ಥಿಗಳಿಗೆ ಫೆಲೋಷಿಪ್ ನೀಡಿಕೆ; ಲೋಕಸೇವಾ ಆಯೋಗಗಳು ಮತ್ತು ಇತರ ನೇಮಕಾತಿ ಆಯೋಗಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ, ಐ.ಎ.ಎಸ್/ಐ.ಪಿ.ಎಸ್ ಪರೀಕ್ಷೆಗಳಿಗೆ ಹಾಜರಾಗಬಯಸುವ ವಿದ್ಯಾರ್ಥಿಗಳಿಗೆ ಸ್ಪರ್ಧೆಯಲ್ಲಿ ಗೆಲ್ಲುವ ಮಟ್ಟಕ್ಕೆ ಕೊಂಡೊಯ್ಯಲು, ಪೂರ್ವ ತರಬೇತಿ ನೀಡುವ ಪರೀಕ್ಷಾ ತರಬೇತಿ ಕೇಂದ್ರಗಳು; ವೈದ್ಯಕೀಯ, ತಾಂತ್ರಿಕ, ಪಶುವೈದ್ಯ ಮತ್ತು ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಪುಸ್ತಕ ಭಂಡಾರಗಳು; ಮೂರು ವಿದ್ಯಾರ್ಥಿಗಳಿಗೆ ಒಂದು ಸೆಟ್‌ನಂತೆ ಪುಸ್ತಕ ಖರೀದಿಗಾಗಿ ಹಣ ಪೂರೈಕೆ; ಬೆಳಗಾವಿ ಸೈನಿಕ ಶಾಲೆಗೆ ಸೇರಿಸಲು ಅರ್ಹ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ನೀಡುವ ಕಾರ್ಯಕ್ರಮ: ಬೆರಳಚ್ಚು ಮತ್ತು ಶೀಘ್ರಲಿಪಿಯಲ್ಲಿ ತರಬೇತಿ ಪಡೆಯುವ ವಿದ್ಯಾರ್ಥಿಗಳಿಗೆ ಸ್ಟೈಫಂಡ್; ಸ್ವಯಂ ಉದ್ಯೋಗ ಕೈಗೊಳ್ಳುವ ಸಾಮರ್ಥ್ಯ ಬೆಳೆಸಲು ಸ್ವಯಂ ಉದ್ಯೋಗ ತರಬೇತಿ ಕಾರ್ಯಕ್ರಮಗಳು; ಮಹಿಳೆಯರಿಗೆ ವೃತ್ತಿ ಶಿಕ್ಷಣ ತರಬೇತಿ; ಹೆಣ್ಣು ಮಕ್ಕಳಿಗೆ ಟಿ.ಸಿ.ಹೆಚ್ ತರಬೇತಿ: ನವಚೇತನ ಯೋಜನೆ ಮುಂತಾದ ಕಾರ್ಯಕ್ರಮಗಳನ್ನೂ ಇಲಾಖೆಯಿಂದ ಪರಿಶಿಷ್ಟ ಜಾತಿಯ ಜನಾಂಗದವರ ಬೆಳವಣಿಗೆಗಾಗಿ ಕಾರ್ಯಗತಗೊಳಿಸಲಾಗುತ್ತಿದೆ.

**ಕೋಷ್ಟಕ ೧೬.೨೨: ಜಿಲ್ಲೆಯಲ್ಲಿ ೨೦೧೦–೧೧ಮತ್ತು ೨೦೧೧–೧೨ರಲ್ಲಿ ವಿದ್ಯಾರ್ಥಿಗಳಿಗೆ ನೀಡಿರುವ ವಿದ್ಯಾರ್ಥಿ ವೇತನ ಮತ್ತು ಇತರ ಸೌಲಭ್ಯಗಳ ವಿವರ**

ರೂ.ಲಕ್ಷ ಗಳಲ್ಲಿ

| ಯೋಜನೆಯ ಹೆಸರು | ೨೦೧೦–೧೧ | | ೨೦೧೧–೧೨ | |
|---|---|---|---|---|
| | ಫಲಾನುಭವಿಗಳು | ವೆಚ್ಚ | ಫಲಾನುಭವಿಗಳು | ವೆಚ್ಚ |
| ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ | ೭೭,೬೯೭ | ೧೦೭.೫೩ | ೩೮,೦೭೯ | ೧೨೬.೧೪ |
| ಪ್ರತಿಭಾ ವಿದ್ಯಾರ್ಥಿ ವೇತನ | ೧,೪೮೮ | ೬.೪೧ | ೩೯ | ೦.೩೦ |
| ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ | ೯,೦೨೫ | ೩೯೫.೫೭ | ೮,೩೮೮ | ೪೬೭.೦೪ |
| ವಿದ್ಯಾರ್ಥಿಗಳ ಊಟ ವಸತಿಗಾಗಿ ಮಾಡಿದ ವೆಚ್ಚ | ೩೧೭೫ | ೧೧೦.೪೮ | ೩,೩೭೯ | ೧೦೯.೩೬ |
| ಒಂದರಿಂದ ನಾಲ್ಕನೇ ತರಗತಿಯ ವಿದ್ಯಾರ್ಥಿಗಳಿಗಾಗಿ ಮಾಡಿದ ವೆಚ್ಚ | ೯,೭೮೪ | ೭.೮೭ | ೮,೩೯೩ | ೨೦.೯೦ |
| ವಸತಿ ಶಾಲೆಗಳು | ೨೨೫ | ೨೪.೯೬ | ೨೦೬ | ೨೭.೨೮ |
| ಕಾಲೇಜು ವಿದ್ಯಾರ್ಥಿಗಳಿಗೆ ನೀಡಿದ ಬಹುಮಾನಗಳು | ೫೦೫ | ೧.೭೯ | ೮೮೬ | ೬.೬೮ |
| ಅನೈರ್ಮಲ್ಯ ಉದ್ಯೋಗಗಳಲ್ಲಿ ತೊಡಗಿರುವವರ ಮಕ್ಕಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ | ೧೩೯ | ೧.೫೨ | ೧೦೯ | ೧.೮೬ |
| ಶೈಕ್ಷಣಿಕ ಪ್ರವಾಸ | ೪೨೫ | ೪.೮೦ | – | – |
| ಕಾನೂನು ಪದವೀಧರರಿಗೆ ಶಿಷ್ಯವೇತನ ಹಾಗೂ ವಕೀಲ ವೃತ್ತಿ ಆರಂಭಿಸಲು ಧನ ಸಹಾಯ | ೭೫ | ೧೧.೪೪ | ೩೮ | ೬.೫೮ |
| ಸ್ವಯಂ ಉದ್ಯೋಗ ತರಬೇತಿ ಕಾರ್ಯಕ್ರಮಗಳು | ೧೬೮ | ೭.೫೨ | ೩೯೦ | ೫.೯೯ |

**ಆಧಾರ : ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ತುಮಕೂರು.**

## ದೌರ್ಜನ್ಯಕ್ಕೆ ಒಳಗಾದವರಿಗೆ ಧನ ಸಹಾಯ

೧೯೭೭ರ ಅಕ್ಟೋಬರ್ ಹದಿನಾಲ್ಕರ ಸರ್ಕಾರಿ ಆದೇಶದನ್ವಯ ಪರಿಶಿಷ್ಟ ಜಾತಿಯವರಿಗೆ ರೂ. ೨೫,೦೦೦ ಗಳಿಂದ ರೂ. ೨,೦೦,೦೦೦ ವರೆಗೆ ನಷ್ಟದ ಪ್ರಮಾಣವನ್ನು ಅನುಸರಿಸಿ, ಧನ ಸಹಾಯವನ್ನು ನೀಡಲಾಗುತ್ತದೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೧೬.೨೩ ಅನ್ನು ನೋಡಿ

**ಕೋಷ್ಟಕ ೧೬.೨೩: ಜಿಲ್ಲೆಯಲ್ಲಿ ದೌರ್ಜನ್ಯ ಪ್ರಕರಣದಡಿಯಲ್ಲಿ ದಾಖಲಾದ ಪ್ರಕರಣಗಳು ಮತ್ತು ಮಂಜೂರಾದ ಪರಿಹಾರದ ವಿವರ**

(ರೂ. ಲಕ್ಷ ಗಳಲ್ಲಿ)

| ತಾಲೂಕು | ೨೦೦೮-೦೯ | | ೨೦೦೯-೧೦ | | ೨೦೧೦-೧೧ | | ೨೦೧೧-೧೨ | |
|---|---|---|---|---|---|---|---|---|
| | ಒಟ್ಟು ದಾಖಲಾದ ಪ್ರಕರಣಗಳು | ಪರಿಹಾರದ ಮೊತ್ತ | ಒಟ್ಟು ದಾಖಲಾದ ಪ್ರಕರಣಗಳು | ಪರಿಹಾರದ ಮೊತ್ತ | ಒಟ್ಟು ದಾಖಲಾದ ಪ್ರಕರಣಗಳು | ಪರಿಹಾರದ ಮೊತ್ತ | ಒಟ್ಟು ದಾಖಲಾದ ಪ್ರಕರಣಗಳು | ಪರಿಹಾರದ ಮೊತ್ತ |
| ತುಮಕೂರು | ೧೪ | ೨.೦೧ | ೧೫ | ೧.೦೭ | ೨೯ | ೨.೪೫ | ೮ | ೧.೫೪ |
| ಗುಬ್ಬಿ | ೪ | ೦.೫೮ | ೨ | ೦.೨೫ | ೪ | ೦.೫೨ | ೮ | ೧.೧೭ |
| ಕುಣಿಗಲ್ | ೪ | ೦.೪೦ | ೫ | ೦.೪೦ | ೭ | ೧.೨೦ | ೨೧ | ೨.೨೩ |
| ತಿಪಟೂರು | ೬ | ೧.೧೦ | ೮ | ೧.೩೫ | ೩ | ೦.೩೦ | ೭ | ೩.೩೦ |
| ತುರುವೇಕೆರೆ | ೫ | ೦.೩೫ | ೪ | ೦.೨೯ | ೪ | ೦.೪೦ | ೩ | ೦.೨೪ |
| ಚಿಕ್ಕನಾಯಕನಹಳ್ಳಿ | ೪ | ೦.೪೭ | ೫ | ೦.೪೨ | ೬ | ೨.೬೧ | ೫ | ೨.೪೨ |
| ಶಿರಾ | ೧ | ೦.೦೭ | ೧ | ೦.೩೦ | ೪ | ೧.೦೫ | ೬ | ೦.೭೩ |
| ಕೊರಟಗೆರೆ | – | – | – | – | ೧ | ೦.೧೬ | ೫ | ೦.೫೦ |
| ಮಧುಗಿರಿ | ೬ | ೦.೪೮ | ೧೬ | ೧.೪೬ | ೧೬ | ೪.೦೪ | ೧೦ | ೨.೮೭ |
| ಪಾವಗಡ | ೧೧ | ೦.೮೩ | ೧೧ | ೦.೮೧ | ೧೧ | ೦.೪೦ | ೨೭ | ೨.೮೧ |

**ಆಧಾರ: ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ತುಮಕೂರು ಜಿಲ್ಲೆ**

## ಅಂತರ್ಜಾತಿ ವಿವಾಹಿತ ದಂಪತಿಗಳಿಗೆ ಧನ ಸಹಾಯ

ಅಂತರ್ಜಾತಿ ವಿವಾಹಿತ ದಂಪತಿಗಳ ಪೈಕಿ ಒಬ್ಬರು ಪರಿಶಿಷ್ಟ ಜಾತಿಗೆ ಸೇರಿದ್ದ ಪಕ್ಷದಲ್ಲಿ ಅವರ ಸಾಮಾಜಿಕ ಭದ್ರತೆಗಾಗಿ ರೂ. ೫೦,೦೦೦ಗಳ ಪ್ರೋತ್ಸಾಹ ಧನವನ್ನು ಮಂಜೂರು ಮಾಡಲಾಗುತ್ತದೆ. ಈ ಮೊತ್ತದಲ್ಲಿ ರೂ. ೨೫,೦೦೦ಗಳನ್ನು ನಗದು ರೂಪದಲ್ಲಿಯೂ, ಉಳಿದ ರೂ. ೨೫,೦೦೦ಗಳನ್ನು ರಾಷ್ಟ್ರೀಯ ಉಳಿತಾಯ ಪತ್ರದ ರೂಪದಲ್ಲೂ ನೀಡಲಾಗುತ್ತದೆ. ಇದಕ್ಕಾಗಿ ಜಿಲ್ಲಾ ಹಾಗೂ ರಾಜ್ಯ ವಲಯದಲ್ಲಿ ಅನುದಾನವನ್ನು ಕಾಯ್ದಿರಿಸಲಾಗುತ್ತದೆ. (ಈ ಮೊತ್ತವು ಮೊದಲು ರೂ.೨೫,೦೦೦ಗಳಿದ್ದು ಈಗ ಇದನ್ನು ರೂ. ೫೦,೦೦೦ ಗಳಿಗೆ ಹೆಚ್ಚಿಸಲಾಗಿದೆ). ವಿವರಗಳಿಗೆ ಕೋಷ್ಟಕ ೧೬.೨೪ ಅನ್ನು ನೋಡಿ.

**ಕೋಷ್ಟಕ ೧೬.೨೪: ಜಿಲ್ಲೆಯಲ್ಲಿ ೨೦೦೮-೦೯ ರಿಂದ ೨೦೧೧-೧೨ರವರೆಗೆ ಅಂತರ್ಜಾತಿ ವಿವಾಹವಾದ ದಂಪತಿಗಳಿಗೆ ಮಂಜೂರು ಮಾಡಲಾದ ಪ್ರೋತ್ಸಾಹ ಧನದ ವಿವರ**

(ರೂ. ಲಕ್ಷ ಗಳಲ್ಲಿ)

| ತಾಲೂಕು | ೨೦೦೮-೦೯ | | ೨೦೦೯-೧೦ | | ೨೦೧೦-೧೧ | | ೨೦೧೧-೧೨ | |
|---|---|---|---|---|---|---|---|---|
| | ಒಟ್ಟು ದಾಖಲಾದ ಪ್ರಕರಣಗಳು | ಪರಿಹಾರದ ಮೊತ್ತ | ಒಟ್ಟು ದಾಖಲಾದ ಪ್ರಕರಣಗಳು | ಪರಿಹಾರದ ಮೊತ್ತ | ಒಟ್ಟು ದಾಖಲಾದ ಪ್ರಕರಣಗಳು | ಪರಿಹಾರದ ಮೊತ್ತ | ಒಟ್ಟು ದಾಖಲಾದ ಪ್ರಕರಣಗಳು | ಪರಿಹಾರದ ಮೊತ್ತ |
| ತುಮಕೂರು | ೧೪ | ೭.೦೦ | ೧೬ | ೮.೦೦ | ೨೧ | ೧೦.೫೦ | ೧೨ | ೬.೦೦ |
| ಗುಬ್ಬಿ | ೪ | ೨.೦೦ | ೬ | ೩.೦೦ | - | - | ೬ | ೩.೦೦ |
| ಕುಣಿಗಲ್ | ೭ | ೩.೫೦ | ೮ | ೪.೦೦ | ೨ | ೧.೦೦ | ೮ | ೪.೦೦ |
| ತಿಪಟೂರು | ೬ | ೩.೦೦ | ೧೩ | ೬.೫೦ | ೯ | ೪.೫೦ | ೬ | ೩.೦೦ |
| ತುರುವೇಕೆರೆ | ೩ | ೧.೫೦ | ೧೦ | ೫.೦೦ | ೫ | ೨.೫೦ | ೫ | ೨.೫೦ |
| ಚಿಕ್ಕನಾಯಕನಹಳ್ಳಿ | ೩ | ೧.೫೦ | ೪ | ೨.೦೦ | ೪ | ೨.೦೦ | ೬ | ೩.೦೦ |
| ಶಿರಾ | ೨ | ೧.೦೦ | ೬ | ೩.೦೦ | ೪ | ೨.೦೦ | ೮ | ೪.೦೦ |
| ಕೊರಟಗೆರೆ | ೧೨ | ೬.೦೦ | ೪ | ೨.೦೦ | ೧೫ | ೭.೫೦ | ೧೪ | ೭.೦೦ |
| ಮಧುಗಿರಿ | ೪ | ೨.೦೦ | ೮ | ೪.೦೦ | ೬ | ೩.೦೦ | ೦ | ೦ |
| ಪಾವಗಡ | ೪ | ೨.೦೦ | ೩ | ೧.೫೦ | ೨ | ೧.೦೦ | ೧೧ | ೫.೫೦ |

ಆಧಾರ: ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ತುಮಕೂರು.

## ವಿಶೇಷ ಘಟಕ ಯೋಜನೆ

ಸಮಾಜದಲ್ಲಿನ ಎಲ್ಲಾ ಜನಾಂಗದವರಿಗೂ ಸಮಾನತೆ ದೊರಕಿಸುವುದು, ಬಡತನ ರೇಖೆಗಿಂತ ಕೆಳಗಿರುವವರನ್ನು ಗುರುತಿಸುವುದು ಹಾಗೂ ಪರಿಶಿಷ್ಟ ಜನಾಂಗದವರ ಸಾಮಾಜಿಕ, ಆರ್ಥಿಕ ಮತ್ತು ಇತರ ಸರ್ವ ರೀತಿಯಲ್ಲೂ ಅಭಿವೃದ್ಧಿಗೊಳಿಸುವುದು ಇವೇ ಮೊದಲಾದ ಉದ್ದೇಶದಿಂದ ಸರ್ಕಾರವು ನಡೆಸುತ್ತಿರುವ ಹಲವಾರು ಪ್ರಯತ್ನಗಳಲ್ಲಿ 'ವಿಶೇಷ ಘಟಕ ಯೋಜನೆ'ಯೂ ಒಂದು. ಪರಿಶಿಷ್ಟ ಜಾತಿಗೆ ಸೇರಿದ ಕುಟುಂಬಗಳಿಗೆ ಅಭಿವೃದ್ಧಿ ಯೋಜನೆಗಳ ಪ್ರತಿಫಲವನ್ನು ನೇರವಾಗಿ ದೊರಕಿಸಿ ಕೊಡುವ ಉದ್ದೇಶದಿಂದ, ಈ ಯೋಜನೆಯನ್ನು ರೂಪಿಸಲಾಗಿದೆ. ಎಲ್ಲ ಅಭಿವೃದ್ಧಿ ಇಲಾಖೆಗಳು/ನಿಗಮಗಳು ತಮ್ಮ ವಾರ್ಷಿಕ ಯೋಜನಾ ಆಯವ್ಯಯದ ಶೇಕಡ ೧೫ರಷ್ಟು ಭಾಗವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಪುರೋಭಿವೃದ್ಧಿಗಾಗಿ ಮೀಸಲಿಟ್ಟು ಬಡತನ ರೇಖೆಗಿಂತ ಕೆಳಗಿರುವ ಪರಿಶಿಷ್ಟ ಜನಾಂಗದವರ ಕುಟುಂಬಗಳಿಗೆ ಕುಡಿಯುವ ನೀರಿನ ಪೂರೈಕೆ, ವಿದ್ಯುದೀಕರಣ, ವಸತಿ, ಸಂಪರ್ಕ ರಸ್ತೆಗಳು, ನೀರಾವರಿ, ಆರೋಗ್ಯ, ಶಿಕ್ಷಣ ಇವೇ ಮುಂತಾದ ಅತ್ಯಗತ್ಯ ಮೂಲಭೂತ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ಒದಗಿಸುವ ಯೋಜನೆಯೇ 'ವಿಶೇಷ ಘಟಕ ಯೋಜನೆ'. ಈ ಯೋಜನೆಯನ್ನು ಸರ್ಕಾರವು ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾರಂಭಿಸಿತು. ರಾಜ್ಯದ ಇತರ ಜಿಲ್ಲೆಗಳಂತೆ ತುಮಕೂರು ಜಿಲ್ಲೆಯಲ್ಲಿಯೂ ಯೋಜನೆ ಉತ್ತಮವಾಗಿ ಅನುಷ್ಠಾನಗೊಳ್ಳುತ್ತಿದೆ.

ತೋಟಗಾರಿಕೆ, ಪಶು ಸಂಗೋಪನೆ, ಸಾರಿಗೆ ಇಲಾಖೆಗಳು ಈ ಜಿಲ್ಲೆಯ ವಿಶೇಷ ಘಟಕ ಯೋಜನೆಗೆ ಸಹಕರಿಸಿವೆ. ತೋಟಗಾರಿಕೆ ಇಲಾಖೆಯು ಫಲಾನುಭವಿಗಳಿಗೆ ಅರ್ಧ ಎಕರೆ ತೆಂಗಿನ ಅಥವಾ ಹಣ್ಣಿನ ತೋಟದ ಅಭಿವೃದ್ಧಿಗೆಂದು ಆರ್ಥಿಕ ನೆರವನ್ನೂ, ಎರಡು ವರ್ಷಗಳ ನಿರ್ವಹಣಾ ವೆಚ್ಚವನ್ನೂ ಮತ್ತು ಕಾಲುವೆ ಬದಿಯಲ್ಲಿ ತೆಂಗಿನ ಸಸಿಗಳನ್ನು ನೆಡಲು ಕೃಷಿ ಕಾರ್ಮಿಕರಿಗೆ ಸಹಾಯವನ್ನೂ ನೀಡಲಾಗುತ್ತದೆ. ಅಲ್ಲದೆ ಇವುಗಳ ಇಳುವರಿಯನ್ನು ಕೂಡ ಫಲಾನುಭವಿಗಳಿಗೇ ನೀಡಲಾಗುತ್ತದೆ. ತೋಟಗಾರಿಕೆಗೆ ಅಗತ್ಯವಾಗಿ ಬೇಕಾದ ಸಿಂಪಡಿಕೆ ಸಾಧನಗಳನ್ನು ಸಹ ಒದಗಿಸಲಾಗುವುದು. ಪಶು ಸಂಗೋಪನೆ ಇಲಾಖೆಯ ಫಲಾನುಭವಿಗಳಿಗೆ ಒಂದು ಜೊತೆ ಹಾಲು ಕರೆಯುವ ಹಸು ಮತ್ತು ಎಮ್ಮೆ, ಕುರಿ ಘಟಕ ಅಥವಾ ಹಂದಿ ಘಟಕಗಳನ್ನು ಸಾಲದ ರೂಪದಲ್ಲಿ ನಬಾರ್ಡ್ ನಿಯಮಗಳಿಗನುಸಾರ ಇಲಾಖೆಯಿಂದ ಒದಗಿಸಲಾಗುತ್ತದೆ.

ಪಶು ಆಹಾರ, ವಿಮೆ, ವೈದ್ಯಕೀಯ ಸೇವೆ, ಶೆಡ್ಡಿನ ನಿರ್ಮಾಣ ವೆಚ್ಚ–ಇವುಗಳನ್ನೂ ಇದು ಒಳಗೊಂಡಿರುತ್ತದೆ. ಈ ಯೋಜನೆಯಡಿ ಮಾಡಿದ ಭೌತಿಕ ಸಾಧನೆ ಮತ್ತು ಖರ್ಚಿನ ವಿವರಗಳನ್ನು ಕೋಷ್ಟಕ ೧೬.೨೫ರಲ್ಲಿ ಕಾಣಿಸಲಾಗಿದೆ.

**ಕೋಷ್ಟಕ ೧೬.೨೫: ವಿಶೇಷ ಘಟಕ ಯೋಜನೆಯಡಿ ವಿವಿಧ ಇಲಾಖೆಗಳು ಮಾಡಿರುವ ವೆಚ್ಚ ಹಾಗೂ ಫಲಾನುಭವಿಗಳ ವಿವರ**

| ಕ್ರ ಸಂ | ಇಲಾಖೆಯ ಹೆಸರು | ೨೦೦೮-೦೯ | | ೨೦೦೯-೧೦ | | ೨೦೧೦-೧೧ | | ೨೦೧೧-೨೦೧೨ | |
|---|---|---|---|---|---|---|---|---|---|
| | | ವೆಚ್ಚ (ರೂ. ಲಕ್ಷಗಳಲ್ಲಿ) | ಭೌತಿಕ ಸಾಧನೆ | ವೆಚ್ಚ (ರೂ. ಲಕ್ಷಗಳಲ್ಲಿ) | ಭೌತಿಕ ಸಾಧನೆ | ವೆಚ್ಚ (ರೂ. ಲಕ್ಷಗಳಲ್ಲಿ) | ಭೌತಿಕ ಸಾಧನೆ | ವೆಚ್ಚ (ರೂ. ಲಕ್ಷಗಳಲ್ಲಿ) | ಭೌತಿಕ ಸಾಧನೆ |
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ |
| ೧ | ತಾಲ್ಲೂಕು ಪಂಚಾಯತ್ | ೫೦.೪೨ | ೫೫ | ೪೯.೯೦ | ೬೩ | ೫೧.೦೦ | ೨೭ | ೫೧.೦೦ | ೨೭ |
| ೨ | ಕೃಷಿ | ೧೧.೬೨ | ೪೬೩ | ೧೧.೫೩ | ೩೦೭ | ೧೧.೯೦ | ೧೪೬ | ೧೨.೮೫ | ೪೪೦ |
| ೩ | ತೋಟಗಾರಿಕೆ | ೮.೩೦ | ೩೯೪ | ೬.೮೭ | ೫೪೯ | ೫.೨೭ | ೮೦ | ೫.೧೪ | ೨೩೭ |
| ೪ | ಪಶು ಸಂಗೋಪನೆ | ೧೮.೫೫ | ೧೮೫ | ೨೨.೩೦ | ೨೨೪ | ೨೨.೧೦ | ೧೪೯ | ೨೭.೩೦ | ೨೬೯ |
| ೫ | ಕೈಗಾರಿಕೆ | ೬.೫೧ | ೧೧೫ | ೬.೮೦ | ೧೫೩ | ೭.೧೫ | ೭೨ | ೭.೧೫ | ೧೩೨ |
| ೬ | ರೇಷ್ಮೆ ಇಲಾಖೆ | ೭.೬೦ | ೧೫೨ | ೭.೩೫ | ೧೪೮ | ೧೦.೭೫ | ೧೧೬ | ೬.೧೫ | ೧೦೬ |
| ೭ | ಸಮಾಜ ಕಲ್ಯಾಣ ಇಲಾಖೆ | ೧೭.೧೬ | ೧೯೯ | ೧೫.೭೧ | ೨೬೬ | ೧೩.೭೩ | ೧೩೬ | ೧೨.೫೦ | ೨೧೧ |
| ೮ | ಅರಣ್ಯ | ೦.೮೦ | ೨೬೪೪ | ೦.೫೦ | ೩೦೦ | ೦.೭೦ | ೭ | ೧.೩೦ | ೧೯ |
| ೯ | ಮೀನುಗಾರಿಕೆ | ೫.೪೬ | ೨೧೯ | ೪.೬೫ | ೧೩೯ | ೪.೪೦ | ೬೩ | ೩.೬೧ | ೧೫೨ |
| ಒಟ್ಟು | | **೧೨೬.೪೨** | **೪೪೨೬** | **೧೨೫.೬೧** | **೨೧೫೯** | **೧೨೭.೦೦** | **೭೯೬** | **೧೨೭.೦೦** | **೧೫೯೩** |

**ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತದ ಚಟುವಟಿಕೆಗಳು**

ಪರಿಶಿಷ್ಟ ಜಾತಿಯ ಜನರು ಅತ್ಯಂತ ಹಿಂದುಳಿದ ಜನಾಂಗದವರಾಗಿದ್ದು, ಅವರ ಸರ್ವತೋಮುಖ ಬೆಳವಣಿಗೆಗೆ ಹಾಗೂ ಅವರ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಲು ಕರ್ನಾಟಕ ಸರ್ಕಾರವು ಕಂಪನಿ ಕಾಯ್ದೆ ೧೯೫೬ರ ಅಡಿಯಲ್ಲಿ ದಿ:೨೦-೦೩-೧೯೭೫ ರಂದು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿರುತ್ತದೆ. ದಿ:೧೬-೦೮-೨೦೦೫ರಂದು ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಎಂದು ಮರು ನಾಮಕರಣ ಮಾಡಲಾಗಿದೆ. ನಿಗಮದ ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರವು ಪ್ರತಿ ವರ್ಷವು ಆಯವ್ಯಯದಲ್ಲಿ ಹಣವನ್ನು ನಿಗದಿಪಡಿಸುತ್ತದೆ. ನಿಗದಿ ಪಡಿಸಿದ ಹಣಕ್ಕೆ ತಕ್ಕಂತೆ ಗುರಿಯನ್ನು ನಿಗದಿಪಡಿಸಲಾಗುವುದು. ನಿಗಮದ ಕಾರ್ಯಕ್ರಮಗಳು ಹೀಗಿವೆ.

## ೧.ಸ್ವಯಂ ಉದ್ಯೋಗ ಯೋಜನೆ

## ಅ) ಸ್ವಯಂ ಉದ್ಯೋಗ ಯೋಜನೆ

ನಿರುದ್ಯೋಗ ಯುವಕ ಮತ್ತು ಯುವತಿಯರು ಸ್ವಾವಲಂಬಿಗಳಾಗಿ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ ನಿಗಮವು ಸಾಲ ಸೌಲಭ್ಯ ಒದಗಿಸುತ್ತಿದೆ. ಹೈನುಗಾರಿಕೆ, ಸಣ್ಣ ವ್ಯಾಪಾರ, ದಿನಸಿ ಅಂಗಡಿ, ಸೈಕಲ್‌ಶಾಪ್, ಸಣ್ಣಕೈಗಾರಿಕೆ, ಸೇವೆ ಮತ್ತು ವ್ಯಾಪಾರ ಚಟುವಟಿಕೆಗಳಿಗೆ ಬ್ಯಾಂಕುಗಳ ಸಹಯೋಗದೊಂದಿಗೆ ರೂ. ೧.೦೦ ಲಕ್ಷದವರೆಗೆ ಸಾಲ ಸೌಲಭ್ಯ ಒದಗಿಸಲಾಗುವುದು. ಇದರಲ್ಲಿ ನಿಗಮದಿಂದ ಶೇ.೫೦ರಷ್ಟು ಅಥವಾ ಗರಿಷ್ಠ ರೂ. ೨೫,೦೦೦ ಗಳನ್ನು ಮಾತ್ರ ಸಹಾಯಧನ ರೂಪದಲ್ಲಿ ಮಂಜೂರು ಮಾಡಲಾಗುತ್ತದೆ. ಉಳಿದ ಭಾಗ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳ ಮೂಲಕ ಸಾಲವನ್ನು ಮಂಜೂರು ಮಾಡಲಾಗುವುದು. ೨೦೧೦-೧೧ ನೇ ಹಾಗೂ ೨೦೧೧-೧೨ ನೇ ಸಾಲಿನಲ್ಲಿ ಪ್ರಯೋಜನ ಪಡೆದವರ ವಿವರಗಳನ್ನು ಕೋಷ್ಟಕ ೧೬.೨೬ ಮತ್ತು ೧೬.೨೭ ರಲ್ಲಿ ಕಾಣಿಸಲಾಗಿದೆ.

**ಆ) ಉದ್ಯಮಶೀಲತಾ ಅಭಿವೃದ್ಧಿ ಯೋಜನೆ (ಐ.ಎಸ್.ಬಿ)**

ಇದು ನಿರುದ್ಯೋಗಿ ಯುವಜನರ ಸಹಾಯಕ್ಕಾಗಿ ಇರುವ ಇನ್ನೊಂದು ಸಾಲ ಯೋಜನೆ, ನಿರುದ್ಯೋಗಿ ಯುವಜನರು ನಡೆಸಲು ಇಚ್ಚಿಸುವ ವಿವಿಧ ಸ್ವಯಂ ಉದ್ಯೋಗ ಯೋಜನೆಗಳಾದ ಸಣ್ಣ ಕೈಗಾರಿಕೆ, ಟಾಟಾ ಇಂಡಿಕಾ, ಆಟೋರಿಕ್ಷಾ, ಟ್ರಾಕ್ಟರ್ ಮತ್ತು ಟ್ರೈಲರ್, ಹಂದಿ ಸಾಕಾಣಿಕೆ, ಕೋಳಿ ಸಾಕಾಣಿಕೆ, ಸಣ್ಣ ವ್ಯಾಪಾರ ಇತ್ಯಾದಿ ಉದ್ದೇಶಗಳಿಗೆ ರೂ. ೧.೦೦ ಲಕ್ಷ ದಿಂದ ರೂ. ೭.೦೦ ಲಕ್ಷದವರೆಗೆ ಬ್ಯಾಂಕ್‌ಗಳಲ್ಲಿ ಸಾಲ ಮಂಜೂರು ಮಾಡಿದಲ್ಲಿ ನಿಗಮದಿಂದ ಶೇ. ೨೦ ಭಾಗ ಅಥವಾ ಗರಿಷ್ಟ ರೂ. ೧.೦೦ ಲಕ್ಷದವರೆಗೆ ಅಂಚಿನ ಹಣದ ಸಾಲ ಮಂಜೂರು ಮಾಡಲಾಗುವುದು. ಉಳಿದ ಶೇ. ೭೦ ಭಾಗ ಫಲಾನುಭವಿಯ ಪಾಲು, ಅರ್ಜಿದಾರರು ಯಾವುದೇ ಲಾಭದಾಯಕ ಚಟುವಟಿಕೆಗಳನ್ನು ಪ್ರಾರಂಭಿಸಲು ಸಾಲ ಸೌಲಭ್ಯವನ್ನು ಕಲ್ಪಿಸಲಾಗುತ್ತದೆ. ಈ ಯೋಜನೆಯಡಿ ಮಾಡಲಾದ ಭೌತಿಕ ಮತ್ತು ಆರ್ಥಿಕ ಸಾಧನೆಯ ವಿವರಗಳನ್ನು ಕೋಷ್ಟಕ ೧೬.೨೬ ಹಾಗೂ ೧೬.೨೭ ರಲ್ಲಿ ಕೊಡಲಾಗಿದೆ.

**ಇ) ನೇರ ಸಾಲ ಯೋಜನೆ**

ಈ ಯೋಜನೆಯಡಿ ಘಟಕ ವೆಚ್ಚವು ಗರಿಷ್ಟ ರೂ. ೫೮,೫೦೦ ರಿಂದ ರೂ. ೭.೦೦ ಲಕ್ಷದವರೆಗೆ ಇರುತ್ತದೆ. ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ, ನವದೆಹಲಿ ಇವರಿಂದ ಮಂಜೂರು ಮಾಡುವ ಅವಧಿಸಾಲದೊಂದಿಗೆ ಸೌಲಭ್ಯ ಒದಗಿಸಲಾಗುವುದು. ಈ ಯೋಜನೆಯಡಿ ಘಟಕ ವೆಚ್ಚ ರೂ. ೧.೦೦ ಲಕ್ಷದವರೆಗೆ ಶೇ.೫೦ರಷ್ಟು ಅಥವಾ ಗರಿಷ್ಟ ರೂ. ೨೫,೦೦೦ ಸಹಾಯಧನ ಸೌಲಭ್ಯವಿರುತ್ತದೆ. ರೂ. ೧.೦೦ ಲಕ್ಷ ಮೇಲ್ಪಟ್ಟ ಸಾಲಗಳಿಗೆ ಘಟಕ ವೆಚ್ಚದಲ್ಲಿ ಶೇ. ೨೦ ಭಾಗ ಅಥವಾ ಗರಿಷ್ಟ ರೂ. ೧.೦೦ ಲಕ್ಷ ಬೀಜ ಧನ, ಉಳಿದ ಭಾಗ ಅವಧಿ ಸಾಲವಾಗಿರುತ್ತದೆ. ಇದರಲ್ಲಿ ಪ್ರವರ್ತಕರ ಪಾಲು ಯೋಜನೆ ವೆಚ್ಚಕ್ಕೆ ಅನುಗುಣವಾಗಿ ಕನಿಷ್ಠ ಪಾಲು ಇರುತ್ತದೆ. ಹೈನುಗಾರಿಕೆ, ಬ್ಯೂಟಿಪಾರ್ಲರ್, ಚರ್ಮಗಾರಿಕೆ, ವಕೀಲರ ಕಛೇರಿ, ಗೊಬ್ಬರದ ಅಂಗಡಿ, ಇಟ್ಟಿಗೆ ತಯಾರಿಕೆ, ಎಲೆಕ್ಟ್ರಿಕಲ್ ಶಾಪ್, ಡಿ.ಟಿ.ಪಿ. ಸೆಂಟರ್, ಕೋಳಿ ಫಾರಂ, ಹಂದಿ ಸಾಕಾಣಿಕೆ, ಟಾಟಾ ಇಂಡಿಕಾ, ಅಟೋರಿಕ್ಷಾ, ಮೆಡಿಕಲ್/ಡೆಂಟಲ್ ಕ್ಲಿನಿಕ್, ಮೆಡಿಕಲ್ ಸೆಂಟರ್ ಇತ್ಯಾದಿ ಉದ್ದೇಶಗಳಿಗೆ ಈ ಯೋಜನೆಯಡಿ ಸಾಲ ಸೌಲಭ್ಯ ಪಡೆಯಬಹುದಾಗಿದೆ. ೨೦೧೦-೧೧ ನೇ ಹಾಗೂ ೨೦೧೧-೧೨ ನೇ ಸಾಲಿನಲ್ಲಿ ಖರ್ಚು ಮಾಡಿದ ವಿವರಗಳನ್ನು ಕೋಷ್ಟಕ ೧೬.೨೬ ಹಾಗೂ ೧೬.೨೭ರಲ್ಲಿ ನೀಡಲಾಗಿದೆ.

**ಈ) ಮೈಕ್ರೋ ಕ್ರೆಡಿಟ್ ಯೋಜನೆ**

ಈ ಯೋಜನೆಯನ್ನು ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ. ಘಟಕ ವೆಚ್ಚದ ಗರಿಷ್ಟ ಮೊತ್ತ ರೂ. ೨೫,೦೦೦ ವಾಗಿದ್ದು, ಇದರಲ್ಲಿ ರೂ. ೧೫,೦೦೦ ಎನ್.ಎಸ್.ಸಿ.ಎಫ್.ಡಿ.ಸಿ.(NSCFDC) ಯವರ ಅವಧಿ ಸಾಲವಾಗಿರುತ್ತದೆ. ಅವಧಿಸಾಲಕ್ಕೆ ಶೇ. ೫ರಷ್ಟು ಬಡ್ಡಿಯನ್ನು ವಿಧಿಸಲಾಗುವುದು. ಉಳಿದ ರೂ. ೧೦,೦೦೦ ಗಳು ಜಿಲ್ಲಾ ಪಂಚಾಯತ್, ನಗರಾಭಿವೃದ್ಧಿ ಇಲಾಖೆ ಅಥವಾ ಸಮಾಜ ಕಲ್ಯಾಣ ಇಲಾಖೆ ಹಾಗೂ ವಿಶೇಷ ಘಟಕ ಯೋಜನೆಯಡಿ ಇತರ ಇಲಾಖೆಗಳಲ್ಲಿ ಲಭ್ಯವಿರುವ ಸಹಾಯಧನವನ್ನು ಪಡೆದು ವಿನಿಯೋಗಿಸಲಾಗುವುದು. ಈ ಯೋಜನೆಯಡಿ ಸಣ್ಣಮಟ್ಟ ಆರ್ಥಿಕ ಚಟುವಟಿಕೆಗಳನ್ನು ಪ್ರಾರಂಭಿಸಲು ಅವಕಾಶವಿರುತ್ತದೆ. ಈ ಯೋಜನೆಯಡಿ ಮಾಡಿದ ಸಾಧನೆಯ ವಿವರಗಳನ್ನು ಕೋಷ್ಟಕ ೧೬.೨೬ ಹಾಗೂ ೧೬.೨೭ರಲ್ಲಿ ನೋಡಬಹುದು.

ಮೈಕ್ರೋ ಕ್ರೆಡಿಟ್(ಕಿರುಸಾಲ) ಯೋಜನೆಯು ಇನ್ನೊಂದು ಬಗೆಯ ಸಣ್ಣಸಾಲ ಮತ್ತು ಸಹಾಯಧನ ನೀಡುವ ಕಾರ್ಯಕ್ರಮವಾಗಿದೆ. ಇದರಡಿ ಗ್ರಾಮೀಣ, ಅರೆನಗರ ಮತ್ತು ನಗರ ಪ್ರದೇಶಗಳಿಗೆ ಸೇರಿದ ಕುಶಲ/ಕುಶಲರಲ್ಲದ ವ್ಯಕ್ತಿಗಳಿಗೆ ಸಣ್ಣ ಪ್ರಮಾಣದ ವ್ಯಾಪಾರ ಚಟುವಟಿಕೆಗಳನ್ನು ಕೈಗೊಳ್ಳಲು ಸ್ವ-ಸಹಾಯ ಗುಂಪುಗಳ ಮೂಲಕ ಪ್ರತಿಯೊಬ್ಬ ಫಲಾಪೇಕ್ಷಿಗೆ ಗರಿಷ್ಠ ಮೊತ್ತ ರೂ. ೧೦,೦೦೦ಗಳನ್ನು ಮಂಜೂರು ಮಾಡಲಾಗುವುದು. ಇದರಲ್ಲಿ ರೂ. ೫,೦೦೦ ಸಹಾಯಧನ ಮತ್ತು ರೂ. ೫,೦೦೦ ಗಳು ಬೀಜಧನ ಸಾಲವಾಗಿದ್ದು, ಇದನ್ನು ನಿಗಮದಿಂದಲೇ ನೇರವಾಗಿ ಮಂಜೂರು ಮಾಡಲಾಗುವುದು. ಈ ಕುರಿತಾಗಿ ೨೦೧೦-೧೧ ನೇ ಸಾಲಿನ ಸಾಧನೆಯ ವಿವರಗಳನ್ನು ಕೋಷ್ಟಕ ೧೬.೨೬ ರಲ್ಲಿ ನೀಡಲಾಗಿದೆ.

### ಉ) ಮಹಿಳಾ ಕಿಸಾನ್ ಯೋಜನೆ

ಸಣ್ಣ ಮತ್ತು ಅತಿ ಸಣ್ಣ ಪರಿಶಿಷ್ಟ ಜಾತಿಯ ಮಹಿಳಾ ರೈತರಿಗೆ ನಿಗಮದಿಂದ ಸಾಲ ಸೌಲಭ್ಯ ಕಲ್ಪಿಸಲು ಈ ಯೋಜನೆ ಹಮ್ಮಿಕೊಂಡಿದೆ. ಇದರಂತೆ ರೂ.೪೦,೦೦೦ಕ್ಕಿಂತ ಕಡಿಮೆ ವಾರ್ಷಿಕ ಆದಾಯ ಇರುವ ಜಮೀನು ಹೊಂದಿದ ಕೃಷಿ ಮತ್ತು ಮಿಶ್ರಿತ ಬೇಸಾಯಕ್ಕೆ ಸಂಬಂಧಿಸಿದ ಆರ್ಥಿಕ ಚಟುವಟಿಕೆಗಾಗಿ ಪ್ರತಿ ಫಲಾನುಭವಿಗೆ ಘಟಕ ವೆಚ್ಚ ರೂ. ೫೦,೦೦೦ ಇದ್ದು, ಈ ಹಣದಲ್ಲಿ ಗರಿಷ್ಟ ಸಹಾಯಧನ ರೂ. ೧೦,೦೦೦, ಗರಿಷ್ಟ ಬೀಜಧನ ರೂ. ೧೦,೦೦೦ (ಎನ್. ಎಸ್.ಸಿ.ಎಫ್.ಡಿ.ಸಿ) ಯಿಂದ ರೂ. ೩೦,೦೦೦ ಅವಧಿ ಸಾಲ ಪಡೆದು ಸಾಲ ಮಂಜೂರು ಮಾಡಲಾಗುತ್ತದೆ. ಸಾಲ ಪಡೆದ ಫಲಾನುಭವಿಯು ಶೇ.೫ರ ಬಡ್ಡಿದರದಲ್ಲಿ ೪೦ ತ್ರೈಮಾಸಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕು.

### ೨. ಭೂ ಒಡೆತನ ಯೋಜನೆ

ರಾಜ್ಯದಲ್ಲಿ ಪರಿಶಿಷ್ಟ ಜಾತಿಯವರು ಬಹುತೇಕ ಕೃಷಿ ಕಾರ್ಮಿಕರ ಕುಟುಂಬದ ಮಹಿಳೆಯರಿಗೆ ಮಾತ್ರ ಈ ಯೋಜನೆಯಡಿ ಸೌಲಭ್ಯವನ್ನು ನೀಡಲಾಗುತ್ತದೆ. ಫಲಾನುಭವಿಗೆ ಎರಡು ಎಕರೆ ಖುಷ್ಕಿ ಅಥವಾ ಒಂದು ಎಕರೆ ತರಿ ಜಮೀನನ್ನು ನಿಗಮದಿಂದ ಖರೀದಿಸಿ ನೇರವಾಗಿ ನೀಡಲಾಗುವುದು. ಘಟಕ ವೆಚ್ಚ ಗರಿಷ್ಠ ರೂ. ೫,೦೦,೦೦೦ ಇದ್ದು ಇದರಲ್ಲಿ ಶೇ. ೫೦ ಭಾಗ ಸಹಾಯಧನ ಹಾಗೂ ಶೇ. ೫೦ ಭಾಗ ಸಾಲದ ರೂಪದಲ್ಲಿ ಆರ್ಥಿಕ ನೆರವನ್ನು ನೀಡಲಾಗುವುದು. ಫಲಾನುಭವಿಯು ಸಾಲದ ಹಣವನ್ನು ೧೦ ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕು. ಇದಕ್ಕೆ ಶೇ.೬ರ ಬಡ್ಡಿದರ ವಿಧಿಸಲಾಗುತ್ತದೆ. ಜಮೀನನ್ನು ಮಾರಾಟ ಮಾಡುವವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಾಂಗಕ್ಕೆ ಸೇ–ರಿದವರಾಗಿರಬಾರದು.ಜಮೀನು ಫಲಾನುಭವಿಗಳ ವಾಸಸ್ಥಾನದಿಂದ ೫ ಕಿ.ಮೀ. ಕ್ಕಿಂತ ದೂರದಲ್ಲಿರಬಾರದು ಹಾಗೂ ಕೃಷಿಗೆ ಯೋಗ್ಯವಾಗಿರಬೇಕು. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಮೀನು ಆಯ್ಕೆ ಸಮಿತಿ ರಚಿಸಲಾಗಿದೆ. ಈ ಸಮಿತಿಯಲ್ಲಿ ಉಪವಿಭಾಗಾಧಿಕಾರಿಗಳು, ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಜಿಲ್ಲಾ ಕೃಷಿ ಅಧಿಕಾರಿ, ಗಣಿ ಮತ್ತು ಭೂ ವಿಜ್ಞಾನ ಅಧಿಕಾರಿ ಸದಸ್ಯರಾಗಿದ್ದು, ನಿಗಮದಿಂದ ಜಿಲ್ಲಾ ವ್ಯವಸ್ಥಾಪಕರು ಸಮಿತಿ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

### ೩. ಗಂಗಾ ಕಲ್ಯಾಣ ಯೋಜನೆ

### ಅ) ವೈಯುಕ್ತಿಕ ನೀರಾವರಿ ಕೊಳವೆಬಾವಿ ಯೋಜನೆ

ಎರಡು ಎಕರೆಯಿಂದ ಐದು ಎಕರೆ ಜಮೀನು ಹೊಂದಿರುವ ಪರಿಶಿಷ್ಟ ಜಾತಿಯ ಸಣ್ಣ ಮತ್ತು ಅತಿಸಣ್ಣ ರೈತರಿಗೆ ನೀರಾವರಿ ಸೌಲಭ್ಯ ಒದಗಿಸಲು ಜಮೀನಿನಲ್ಲಿ ಕೊಳವೆ ಬಾವಿ/ ತೆರೆದ ಬಾವಿ ಕೊರೆಸಿ, ಪಂಪ್ ಸೆಟ್ ಅಳವಡಿಸಿ, ವಿದ್ಯುದ್ಧೀಕರಣಗೊಳಿಸಲಾಗುವುದು. ಘಟಕ ವೆಚ್ಚ ರೂ. ೧,೫೦,೦೦೦ ಇದ್ದು ಇದರಲ್ಲಿ ರೂ. ೧,೦೦,೦೦೦ ಸಹಾಯಧನವಿದ್ದು, ಉಳಿದ ರೂ. ೫೦,೦೦೦ ಅವಧಿ ಸಾಲವಾಗಿರುತ್ತದೆ. ಅವಧಿಸಾಲಕ್ಕೆ ಶೇ.೬ರ ಬಡ್ಡಿದರವಿರುತ್ತದೆ. ಸಾಲದ ಹಣವನ್ನು ಎಂಟು ವರ್ಷಗಳಲ್ಲಿ ಪ್ರತಿ ಆರು ತಿಂಗಳಿಗೊಮ್ಮೆ ೧೬ ಸಮ ಕಂತುಗಳಲ್ಲಿ ನಿಗಮಕ್ಕೆ ಮರುಪಾವತಿ ಮಾಡಬೇಕು.

### ಆ)ಏತ ನೀರಾವರಿ ಯೋಜನೆ

ಗಂಗಾ ಕಲ್ಯಾಣ ಯೋಜನೆಯಡಿ ನದಿ ನಾಲೆಗಳಿಂದ ಏತ ನೀರಾವರಿ ಮೂಲಕ ಪರಿಶಿಷ್ಟ ಜಾತಿಯ ಸಣ್ಣ ಮತ್ತು ಅತಿಸಣ್ಣ ರೈತರಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗುತ್ತದೆ.

### ಇ) ಸಾಮೂಹಿಕ ನೀರಾವರಿ ಯೋಜನೆ

ರಾಜ್ಯದಲ್ಲಿ ಪರಿಶಿಷ್ಟ ಜಾತಿ ಜಮೀನು ಹೊಂದಿರುವ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು. ಇದರಲ್ಲಿ ೮ ರಿಂದ ೧೫ ಎಕರೆ ಜಮೀನಿನಲ್ಲಿ ಎರಡು ರಿಂದ ಮೂರು ಕೊಳವೆಬಾವಿಗಳನ್ನು ಕೊರೆದು ಪಂಪುಸೆಟ್, ಪೈಪ್‌ಲೈನ್ ಅಳವಡಿಸಿ, ವಿದ್ಯುದೀಕರಣಗೊಳಿಸಿ ಕೊಡಲಾಗುವುದು. ಸದರಿ ಯೋಜನೆಯ ಪೂರ್ಣ ವೆಚ್ಚ ಸಹಾಯಧನವಾಗಿರುತ್ತದೆ. ಘಟಕದಲ್ಲಿ ಮೂರು ರಿಂದ ಎಂಟು ಫಲಾನುಭವಿಗಳು ಇರುತ್ತಾರೆ. ಈ ಯೋಜನೆಯಡಿ ಘಟಕದ ವೆಚ್ಚ ಎಂಟು ಎಕರೆಗೆ ರೂ. ೨.೫೩ ಲಕ್ಷ ಮತ್ತು ೧೫ ಎಕರೆಗೆ ರೂ. ೩.೫೯ ಲಕ್ಷ ನಿಗದಿಪಡಿಸಲಾಗಿದೆ. ಈ ಯೋಜನೆಯಡಿ ೨೦೧೦–೧೧ ಹಾಗೂ ೨೦೧೧–೧೨ ನೇ ಸಾಲುಗಳಲ್ಲಿ ಮಾಡಿರುವ ಸಾಧನೆಯ ವಿವರಗಳನ್ನು ಕೋಷ್ಟಕ ೧೬.೨೬ ಹಾಗೂ ೧೬.೨೭ರಲ್ಲಿ ಕಾಣಿಸಲಾಗಿದೆ.

## ಕೋಷ್ಟಕ ೧೬.೨೬: ೨೦೧೦–೧೧ರ ಬ್ಯಾಂಕ್ ಸಹಯೋಗದೊಂದಿಗೆ ಮತ್ತು ನಿಗಮದ ನೇರಸಾಲ ಯೋಜನೆಗಳಡಿ ಸಾಧಿಸಿರುವ ಪ್ರಗತಿಯ ವಿವರ

(ಲಕ್ಷ ರೂ.ಗಳಲ್ಲಿ)

| ಕ್ರ. ಸಂ. | ಯೋಜನೆಯ ಹೆಸರು | ಗುರಿ | | ಆರ್ಥಿಕ ಸಾಧನೆ | | | | | | ಶೇಕಡ ವಾರು |
|---|---|---|---|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಸಹಾಯ ಧನ | ಬೀಜ ಧನ | ಅವಧಿ ಸಾಲ | ಬ್ಯಾಂಕ್ ಸಾಲ | ಒಟ್ಟು | |
| ೧ | ಸ್ವಯಂ ಉದ್ಯೋಗ ಯೋಜನೆ | ೩೭೨ | ೩೭.೨೦ | ೪೬೪ | ೩೭.೯೦ | – | – | ೯೪.೨೬ | ೧೩೨.೧೬ | ೧೨೫ |
| ೨ | ಐ.ಎಸ್.ಬಿ. ಯೋಜನೆ | ೪೭ | ೨೪.೧೨ | ೩೮ | ೧.೧೦ | ೨೦.೩೦ | – | ೭೮.೨೯ | ೯೯.೬೯ | ೮೧ |
| ೩ | ನೇರಸಾಲ(ವೈಯಕ್ತಿಕ/ಗುಂಪು) | ೬೩ | ೧೧೮.೨೨ | ೨೧ | ೦.೬೦ | ೭.೮೯ | ೨೯.೮೨ | – | ೩೮.೩೧ | ೩೩ |
| ೪ | ನೇರಸಾಲ(ಹೈನುಗಾರಿಕೆ) | ೨೨೮ | ೭೯.೮೦ | ೨೨೮ | ೧೧.೪೦ | ೭.೯೮ | ೨೦.೫೨ | – | ೩೯.೯೦ | ೧೦೦ |
| ೫ | ಭೂ ಒಡೆತನ ಯೋಜನೆ | ೧೫ | ೩೭.೫೦ | ೧೨ | ೬.೭೭ | – | ೬.೭೭ | – | ೧೩.೫೪ | ೮೦ |
| ೬ | ಗಂಗಾ ಕಲ್ಯಾಣ ಯೋಜನೆ | ೩೬೮ | ೩೬೮.೦೦ | ೩೫೯ | ೩೫೯.೦೦ | – | – | – | ೩೫೯.೦೦ | ೯೮ |
| ೭ | ಮೈಕ್ರೋ ಕ್ರೆಡಿಟ್ ಯೋಜನೆ (ಘಟಕವೆಚ್ಚ ರೂ. ೨೫,೦೦೦–೦೦) | ೧೧೦ | ೧೬.೫೦ | ೧೬ | ೦.೪೦ | – | ೨.೪೦ | – | ೨.೮೦ | ೧೫ |
| ೮ | ಮೈಕ್ರೋ ಫೈನಾನ್ಸ್ ಯೋಜನೆ (ಕಿರುಸಾಲ) | ೫೪೩ | ೨೭.೧೬ | ೫೨೬ | ೧೩.೧೫ | ೧೩.೧೫ | – | – | ೨೬.೩೦ | ೯೭ |
| ೯ | ಮೈಕ್ರೋ ಕ್ರೆಡಿಟ್ ಯೋಜನೆ–೨ (ಘಟಕವೆಚ್ಚ ರೂ. ೫೦,೦೦೦–೦೦ (೩೮ ಗುಂಪು) | ೩೮೦ | ೧೯.೦೦ | ೨೪೨ | ೨.೪೨ | – | ೯.೬೮ | – | ೧೨.೧೦ | ೬೪ |
| | **ಒಟ್ಟು** | **೨೧೨೬** | **೭೨೭.೫೦** | **೧೯೦೬** | **೪೬೨.೭೪** | **೪೯.೩೨** | **೬೯.೧೯** | **೧೭೨.೫೫** | **೭೨೩.೮೦** | **೯೦** |

## ಕೋಷ್ಟಕ ೧೬.೨೭: ೨೦೧೧–೧೨ರಲ್ಲಿ ನಿಗದಿ ಪಡಿಸಿರುವ ಯೋಜನಾವಾರು ಭೌತಿಕ ಮತ್ತು ಆರ್ಥಿಕ ಗುರಿ ಸಾಧನೆಗಳ ವಿವರ

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಯೋಜನೆಯ ಹೆಸರು | ಗುರಿ | | ಸಾಧನೆ | | | | | | ಶೇಕಡಾ ವಾರು |
|---|---|---|---|---|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಸಹಾಯ ಧನ | ಬೀಜ ಧನ | ಅವಧಿ ಸಾಲ | ಬ್ಯಾಂಕ್ ಸಾಲ | ಒಟ್ಟು | |
| ೧ | ಸ್ವಯಂ ಉದ್ಯೋಗ ಯೋಜನೆ | ೨೭೫ | ೬೮.೭೫ | ೨೮೧ | ೩೬.೫೯ | – | – | ೫೨.೨೧ | ೮೮.೮೦ | ೧೦೨ |
| ೨ | ಐ.ಎಸ್.ಬಿ. ಯೋಜನೆ | ೫೨ | ೪೧.೫೦ | ೩೭ | ೨.೧೦ | ೧೮.೫೬ | – | ೭೮.೮೧ | ೯೯.೪೭ | ೭೧ |
| ೩ | ನೇರಸಾಲ(ವೈಯಕ್ತಿಕ/ಗುಂಪು) | ೩೫೨ | ೩೫೨.೦೦ | ೩೨೯ | ೧೬೫.೮೮ | – | – | – | ೧೬೫.೮೮ | ೯೧ |
| ೪ | ನೇರಸಾಲ(ಹೈನುಗಾರಿಕೆ) | ೬೨ | ೩೬.೨೭ | ೮೧ | ೪.೦೫ | ೨.೮೩ | ೭.೨೯ | – | ೧೪.೧೭ | ೧೩೧ |
| ೫ | ಭೂ ಒಡೆತನ ಯೋಜನೆ | ೧೯ | ೨೯.೮೨ | ೧೯ | ೦.೩೦ | ೧೧.೭೯ | ೩೭.೦೯ | – | ೪೯.೧೮ | ೧೦೦ |
| ೬ | ಗಂಗಾ ಕಲ್ಯಾಣ ಯೋಜನೆ | ೫೪ | ೧೩೫.೦೦ | ೨೨ | ೧೦.೯೮ | – | ೧೦.೯೮ | – | ೨೧.೯೬ | ೪೧ |
| ೭ | ಮೈಕ್ರೋ ಕ್ರೆಡಿಟ್ ಯೋಜನೆ (ಘಟಕವೆಚ್ಚ ರೂ. ೨೫೦೦೦–೦೦) | ೧೦೪ | ೨೬.೦೦ | ೩೧ | ೦.೧೦ | – | ೪.೫೫ | – | ೪.೬೫ | ೩೦ |
| ೮ | ಮೈಕ್ರೋ ಫೈನಾನ್ಸ್ ಯೋಜನೆ (ಕಿರುಸಾಲ) | ೨೮೭ | ೨೮.೭೦ | ೨೮೭ | ೧೪.೩೫ | ೧೪.೩೫ | – | – | ೨೮.೭೦ | ೧೦೦ |
| ೯ | ಮೈಕ್ರೋ ಕ್ರೆಡಿಟ್ ಯೋಜನೆ–೨ (ಘಟಕವೆಚ್ಚ ರೂ. ೫೦೦೦೦–೦೦ (೩೮ ಗುಂಪು) | ೧೦೪ | ೧೦.೪೦ | ೧೦೪ | ೨.೦೮ | – | ೮.೩೨ | – | ೧೦.೪೦ | ೧೦೦ |

### ೪. ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆ

ಸಫಾಯಿ ಕರ್ಮಚಾರಿಗಳ ಮತ್ತು ಇವರ ಅವಲಂಬಿತರ ಆರ್ಥಿಕ ಅಭಿವೃದ್ಧಿಗಾಗಿ ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದಿಂದ ಅವಧಿ ಸಾಲ ಪಡೆದು ವಿವಿಧ ಆರ್ಥಿಕ ಚಟುವಟಿಕೆಗಳಾದ ಸಣ್ಣ ವ್ಯಾಪಾರ, ತರಕಾರಿ ಮತ್ತು ಹಣ್ಣಿನ ವ್ಯಾಪಾರ, ಆಟೋರಿಕ್ಷಾ, ರೆಡಿಮೇಡ್ ಗಾರ್ಮೆಂಟ್ಸ್, ಟ್ಯಾಕ್ಸಿ, ಟ್ರಾಕ್ಟರ್, ಬ್ಯೂಟಿ ಪಾರ್ಲರ್ ಇತ್ಯಾದಿಗಳಿಗೆ ಸಾಲ ಸೌಲಭ್ಯಗಳನ್ನು ಒದಗಿಸಲಾಗುವುದು. ಸ್ಥಳೀಯ ಸಂಸ್ಥೆಗಳು/ಸರ್ಕಾರ ನೀಡುವ ಸಹಾಯಧನವನ್ನು ಸಹ ನೀಡಲಾಗುವುದು. ಈಗಾಗಲೇ ನಗರಾಭಿವೃದ್ಧಿ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಗುರ್ತಿಸಿ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಸಮಿತಿಯಲ್ಲಿ ಅನುಮೋದನೆಯಾಗಿರುವ ಅರ್ಹ ಅರ್ಜಿದಾರ–ರಿಗೆ ಸಾಲಸೌಲಭ್ಯ ಕಲ್ಪಿಸಲಾಗುವುದು. ಈ ಯೋಜನೆಯಡಿ ಕನಿಷ್ಠ ರೂ. ೨೫,೦೦೦ ದಿಂದ ರೂ. ೧೦.೦೦ ಲಕ್ಷದವರೆಗೆ ಮೇಲಿನ ಚಟುವಟಿಕೆಗಳನ್ನು ಪ್ರಾರಂಭಿಸಲು ಸಾಲಸೌಲಭ್ಯ ನೀಡಲಾಗುವುದು. ಸಾಲ ಪಡೆದವರು ನಿಗದಿತ ಸಮಯದಲ್ಲಿ ಮರುಪಾವತಿ ಮಾಡಿದಲ್ಲಿ ಮಾತ್ರ ರಾಷ್ಟ್ರೀಯ ನಿಗಮಕ್ಕೆ ಮರುಪಾವತಿಸಿ, ಹೊಸದಾಗಿ ಸಾಲ ಪಡೆದು ಹೆಚ್ಚಿನ ರೀತಿಯಲ್ಲಿ ಸಾಲ ಸೌಲಭ್ಯ ಕಲ್ಪಿಸಲು ಅನುಕೂಲವಾಗುತ್ತದೆ.

### ನಿಗಮದಿಂದ ಸೌಲಭ್ಯ ಪಡೆಯಲು ಬೇಕಾದ ಅರ್ಹತೆಗಳು

೧)ಅರ್ಜಿದಾರರು ಪರಿಶಿಷ್ಟ ಜಾತಿಗೆ ಸೇರಿದವರಾಗಿರಬೇಕು ೨) ಕನಿಷ್ಠ ೧೫ ವರ್ಷಗಳಿಂದ ಕರ್ನಾಟಕ ರಾಜ್ಯದಲ್ಲಿ ವಾಸವಾಗಿರಬೇಕು. ೩) ಕುಟುಂಬದ ಯಾವುದೇ ಸದಸ್ಯರು ಸರ್ಕಾರಿ ನೌಕರಿಯಲ್ಲಿ ಇರಬಾರದು. ೪) ಅರ್ಜಿದಾರರು ಅಥವಾ ಅವರ ಕುಟುಂಬದವರು ಹಿಂದೆ ನಿಗಮದಿಂದ ಯಾವುದೇ ಸೌಲಭ್ಯ ಪಡೆದಿರಬಾರದು. ೫) ವಾರ್ಷಿಕ ಆದಾಯವು ರೂ. ೨೨,೦೦೦ಗಳನ್ನು ಮೀರಿರಬಾರದು, ಐ.ಎಸ್.ಬಿ ಮತ್ತು ನೇರಸಾಲ ಯೋಜನೆಗೆ ರೂ. ೪೦,೦೦೦(ಗ್ರಾಮೀಣ) ಮತ್ತು ರೂ. ೫೫,೦೦೦ (ನಗರಪ್ರದೇಶ) ಮೀರಿರಬಾರದು. ೬) ಅರ್ಜಿದಾರರು ೧೮ ರಿಂದ ೬೦ ವರ್ಷಗಳ ವಯೋಮಾನದವರಾಗಿರಬೇಕು. ೭) ಅರ್ಜಿದಾರರ ಭಾವಚಿತ್ರ, ಪಡಿತರ ಚೀಟಿ, ಜಾತಿಪತ್ರ, ವರಮಾನ ಪತ್ರ, ದರಪಟ್ಟಿ (ಕೊಟೇಷನ್), ಯೋಜನಾ ವರದಿ ಇತ್ಯಾದಿ ಲಗತ್ತಿಸಬೇಕು. ೮) ವಾಹನಗಳಿಗೆ ಸಾಲ ಪಡೆಯಲು ಚಾಲನಾ ಪರವಾನಗಿ (ಡಿ.ಎಲ್) ಪಡೆದಿರಬೇಕು ಮತ್ತು ಬ್ಯಾಡ್ಜ್ ಹೊಂದಿರಬೇಕು. ೯) ಗಂಗಾ ಕಲ್ಯಾಣ ಯೋಜನೆಯಡಿ ಅರ್ಜಿದಾರರು ಸಣ್ಣ ಮತ್ತು ಅತಿ ಸಣ್ಣ ರೈತರಾಗಿರಬೇಕು. ಈ ಬಗ್ಗೆ ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ ಪ್ರಮಾಣ ಪತ್ರ ಲಗತ್ತಿಸಬೇಕು. ೧೦) ಗಂಗಾ ಕಲ್ಯಾಣ ಯೋಜನೆಯಡಿ ಅರ್ಜಿದಾರರು ಜಮೀನಿಗೆ ಸಂಬಂಧಿಸಿದಂತೆ ಪಹಣಿ, ಚಕ್ಕುಬಂದಿ, ವಂಶವೃಕ್ಷ ಲಗತ್ತಿಸಬೇಕು. ೧೧) ಅರ್ಜಿಗಳನ್ನು ಸ್ವೀಕರಿಸಲು ಸ್ಥಳೀಯ ದಿನಪತ್ರಿಕೆಗಳಲ್ಲಿ ಏಪ್ರಿಲ್ ತಿಂಗಳಲ್ಲಿ ಜಾಹೀರಾತು ನೀಡಿ ಅರ್ಜಿಗಳನ್ನು ಆಹ್ವಾನಿಸಲಾಗುವುದು. ಆಯಾ ವಿಧಾನಸಭಾ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿ ರಚಿತವಾದ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು.

## ಪರಿಶಿಷ್ಟ ಪಂಗಡಗಳ ಕಲ್ಯಾಣ

ರಾಜ್ಯದ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಕಲ್ಯಾಣಕ್ಕೆ ಸಂಬಂಧಿಸಿದ ಎಲ್ಲ ಕಾರ್ಯಕ್ರಮಗಳೂ ಮೊದಲು ಶಿಕ್ಷಣ ಇಲಾಖೆಯ ಮೂಲಕ, ನಂತರ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಅನುಷ್ಠಾನಗೊಳಿಸಲಾಗುತ್ತಿತ್ತು. ದಿ ೩೦.೮.೧೯೯೪ರ ಆದೇಶದಲ್ಲಿ ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ಪ್ರತ್ಯೇಕ ನಿರ್ದೇಶನಾಲಯವನ್ನು ಸ್ಥಾಪಿಸಲು ಸರ್ಕಾರವು ಅನುಮತಿ ನೀಡಿದ್ದರಿಂದ, ಅದರಂತೆ ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ಪ್ರತ್ಯೇಕ ನಿರ್ದೇಶನಾಲಯವು, ೧೯೯೯ರ ಜನವರಿಯಲ್ಲಿ ದಾವಣಗೆರೆಯಲ್ಲಿ ಪ್ರಾರಂಭಗೊಂಡಿತು. ೧೯೯೯ರ ನವೆಂಬರ್ ತಿಂಗಳಲ್ಲಿ ಬೆಂಗಳೂರಿಗೆ ಸ್ಥಳಾಂತರಗೊಂಡು ಕಾರ್ಯ ನಿರ್ವಹಿಸುತ್ತಿದೆ.

ರಾಜ್ಯದಲ್ಲಿ ೧೯೭೧ರಲ್ಲಿ ಕೈಗೊಂಡ ಜನಗಣತಿ ಪ್ರಕಾರ, ಮೂಲನಿವಾಸಿ ಪಂಗಡಗಳು ಹೆಚ್ಚಿನ ಸಂಖ್ಯೆಯಲ್ಲಿ ಕೇಂದ್ರೀಕೃತಗೊಂಡ ದಕ್ಷಿಣ ಕನ್ನಡ, ಮೈಸೂರು, (ಉಡುಪಿ ಮತ್ತು ಚಾಮರಾಜನಗರ ಜಿಲ್ಲೆಗಳು ರಚನೆಯಾಗುವ ಮೊದಲು) ಕೊಡಗು, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಐದು ಸುಸಂಘಟಿತ ಯೋಜನಾ ಘಟಕಗಳು ಸ್ಥಾಪನೆಗೊಂಡು ಮೂಲನಿವಾಸಿಗಳ ಅಭಿವೃದ್ಧಿಗಾಗಿ ಕಾರ್ಯ ನಿರ್ವಹಿಸುತ್ತಿದ್ದವು. ಪ್ರಸ್ತುತ ರಾಜ್ಯದ ಇದೇ ಐದು ಜಿಲ್ಲೆಗಳಲ್ಲಿ ಅಂದರೆ ಕೊಡಗು, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ (Integrated Tribal Developments Plan) ಸಂಯೋಜಿತ

ಬುಡಕಟ್ಟು ಜನಾಂಗಗಳ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ನಾಯಕ ಹಾಗೂ ಇದರ ತತ್ಸಮಾನ ಪಂಗಡಗಳಾದ ಬೇಡ, ಬೇಡರ್ ಮತ್ತು ವಾಲ್ಮೀಕಿ ಪಂಗಡಗಳು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆಯಾದ ಮೇಲೆ, ಈ ಪಂಗಡದವರು ಇತರ ಎಲ್ಲಾ ಜಿಲ್ಲೆಗಳಲ್ಲಿಯೂ ವಾಸಿಸುತ್ತಿರುವುದರಿಂದ, ಗಿರಿಜನ ಉಪಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಅನುಷ್ಠಾನಗೊಳಿಸುವಂತೆ, ೧೯೯೩ರಲ್ಲಿ ಸರ್ಕಾರವು ನಿರ್ದೇಶನವನ್ನು ನೀಡಿತು.

ಕರ್ನಾಟಕ ರಾಜ್ಯದ ಒಟ್ಟು ಜನಸಂಖ್ಯೆ ೨೦೦೧ರ ಜನಗಣತಿ ಪ್ರಕಾರ ೫,೨೮,೫೦,೫೬೨ ಆಗಿದ್ದು, ಪರಿಶಿಷ್ಟ ಪಂಗಡ ಜನಸಂಖ್ಯೆ ೩೪,೬೩,೯೮೬ ಆಗಿತ್ತು. ಇದು ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡ ೬.೫೫ರಷ್ಟನ್ನು ಪ್ರತಿನಿಧಿಸುತ್ತದೆ. ಕರ್ನಾಟಕದ ಪರಿಶಿಷ್ಟ ಪಂಗಡಗಳ ಜನಸಂಖ್ಯೆಯು ದೇಶದಲ್ಲಿರುವ ಪರಿಶಿಷ್ಟ ಪಂಗಡಗಳ ಒಟ್ಟು ಜನಸಂಖ್ಯೆಯ ಶೇಕಡ ೪.೧೦ರಷ್ಟಿದೆ. ಭಾರತ ಸರ್ಕಾರವು, ೨೦೦೩ರ ಜನವರಿ ಎಂಟರಲ್ಲಿ, 'ಸಿದ್ದಿ' ಬುಡಕಟ್ಟು ಜನಾಂಗವನ್ನು; 'ಮೇದ' ಜನಾಂಗದ ಮೂರು ಪರ್ಯಾಯ ಪದಗಳಾದ ಮೇದಾರಿ, ಬುರುಡ್ ಮತ್ತು ಗೌರಿಗ' ಬುಡಕಟ್ಟುಗಳನ್ನು; ಮತ್ತು ಪಾನ್ಸೆಪರ್ದಿಯ ಒಂದು ಪರ್ಯಾಯ ಪದವಾದ 'ಹರನ್‌ಶಿಕಾರಿ' ಬುಡಕಟ್ಟನ್ನು, ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರ್ಪಡೆಗೊಳಿಸಿದ ಮೇಲೆ, ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡಗಳ ಜನಸಂಖ್ಯೆಯು ೩೭ ಲಕ್ಷಕ್ಕೂ ಹೆಚ್ಚಾಗಿದೆ. ರಾಜ್ಯದಲ್ಲಿ ಪರಿಶಿಷ್ಟ ಪಂಗಡಕ್ಕೆ ನಿಗದಿಸಿರುವ ಮೀಸಲಾತಿಯ ಪ್ರಮಾಣವು ಶೇಕಡ ಮೂರು ಆಗಿರುತ್ತದೆ. ಕೋಷ್ಟಕ ೧೬.೨೮ರಲ್ಲಿ ಪರಿಶಿಷ್ಟ ಪಂಗಡದವರ ತಾಲೂಕುವಾರು ಜನಸಂಖ್ಯೆ ವಿವರವನ್ನು ನೀಡಿದೆ.

**ಕೋಷ್ಟಕ ೧೬.೨೮: ಪರಿಶಿಷ್ಟ ಪಂಗಡದವರ ತಾಲ್ಲೂಕುವಾರು ಜನಸಂಖ್ಯೆ ವಿವರ**

| ಕ್ರ.ಸಂ. | ತಾಲೂಕು | ೨೦೦೧ | | | ೨೦೧೧ | | |
|---|---|---|---|---|---|---|---|
| | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| ೧ | ಚಿಕ್ಕನಾಯಕನಹಳ್ಳಿ | ೮,೩೫೯ | ೮,೧೮೧ | ೧೬,೫೪೦ | ೮,೭೮೧ | ೮,೮೭೩ | ೧೭,೬೫೪ |
| ೨ | ಶಿರಾ | ೧೩,೯೦೧ | ೧೩,೪೯೮ | ೨೭,೩೯೯ | ೧೪,೪೫೪ | ೧೪,೩೧೬ | ೨೮,೭೭೦ |
| ೩ | ಪಾವಗಡ | ೨೦,೭೦೮ | ೧೯,೮೭೧ | ೪೦,೫೭೯ | ೨,೧೧೫೧ | ೨೧,೧೧೭ | ೪೨,೨೬೮ |
| ೪ | ಮಧುಗಿರಿ | ೧೫,೭೮೫ | ೧೫,೧೨೪ | ೩೦,೯೦೯ | ೧೬,೩೫೦ | ೧೬,೨೯೮ | ೩೨,೬೪೮ |
| ೫ | ಕೊರಟಗೆರೆ | ೮,೩೮೨ | ೮,೦೬೩ | ೧೬,೪೪೫ | ೯,೪೩೬ | ೯,೩೯೫ | ೧೮,೮೩೧ |
| ೬ | ತುಮಕೂರು | ೧೫,೦೬೦ | ೧೪,೦೯೩ | ೨೯,೧೫೩ | ೧೭,೭೨೦ | ೧೭,೦೩೫ | ೩೪,೭೫೫ |
| ೭ | ಗುಬ್ಬಿ | ೯,೧೫೦ | ೮,೯೨೧ | ೧೮,೦೭೧ | ೯,೬೨೪ | ೯,೫೩೦ | ೧೯,೧೫೪ |
| ೮ | ತಿಪಟೂರು | ೩,೯೬೮ | ೩,೮೪೨ | ೭,೮೧೦ | ೩,೯೮೪ | ೪,೦೭೦ | ೮,೦೫೪ |
| ೯ | ತುರುವೇಕೆರೆ | ೨,೨೨೮ | ೨,೨೩೧ | ೪,೪೫೯ | ೨,೩೬೧ | ೨,೩೩೯ | ೪,೭೦೦ |
| ೧೦ | ಕುಣಿಗಲ್ | ೧,೨೫೪ | ೧,೨೦೦ | ೨,೪೫೪ | ೧,೪೦೪ | ೧,೩೨೧ | ೨,೭೨೫ |
| ಒಟ್ಟು | | ೯೮,೭೯೫ | ೯೫,೦೨೪ | ೧,೯೩,೮೧೯ | ೧,೦೫,೨೬೫ | ೧,೦೪,೨೯೪ | ೨,೦೯,೫೫೯ |

**ಆಧಾರ: ಜನಗಣತಿ–೨೦೦೧ ಹಾಗೂ ೨೦೧೧**

ತುಮಕೂರು ಜಿಲ್ಲೆಯಲ್ಲಿ ೨೦೦೧ರ ಜನಗಣತಿಯಂತೆ ಒಟ್ಟು ಜನಸಂಖ್ಯೆ ೨೫೮೪೭೧೧ ಇದ್ದು, ಇದರಲ್ಲಿ ಪರಿಶಿಷ್ಟ ಪಂಗಡದವರ ಜನಸಂಖ್ಯೆ ೧,೯೩,೮೧೯ ಇರುತ್ತದೆ. ಅಂದರೆ ಜಿಲ್ಲೆಯ ಒಟ್ಟು ಜನಸಂಖ್ಯೆಯ ಶೇಕಡ ೭.೫ರಷ್ಟು ಪರಿಶಿಷ್ಟ ಪಂಗಡದವರಾಗಿರುತ್ತಾರೆ. ೨೦೦೧ರ ಜನಗಣತಿ ಪ್ರಕಾರ ಈ ಜಿಲ್ಲೆಯ ಪರಿಶಿಷ್ಟ ಪಂಗಡದ ಸಾಕ್ಷರತೆ ಮಟ್ಟ ಒಟ್ಟು ೫೯.೭ರಷ್ಟು ಇದ್ದು, ಇದರಲ್ಲಿ ಗಂಡಸರ ಸಾಕ್ಷರತೆ ಮಟ್ಟ ಶೇ.೪೩.೮ರಷ್ಟೂ, ಹೆಂಗಸರ ಸಾಕ್ಷರತೆ ಮಟ್ಟ ೪೮.೭ರಷ್ಟಿತ್ತು.

## ಪರಿಶಿಷ್ಟ ಪಂಗಡದವರ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು

ದೂರದ ಗ್ರಾಮಗಳಿಂದ ಬಂದು ಶಾಲೆಗಳಲ್ಲಿ ಓದುತ್ತಿರುವ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ, ಅವರ ವಿದ್ಯಾಭ್ಯಾಸವನ್ನು ಮುಂದುವರಿಸಲು ನೆರವಾಗುವ ಸಲುವಾಗಿ, ಈ ನಿಲಯಗಳನ್ನು ನಡೆಸಲಾಗುತ್ತಿದ್ದು, ಉಚಿತ ಊಟ, ವಸತಿ, ಲೇಖನ ಸಾಮಗ್ರಿಗಳು, ಸಮವಸ್ತ್ರ ಮತ್ತು ಇತರ ಅಗತ್ಯ ಸೌಲಭ್ಯಗಳನ್ನು; ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ನಿಗದಿಸಲಾಗಿರುವ ದರಗಳಲ್ಲಿಯೇ, ಈ ನಿಲಯಗಳಲ್ಲಿಯೂ ಒದಗಿಸಲಾಗುತ್ತದೆ. ಈ ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡಗಳ

ಕಲ್ಯಾಣ ಇಲಾಖೆಯ ಮೂಲಕ ನಿರ್ವಹಿಸಲಾಗುತ್ತಿರುವ ಐದು ಸರ್ಕಾರಿ (೨೫೯) ಹಾಗೂ ಒಂದು (೪೦) ಅನುದಾನಿತ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು ಈ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಆವರಣದಲ್ಲಿ ನೀಡಿರುವ ಅಂಕಿ ಅಂಶಗಳು ವಿದ್ಯಾರ್ಥಿಗಳ ಸಂಖ್ಯೆಯನ್ನು ಸೂಚಿಸುತ್ತದೆ. ಜಿಲ್ಲೆಯ ತುಮಕೂರಿನಲ್ಲಿ ಒಂದು ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯವಿದ್ದು, ೧೦೩ ಮಕ್ಕಳು ಇದರ ಸೌಲಭ್ಯ ಪಡೆಯುತ್ತಿದ್ದರು. ಪಾವಗಡ ಹಾಗೂ ತುಮಕೂರಿನಲ್ಲಿ ಒಂದೊಂದು ಬಾಲಕಿಯರ ಸರ್ಕಾರಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿದ್ದು ಕ್ರಮವಾಗಿ ೫೦ ಹಾಗೂ ೧೨೦ ಬಾಲಕಿಯರು ಇದರ ಸೌಲಭ್ಯ ಪಡೆಯುತ್ತಿದ್ದರು. ಅನುದಾನಿತ ಮೆಟ್ರಿಕ್ ನಂತರದ ಯಾವುದೇ ವಿದ್ಯಾರ್ಥಿ ನಿಲಯಗಳು ಜಿಲ್ಲೆಯಲ್ಲಿ ಇರುವುದಿಲ್ಲ. ಹೆಚ್ಚು ವಿವರಗಳಿಗೆ ಕೋಷ್ಟಕ ೧೬.೨೯ ರಲ್ಲಿ ನೋಡಿ.

**ಕೋಷ್ಟಕ ೧೬.೨೯: ೨೦೧೩-೧೪ ರ ಸರ್ಕಾರಿ ಮತ್ತು ಅನುದಾನಿತ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು ಮತ್ತು ವಿದ್ಯಾರ್ಥಿಗಳ ಸಂಖ್ಯೆಯ ವಿವರ**

| ಕ್ರ ಸಂ | ತಾಲೂಕಿನ ಹೆಸರು | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಸಂಖ್ಯೆ | | | ವಿದ್ಯಾರ್ಥಿಗಳ ಸಂಖ್ಯೆ | | |
|---|---|---|---|---|---|---|---|
| | | ಬಾಲಕರು | ಬಾಲಕಿಯರು | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು |
| ೧ | ತುಮಕೂರು | ೨ | ೦ | ೨ | ೧೦೫ | ೦ | ೧೦೫ |
| ೨ | ಗುಬ್ಬಿ | ೦ | ೦ | ೦ | ೦ | ೦ | ೦ |
| ೩ | ಕುಣಿಗಲ್ | ೦ | ೦ | ೦ | ೦ | ೦ | ೦ |
| ೪ | ತಿಪಟೂರು | ೦ | ೦ | ೦ | ೦ | ೦ | ೦ |
| ೫ | ತುರುವೇಕೆರೆ | ೦ | ೦ | ೦ | ೦ | ೦ | ೦ |
| ೬ | ಚಿಕ್ಕನಾಯಕನಹಳ್ಳಿ | ೦ | ೦ | ೦ | ೦ | ೦ | ೦ |
| ೭ | ಶಿರಾ | ೦ | ೦ | ೦ | ೦ | ೦ | ೦ |
| ೮ | ಕೊರಟಗೆರೆ | ೦ | ೦ | ೦ | ೦ | ೦ | ೦ |
| ೯ | ಮಧುಗಿರಿ | ೧ | ೦ | ೧ | ೫೪ | ೦ | ೫೪ |
| ೧೦ | ಪಾವಗಡ | ೨ | ೦ | ೨ | ೧೦೦ | ೦ | ೧೦೦ |
| **ಒಟ್ಟು** | | **೫** | **೦** | **೫** | **೨೫೯** | **೦** | **೨೫೯** |

**ಆಧಾರ: ಜಿಲ್ಲಾ ಪರಿಶಿಷ್ಟ ಪಂಗಡಗಳ ಕಲ್ಯಾಣಾಧಿಕಾರಿ, ತುಮಕೂರು.**

ಜಿಲ್ಲೆಯಲ್ಲಿ ೨೦೧೪ರ ಮಾರ್ಚ್ ಅಂತ್ಯಕ್ಕೆ ಪಾವಗಡ ಮತ್ತು ತುಮಕೂರಿನಲ್ಲಿ ಪರಿಶಿಷ್ಟ ಜಾತಿಯವರಿಗಾಗಿ ಆಶ್ರಮ ವಸತಿ ಶಾಲೆಗಳಿದ್ದು ೨೦೮ ವಿದ್ಯಾರ್ಥಿಗಳು ಸೌಲಭ್ಯ ಪಡೆದಿದ್ದರು ಹಾಗೆಯೇ ಚಿಕ್ಕನಾಯಕನಹಳ್ಳಿ, ಕೊರಟಗೆರೆ ಹಾಗೂ ತುರುವೇಕೆರೆಗಳಲ್ಲಿ ಪರಿಶಿಷ್ಟ ಪಂಗಡದವರಿಗಾಗಿ ಆಶ್ರಮ ವಸತಿ ಶಾಲೆಗಳಿದ್ದು ೯೨ ವಿದ್ಯಾರ್ಥಿಗಳು ಸೌಲಭ್ಯ ಪಡೆದಿದ್ದರು.

## ಪ್ರತಿಭಾವಂತರಿಗೆ ನಗದು ಬಹುಮಾನ

ಜಿಲ್ಲೆಯಲ್ಲಿ ಪರಿಶಿಷ್ಟ ಪಂಗಡದ ಮೆಟ್ರಿಕ್ ಪೂರ್ವ ಮತ್ತು ನಂತರದ ವಿದ್ಯಾರ್ಥಿಗಳಿಗೆ ಭಾರತ ಸರ್ಕಾರದ ವಿದ್ಯಾರ್ಥಿ ವೇತನವಲ್ಲದೆ, ರಾಜ್ಯ ಸರ್ಕಾರದ ವಿದ್ಯಾರ್ಥಿ ವೇತನವನ್ನೂ, ಪ್ರತಿಭಾವಂತರಿಗೆ ನಗದು ಬಹುಮಾನಗಳನ್ನೂ ಮಂಜೂರು ಮಾಡುವಂತಹ ಕಾರ್ಯಕ್ರಮಗಳೂ ಮತ್ತು ಪರಿಶಿಷ್ಟ ಜಾತಿಯವರಿಗಾಗಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಇರುವ ಇನ್ನಿತರ ಕಾರ್ಯಕ್ರಮಗಳೂ ಕೂಡ ಸಮಾನ ನಿಯಮಗಳನ್ನನುಸರಿಸಿ ಪರಿಶಿಷ್ಟ ಪಂಗಡದವರಿಗಾಗಿ ಈ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿದೆ.

ಭಾರತ ಸರ್ಕಾರವು ನಿಗದಿ ಪಡಿಸಿರುವ ವಿದ್ಯಾರ್ಥಿ ವೇತನದ ದರಕ್ಕಿಂತಲೂ ಹೆಚ್ಚಾಗಿ, ನಿಲಯಾರ್ಥಿಗಳಿಗೆ ಆಹಾರಕ್ಕಾಗಿ ಖರ್ಚು ಮಾಡಿದ್ದಲ್ಲಿ, ರಾಜ್ಯ ಸರ್ಕಾರದಿಂದ ಹೆಚ್ಚುವರಿ ಊಟ ಮತ್ತು ವಸತಿಯ ವೆಚ್ಚಕ್ಕಾಗಿ ಅನುದಾನ ಮಂಜೂರು ಮಾಡಲಾಗುತ್ತದೆ.

## ಪರಿಶಿಷ್ಟ ಪಂಗಡದವರ ಉಪ ಯೋಜನೆ

ಪರಿಶಿಷ್ಟ ಪಂಗಡದವರ ಸರ್ವತೋಮುಖ ಅಭಿವೃದ್ಧಿಗಾಗಿ, ಗಿರಿಜನ ಉಪಯೋಜನೆಯನ್ನು ೧೯೭೬-೭೭ನೇ ಸಾಲಿನಿಂದ ಪ್ರಾರಂಭಿಸಲಾಗಿದೆ. ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯ ಕಾರ್ಯಕ್ರಮಗಳನ್ನು ೧೯೯೨ರಿಂದ ರಾಜ್ಯದ ಎಲ್ಲ ಜಿಲ್ಲೆಗಳಿಗೂ ವಿಸ್ತರಿಸಲಾಗಿದೆ. ಈ ವರ್ಗಕ್ಕೆ ಸೇರಿದ ಕುಟುಂಬಗಳನ್ನು, ಬಡತನ ರೇಖೆಗಿಂತ ಮೇಲೆ ತರಲು ಸಹಕಾರಿಯಾಗುವಂತಹ ಸವಲತ್ತುಗಳನ್ನು ಅವರಿಗೆ ಒದಗಿಸುವುದು, ಅವರ ಕಲೆ ಮತ್ತು ಸಂಸ್ಕೃತಿಯನ್ನು ಕಾಪಾಡಲು ಸಹಕಾರಿಯಾಗುವಂತಹ ನೀತಿ ನಿಯಮಗಳನ್ನು ಜಾರಿಗೊಳಿಸುವುದು, ಈ ವರ್ಗದ ಹಾಡಿ ಹಾಗೂ ಕಾಲೋನಿಗಳಿಗೆ ಕನಿಷ್ಠ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನವನ್ನು ತೀವ್ರಗೊಳಿಸುವುದು, ಮತ್ತು ಪರಿಶಿಷ್ಟ ಪಂಗಡದವರ ಪ್ರಗತಿಗಾಗಿ ಆರ್ಥಿಕ ಸೌಲಭ್ಯಗಳು, ಶೈಕ್ಷಣಿಕ ಕಾರ್ಯಕ್ರಮಗಳು, ವಸತಿ, ಕುಡಿಯುವ ನೀರು, ಕಾಲೋನಿಗಳಿಗೆ ವಿದ್ಯುತ್ ಸಂಪರ್ಕ, ರಸ್ತೆ ಚರಂಡಿ ಕಾಮಗಾರಿಗಳು, ಆರೋಗ್ಯ ಕೇಂದ್ರಗಳ ಸ್ಥಾಪಿಸುವುದು-ಇವೇ ಮೊದಲಾದ ಅನುಕೂಲಗಳನ್ನು ಈ ಗಿರಿಜನ ಉಪಯೋಜನೆಯಡಿ ವಿವಿಧ ಇಲಾಖೆಗಳ ಮೂಲಕ ಮಾಡಿಕೊಡಲಾಗುತ್ತದೆ.

ಸಂವಿಧಾನದ ಪರಿಚ್ಛೇದ ೨೭೫(೧) ರಡಿಯಲ್ಲಿ ೨೦೧೧-೧೨ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಮೂಲ ನಿವಾಸಿ ಸಮುದಾಯಗಳ ಅಭಿವೃದ್ಧಿಗಾಗಿ ಶಿರಾ, ಮಧುಗಿರಿ, ತುಮಕೂರು, ಗುಬ್ಬಿ, ಪಾವಗಡ, ಕೊರಟಗೆರೆ, ತಿಪಟೂರು, ಹಾಗೂ ತುರುವೇಕೆರೆ ಪ್ರದೇಶಗಳನ್ನು ಆಯ್ಕೆ ಮಾಡಿಕೊಂಡಿದ್ದು, ಈ ಪ್ರದೇಶಗಳಲ್ಲಿ ಚರಂಡಿ ಮತ್ತು ಸಮುದಾಯ ಭವನಗಳ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ.

## ಜಿಲ್ಲಾ ಕಾನೂನು ನೆರವು ಸಮಿತಿ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಉಚಿತ ಕಾನೂನು ನೆರವನ್ನು ನೀಡುವ ಸಲುವಾಗಿ ಕಾನೂನು ನೆರವು ಸಮಿತಿಯು ೧೯೮೩ರಿಂದ ಕಾರ್ಯ ನಿರ್ವಹಿಸುತ್ತಿದೆ. ಈ ಯೋಜನೆಯಡಿ ವಕೀಲರ ವಕಾಲತ್ತು ಶುಲ್ಕ ಮತ್ತು ಕೋರ್ಟ್ ಸ್ಟ್ಯಾಂಪ್ ಶುಲ್ಕದ ವೆಚ್ಚವನ್ನು ಭರಿಸಲಾಗುತ್ತದೆ.

## ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ

ಪರಿಶಿಷ್ಟ ಪಂಗಡಗಳ ಜನರು ಅತ್ಯಂತ ಹಿಂದುಳಿದ ಜನಾಂಗದವರಾಗಿದ್ದು, ಅವರ ಸರ್ವತೋಮುಖ ಬೆಳವಣಿಗೆಗೆ ಹಾಗೂ ಅವರ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಲು ಕರ್ನಾಟಕ ಸರ್ಕಾರವು ಕಂಪನಿ ಕಾಯ್ದೆ ೧೯೫೬ರ ಅಡಿಯಲ್ಲಿ ದಿ:೨೭-೦೫-೨೦೦೬ ರಂದು ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿರುತ್ತದೆ. ನಿಗಮದ ವಿವಿಧ ಯೋಜನೆಗಳ ಅನುಷ್ಠಾನಕ್ಕೆ ರಾಜ್ಯ ಸರ್ಕಾರವು ಪ್ರತಿ ವರ್ಷ ಆಯವ್ಯಯದಲ್ಲಿ ಹಣವನ್ನು ನಿಗದಿಪಡಿಸುತ್ತದೆ. ನಿಗದಿಪಡಿಸಿದ ಹಣಕ್ಕೆ ತಕ್ಕಂತೆ ಗುರಿಯನ್ನು ನಿಗದಿಪಡಿಸಲಾಗುವುದು. ನಿಗಮದ ಅಧಿಕೃತ ಷೇರು ಬಂಡವಾಳವು ರೂ. ೫.೦೦ ಕೋಟಿ ಆಗಿದ್ದು, ಇದರಲ್ಲಿ ರಾಜ್ಯ ಸರ್ಕಾರದ ಪಾಲು ಶೇ. ೫೧, ಕೇಂದ್ರ ಸರ್ಕಾರದ ಪಾಲು ಶೇ.೪೯ ಆಗಿರುತ್ತದೆ.

## ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಇಲಾಖೆ

'ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ' ಇಲಾಖೆಯು, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಮಹಿಳೆಯರ ಹಾಗೂ ನಿರ್ಲಕ್ಷ್ಯಕ್ಕೆ ಒಳಗಾದ ಮಕ್ಕಳ ಸರ್ವ ರೀತಿಯ ಅಭಿವೃದ್ಧಿಗಾಗಿ ಕಾರ್ಯ ನಿರ್ವಹಿಸುತ್ತಿದೆ. ಹಿಂದುಳಿದ ಮಹಿಳೆಯರನ್ನು ಆರ್ಥಿಕ ಮುಖ್ಯ ವಾಹಿನಿಯಲ್ಲಿ ತೊಡಗಿಸಿ ಅವರಿಗೆ ಸಮಾನತೆಯನ್ನು ಮತ್ತು ಸಾಮಾಜಿಕ ನ್ಯಾಯವನ್ನು ಗಳಿಸಿಕೊಡುವ ಮೂಲಕ ಸಾಮಾಜಿಕ ಸುಧಾರಣೆ ತರುವ ಉದ್ದೇಶವನ್ನು ಈ ಇಲಾಖೆಯು ಹೊಂದಿರುತ್ತದೆ. ಮಹಿಳೆಯರಲ್ಲಿ ಅರಿವು ಮೂಡಿಸುವಿಕೆ, ಸಶಕ್ತೀಕರಣ, ಶಿಕ್ಷಣ, ತರಬೇತಿ, ಘನತೆ-ಗೌರವಗಳನ್ನು ದೊರಕಿಸಿಕೊಡುವಂತಹ ಇನ್ನಿತರ ಪ್ರಮುಖ ಕಾರ್ಯಗಳ ನಿರ್ವಹಣೆ, ಸ್ವಸಹಾಯ ಗುಂಪುಗಳ ರಚನೆ, ಆದಾಯೋತ್ಪನ್ನ ಚಟುವಟಿಕೆಗಳು, ಗ್ರಾಮಾಂತರ ಪ್ರದೇಶದ ಹೆಣ್ಣು ಮಕ್ಕಳ ಆರೋಗ್ಯ ಪೋಷಣೆ ಇವೇ ಮುಂತಾದ ಅಂಶಗಳಿಗೆ ಹೆಚ್ಚಿನ ಒತ್ತು ಕೊಟ್ಟು, ಈ ಇಲಾಖೆಯಿಂದ ಹಲವಾರು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಮಕ್ಕಳ ಉಳಿವು, ರಕ್ಷಣೆ ಮತ್ತು ಅಭಿವೃದ್ಧಿ ಯೋಜನೆಗಳನ್ನೂ ಇದು ಅನುಷ್ಠಾನಗೊಳಿಸುತ್ತಿದೆ.

ಜಿಲ್ಲಾ ಪಂಚಾಯಿತಿಗೆ ಜಿಲ್ಲಾ ವಲಯ ಕಾರ್ಯಕ್ರಮಗಳ ಅನುಷ್ಠಾನದ ಜವಾಬ್ದಾರಿಯನ್ನು ವಹಿಸಲಾಗಿದ್ದು, ಪ್ರತಿ ಜಿಲ್ಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು, ತಮ್ಮ ಕಛೇರಿಯಲ್ಲಿರುವ ಒಬ್ಬ ಸಹಾಯಕ ನಿರ್ದೇಶಕರು ಮತ್ತು ಒಬ್ಬ ಕಾರ್ಯಕ್ರಮ ಅಧಿಕಾರಿ ಹಾಗೂ ಇತರ ಲಿಪಿಕ ಸಿಬ್ಬಂದಿಗಳ ನೆರವಿನಿಂದ ಇಲಾಖೆಯ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುತ್ತಾರೆ. ಇಲಾಖೆಯ ಸುಸಂಘಟಿತ ಶಿಶು ಅಭಿವೃದ್ಧಿ ಯೋಜನೆ, ಅಂಗನವಾಡಿ ಕೇಂದ್ರಗಳು, ಪೂರಕ ಪೌಷ್ಟಿಕ ಆಹಾರ ಯೋಜನೆ, ಬಾಲಿಕಾ ಸಮೃದ್ಧಿ ಯೋಜನೆ, ಸ್ತ್ರೀ ಶಕ್ತಿ ಯೋಜನೆ, ಸುಧಾರಣಾ ಸಂಸ್ಥೆಗಳ ಅನುಷ್ಠಾನ, ವೃದ್ಧರ ಮತ್ತು ಅಶಕ್ತರ ಯೋಜನೆ, ಉದ್ಯೋಗಿನಿ ಮಾರುಕಟ್ಟೆ ಸಹಾಯ ಯೋಜನೆ, ನಮ್ಮ ಮಗಳು ನಮ್ಮ ಶಕ್ತಿ ಯೋಜನೆ, ಅಂಗನವಾಡಿ ಕಟ್ಟಡಗಳ ನಿರ್ಮಾಣ ಯೋಜನೆ, ವೃತ್ತಿ ಶಿಕ್ಷಣ ಯೋಜನೆ, ಮಹಿಳಾ ಕಾನೂನು ಪದವೀಧರರಿಗೆ ಧನಸಹಾಯ, ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳಿಗೆ ಹಾಜರಾತಿ ವಿದ್ಯಾರ್ಥಿವೇತನ, ಭಾಗ್ಯಲಕ್ಷ್ಮಿ ಯೋಜನೆ, ವಿಧವೆಯರ ಪುನರ್ವಿವಾಹಕ್ಕಾಗಿ ಹಣಕಾಸು ನೆರವು ಹಾಗೂ ಕಿತ್ತೂರು ಚೆನ್ನಮ್ಮ ಮಕ್ಕಳ ರಾಷ್ಟ್ರೀಯ ಪುರಸ್ಕಾರ ಯೋಜನೆಇವು ಈ ಕಛೇರಿಯಿಂದ ಕಾರ್ಯಗತಗೊಳಿಸಲಾಗುತ್ತಿರುವ ಕಾರ್ಯಕ್ರಮಗಳಾಗಿವೆ.

ಇಲಾಖೆಯ ಕಾರ್ಯಕ್ರಮಗಳನ್ನು ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ. ಮಹಿಳಾ ಅಭಿವೃದ್ಧಿಗಾಗಿ ಕಾರ್ಯಕ್ರಮಗಳು, ಮಕ್ಕಳ ಅಭಿವೃದ್ಧಿಗಾಗಿ ಕಾರ್ಯಕ್ರಮಗಳು ಹಾಗೂ ಸಾಮಾಜಿಕ ಅಭಿವೃದ್ಧಿಗಾಗಿ ಕಾರ್ಯಕ್ರಮಗಳು

### ೧) ಮಹಿಳಾ ಅಭಿವೃದ್ಧಿಗಾಗಿ ಕಾರ್ಯಕ್ರಮಗಳು

**ಅ) ಸ್ತ್ರೀ ಶಕ್ತಿ ಯೋಜನೆ:** ಈ ಯೋಜನೆಯನ್ನು ರಾಜ್ಯದಲ್ಲಿ ೨೦೦೦ನೇ ಅಕ್ಟೋಬರ್ ತಿಂಗಳಿಂದ ಜಾರಿಗೆ ತರಲಾಗಿದೆ. ರಾಜ್ಯದಲ್ಲಿ ಬಹಳ ಅಲ್ಪಾವಧಿಯಲ್ಲೇ ಅತ್ಯಂತ ಯಶಸ್ವಿಯಾಗಿ ನಡೆಯುತ್ತಿರುವ ಕಾರ್ಯಕ್ರಮವೆಂದರೆ ಈ ಸ್ತ್ರೀ ಶಕ್ತಿ ಯೋಜನೆ. ರಾಜ್ಯದ ಲಕ್ಷಾಂತರ ಸ್ತ್ರೀಯರು ಈ ಯೋಜನೆಯಡಿ ಆರ್ಥಿಕವಾಗಿ ಮಾತ್ರವಲ್ಲದೆ, ಹಣಕಾಸು ವ್ಯವಹಾರ, ಓದು-ವಿದ್ಯೆಗಳಲ್ಲೂ ಮುಂದುವರಿದಿದ್ದು, ಜೀವನವನ್ನು ಸ್ವತಃ ನಡೆಸಬಲ್ಲೆವೆಂಬ ಆತ್ಮವಿಶ್ವಾಸವನ್ನು ಪಡೆದುಕೊಂಡಿರುವ ಬಗ್ಗೆ, ಸ್ವಾವಲಂಬಿಗಳಾಗಿರುವ ಬಗ್ಗೆ ಮತ್ತು ಸಂಕಷ್ಟದ ಬದುಕನ್ನು ಹಸನು ಮಾಡಿಕೊಂಡಿರುವ ಬಗ್ಗೆ ಉದಾಹರಣೆಗಳು ರಾಜ್ಯದಲ್ಲಿ ದೊರಕುತ್ತವೆ. ಗ್ರಾಮೀಣ ಮಹಿಳೆಯರಲ್ಲಿ ಸ್ವಸಹಾಯ ಗುಂಪುಗಳ ಮೂಲಕ ಆರ್ಥಿಕ ಮತ್ತು ಸಾಮಾಜಿ-ಕ ಸಶಕ್ತತೆಯನ್ನು ತರುವುದು ಸ್ತ್ರೀ ಶಕ್ತಿ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯು ಸ್ತ್ರೀಯರಿಗೆ ಅತ್ಯಂತ ಸಹಕಾರಿಯಾಗಿದೆ.

ವಿವಿಧ ವ್ಯಾಪಾರಗಳ ಮೂಲಕ ಆರ್ಥಿಕವಾಗಿ ಸ್ತ್ರೀಯರು ಸ್ವಾವಲಂಬಿಗಳಾಗಿರುವುದಲ್ಲದೆ, ಮನೋಧಾರ್ಢ್ಯತೆಯನ್ನೂ ಹೊಂದಿ, ಸಮಾಜ ಸೇವಾ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವಷ್ಟು ಹಾಗೂ ಸಾಮಾಜಿಕ ಪಿಡುಗುಗಳ ವಿರುದ್ಧ ಧ್ವನಿ ಎತ್ತುವಷ್ಟು ಆಸಕ್ತಿ ಮತ್ತು ಧೈರ್ಯವನ್ನೂ ಪಡೆದಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಇದರಿಂದ ಅವರಿಗೆ ಸಾಮಾಜಿಕ ಮನ್ನಣೆ ದೊರಕಿಸಿಕೊಡುವಲ್ಲಿಯೂ ಈ ಯೋಜನೆಯು ಒಂದು ಸಾಧನವಾಗಿ ಸಹಾಯಕವಾಗಿದೆ.

ಜಿಲ್ಲೆಯಲ್ಲಿ ಒಟ್ಟು ೧೦,೨೩೪ ಗುಂಪುಗಳನ್ನು ರಚಿಸಲಾಗಿದೆ. ಒಟ್ಟು ರೂ. ೬೨೦.೮೦ ಲಕ್ಷ ಹಣ ಸಂಗ್ರಹಿಸಲಾಗಿದೆ. ೨೦೧೧-೧೨ನೇ ಸಾಲಿನಲ್ಲಿ ಆದಾಯೋತ್ಪನ್ನ ಚಟುವಟಿಕೆಯಲ್ಲಿ ತೊಡಗಿರುವ ೯೪ ಗುಂಪುಗಳಿಗೆ ರೂ. ೫೦೦೦-೦೦ ದಂತೆ ರೂ. ೪.೭೦ ಲಕ್ಷಗಳನ್ನು ಪ್ರೋತ್ಸಾಹಧನವನ್ನಾಗಿ ವಿತರಿಸಲಾಗಿದೆ.

**ಆ) ಸಾಂತ್ವನ (ಮಹಿಳಾ ಸಹಾಯವಾಣಿ):** ಸರ್ಕಾರವು ಈ ಯೋಜನೆಗೆ ೨೦೦೦-೦೧ನೇ ಸಾಲಿನಲ್ಲಿ ಅನುಮೋದನೆ ನೀಡಿದೆ. ಈ ಯೋಜನೆಯಡಿ ಸಾಮಾಜಿಕ ಪಿಡುಗಾದ ವರದಕ್ಷಿಣೆ ಮತ್ತು ಶೋಷಣೆ, ದೌರ್ಜನ್ಯ, ಅತ್ಯಾಚಾರ, ಲೈಂಗಿಕ ಕಿರುಕುಳ, ವೈವಾಹಿಕ ಜೀವನದಲ್ಲಿನ ತೀವ್ರತರ ಸಮಸ್ಯೆಗಳು ಮತ್ತು ಇಂಥ ಇನ್ನಿತರ ಕಷ್ಟಗಳಿಂದ ಯಾತನೆ ಪಡುತ್ತಿರುವ ಮಹಿಳೆಯರಿಗೆ ಕಾನೂನು ನೆರವು, ಆರ್ಥಿಕ ಪರಿಹಾರ, ತಾತ್ಕಾಲಿಕ ಆಸರೆ ಹಾಗೂ ತರಬೇತಿ ನೀಡಿ, ಸ್ವಾವಲಂಬಿಗಳನ್ನಾಗಿ ಮಾಡಿ, ಸ್ಥಿರವಾಗಿ ನಿಲ್ಲುವಂತೆ ಮಾಡುವುದು ಈ ಯೋಜನೆಯ ಉದ್ದೇಶ.

ಈ ಯೋಜನೆಯನ್ನು ನೋಂದಾಯಿತ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಮಹಿಳಾ ಸಹಾಯವಾಣಿ ಕೇಂದ್ರವನ್ನು ಸ್ಥಾಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಕೇಂದ್ರಗಳಿಗೆ ಶುಲ್ಕ ರಹಿತ ದೂರವಾಣಿ ಸಂಖ್ಯೆ ೧೮೧ನ್ನು ಅಳವಡಿಸಲಾಗಿದೆ.

ಈ ಮಹಿಳಾ ಸಹಾಯವಾಣಿಯು ಬೆಳಿಗ್ಗೆ ಆರು ಘಂಟೆಯಿಂದ ರಾತ್ರಿ ಹನ್ನೆರಡು ಘಂಟೆಯವರೆಗೆ ಸಂಕಷ್ಟಕ್ಕೆ ಒಳಗಾದ ಮಹಿಳೆಯರ ಕರೆಗಳನ್ನು ಸ್ವೀಕರಿಸುತ್ತದೆ. ಸಮಸ್ಯೆಯ ಸ್ವರೂಪ ಮತ್ತು ಗಂಭೀರತೆಯ ಆಧಾರದ ಮೇಲೆ ಪ್ರಕರಣಗಳನ್ನು ನೋಂದಾಯಿಸಿಕೊಂಡು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾದ ಜಿಲ್ಲಾ ಮಟ್ಟದ ಸಮಿತಿಯ ಮುಂದಿಟ್ಟು ಅಗತ್ಯ ಸಹಾಯವನ್ನು ಮತ್ತು ಇತರ ಪುನರ್ವಸತಿ ಸೌಲಭ್ಯಗಳನ್ನು ಅರ್ಹತೆಗನುಗುಣವಾಗಿ ಪ್ರತಿ ಪ್ರಕರಣದಲ್ಲಿ ನೀಡಲಾಗುತ್ತದೆ. ದೌರ್ಜನ್ಯಕ್ಕೊಳಗಾದ ಮಹಿಳೆಗೆ ಅವಶ್ಯಕತೆ ಇದ್ದಲ್ಲಿ ರೂ. ೨೦೦೦ದಿಂದ ಗರಿಷ್ಠ ರೂ. ೧೦,೦೦೦ದ ವರೆಗೆ, ತಕ್ಷಣದ ಆರ್ಥಿಕ ನೆರವನ್ನು ನೀಡಲಾಗುವುದು.

ಮಾರ್ಚ್ ೨೦೧೨ರ ಅಂತ್ಯಕ್ಕೆ ೧,೯೪೩ ಪ್ರಕರಣಗಳು ದಾಖಲಾಗಿದ್ದು ೧,೫೫೬ ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ. ತುಮಕೂರು ಜಿಲ್ಲೆಯ ೧೦ ತಾಲ್ಲೂಕುಗಳಲ್ಲಿ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ.

**ಕಾನೂನು ಪದವಿ ಪಡೆದ ಮಹಿಳೆಯರಿಗೆ ಆರ್ಥಿಕ ನೆರವು:** ಮಹಿಳೆಯರು, ಸ್ವತಂತ್ರವಾಗಿ ವಕೀಲಿ ವೃತ್ತಿ ಪ್ರಾರಂಭಿಸಲು ಅಗತ್ಯ ಅನುಭವ ಮತ್ತು ಜ್ಞಾನವನ್ನು ಹೊಂದುವುದಕ್ಕೆ ಅವಕಾಶ ಕಲ್ಪಿಸಿಕೊಡುವ ಉದ್ದೇಶದಿಂದ ಪ್ರತಿ ಪದವೀಧರೆಗೆ, ಮಾಸಿಕ ಒಂದು ಸಾವಿರ ರೂ. ಗಳಂತೆ ಶಿಷ್ಯವೇತನದ ನೆರವು ನೀಡಿ, ಪರಿಣಿತ ವಕೀಲರ ಬಳಿ ವಕೀಲಿ ತರಬೇತಿಯನ್ನು ನಾಲ್ಕು ವರ್ಷಗಳ ಕಾಲ ನೀಡಲಾಗುತ್ತದೆ. ಇದರ ಜೊತೆಗೆ ಕಾನೂನು ಪುಸ್ತಕಗಳನ್ನು ಖರೀದಿಸಲು ರೂ. ೫೦೦ ಗಳನ್ನು ಮತ್ತು ಅವರ ಹೆಸರನ್ನು ಬಾರ್ ಕೌನ್ಸಿಲ್‌ನಲ್ಲಿ ನೊಂದಾಯಿಸಲು ರೂ. ೪೬೦ ಗಳನ್ನು ಈ ಕಾರ್ಯಕ್ರಮದಡಿ ನೀಡಲಾಗುತ್ತದೆ.

ತುಮಕೂರು ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ತರಬೇತಿ ಮತ್ತು ಶಿಷ್ಯ ವೇತನ ಸೌಕರ್ಯವನ್ನು ಪಡೆದ ಫಲಾನುಭವಿಗಳು ಹಾಗೂ ಮಾಡಲಾದ ಖರ್ಚಿನ ವಿವರಗಳನ್ನು ಕೋಷ್ಟಕ ೧೬.೩೦ರಲ್ಲಿ ನೋಡಬಹುದಾಗಿದೆ.

**ಕೋಷ್ಟಕ ೧೬.೩೦: ಜಿಲ್ಲೆಯಲ್ಲಿ ಶಿಷ್ಯ ವೇತನ ಪಡೆದ ಫಲಾನುಭವಿಗಳು ಹಾಗೂ ಮಾಡಲಾದ ಖರ್ಚಿನ ವಿವರ**

| ವರ್ಷ | ಫಲಾನುಭವಿಗಳ ಸಂಖ್ಯೆ | ವೆಚ್ಚ(ರೂ. ಲಕ್ಷಗಳಲ್ಲಿ) |
|---|---|---|
| ೨೦೦೮-೨೦೦೯ | ೧೦ | ೧.೨೦ |
| ೨೦೦೯-೨೦೧೦ | ೧೦ | ೧.೨೦ |
| ೨೦೧೦-೨೦೧೧ | ೧೦ | ೧.೨೦ |
| ೨೦೧೧-೨೦೧೨ | - | - |

ಆಧಾರ: ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತುಮಕೂರು

**ಗ್ರಾಮಾಂತರ ಬಾಲಕಿಯರಿಗೆ ವಸತಿ ನಿಲಯಗಳು:** ಗ್ರಾಮಾಂತರ ಪ್ರದೇಶದ ಹೆಣ್ಣು ಮಕ್ಕಳು ಉನ್ನತ ಶಿಕ್ಷಣ ಪಡೆಯಲು ಅವಕಾಶ ಮಾಡಿಕೊಡುವ ಸಲುವಾಗಿ ಇಲಾಖಾವತಿಯಿಂದ ಹಿಂದುಳಿದ ಪ್ರದೇಶಗಳಲ್ಲಿ ಬಾಲಕಿಯರ ವಸತಿ ನಿಲಯಗಳನ್ನು ನಡೆಸಲಾಗುತ್ತದೆ. ಸರ್ಕಾರದ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಯಲ್ಲಿ ಆರನೇ ತರಗತಿಯಿಂದ ಮೆಟ್ರಿಕ್ ನಂತರದ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಗ್ರಾಮಾಂತರ ಪ್ರದೇಶದಲ್ಲಿ ವಾಸವಾಗಿರುವ ಮತ್ತು ವಾರ್ಷಿಕ ವರಮಾನ ರೂ. ೧೦,೦೦೦ ಗಳಿಗಿಂತ ಹೆಚ್ಚಿಗೆ ಇಲ್ಲದ ಕುಟುಂಬದ ಹೆಣ್ಣು ಮಕ್ಕಳು ಈ ವಸತಿ ನಿಲಯಗಳಲ್ಲಿ ಪ್ರವೇಶ ಪಡೆಯಲು ಅರ್ಹರಾಗುತ್ತಾರೆ.

**ಉದ್ಯೋಗಸ್ಥ ಮಹಿಳೆಯರ ಮಕ್ಕಳಿಗೆ ಶಿಶುಪಾಲನಾ ಕೇಂದ್ರಗಳು:** ಗ್ರಾಮಾಂತರ ಪ್ರದೇಶಗಳಲ್ಲಿ ವ್ಯವಸಾಯ ಹಾಗೂ ಇನ್ನಿತರ ವೃತ್ತಿ ನಿರತ ಮಹಿಳೆಯರ ಮಕ್ಕಳಿಗೆ ಶಿಶು ಪಾಲನಾ ಕೇಂದ್ರಗಳನ್ನು ಪ್ರಾರಂಭಿಸಲು ಮಹಿಳಾ ಮಂಡಳಿಗಳಿಗೆ ಮತ್ತು ಸ್ವಯಂ ಸೇವಾ ಸಂಸ್ಥೆಗಳಿಗೆ ಜಿಲ್ಲಾ ಪಂಚಾಯತಿ ಮೂಲಕ ಅನುದಾನವನ್ನು ಈ ಯೋಜನೆಯಡಿ ನೀಡಲಾಗುತ್ತದೆ. ಇದರಲ್ಲಿ ಮೂರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಆರೈಕೆ, ಮಲಗಲು ವ್ಯವಸ್ಥೆ, ಪೂರಕ ಪೌಷ್ಠಿಕ ಆಹಾರ. ಚುಚ್ಚು ಮದ್ದು, ಆಟಿಕೆಗಳ ವಿತರಣೆ, ಮನೋರಂಜನೆ, ಮುಂತಾದ ಸೇವೆಗಳನ್ನು ಹಗಲು ವೇಳೆಯಲ್ಲಿ ಒದಗಿಸಲಾಗುತ್ತದೆ.

**ಮಾದಕ ವಸ್ತು ಹಾಗೂ ಮದ್ಯವರ್ಜನ ಪುನರ್ವಸತಿ ಕೇಂದ್ರಗಳು:** ಮದ್ಯ ವ್ಯಸನಿಗಳಿಗೆ ಸಲಹೆ, ಚಿಕಿತ್ಸೆ ಮತ್ತು ಪುನರ್ವಸತಿ ವ್ಯವಸ್ಥೆ ಕಲ್ಪಿಸುವಂತಹ ಹಾಗೂ ಮದ್ಯಪಾನದ ದುಷ್ಪರಿಣಾಮಗಳ ಕುರಿತು ತಿಳಿ ಹೇಳಲು ಜಾಗೃತಿ ಶಿಬಿರಗಳನ್ನು ಮತ್ತು ಮದ್ಯವರ್ಜನ ಶಿಬಿರಗಳನ್ನು ಏರ್ಪಡಿಸುವಂತಹ ಕಾರ್ಯಗಳನ್ನು ಮಾಡುವ 'ಮದ್ಯವರ್ಜನ ಪುನರ್ವಸತಿ ಕೇಂದ್ರ'ಗಳನ್ನು ನಡೆಸಲು ಭಾರತ ಸರ್ಕಾರವು ಅನುದಾನವನ್ನು ಮಂಜೂರು ಮಾಡುತ್ತದೆ. ಆರ್ಥಿಕವಾಗಿ ಸಬಲವಿರುವ ಹಾಗೂ ಈ ಕ್ಷೇತ್ರದಲ್ಲಿ ಉತ್ತಮ ಪರಿಣಿತಿಯ ಹಿನ್ನೆಲೆಯುಳ್ಳ ಸಂಸ್ಥೆಗಳಿಗೆ ಈ ಅನುದಾನವನ್ನು ಕೊಡಲಾಗುತ್ತದೆ.

ಭಾರತ ಸರ್ಕಾರವು ರಾಜ್ಯಕ್ಕೆ ಇಂಥ ೨೮ ಮದ್ಯವರ್ಜನ ಪುನರ್ವಸತಿ ಕೇಂದ್ರಗಳನ್ನು ಮಂಜೂರು ಮಾಡಿದ್ದು ಇವುಗಳಲ್ಲಿ ಇಪ್ಪತ್ತೆಂಟು ಕೇಂದ್ರಗಳು ರಾಜ್ಯದಲ್ಲಿವೆ. ಈ ೨೮ರಲ್ಲಿ ಎರಡು ಕೇಂದ್ರಗಳು ತುಮಕೂರಿನಲ್ಲಿವೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೧೬.೩೧ ಅನ್ನು ನೋಡಿ.

**ಕೋಷ್ಟಕ ೧೬.೩೧: ಮಾದಕ ವಸ್ತು ಹಾಗೂ ಮದ್ಯವರ್ಜನ ಪುನರ್ವಸತಿ ಕೇಂದ್ರಗಳ ಹೆಸರು ಹಾಗೂ ಇವುಗಳನ್ನು ನಡೆಸುತ್ತಿರುವ ಸೇವಾ ಸಂಸ್ಥೆಗಳ ವಿವರ**

| ಕ್ರ ಸಂ | ಸ್ವಯಂ ಸೇವಾ ಸಂಸ್ಥೆಯ ಹೆಸರು ಮತ್ತು ವಿಳಾಸ | ಡಿ–ಅಡಿಕ್ಷನ್ ಸೆಂಟರ್ ನಡೆಸುತ್ತಿರುವ ವಿಳಾಸ |
|---|---|---|
| ೧ | ಶ್ರೀ ಮಾಣಿಕ್ಯಧಾರಾ ಎಜುಕೇಷನ್ ಸೊಸೈಟಿ, ಎಸ್. ಎಸ್.ಪುರಂ, ತುಮಕೂರು | ಎಸ್.ಎಂ.ಇ.ಎಸ್. ಡಿ–ಅಡಿಕ್ಷನ್ ಕಂ ರಿಹ್ಯಾಬಿಲಿಟೇಷನ್ ಸೆಂಟರ್, ಎಂ.ಎಂ.ಎಸ್.ರೋಡ್. ಬೆಂಗಳೂರು |
| ೨ | ಅಭ್ಯುದಯ ಸೆಂಟರ್ ಫಾರ್ ಹ್ಯುಮಾನಿಟಿ ಅಂಡ್ ರೂರಲ್ ಡೆವೆಲಪ್‌ಮೆಂಟ್, ಎಸ್, ಎಸ್. ಪುರಂ, ತುಮಕೂರು | ಆಚರ್ಪ್ ಡಿ–ಅಡಿಕ್ಷನ್ ಕಂ ರಿಹ್ಯಾಬಿಲಿಟೇಷನ್ ಸೆಂಟರ್, ದೋಭಿಘಾಟ್, ತುಮಕೂರು |

**ಆಧಾರ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಾರ್ಷಿಕ ವರದಿ, ತುಮಕೂರು**

**ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ:** ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಪ್ರತಿ ವರ್ಷ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮಾರ್ಚ್ ಎಂಟರಂದು ಇಲಾಖೆಯ ಮೂಲಕ ಆಚರಿಸುವ ಕಾರ್ಯಕ್ರಮವಿದೆ. ಮಹಿಳೆಯ ಪ್ರಗತಿಗಾಗಿ ಐದು ವರ್ಷಗಳ ಕಾಲ ಸತತವಾಗಿ ಶ್ರಮಿಸಿದ ಸ್ವಯಂ ಸೇವಾ ಸಂಸ್ಥೆಗೆ ಮತ್ತು ಸಾಹಿತ್ಯ, ಕಲೆ, ಶಿಕ್ಷಣ, ಮಹಿಳಾಭಿವೃದ್ಧಿ, ಮುಂತಾದ ಕ್ಷೇತ್ರಗಳಲ್ಲಿ ಸತತವಾಗಿ ತೊಡಗಿದ ಮಹಿಳೆಯರಿಗೆ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಕಿತ್ತೂರು ರಾಣಿ ಚೆನ್ನಮ್ಮನ ಹೆಸರಿನಲ್ಲಿ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಪ್ರಶಸ್ತಿ ಪತ್ರಗಳೊಂದಿಗೆ, ಸ್ವಯಂ ಸೇವಾ ಸಂಸ್ಥೆಗೆ ಕೊಡುವ ಪ್ರಶಸ್ತಿಯು ರೂ. ೨೫,೦೦೦ ಗಳನ್ನೂ; ವೈಯುಕ್ತಿಕ ಪ್ರಶಸ್ತಿಯು ರೂ. ೧೦,೦೦೦ ಗಳನ್ನೂ ಒಳಗೊಂಡಿರುತ್ತದೆ.

**ರಾಜ್ಯ ವಲಯದ ಯೋಜನೆಯಡಿಯಲ್ಲಿ ಗ್ರಾಮಾಂತರ ಪ್ರದೇಶದ ಹೆಣ್ಣು ಮಕ್ಕಳಿಗೆ ಶಿಷ್ಯ ವೇತನ:** ಈ ಯೋಜನೆಯಡಿ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳು ಶಾಲೆ ಬಿಡುವುದನ್ನು ತಪ್ಪಿಸಲು ಹಾಗೂ ಮಹಿಳೆಯರ ಸಾಕ್ಷರತೆಯನ್ನು ಹೆಚ್ಚಿಸುವ ಉದ್ದೇಶದಿಂದ, ಕನಿಷ್ಠ ಶೇಕಡ ೮೦ ಹಾಜರಾತಿ ಪಡೆದು ಉತ್ತೀರ್ಣರಾದ ಐದರಿಂದ ಹತ್ತನೇ ತರಗತಿಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿನಿಯರಿಗೆ, ಹತ್ತು ತಿಂಗಳ ಅವಧಿಗೆ ಶಿಷ್ಯ ವೇತನವನ್ನು ಕೊಡಲಾಗುತ್ತಿದೆ. ಈ ಯೋಜನೆಯಡಿ ಸೌಲಭ್ಯ ಪಡೆಯುತ್ತಿರುವ ವಿದ್ಯಾರ್ಥಿನಿಯ ಕುಟುಂಬದ ವಾರ್ಷಿಕ ವರಮಾನ ರೂ. ೧೦,೦೦೦ಕ್ಕಿಂತ ಮೀರಿರಬಾರದು ಮತ್ತು ಆ ಬಾಲಕಿಯು ೨೦,೦೦೦ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಹಳ್ಳಿಯ ನಿವಾಸಿಯಾಗಿರಬೇಕಾದುದು ನಿಯಮ.

ಮೇಲಿನವಲ್ಲದೆ, ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನೆ, ಮಹಿಳೆಯರಿಗೆ ಹಾಗೂ ಬಾಲಕಿಯರಿಗೆ ವೃತ್ತಿ ತರಬೇತಿ ಪಡೆಯಲು ಧನಸಹಾಯ ಯೋಜನೆ, ವರದಕ್ಷಿಣೆ ನಿಷೇಧ ಕಾಯ್ದೆ ಹಾಗೂ ನಿಯಮದ ಅನುಷ್ಠಾನದ ಬಗ್ಗೆ ಕಾರ್ಯಾಗಾರ, ನಿರ್ಗತಿಕ ವಿಧವೆಯರ ಪುನರ್‌ವಿವಾಹಕ್ಕೆ ಹಾಗೂ ದೇವದಾಸಿಯರ ವಿವಾಹಕ್ಕೆ ಹಣಕಾಸಿನ ನೆರವು ಮುಂತಾದ ಕಾರ್ಯಕ್ರಮಗಳನ್ನೂ ಇಲಾಖೆಯು ಕಾರ್ಯರೂಪಕ್ಕೆ ತರುತ್ತಿದೆ.

**ಮಹಿಳಾ ಮಂಡಳಿಗಳಿಗೆ ಆರ್ಥಿಕ ನೆರವು:** ಜಿಲ್ಲೆಯಲ್ಲಿ ಒಟ್ಟು ೨,೫೦೦ ಮಹಿಳಾ ಮಂಡಳಿಗಳು ಕಾರ್ಯ ನಿರ್ವಹಿಸುತ್ತಿವೆ. ಈ ಯೋಜನೆಯಡಿ, ಗುಡಿ ಕೈಗಾರಿಕೆಗಳಿಗೆ ಮತ್ತು ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗೆ ಅಗತ್ಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅನುವಾಗುವಂತೆ, ಮಂಡಳಿಗಳು ದೃಢವಾಗಿ ನಿಲ್ಲುವಂತಾಗಲು ಪ್ರತಿ ವರ್ಷ

ಪ್ರತಿ ಮಂಡಳಿಗೆ ರೂ. ೧,೦೦೦ಗಳನ್ನು ಐದು ವರ್ಷಗಳವರೆಗೆ ಅನುದಾನವಾಗಿ ನೀಡಲಾಗುತ್ತಿತ್ತು. ಆ ನಂತರದಲ್ಲಿ ಈ ಅನುದಾನದ ಮೊತ್ತವನ್ನು ರೂ. ೫,೦೦೦ ಗಳಿಗೆ ಹೆಚ್ಚಿಸಲಾಗಿತ್ತು. ಈಗ ಈ ಮಂಡಳಿಗಳಿಗೆ ಇಲಾಖೆಯಿಂದ ಯಾವುದೇ ಅನುದಾನವನ್ನು ನೀಡಲಾಗುತ್ತಿಲ್ಲವಾದರೂ, ಇಲಾಖೆಯ ಕೆಲವು ಕಾರ್ಯಕ್ರಮಗಳನ್ನು ಈ ಮಂಡಳಿಗಳು ನಿರ್ವಹಿಸಿದಾಗ, ಅಥವಾ ಈ ಮಂಡಳಿಗಳ ಮೂಲಕ ಇಲಾಖೆಯ ಯೋಜನೆಗಳನ್ನು ನಡೆಸಿದಾಗ, ಸದರಿ ಕಾರ್ಯಕ್ರಮಗಳಿಗೆ ಮಾಡಿದ ಖರ್ಚಿನ ಬಗ್ಗೆ ವಿವರಗಳನ್ನು ಇಲಾಖೆಗೆ ನೀಡಿ, ಹಣವನ್ನು ಪಡೆಯಲು ಅವಕಾಶವಿದ್ದು, ಜಿಲ್ಲೆಯ ಮಹಿಳಾ ಮಂಡಳಿಗಳು ಈ ರೀತಿಯಲ್ಲಿ ಇಲಾಖೆಯಿಂದ ತಮ್ಮ ಕಾರ್ಯಕ್ರಮಗಳಿಗೆ ಆರ್ಥಿಕ ನೆರವನ್ನು ಪಡೆಯುತ್ತಿವೆ.

## ೨) ಮಕ್ಕಳ ಅಭಿವೃದ್ಧಿಗಾಗಿ ಕಾರ್ಯಕ್ರಮಗಳು

**ಸಮಗ್ರ ಶಿಶು ಅಭಿವೃದ್ಧಿ ಯೋಜನೆ:** ಇದು ಒಂದು ಕೇಂದ್ರ ಪುರಸ್ಕೃತ ಯೋಜನೆಯಾಗಿದೆ. ಗರ್ಭಿಣಿಯರು, ಬಾಣಂತಿಯರು ಮತ್ತು ಮಕ್ಕಳ ಮಾನಸಿಕ ಮತ್ತು ದೈಹಿಕ ಆರೋಗ್ಯವನ್ನು ಕಾಪಾಡುವ ದೃಷ್ಟಿಯಿಂದ ಸಮತೋಲನ ಆಹಾರ ಒದಗಿಸುವ ಅಗತ್ಯವನ್ನು ಕಂಡುಕೊಂಡು, ಈ ಆಶಯವನ್ನು ಕಾರ್ಯಗತಮಾಡಲು ಗ್ರಾಮೀಣ ಪ್ರದೇಶಗಳಲ್ಲಿ ಅಂಗನವಾಡಿ ಕೇಂದ್ರಗಳ ಮೂಲಕ ಪೂರಕ ಪೌಷ್ಠಿಕ ಆಹಾರಗಳನ್ನು ಇವರಿಗೆ ಒದಗಿಸಲಾಗುತ್ತಿದೆ. ಅದಲ್ಲದೆ ರೋಗ ನಿರೋಧಕ ಚುಚ್ಚುಮದ್ದು ನೀಡಿಕೆ, ಆಗಿಂದಾಗ್ಗೆ ಆರೋಗ್ಯ ತಪಾಸಣೆ ಮಾಡುವುದು ಮುಂತಾದವುಗಳನ್ನು ಮಾಡಲಾಗುತ್ತದೆ. ಜಿಲ್ಲೆಯಲ್ಲಿ ಅಪೌಷ್ಠಿಕತೆಯಿಂದ ನರಳುತ್ತಿರುವ ೦-೬ ವಯೋವರ್ಗದ ಮಕ್ಕಳಿಗೆ, ಗರ್ಭಿಣಿಯರಿಗೆ ಹಾಗೂ ಬಾಣಂತಿಯರಿಗೆ ಪ್ರತಿದಿನ ಪೌಷ್ಠಿಕ ಆಹಾರವನ್ನು ಒದಗಿಸಲಾಗುತ್ತದೆ. ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಒದಗಿಸಲಾಗುವ ಈ ಎಲ್ಲ ಸೇವೆಗಳನ್ನು, ಅಂಗನವಾಡಿ ಕೇಂದ್ರಗಳ ಮೂಲಕ ನೀಡಲಾಗುತ್ತದೆ.

**ಅಂಗನವಾಡಿ ಕೇಂದ್ರಗಳು:** ಮೇಲೆ ತಿಳಿಸಿದಂತೆ, ಶಾಲಾ ಪೂರ್ವ ಮಕ್ಕಳಿಗೆ ಉತ್ತಮ ಆಹಾರ ಮತ್ತು ಆರೈಕೆ ನೀಡುವುದಲ್ಲದೆ, ಮಕ್ಕಳ ತಾಯಿಯರಿಗೆ ಗರ್ಭಿಣಿಯಾದ ಮೂರು ತಿಂಗಳಿನಿಂದ ಹೆರಿಗೆಯಾಗಿ ಆರು ತಿಂಗಳ ಅವಧಿಯವರೆಗೆ ಅವರ ಆರೈಕೆಗಾಗಿ ಅಕ್ಕಿ, ಮೊಟ್ಟೆ, ಹಣ್ಣು ಮೊದಲಾದ ಪೌಷ್ಠಿಕ ಆಹಾರ ಪದಾರ್ಥಗಳನ್ನು ಅಂಗನವಾಡಿ ಕೇಂದ್ರಗಳಲ್ಲಿ ಒದಗಿಸಲಾಗುವುದು. ಅಂಗನವಾಡಿಯ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಅರ್ಹ ಮಹಿಳೆಯರಿಗೆ ಹಾಗೂ ಮಕ್ಕಳಿಗೆ ಈ ಆಹಾರವನ್ನು ಪೂರೈಕೆ ಮಾಡುತ್ತಾರೆ ಮತ್ತು ಅಗತ್ಯ ಸೇವೆ ಸಲ್ಲಿಸುತ್ತಾರೆ. ತುಮಕೂರು ಜಿಲ್ಲೆಯಲ್ಲಿ ಒಟ್ಟು ೪೦೮೧ ಅಂಗನವಾಡಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ತಾಲೂಕುವಾರು ಅಂಗನವಾಡಿ ಕೇಂದ್ರಗಳ ವಿವರಗಳನ್ನು ಕೋಷ್ಟಕ ೧೬.೩೨ರಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೩೨: ಜಿಲ್ಲೆಯಲ್ಲಿ ೨೦೧೪ರ ಮಾರ್ಚ್ ಅಂತ್ಯಕ್ಕೆ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳ ವಿವರ**

| ಕ್ರ ಸಂ | ತಾಲೂಕಿನ ಹೆಸರು | ಕಾರ್ಯ ನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ | ಮಂಜೂರಾದ ವರ್ಷ |
|---|---|---|---|
| ೧ | ತುಮಕೂರು (ಗ್ರಾ) | ೪೯೯ | ೧೯೯೧-೯೨ |
| ೨ | ತಿಪಟೂರು | ೩೪೫ | ೧೯೯೨-೯೩ |
| ೩ | ಗುಬ್ಬಿ | ೪೬೪ | ೧೯೯೨-೯೩ |
| ೪ | ತುರುವೇಕೆರೆ | ೩೨೮ | ೧೯೯೩-೯೪ |
| ೫ | ಚಿಕ್ಕನಾಯಕನಹಳ್ಳಿ | ೩೬೫ | ೧೯೮೫-೮೬ |
| ೬ | ಮಧುಗಿರಿ | ೪೨೭ | ೧೯೮೫-೮೬ |
| ೭ | ಪಾವಗಡ | ೩೭೯ | ೧೯೮೨-೮೩ |
| ೮ | ಶಿರಾ | ೪೬೪ | ೧೯೮೮-೮೯ |
| ೯ | ಕೊರಟಗೆರೆ | ೨೯೦ | ೧೯೮೨-೮೩ |
| ೧೦ | ಕುಣಿಗಲ್ | ೩೯೩ | ೧೯೮೨-೮೩ |
| ೧೧ | ತುಮಕೂರು(ನಗರ) | ೧೭೭ | ೧೯೮೨-೮೩ |
| | ಒಟ್ಟು | ೪೦೮೧ | |

**ಆಧಾರ: ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತುಮಕೂರು**

ಜಿಲ್ಲೆಯಲ್ಲಿ ೨೦೧೩-೧೪ರ ಅಂತ್ಯಕ್ಕೆ ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮದ ಫಲಾನುಭವಿಗಳ ಸಂಖ್ಯೆ ಹೀಗಿದೆ. ೦-೩ ವರ್ಷ ತುಂಬಿದ ಮಕ್ಕಳ ಸಂಖ್ಯೆ ೮೮೪೯೪ ಆಗಿದ್ದರೆ, ೩-೬ ವರ್ಷ ತುಂಬಿದ ೭೧೧೨೩ ಮಕ್ಕಳು, ೧೮೪೯೮ ಗರ್ಭಿಣಿಯರು, ೧೯೩೧೧ ಬಾಣಂತಿಯರು, ೮೧೪೯ ಕಿಶೋರಿಯರು ಹೀಗೆ ಒಟ್ಟು ೨೦೫೩೭೫ ಮಂದಿ ಈ ಸೌಲಭ್ಯ ಪಡೆದಿದ್ದರು. ೪೦೮೧ ಅಂಗನವಾಡಿ ಶಿಕ್ಷಕಿಯರು ಹಾಗೂ ೩೫೬೨ ಅಂಗನವಾಡಿ ಸಹಾಯಕಿಯರು ಕರ್ತವ್ಯ ನಿರ್ವಹಣೆಯಲ್ಲಿ ತೊಡಗಿದ್ದರು.

**ಶಿಶುಪಾಲನಾ ಕೇಂದ್ರಗಳು:** ತುಮಕೂರು ಜಿಲ್ಲೆಯಲ್ಲಿ ಒಟ್ಟು ಒಂಬತ್ತು ಶಿಶುಪಾಲನಾ ಕೇಂದ್ರಗಳು ಇದ್ದು, ಈ ಕೇಂದ್ರಗಳಲ್ಲಿ ಸೌಕರ್ಯವನ್ನು ಪಡೆದ ಫಲಾನುಭವಿಗಳು ಮತ್ತು ಅವರಿಗಾಗಿ ಮಾಡಿದ ಖರ್ಚಿನ ವಿವರಗಳನ್ನು ಕೋಷ್ಟಕ ೧೬.೩೩ರಲ್ಲಿ ನೀಡಲಾಗಿದೆ. ಪ್ರಸ್ತುತ ಶಿಶುಪಾಲನಾ ಕೇಂದ್ರಗಳನ್ನು ಅಂಗನವಾಡಿ ಕೇಂದ್ರಗಳೊಂದಿಗೆ ವಿಲೀನಗೊಳಿಸಲಾಗಿದೆ.

## ಕೋಷ್ಟಕ ೧೬.೩೩: ಜಿಲ್ಲೆಯಲ್ಲಿ ಶಿಶು ಪಾಲನಾ ಕೇಂದ್ರಗಳಲ್ಲಿ ಸೌಕರ್ಯವನ್ನು ಪಡೆದ ಫಲಾನುಭವಿಗಳು ಮತ್ತು ಆದ ಖರ್ಚಿನ ವಿವರ

**ರೂ. ಲಕ್ಷಗಳಲ್ಲಿ**

| ವರ್ಷ | ಸಂಘ ಸಂಸ್ಥೆಗಳ ಸಂಖ್ಯೆ | | | ಅನುದಾನ | ಫಲಾನುಭವಿಗಳು ಸಂಖ್ಯೆಗಳಲ್ಲಿ |
|---|---|---|---|---|---|
| | ನಗರ | ಗ್ರಾಮಾಂತರ | ಒಟ್ಟು | | |
| ೨೦೦೮-೦೯ | ೧ | ೮ | ೯ | ೪.೭೮ | ೨೦೦ |
| ೨೦೦೯-೧೦ | ೧ | ೮ | ೯ | ೩.೭೮ | ೨೦೦ |
| ೨೦೧೦-೧೧ | ೧ | ೮ | ೯ | ೩.೭೬ | ೨೦೦ |
| ೨೦೧೧-೧೨ | ೧ | ೮ | ೯ | ೪.೨೧ | ೧೫೦ |

**ಆಧಾರ: ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತುಮಕೂರು**

**ಭಾಗ್ಯಲಕ್ಷ್ಮಿ ಯೋಜನೆ:** ಹೆಣ್ಣು ಮಗುವಿನ ಜೀವನಕ್ಕೆ ಹೆಚ್ಚಿನ ಮೌಲ್ಯ ಕಲ್ಪಿಸುವ ದೃಷ್ಟಿಯಿಂದ ಮತ್ತು ಹೆಣ್ಣೆಂದರೆ ಕೀಳು ಎಂಬ ಧೋರಣೆಯನ್ನು ಬದಲಿಸುವ ದೃಷ್ಟಿಯಿಂದ, ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಶ್ರೀ.ಹೆಚ್.ಡಿ. ಕುಮಾರಸ್ವಾಮಿಯವರ ಸರ್ಕಾರ ಭಾಗ್ಯಲಕ್ಷ್ಮೀ ಯೋಜನೆಯನ್ನು ಜಾರಿಗೆ ತಂದರು. ೨೦೦೬-೦೭ನೇ ಸಾಲಿನಲ್ಲಿ ಈ ಯೋಜನೆಯನ್ನು ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ಇಬ್ಬರು ಹೆಣ್ಣು ಮಕ್ಕಳಿಗೆ ಅವರ ಜನನವಾಗಿ, ಫಲಾನುಭವಿಗಳೆಂದು ನೋಂದಣಿಯಾದ ನಂತರ ಅವರ ಹೆಸರಿನಲ್ಲಿ ರೂ. ೧೦,೦೦೦ಗಳ ಠೇವಣಿಯನ್ನು ಆಯ್ದ ಹಣಕಾಸು ಸಂಸ್ಥೆಯಲ್ಲಿ ಇಡಲಾಗುತ್ತದೆ. ಹದಿನೆಂಟು ವರ್ಷಗಳು ಪೂರ್ಣಗೊಂಡ ನಂತರ, ಬಡ್ಡಿ ಸಮೇತ ಅವರಿಗೆ ಹಣ ದೊರಕುವಂತೆ ವ್ಯವಸ್ಥೆ ಮಾಡಲಾಗುತ್ತದೆ. ಅಲ್ಲದೇ ವಿದ್ಯಾರ್ಥಿ ವೇತನ, ವಿಮೆ ಸೌಲಭ್ಯ, ಮುಂತಾದ ಮಧ್ಯಂತರ ಸಂದಾಯಗಳನ್ನೂ ನಿಯಮಗಳಿಗೆ ಒಳಪಡಿಸಿ ಇವರಿಗೆ ನೀಡಲಾಗುತ್ತದೆ. ೨೦೧೧-೧೨ನೇ ಸಾಲಿನಲ್ಲಿ ೩,೭೧೫ ಫಲಾನುಭವಿಗಳನ್ನು ಗುರುತಿಸಲಾಗಿದೆ.

ಅಸಾಧಾರಣ ಸಾಧನೆ ಮಾಡಿದ ಮಕ್ಕಳಿಗೆ ರಾಷ್ಟ್ರ ಪ್ರಶಸ್ತಿ, ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ನಿರತರಾದ ನಿಸ್ವಾರ್ಥ ಸಮಾಜ ಸೇವಕರಿಗೆ ರೂ. ಒಂದು ಲಕ್ಷಗಳ ರಾಜೀವ್ ಗಾಂಧಿ ಮಾನವ ಸೇವಾ ಪ್ರಶಸ್ತಿ, ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ನಿರತರಾಗಿರುವ ವ್ಯಕ್ತಿ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಸೇವೆಯನ್ನು ಗುರುತಿಸಿ ನೀಡುವ ರಾಷ್ಟ್ರ ಪ್ರಶಸ್ತಿ, ಧೈರ್ಯ ಸಾಹಸ ಪ್ರಶಸ್ತಿ ಪಡೆದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಆರ್ಥಿಕ ನೆರವು ಮತ್ತು ಮಕ್ಕಳ ದಿನಾಚರಣೆಯ ಆಚರಣೆ, ಉತ್ತಮ ಅಂಗನವಾಡಿ ಕಾರ್ಯಕರ್ತೆಯರಿಗೆ ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ, ಪ್ರಾಯಪೂರ್ವ ಬಾಲಕಿಯರ ಪೌಷ್ಠಿಕ ಆಹಾರ ಕಾರ್ಯಕ್ರಮ, ಕಿಶೋರಿ ಶಕ್ತಿ ಯೋಜನೆ, ಮಹಿಳೆಯರ ಮತ್ತು ಮಕ್ಕಳ ಸಾಗಣೆ ತಡೆ ಯೋಜನೆ ಇತ್ಯಾದಿಗಳೂ ಸಹ ಮಕ್ಕಳ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು, ಈ ಇಲಾಖೆಯಿಂದ ಜಾರಿಗೊಳಿಸಲಾಗುತ್ತಿರುವ ಇನ್ನಿತರ ಕಾರ್ಯಕ್ರಮಗಳಾಗಿವೆ.

**ಬಾಲ ಭವನ:** ಮಕ್ಕಳಿಗೆ ಶಾಲೆಯ ವಿದ್ಯಾಭ್ಯಾಸವಲ್ಲದೆ ಇನ್ನಿತರ ಹೊರಗಿನ ಕ್ಷೇತ್ರಗಳಲ್ಲಿ ತೊಡಗಿಸಿ ಸೃಜನಶೀಲರನ್ನಾಗಿಸುವ ಉದ್ದೇಶದಿಂದ, ಬಾಲ ಭವನ ಸೊಸೈಟಿಯು ೧೯೮೬ರಲ್ಲಿ ನೋಂದಣಿಗೊಂಡಿತು. ಮಕ್ಕಳಿಗಾಗಿ ರಂಗಮಂದಿರವನ್ನು ಸ್ಥಾಪಿಸುವುದು, ಉದ್ಯಾನವನವನ್ನು ಅಭಿವೃದ್ಧಿ ಪಡಿಸುವುದು, ಮಕ್ಕಳಿಗೆ ವಿವಿಧ ರೀತಿಯಲ್ಲಿ ಮನರಂಜನೆ ಒದಗಿಸುವುದು ಇವೇ ಮುಂತಾದ ಕಾರ್ಯಕ್ರಮಗಳನ್ನು ಬಾಲ ಭವನಗಳಲ್ಲಿ ನಡೆಸಲಾಗುವುದು. ತುಮಕೂರಿನಲ್ಲಿ ಒಂದು ಬಾಲ ಭವನ ಕಟ್ಟಡವು ಪ್ರಾರಂಭಗೊಂಡಿದ್ದು, ಈ ವರೆಗೆ ರೂ. ಒಂದು ಕೋಟಿ ಇಪ್ಪತ್ಮೂರು ಲಕ್ಷಗಳು ಖರ್ಚಾಗಿವೆ.

**ನಿರ್ಗತಿಕ ಮಕ್ಕಳಿಗಾಗಿ ಕುಟೀರಗಳು:** ನಿರ್ಗತಿಕ ಮಕ್ಕಳಿಗೆ ಪುನರ್ ವಸತಿ ಒದಗಿಸಿ ಆ ಮೂಲಕ ಅವರ ರಕ್ಷಣೆ ಹಾಗೂ ಪಾಲನೆ ಪೋಷಣೆ ಮಾಡಿ ಅವರನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸುವ ಉದ್ದೇಶದಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸಿದೆ. ಮಕ್ಕಳ ಅಭಿವೃದ್ಧಿ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ, ನೋಂದಾಯಿತ ಅನುಭವಿ ಸ್ವಯಂ ಸೇವಾ ಸಂಸ್ಥೆಗಳು ಈ ಕುಟೀರಗಳನ್ನು ನಡೆಸುತ್ತವೆ. ಈ ಸಂಸ್ಥೆಗಳಿಗೆ ಶೇ ೯೦ರಷ್ಟು ಕುಟೀರದ ನಿರ್ವಹಣೆಯ ಖರ್ಚನ್ನೂ ಸೇರಿಸಿ, ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ರೂ. ೪೦೦ ರಂತೆ ಅನುದಾನ ಪಡೆಯಲು ಅವಕಾಶವಿರುತ್ತದೆ. ಇದರಲ್ಲಿ ಶೇ.೧೦ ರಷ್ಟು ಖರ್ಚನ್ನು ಸ್ವಯಂ ಸಂಸ್ಥೆಗಳು ಭರಿಸಬೇಕಾಗುತ್ತದೆ. ಜಿಲ್ಲೆಯಲ್ಲಿ ಈ ಯೋಜನೆಯಡಿ ಹದಿನೆಂಟು ನೋಂದಾಯಿತ ಸೇವಾ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದ್ದು, ಇವು ಜಿಲ್ಲಾ ಪಂಚಾಯತ್‌ನ ಕಾರ್ಯಕ್ರಮದಡಿ ಬರುತ್ತವೆ. ತುಮಕೂರು ಜಿಲ್ಲೆಯಲ್ಲಿ ಒಟ್ಟು ೧೯ ನಿರ್ಗತಿಕ ಮಕ್ಕಳ ಕುಟೀರಗಳಿವೆ.

### ೩. ಸಾಮಾಜಿಕ ರಕ್ಷಣೆಯ ಕಾರ್ಯಕ್ರಮಗಳು

**ಬಾಲಕಿಯರ ಮಂದಿರಗಳು:** ವಿಚಾರಣೆ ಎದುರಿಸುತ್ತಿರುವ ಅನಾಥ ಹಾಗೂ ನಿರ್ಗತಿಕ ಮಕ್ಕಳ ಪಾಲನೆ ಮತ್ತು ರಕ್ಷಣೆಯ ಉದ್ದೇಶದಿಂದ ಬಾಲ ಮಂದಿರಗಳನ್ನು ಪ್ರಾರಂಭಿಸಲಾಗಿದೆ. ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರು ಪಡಿಸಿದ ಮಕ್ಕಳನ್ನು ಇಲ್ಲಿ ಸೇರಿಸಿಕೊಳ್ಳಲಾಗುವುದು. ಈ ಮಕ್ಕಳಿಗೆ ವಸತಿ, ಶಿಕ್ಷಣ, ತರಬೇತಿ ಮತ್ತು ಪುನರ್ವಸತಿಯನ್ನು ಒದಗಿಸಲಾಗುತ್ತದೆ. ಏಳನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಹಾಗೂ ಹೊಲಿಗೆ ತರಬೇತಿಯನ್ನು ಇಲ್ಲಿಯ ಮಕ್ಕಳಿಗೆ ನೀಡಲಾಗುತ್ತದೆ. ಪ್ರೌಢ ಶಾಲೆಯಲ್ಲಿ ಮತ್ತು ಕಾಲೇಜುಗಳಲ್ಲಿ ಓದುವ ಮಕ್ಕಳನ್ನು ಹೊರಗಡೆಯ ಶಾಲೆ ಮತ್ತು ಕಾಲೇಜುಗಳಿಗೆ ಕಳುಹಿಸಲಾಗುತ್ತದೆ. ಬಟ್ಟೆ, ಮನರಂಜನೆ ಕಾರ್ಯಕ್ರಮಗಳು ಮತ್ತಿತರ ಪ್ರಗತಿಗೆ ಪೂರಕವಾದ ಸೌಲಭ್ಯಗಳನ್ನು ನೀಡಲಾಗುತ್ತದೆ. ಜಿಲ್ಲೆಯಲ್ಲಿ ೨೦೦೮-೦೯ ರಿಂದ ೨೦೧೧-೧೨ ರವರೆಗೆ ತನಿಖೆಗೆ ಒಳಪಟ್ಟ ಮಕ್ಕಳು ಹಾಗೂ ಅವರಿಗಾಗಿ ಮಾಡಿದ ವೆಚ್ಚದ ವಿವರಗಳನ್ನು ಕೋಷ್ಟಕ ೧೬.೩೪ ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೩೪ ಜಿಲ್ಲೆಯಲ್ಲಿ ತನಿಖೆಗೆ ಒಳಪಟ್ಟ ಮಕ್ಕಳ ಸಂಖ್ಯೆ ಮತ್ತು ಮಾಡಲಾದ ಖರ್ಚಿನ ವಿವರ**

(ರೂ. ಲಕ್ಷಗಳಲ್ಲಿ)

| ವರ್ಷ | ಬಾಲಕಿಯರ ಬಾಲ ಮಂದಿರಗಳ ಸಂಖ್ಯೆ | ಇರುವ ಸ್ಥಳ | ಮಕ್ಕಳ ಸಂಖ್ಯೆ | ಖರ್ಚು |
|---|---|---|---|---|
| ೨೦೦೮-೦೯ | ೦೧ | ತುಮಕೂರು | ೨೭ | ೬.೫೧ |
| ೨೦೦೯-೧೦ | ೦೧ | ತುಮಕೂರು | ೨೨ | ೬.೪೨ |
| ೨೦೧೦-೧೧ | ೦೧ | ತುಮಕೂರು | ೨೪ | ೯.೦೬ |
| ೨೦೧೧-೧೨ | ೦೧ | ತುಮಕೂರು | ೪೨ | ೧೧.೩೩ |

ಆಧಾರ: ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತುಮಕೂರು

**ಸ್ವೀಕಾರ ಕೇಂದ್ರ:** ಪರಿತ್ಯಕ್ತರು, ಅವಿವಾಹಿತ ತಾಯಿಯರು,ನಿರಾಶ್ರಿತ ಹೆಣ್ಣುಮಕ್ಕಳು ಹಾಗೂ ವಿಧವೆಯರು, ಪೋಷಣೆ ಮತ್ತು ಆಶ್ರಯವನ್ನು ಕೋರಿ ಬರುವ ಮಹಿಳೆಯರು ಮತ್ತು ಬಾಲಕಿಯರನ್ನು ಸ್ವೀಕರಿಸಲು ಸ್ವೀಕಾರ ಕೇಂದ್ರವೊಂದನ್ನು, ಮಂಗಳೂರಿನಲ್ಲಿ ಮೂರನೇ ಪಂಚ ವಾರ್ಷಿಕ ಯೋಜನೆಯ ಅವಧಿಯಲ್ಲಿ ಸಾಮಾಜಿಕ ಮತ್ತು ನೈತಿಕ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ಸ್ಥಾಪಿಸಲಾಯಿತು. ಅನೈತಿಕ ವ್ಯವಹಾರಗಳ (ತಡೆಗಟ್ಟುವಿಕೆ) ಅಧಿನಿಯಮ ೧೯೫೬ರ ಮೇರೆಗೆ ಇಂಥ ಅನೈತಿಕ ವ್ಯವಹಾರಗಳ ಕಾರಣವಾಗಿ ತರಬೇತಿಗೆ ಮತ್ತು ಪುನರ್ವಸತಿಗೆಂದು ನ್ಯಾಯಾಲಯದಿಂದ ಕಳುಹಿಸಲ್ಪಟ್ಟ

ಹೆಂಗಸರು ಮತ್ತು ಬಾಲಕಿಯರ ಆಶ್ರಯ ತಾಣವೂ ಇದಾಗಿರುತ್ತದೆ. ಸಾಮಾಜಿಕ ಕಾರ್ಯಕರ್ತರು ಅಥವಾ ಪೋಲೀಸರು ಕರೆತಂದು ಬಿಡುವ ಹೆಣ್ಣುಮಕ್ಕಳು ಮತ್ತು ತಾವಾಗಿ ಬಂದು ಸೇರುವ ಸ್ತ್ರೀಯರಿಗೂ ಇಲ್ಲಿ ಊಟ, ವಸತಿ, ಊಟೋಪಚಾರಗಳನ್ನು ಮಾಡಿ ಸರಳ ವೃತ್ತಿಗಳಲ್ಲಿ ತರಬೇತಿಯನ್ನು ಕೊಟ್ಟು ಆಸರೆ ನೀಡಲಾಗುತ್ತದೆ. ತಾತ್ಕಾಲಿಕವಾಗಿ ಮೂರು ತಿಂಗಳು ಇಲ್ಲಿ ಅವರನ್ನು ಉಳಿಸಿಕೊಳ್ಳಲಾಗುತ್ತದೆ. ಹಾಗೂ ಅವರ ಪುನರ್ವಸತಿಗೆ ಅಗತ್ಯವಾದ ತರಬೇತಿ ಮತ್ತು ತಿಳುವಳಿಕೆ ನೀಡಿ, ಅವರ ಮುಂದಿನ ಬದುಕು ಹಸನಾಗಿ ನಡೆಯುವಂತೆ ನೋಡಿಕೊಳ್ಳುವ ಪ್ರಯತ್ನ ಮಾಡಿ, ನಂತರ ಅವರಿಗೆ ಅವರ ಮನೆಗಳಿಗೆ ಸೇರಿಸಲು ಅಥವಾ ಮದುವೆ ಮಾಡಿ ಕಳಿಸಲು, ಇಲ್ಲವೇ ಉದ್ಯೋಗ ಕಲ್ಪಿಸಿಕೊಡಲು ಅಥವಾ ಹತ್ತಿರದ ರಾಜ್ಯ ಮಹಿಳಾ ನಿಲಯಗಳಿಗೆ ಕಳಿಸಲು ವ್ಯವಸ್ಥೆ ಮಾಡಲಾಗುವುದು. ವಿವಿಧ ಉದ್ಯೋಗಗಳಲ್ಲಿ ತರಬೇತಿ ನೀಡಲಾಗುವುದು. ಮಹಿಳಾ ನಿಲಯಗಳಲ್ಲಿ ಇಂಥ ತರಬೇತಿ ಪಡೆದು, ಶಾಶ್ವತವಾಗಿ ಉಳಿದವರೂ ಇದ್ದಾರೆ. ತುಮಕೂರಿನಲ್ಲಿ ಒಂದು ಸ್ವೀಕಾರ ಕೇಂದ್ರವನ್ನು ನಡೆಸಲಾಗುತ್ತಿದೆ.

## ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಕಂಪೆನಿಯ ಕಾಯ್ದೆ ೧೯೫೬ರಡಿಯಲ್ಲಿ ೧೯೮೭ರಲ್ಲಿ ಸ್ಥಾಪಿಸಲ್ಪಟ್ಟಿದೆ. ಕೆಳಗೆ ನಮೂದಿಸಿರುವ ಅಂಶಗಳು ಈ ನಿಗಮದ ಪ್ರಮುಖ ಉದ್ದೇಶಗಳಾಗಿವೆ.

೧) ಮಹಿಳಾ ಉದ್ಯಮಾಕಾಂಕ್ಷಿಗಳನ್ನು ಗುರುತಿಸುವುದು,

೨) ಮಹಿಳೆಯರಿಗಾಗಿ ನಿಗದಿತ ಸಂಯೋಜನಾ ವರದಿಗಳನ್ನು ತಯಾರಿಸುವುದು,

೩) ತಾಂತ್ರಿಕ ಸಲಹಾ ಸೇವೆಯನ್ನು ಒದಗಿಸುವುದು, ಬ್ಯಾಂಕ್ ಮತ್ತು ಇತರೆ ಆರ್ಥಿಕ ಸಂಸ್ಥೆಗಳಿಂದ ಸಾಲವನ್ನು ಒದಗಿಸುವಲ್ಲಿ ಅನುಕೂಲ ಕಲ್ಪಿಸುವುದು,

೪) ಮಹಿಳೆಯರು ತಯಾರಿಸುವ ಸರಕುಗಳಿಗೆ ಮಾರುಕಟ್ಟೆ ಸೌಲಭ್ಯವನ್ನು ಕಲ್ಪಿಸುವುದು,

೫) ಮಹಿಳಾ ಸಂಘಗಳನ್ನು, ಮಹಿಳಾ ಸಮಾಜಗಳನ್ನು, ಮಹಿಳಾ ಮಂಡಳಿಗಳನ್ನು ಮತ್ತು ಸಹಕಾರಿ ಸಂಸ್ಥೆಗಳನ್ನು ಉತ್ತೇಜಿಸಿ ಬಲಪಡಿಸುವುದು ಹಾಗೂ,

೬) ಮಹಿಳೆಯರಿಗೆ ಅವಶ್ಯಕ ಕೌಶಲ್ಯ ತರಬೇತಿಯನ್ನು ವ್ಯವಸ್ಥೆಗೊಳಿಸುವುದು.

**ಮನೆ ಬೆಳಕು ಮತ್ತು ಉದ್ಯೋಗಿನಿ ಯೋಜನೆ:** ಯಾವುದೇ ವ್ಯಕ್ತಿಯ ಸ್ವಾವಲಂಬನೆಗೆ ಮತ್ತು ಆತ್ಮವಿಶ್ವಾಸಕ್ಕೆ ಆರ್ಥಿಕ ಉನ್ನತಿಯೇ ಮೊದಲ ಮೆಟ್ಟಿಲು. ಮಹಿಳೆಯರು ಆರ್ಥಿಕವಾಗಿ ಅಭಿವೃದ್ಧಿ ಹೊಂದುವುದಕ್ಕೆ ಒಂದು ಮಾರ್ಗವಾಗಿ ಅವರನ್ನು ಆದಾಯ ಉತ್ಪನ್ನಕರ ಚಟುವಟಿಕೆಗಳಲ್ಲಿ ತೊಡಗಿಸಲು ಹಾಗೂ ವ್ಯಾಪಾರ ಉದ್ದಿಮೆಗಳನ್ನು ಸ್ಥಾಪಿಸಲು, ಈ ಯೋಜನೆಯಲ್ಲಿ ಅವರಿಗೆ ಸಾಲ ಮತ್ತು ಸಹಾಯ ಧನ ನೀಡಲು ಅವಕಾಶವಿದೆ. ಬ್ಯಾಂಕುಗಳ ಮೂಲಕ ರೂ. ಒಂದು ಲಕ್ಷಗಳ ವರೆಗೆ ಸಾಲ ಸೌಲಭ್ಯವನ್ನು ಕೊಡಿಸುವ ವ್ಯವಸ್ಥೆ ಮಾಡಿ, ನಿಗಮವು ಈ ಸಾಲಕ್ಕೆ ಶೇ. ೨೦ ಅಥವಾ ಗರಿಷ್ಠ ರೂ. ೭,೫೦೦ಗಳ ಸಬ್ಸಿಡಿಯನ್ನು, ವಿಶೇಷ ವರ್ಗದ ಮಹಿಳೆಯರಿಗೆ ಶೇಕಡ ೩೦ರಂತೆ ಅಥವಾ ಗರಿಷ್ಠ ರೂ.೧೦,೦೦೦ಗಳ ಸಬ್ಸಿಡಿ ನೀಡಲಾಗುತ್ತದೆ.

**ಮಹಿಳಾ ತರಬೇತಿ ಯೋಜನೆ:** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯ ಅನುಷ್ಠಾನಗೊಳಿಸುತ್ತಿದ್ದ ಸ್ವಶಕ್ತಿ ಯೋಜನೆಯನ್ನು ಮಹಿಳಾ ತರಬೇತಿ ಯೋಜನೆ ಎಂದು ಹೆಸರಿಸಿ, ಮಹಿಳಾ ಅಭಿವೃದ್ಧಿ ನಿಗಮಕ್ಕೆ ವರ್ಗಾಯಿಸಲಾಗಿದೆ. ಮಹಿಳೆಯರು ಆರ್ಥಿಕ ಸಬಲೀಕರಣ ಹೊಂದಲು, ವಿವಿಧ ಕೌಶಲ್ಯ ಅಭಿವೃದ್ಧಿ ಮತ್ತು ವೃತ್ತಿಪರ ತರಬೇತಿಗಳನ್ನು ಉಚಿತವಾಗಿ ನೀಡಿ ಅವರನ್ನು ಸ್ವಯಂ ಉದ್ಯೋಗದಲ್ಲಿ ತೊಡಗಿಸಿ ಸ್ವಾವಲಂಬಿಗಳನ್ನಾಗಿಸುವ ಉದ್ದೇಶವುಳ್ಳ ಯೋಜನೆ ಇದು. ಬ್ಯೂಟಿ ಪಾರ್ಲರ್, ಹೊಲಿಗೆ, ಎಂಬ್ರಾಯಿಡರಿ, ಸಿದ್ಧ ಉಡುಪು ತಯಾರಿಕೆ, ಎಲೆಕ್ಟ್ರಾನಿಕ್ಸ್ ವಸ್ತುಗಳ ರಿಪೇರಿ ಮತ್ತು ನಿರ್ವಹಣೆ, ಕಂಪ್ಯೂಟರ್ ಹಾರ್ಡ್‌ವೇರ್, ಗಾರೆ ಕೆಲಸದ ತರಬೇತಿ, ನರ್ಸಿಂಗ್ ಮತ್ತು ವಾರ್ಡ್ ಅಸಿಸ್ಟೆನ್ಸ್, ಲಘು ಮೋಟಾರ್ ವಾಹನ ಚಾಲನಾ ತರಬೇತಿ, ಬೇಕರಿ ತಿನಿಸುಗಳ ತಯಾರಿಕಾ ತರಬೇತಿ ಇತ್ಯಾದಿ ಈ ಯೋಜನೆಯಲ್ಲಿ ನೀಡುವ ತರಬೇತಿಗಳಾಗಿವೆ.

ಮಹಿಳಾ ಅಭಿವೃದ್ಧಿಗೆ ಪೂರಕವಾಗುವ ಸಂಶೋಧನಾ ಚಟುವಟಿಕೆಗಳಲ್ಲಿ ತೊಡಗಲು ಸಹಾಯ ಮಾಡುವುದು ಮತ್ತು ಗ್ರಂಥಾಲಯ ಸ್ಥಾಪಿಸುವುದು, ಮಹಿಳಾ ಅಭಿವೃದ್ಧಿ ನಿಗಮದ ಯೋಜನೆಗಳ ಮೌಲ್ಯ ಮಾಪನ ಮಾಡುವುದು ಮತ್ತು ಮಹಿಳೆಯರಿಗೆ ಸಲಹಾ ಕೇಂದ್ರವನ್ನು ಸ್ಥಾಪಿಸುವುದು ರಾಜ್ಯ ಸಂಪನ್ಮೂಲ ಕೇಂದ್ರ ಯೋಜನೆಯ ಉದ್ದೇಶ. ದೇವದಾಸಿ ಪುನರ್ವಸತಿ ಕಾರ್ಯಕ್ರಮ, ನಗರ ಸ್ತ್ರೀ ಶಕ್ತಿ ಯೋಜನೆ, ಸ್ವಾವಲಂಬನ (ನೊರಾಡ್) ಯೋಜನೆ, ಸ್ಟೆಪ್ ಯೋಜನೆ, ಇವು ನಿಗಮದಿಂದ ಜಾರಿಗೊಳ್ಳುತ್ತಿರುವ ಇನ್ನಿತರ ಯೋಜನೆಗಳಾಗಿವೆ.

## ಕರ್ನಾಟಕ ರಾಜ್ಯ ಮಹಿಳಾ ಆಯೋಗ

ಮಹಿಳೆಯರ ಹಿತಾಸಕ್ತಿಗಳ ರಕ್ಷಣೆ, ಅವರ ಪ್ರಗತಿ ಮತ್ತು ಅಭಿವೃದ್ಧಿಯನ್ನು ಖಚಿತ ಪಡಿಸುವ ಸಂವಿಧಾನಿಕ ಧ್ಯೇಯಕ್ಕೆ ಅನುಸಾರವಾಗಿ, ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯ ಮಹಿಳಾ ಆಯೋಗ ಅಧಿನಿಯಮ ೧೯೯೫ರ ಅಡಿಯಲ್ಲಿ ೨೬ ಮೇ ೧೯೯೫ರಂದು ರಾಜ್ಯ ಮಹಿಳಾ ಆಯೋಗವನ್ನು ರಚಿಸಿರುತ್ತದೆ. ೧೯೯೬ರ ಆಗಸ್ಟ್ ಆರರಿಂದ ಈ ಆಯೋಗವು ಕಾರ್ಯಾರಂಭ ಮಾಡಿದೆ.

ರಾಜ್ಯದ ಏಳು ಜಿಲ್ಲೆಗಳಲ್ಲಿರುವ ಕೌಟುಂಬಿಕ ನ್ಯಾಯಾಲಯಗಳಲ್ಲಿ ಮಹಿಳಾ ಸಹಾಯ ವೇದಿಕೆಗಳನ್ನು ಪ್ರಾರಂಭಿಸಲಾಗಿದೆ. ದೀರ್ಘ ಕಾಲದಿಂದ ಇತ್ಯರ್ಥವಾಗದೇ ಉಳಿದ ಕೌಟುಂಬಿಕ ಪ್ರಕರಣಗಳ ವ್ಯಾಜ್ಯಗಳನ್ನು ಶೀಘ್ರ ಬಗೆ ಹರಿಸಲು, ಬೆಂಗಳೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗದೊಂದಿಗೆ ತಿಂಗಳಿಗೊಮ್ಮೆ 'ಪರಿವಾರಿಕ್ ಮಹಿಳಾ ಅದಾಲತ್' ಕಾರ್ಯಕ್ರಮವನ್ನು ನಡೆಸುತ್ತದೆ. ಆಯೋಗದಲ್ಲಿ ಒಂದು ಪೋಲಿಸ್ ವಿಭಾಗವನ್ನು ಮತ್ತು ಒಂದು ಕಾನೂನು ಸಲಹೆ ವಿಭಾಗವನ್ನು ತೆರೆದಿದ್ದು, ಈ ವಿಭಾಗಗಳ ಮೂಲಕ ಸೂಕ್ತ ಸಲಹೆಗಳನ್ನು ನೀಡಿ ಆಯೋಗಕ್ಕೆ ಬರುವ ದೂರುಗಳನ್ನು ಬಗೆ ಹರಿಸಲು ಪ್ರಯತ್ನಿಸಲಾಗುತ್ತದೆ.

ಗರ್ಭಧಾರಣ ಪೂರ್ವ ಮತ್ತು ಪ್ರಸವ ಪೂರ್ವ ಲಿಂಗಪತ್ತೆಯ ನಿಯಂತ್ರಣ ಮತ್ತು ತಡೆಗಟ್ಟುವಿಕೆ, ಆಸಿಡ್ ದಾಳಿಗೆ ಶಿಕ್ಷೆ, ಅತ್ಯಾಚಾರ, ಹೆಣ್ಣು ಭ್ರೂಣ ಹತ್ಯೆ – ಇವೇ ಮುಂತಾದ ವಿಷಯಗಳ ಬಗ್ಗೆ ಸೂಕ್ತ ಕ್ರಮಗಳನ್ನು ಸೂಚಿಸುವುದು; ಆಸ್ತಿ ಹಕ್ಕು, ಕೌಟುಂಬಿಕ ದೌರ್ಜನ್ಯ, ವಿವಾಹ ವಿಚ್ಛೇದನೆ, ಜೀವನಾಂಶ, ಜಾಗೃತಿ, ಮುಂತಾದ ವಿಷಯಗಳ ಬಗ್ಗೆ ಮಹಿಳೆಯ ಪರವಾದ ಕಾನೂನುಗಳ ಕುರಿತು ಅರಿವು ಮೂಡಿಸಲು ಶಿಬಿರಗಳನ್ನು ನಡೆಸುವುದು, ಈ ಆಯೋಗದ ಚಟುವಟಿ–ಕೆಗಳಾಗಿರುತ್ತವೆ.

ರಾಜ್ಯದ ಎಲ್ಲಾ ಜಿಲ್ಲೆ ಹಾಗೂ ತಾಲೂಕು ಮಟ್ಟದಲ್ಲಿ ಹಲವಾರು 'ಕಾನೂನು ಅರಿವು' ಕಾರ್ಯಕ್ರಮಗಳನ್ನು ನಡೆಸಿದ್ದು, ೨೦೦೭ರ ಜನವರಿ ಒಂಬತ್ತರಂದು, ದೊಡ್ಡ ಗುಬ್ಬಿಯಲ್ಲಿ 'ಕ್ರೆಸ್ಟ್' ಎಂಬ ಸ್ವಯಂ ಸೇವಾ ಸಂಸ್ಥೆಯೊಂದಿಗೂ; ೨೦೦೭ರ ಜುಲೈ ಹದಿಮೂರರಂದು ತುಮಕೂರಿನಲ್ಲಿ ಮಹಿಳಾ ಒಕ್ಕೂಟದ ಸಹಯೋಗದೊಂದಿಗೂ; ಮಹಿಳೆಯರಿಗೆ 'ಕಾನೂನು ಅರಿವು' ಕಾರ್ಯಕ್ರಮವನ್ನು ಈ ಆಯೋಗವು ನಡೆಸಿರುತ್ತದೆ.

### ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ

ಸ್ವಾತಂತ್ರ್ಯ ಪೂರ್ವದಲ್ಲಿ ಅಂಗವಿಕಲರ ಕಲ್ಯಾಣದ ಬಗ್ಗೆ ಸರ್ಕಾರವು ಹೆಚ್ಚು ಗಮನ ಹರಿಸಿರಲಿಲ್ಲ. ಆದರೆ ಸ್ವಾತಂತ್ರ್ಯೋತ್ತರದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಂಗವಿಕಲರ ಕಲ್ಯಾಣಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿವೆ. ಅಂಗವಿಕಲರಿಗೆ ಸಂಬಂಧಿಸಿದ ಕಾರ್ಯಗಳನ್ನು ಮೊದಲು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿಯೇ ನಿರ್ವಹಿಸಲಾಗುತ್ತಿತ್ತು. ನಂತರ ರಾಜ್ಯ ಸರ್ಕಾರ ೧–೮–೮೮ ರಂದು ಅಂಗವಿಕಲರ ಕಲ್ಯಾಣಕ್ಕಾಗಿಯೇ ಪ್ರತ್ಯೇಕ ಇಲಾಖೆಯನ್ನು ತೆರೆಯಿತು. ಅಂಗವಿಕಲರನ್ನು ಕ್ರಿಯಾಶೀಲ ಪ್ರಜೆಗಳನ್ನಾಗಿಸುವ ದಿಕ್ಕಿನಲ್ಲಿ, ಸರ್ಕಾರವು ಅಂಗವಿಕಲರ ಕಲ್ಯಾಣಕ್ಕಾಗಿ ಹಲವಾರು ಯೋಜನೆಗಳನ್ನು ರೂಪಿಸಿದ್ದು ಅವುಗಳನ್ನು ಜಿಲ್ಲಾ ಮಟ್ಟದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೂಲಕವೇ ಕಾರ್ಯಗತಗೊಳಿಸುತ್ತಿದೆ. ನಿರ್ದೇಶಕರು ಇಲಾಖೆಯ ಮುಖ್ಯಸ್ಥರಾಗಿದ್ದು, ಅವರಿಗೆ ಆಡಳಿತದಲ್ಲಿ ನೆರವಾಗಲು ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರು, ಪತ್ರಾಂಕಿತ ಅಧಿಕಾರಿಗಳು ಮತ್ತಿತರ ಸಿಬ್ಬಂದಿ ವರ್ಗವಿತ್ತು.

ದೇಹದ ಯಾವುದಾದರೂ ಒಂದು ಅಥವಾ ಹೆಚ್ಚು ಅಂಗಾಂಗಗಳು ಊನವಾಗಿದ್ದು, ಅದರಿಂದ ಅವರ ಶಕ್ತಿ, ಸಾಮರ್ಥ್ಯಗಳು ಕ್ಷೀಣಗೊಂಡಿದ್ದರೆ, ಅಥವಾ ಯಾವುದೇ ವ್ಯಕ್ತಿ ತನ್ನ ದೈನಂದಿನ ಕ್ರಿಯೆಗಳನ್ನು ಸ್ವತಃ ಮಾಡಿಕೊಳ್ಳಲು ಅಸಮರ್ಥನಾಗಿದ್ದರೆ ಅಂತಹ ವ್ಯಕ್ತಿಯನ್ನು ಅಂಗವಿಕಲನೆಂದು ಪರಿಗಣಿಸಲಾಗುತ್ತದೆ. ಅಂಗವಿಕಲತೆಯಲ್ಲಿ ದೈಹಿಕ ಅಂಗವಿಕಲರು, ದೃಷ್ಟಿ ದೋಷವುಳ್ಳವರು, ಶ್ರವಣ ದೋಷದಿಂದ ಕೂಡಿರುವವರು, ಬುದ್ಧಿಮಾಂದ್ಯರು, ಕುಷ್ಠರೋಗಕ್ಕೆ ಒಳಗಾಗಿ ಗುಣಹೊಂದಿದ ವಿಕಲಚೇತನರು, ಮಾನಸಿಕ ಅಸ್ವಸ್ಥರು ಮತ್ತು ಬಹುವಿಕಲತೆಯುಳ್ಳವರು ಎಂದು ವರ್ಗೀಕರಣ ಮಾಡಲಾಗಿದೆ.

ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ ೧೯೯೫, ಇದು ೧೯೯೬ರ ಫೆಬ್ರವರಿ ಎರಡರಿಂದ ಜಾರಿಗೆ ಬಂದಿದೆ. ಈ ಅಧಿನಿಯಮದ ವಿವಿಧ ಪ್ರಕರಣಗಳನ್ವಯ ರಾಜ್ಯ ಕಾರ್ಯನಿರ್ವಾಹಕ ಸಮಿತಿಯನ್ನು ರಚಿಸಿ, ಆಯುಕ್ತರನ್ನು ನೇಮಕ ಮಾಡಲಾಗಿದೆ. ಅಂಗವಿಕಲರಿಗೆ ಸಮಾಜದ ಮುಖ್ಯ ವಾಹಿನಿಯಲ್ಲಿ ಸಮಾನ ಅವಕಾಶ ಒದಗಿಸಲು ಅವರ ಹಕ್ಕು ಸಂರಕ್ಷಿಸಲು ಮತ್ತು ಅವರು ಸಮಾಜದಲ್ಲಿ ಪೂರ್ಣವಾಗಿ ಭಾಗಿಯಾಗುವಂತಾಗಿಸಲು ಈ ಅಧಿನಿಯಮವನ್ನು ಜಾರಿಗೊಳಿಸಲು ಆಯುಕ್ತರ ಕಛೇರಿಯನ್ನು ಸ್ಥಾಪನೆ ಮಾಡಲಾಗಿದೆ.

ಅಂಗವಿಕಲರು ಎಲ್ಲರಂತೆ ಬದುಕಲು ಬೇಕಾದದ್ದು ಶಿಕ್ಷಣ ಮತ್ತು ಉದ್ಯೋಗ. ಅವರು ಆರಿಸಿಕೊಳ್ಳುವ ವೃತ್ತಿಗೆ ಬೇಕಾದ ತರಬೇತಿ ಅಷ್ಟೇ ಆದರೆ ಸಾಲದು, ಅವರು ತಮ್ಮ ಸಾಮರ್ಥ್ಯವನ್ನು ಪೂರ್ಣವಾಗಿ ಬಳಸಲು ಅವಕಾಶ ಕಲ್ಪಿಸಿಕೊಟ್ಟು, ಸಾಮಾಜಿಕ ಭದ್ರತೆಯ ಬಗ್ಗೆ ಆಶ್ವಾಸನೆ ನೀಡಬೇಕಾಗುತ್ತದೆ. ಹೀಗಾದಲ್ಲಿ ಅವರು ದೇಶದ ಕ್ರಿಯಾಶೀಲ ಪ್ರಜೆಗಳಾಗುವುದರಲ್ಲಿ ಸಂದೇಹವಿಲ್ಲ ಎಂಬುದನ್ನು ಸರ್ಕಾರವು ಮನಗಂಡು ಹಲವಾರು ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸುತ್ತಿದೆ.

### ಅ) ಶೈಕ್ಷಣಿಕ ಯೋಜನೆಗಳು

**ಅಂಗವಿಕಲರ ವಿದ್ಯಾರ್ಥಿ ವೇತನ:** ಒಂದನೇ ತರಗತಿಯಿಂದ ವಿಶ್ವವಿದ್ಯಾಲಯ ಮಟ್ಟದವರೆಗೆ ಓದುತ್ತಿರುವ ಅರ್ಹ ಅಂಗವಿಕಲರಿಗೆ ವಿದ್ಯಾರ್ಥಿ ವೇತನ ನೀಡುವ ಕಾರ್ಯಕ್ರಮವನ್ನು ಈ ಇಲಾಖೆಯ ಮೂಲಕ ಜಾರಿಗೆ ತರಲಾಗುತ್ತಿದೆ. ೨೦೦೧–೦೨ನೇ ಸಾಲಿನಿಂದ ಆದಾಯ ಮಿತಿಯನ್ನು ವಿನಾಯಿತಿಗೊಳಿಸಲಾಗಿದೆ. ವಿದ್ಯಾರ್ಥಿ ವೇತನದ ಜೊತೆಗೆ ಅಂಧ ವಿದ್ಯಾರ್ಥಿಗಳಿಗೆ ಮತ್ತು ದೈಹಿಕ ಅಂಗವಿಕಲರಿಗೆ ಸಾರಿಗೆ ಭತ್ಯೆಯನ್ನು ನೀಡಲಾಗುವುದು. ವಿದ್ಯಾರ್ಥಿ ವೇತನ ಹಾಗೂ ಸಂಚಾರಿ ಭತ್ಯೆಗಳ ದರವನ್ನು ಕೋಷ್ಟಕ ೧೬.೩೫ರಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೩೫: ವಿದ್ಯಾರ್ಥಿ ವೇತನ ಹಾಗೂ ಸಂಚಾರಿ ಭತ್ಯೆಗಳ ನಿಗದಿತ ದರಗಳು**

**(ರೂ. ಗಳಲ್ಲಿ)**

| ಅಂಗವಿಕಲ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ | ಮಾಹೆ ಯಾನ | ನಿಲಯಾರ್ಥಿ ಗಳಿಗೆ | ಅಂಧ ವಿದ್ಯಾರ್ಥಿಗಳಿಗೆ ಓದುಗರ ಭತ್ಯೆ | ದೈಹಿಕ ಅಂಗವಿಕಲರಿಗೆ ಸಂಚಾರಿ ಭತ್ಯೆ |
|---|---|---|---|---|
| ಒಂದರಿಂದ ಐದನೇ ತರಗತಿಯವರೆಗೆ | ೫೦ | ೨೫ | ೨೫ | ೨೫ |
| ಆರರಿಂದ ಹತ್ತನೇ ತರಗತಿಯವರೆಗೆ | ೧೦೦ | ೨೫ | ೨೫ | ೨೫ |
| ಪಿ.ಯು.ಸಿ. | ೧೫೦ | ೧೪೦ | ೭೫ | ೫೦ |
| ಬಿ.ಎಡ್, ಟಿ.ಸಿ.ಹೆಚ್. | ೨೦೦ | ೧೮೦ | ೭೫ | – |
| ಬಿ.ಎ, ಎಂ.ಬಿ.ಬಿ.ಎಸ್, ಎಲ್.ಎಲ್.ಬಿ, ಡಿಪ್ಲೊಮ–ಇನ್–ಪ್ರೊಫೆಷನ್ ಅಂಡ್ ಎಂಜಿನಿಯರಿಂಗ್ | ೨೫೦ | ೨೪೦ | ೧೦೦ | – |
| ಎಂ.ಎ., ಎಂ.ಎಸ್.ಸಿ, ಎಂ.ಕಾಂ, ಎಲ್.ಎಲ್.ಎಂ ಹಾಗೂ ತತ್ಸಮಾನ | ೩೦೦ | ೨೪೦ | ೧೦೦ | – |

**ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಬಹುಮಾನ ಯೋಜನೆ:** ಶೇಕಡ ೬೦ ಕ್ಕಿಂತ ಹೆಚ್ಚು ಅಂಕಗಳಿಸಿ ತೇರ್ಗಡೆಯಾದ ಪ್ರತಿಭಾವಂತ ಅಂಗವಿಕಲರಿಗೆ ಪ್ರೋತ್ಸಾಹ ನೀಡಲು 'ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ

ಪ್ರೋತ್ಸಾಹ ಬಹುಮಾನ ಯೋಜನೆ' ಎಂಬ ವಿಶೇಷ ಯೋಜನೆಯನ್ನು ಜಾರಿಗೊಳಿಸಲಾಗಿದ್ದು, ಈ ಯೋಜನೆಯನ್ನು ೨೦೦೧-೦೨ ರಿಂದ ಬಿ.ಎಡ್, ಎಂ.ಎಡ್ ಮತ್ತು ಟಿ.ಸಿ.ಹೆಚ್. ವಿದ್ಯಾರ್ಥಿಗಳಿಗೂ ವಿಸ್ತರಿಸಲಾಗಿದೆ.

ಕಿವುಡು ಮಕ್ಕಳಿಗೆ ಶಾಲೆಗಳು, ಅಂಧ ಮಕ್ಕಳಿಗೆ ಶಾಲೆಗಳು, ಅಂಧ ಮಕ್ಕಳಿಗಾಗಿ ಬ್ರೇಲ್ ಪುಸ್ತಕಗಳನ್ನು ಮುದ್ರಿಸುವ ಬ್ರೇಲ್ ಮುದ್ರಣಾಲಯ, ಆಡಿಯೋ ಕ್ಯಾಸೆಟ್ ಹಾಗೂ ಟೇಪ್ ರೆಕಾರ್ಡರ್‌ಗಳನ್ನು ಉಚಿತವಾಗಿ ಒದಗಿಸುವುದು, ಅಂಧ ವಿದ್ಯಾರ್ಥಿಗಳಿಗೆ ಶಬ್ದ ಗ್ರಂಥಾಲಯ, ಪ್ರತಿಭಾವಂತ ಅಂಗವಿಕಲ ಮಕ್ಕಳಿಗೆ ಪ್ರೋತ್ಸಾಹ ಬಹುಮಾನ ಯೋಜನೆ, ವಿಶೇಷ ತರಬೇತಿ ಕೇಂದ್ರ ಯೋಜನೆ, ಮುಂತಾದವು ಇನ್ನಿತರ ಶೈಕ್ಷಣಿಕ ಕಾರ್ಯಕ್ರಮಗಳನ್ನು ರಾಜ್ಯದ ವಿವಿಧೆಡೆಗಳಲ್ಲಿ ಅನುಷ್ಠಾನಕ್ಕೆ ತರಲಾಗುತ್ತಿದೆ.

### ಆ) ಉದ್ಯೋಗ ಮತ್ತು ತರಬೇತಿ

ಕರ್ನಾಟಕ ಸಿವಿಲ್ ಸೇವಾ(ಸಾಮಾನ್ಯ ನೇಮಕಾತಿ)ನಿಯಮಗಳು ೧೯೭೭ರ ನಿಯಮ ೯(೧ಎ) ಅನ್ವಯ ರಾಜ್ಯ ಸಿವಿಲ್ ಸೇವೆಗಳಲ್ಲಿನ ಗ್ರೂಪ್ 'ಸಿ' ಮತ್ತು ಗ್ರೂಪ್ 'ಡಿ' ಹುದ್ದೆಗಳ ನೇರ ನೇಮಕಾತಿಯಲ್ಲಿ ಶೇಕಡ ಐದು ಹುದ್ದೆಗಳನ್ನು ಅಂಗವಿಕಲ ಅಭ್ಯರ್ಥಿಗಳಿಗೆ ಮೀಸಲಿರಿಸಲಾಗಿದೆ. (ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ, ೧೧೫ ಸೇನೆನಿ ೨೦೦೫ ದಿ. ೧೯.೧೧.೨೦೦೫). 'ಎ' ಮತ್ತು 'ಬಿ' ಹುದ್ದೆಗಳಲ್ಲಿ ಶೇಕಡ ಮೂರು ಹುದ್ದೆಗಳನ್ನು ಅಂಗವಿಕಲರಿಗಾಗಿ ಕಾಯ್ದಿರಿಸಲಾಗಿದೆ.

**'ಆಧಾರ' ಸ್ವಯಂ ಉದ್ಯೋಗಕ್ಕಾಗಿ ಸಹಾಯ ಯೋಜನೆ:** ಅಂಗವಿಕಲರು ಸ್ವಯಂ ಉದ್ಯೋಗ ಕೈಗೊಂಡು ಸಣ್ಣ ವ್ಯಾಪಾರ ಮಾಡಿಕೊಂಡು ಜೀವನ ಸಾಗಿಸಲು ಅನುಕೂಲವಾಗುವಂತೆ 'ಆಧಾರ' ಎಂಬ ಯೋಜನೆಯನ್ನು ಇಲಾಖೆಯಿಂದ ಕಾರ್ಯರೂಪಕ್ಕೆ ತರಲಾಗಿದೆ. ಈ ಯೋಜನೆಯಡಿ ಸಣ್ಣ ವ್ಯಾಪಾರ ಮಾಡಲು ಒಟ್ಟು ರೂ. ೩೫,೦೦೦ಗಳ ಧನ ಸಹಾಯ ನೀಡಲಾಗುವುದು. ಇದರಲ್ಲಿ ರೂ. ೧೫,೦೦೦ಗಳಿಗೆ ಉಚಿತ ಪೆಟ್ಟಿಗೆ/ಗೂಡಂಗಡಿಯನ್ನೂ, ಉಳಿದ ರೂ. ೨೦,೦೦೦ ಗಳನ್ನು ಬಂಡವಾಳ ರೂಪದಲ್ಲಿ ಬಡ್ಡಿರಹಿತ ಸಾಲವಾಗಿಯೂ ಮಂಜೂರು ಮಾಡಲಾಗುತ್ತದೆ.

ಈ ಜಿಲ್ಲೆಯ ಎರಡು ತಾಲೂಕುಗಳಲ್ಲಿ ೨೦೦೫-೦೬ ರಿಂದ ೨೦೦೭-೦೮ರ ವರೆಗಿನ ಮೂರು ವರ್ಷಗಳ ಅವಧಿಯಲ್ಲಿ ಮೂವತ್ನಾಲ್ಕು ಅಂಗವಿಕಲರಿಗೆ ಚಿಲ್ಲರೆ ಅಂಗಡಿಗಳನ್ನು ನಡೆಸಲು ಹಣ ಸಹಾಯ ಮಾಡಲಾಗಿದ್ದು, ವಿವರಗಳನ್ನು ಕೋಷ್ಟಕ ೧೬.೩೬ ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೩೬: ಜಿಲ್ಲೆಯಲ್ಲಿ ಅಂಗವಿಕಲರಿಗೆ ಸ್ವಯಂ ಉದ್ಯೋಗ ಯೋಜನೆಯಡಿ ಹಣ ಸಹಾಯ ಮಾಡಲಾದ ವಿವರ**

| ತಾಲೂಕು | ಫಲಾನುಭವಿಗಳ ಸಂಖ್ಯೆ | | | ಖರ್ಚಾದ ಹಣ (ರೂ. ಗಳಲ್ಲಿ) | | |
|---|---|---|---|---|---|---|
| | ೨೦೦೫-೦೬ | ೨೦೦೬-೦೭ | ೨೦೦೭-೦೮ | ೨೦೦೫-೦೬ | ೨೦೦೬-೦೭ | ೨೦೦೭-೦೮ |
| ತುರುವೇಕೆರೆ | ೧ | ೧೩ | ೧ | ೬,೦೦೦ | ೭೮,೦೦೦ | ೨೦,೦೦೦ |
| ಶಿರಾ | – | ೧೭ | ೨ | – | ೧೭,೦೦೦ | ೪೦,೦೦೦ |
| **ಒಟ್ಟು** | ೧ | ೩೦ | ೩ | **೬,೦೦೦** | **೮೫,೦೦೦** | **೬೦,೦೦೦** |

**ಆಧಾರ: ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತುಮಕೂರು**

**ಜಿಲ್ಲಾ ಪುನರ್ವಸತಿ ಕೇಂದ್ರ ಯೋಜನೆ:** ರಾಜ್ಯದಲ್ಲಿ ಮಂಗಳೂರು, ಬಳ್ಳಾರಿ, ಗುಲ್ಬರ್ಗ, ಬೆಳಗಾಂ ಮತ್ತು ತುಮಕೂರಿನಲ್ಲಿ ಒಂದೊಂದು ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರವನ್ನು ತೆರೆಯಲಾಗಿದೆ.

**ಅಂಗವಿಕಲರಿಗೆ ಸಾಧನ ಸಲಕರಣೆಗಳ ಪೂರೈಕೆ:** ಕುಟುಂಬದ ವಾರ್ಷಿಕ ಆದಾಯವು ರೂ. ೧೧,೫೦೦ಗಳನ್ನು ಮೀರದ ಗ್ರಾಮೀಣ ಪ್ರದೇಶದ ಅಂಗವಿಕಲರಿಗೆ ಮತ್ತು ಕುಟುಂಬದ ವಾರ್ಷಿಕ ಆದಾಯವು ರೂ. ೨೪,೦೦೦ಗಳನ್ನು ಮೀರದ ನಗರ ಪ್ರದೇಶದ ಅಂಗವಿಕಲರಿಗೆ ಅವರ ನ್ಯೂನತೆಗೆ ಅಗತ್ಯವಾದ ಸಾಧನ ಸಲಕರಣೆಗಳನ್ನು ಈ ಯೋಜನೆಯಡಿ ಒದಗಿಸಲಾಗುತ್ತದೆ. ತ್ರಿಚಕ್ರ ವಾಹನಗಳು, ಕೃತಕ ಅವಯವಗಳು, ಶ್ರವಣ ಸಾಧನ, ಗಾಲಿ ಕುರ್ಚಿ ಮುಂತಾದ ಸಲಕರಣೆ ಸವಲತ್ತುಗಳನ್ನು ಈ ಯೋಜನೆಯಡಿ ಒದಗಿಸಲಾಗುತ್ತದೆ.

**ಇ) ಸಾರ್ವಜನಿಕ ಅರಿವು ಮೂಡಿಸುವ ಯೋಜನೆಗಳು**

ಈ ಯೋಜನೆಯ ಅಡಿಯಲ್ಲಿ ಭಿತ್ತಿ ಚಿತ್ರ, ನಿಯತ ಕಾಲಿಕೆಗಳನ್ನು ಮುದ್ರಿಸಿ ರಾಜ್ಯಾದ್ಯಂತ ಪ್ರಚಾರ ಇತ್ಯಾದಿ ಕಾರ್ಯಕ್ರಮಗಳ ಮೂಲಕ ವಿವಿಧ ಕಾರ್ಯಕ್ರಮಗಳ ಕುರಿತು ಸಾಮಾನ್ಯರಿಗೆ ತಿಳುವಳಿಕೆ ನೀಡಲಾಗುವುದು.

**ವಿಶ್ವ ಅಂಗವಿಕಲರ ದಿನಾಚರಣೆ:** ವಿವಿಧ ಕ್ರೀಡೆಗಳಲ್ಲಿ ಅಂಗವಿಕಲರು ಭಾಗವಹಿಸುವಂತೆ ಪ್ರೋತ್ಸಾಹಿಸುವ ಉದ್ದೇಶದಿಂದ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಯೋಜನೆಯಡಿಯಲ್ಲಿ ರಾಜ್ಯದ ಎಲ್ಲ ಭಾಗಗಳಲ್ಲಿಯೂ, ಡಿಸೆಂಬರ್ ತಿಂಗಳ ಮೂರನೇ ತಾರೀಖಿನಂದು ಅಂಗವಿಕಲರ ದಿನಾಚರಣೆಯನ್ನು ಆಚರಿಸಲಾಗುತ್ತದೆ. ವಿಶ್ವ ಅಂಗವಿಕಲರ ದಿನಾಚರಣೆ ಸಂದರ್ಭದಲ್ಲಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ ಪ್ರತಿಭಾ ಪುರಸ್ಕಾರ ಬಹುಮಾನ ವಿತರಣೆಗೆ ಅವಕಾಶವನ್ನೂ ಮಾಡಲಾಗುತ್ತದೆ.

**ಅಂಗವಿಕಲರಿಗಾಗಿ ಕ್ರೀಡಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ:** ದೈಹಿಕ ಚಟುವಟಿಕೆಗಳನ್ನು ಮತ್ತು ಆ ಮೂಲಕ ಆರೋಗ್ಯವನ್ನು ಹಾಗೂ ಆತ್ಮ ವಿಶ್ವಾಸವನ್ನೂ ಹೆಚ್ಚಿಸಲು, ಇಲಾಖೆಯು ಅಂಗವಿಕಲರಿಗಾಗಿ ಕ್ರೀಡಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರತಿ ವರ್ಷ ನಡೆಸುತ್ತದೆ.

**ಈ) ಇತರ ಯೋಜನೆಗಳು**

**ಗುರುತಿನ ಚೀಟಿ ವಿತರಣೆ:** ಈ ಯೋಜನೆಯಡಿ, ಜಿಲ್ಲೆಯ ಅಂಗವಿಕಲರಿಗೆ ಗುರುತಿನ ಚೀಟಿಗಳನ್ನು ಐದು ವರ್ಷಗಳಿಂದ ವಿತರಣೆ ಮಾಡುತ್ತಾ ಬರಲಾಗಿದೆ. ವಿವಿಧ ಬಗೆಯ ಅಂಗವಿಕಲತೆಯನ್ನು ಗುರುತಿಸುವ ಸಲುವಾಗಿ ವಿವಿಧ ಬಣ್ಣವಿರುವ ಗುರುತಿನ ಚೀಟಿಗಳನ್ನು ನೀಡಲಾಗುತ್ತದೆ.

**ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ರಿಯಾಯಿತಿ ಬಸ್ ಪಾಸ್:** ಸರ್ಕಾರವು, ಈ ಯೋಜನೆಯಡಿ ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ರಿಯಾಯಿತಿ ದರದಲ್ಲಿ, ಬಸ್ ಪಾಸ್ ವಿತರಿಸುತ್ತಿದೆ.

ಮೇಲಿನ ಯೋಜನೆಗಳಲ್ಲದೆ, ಅಂಗವಿಕಲರ ಸರ್ವತೋಮುಖ ಅಭಿವೃದ್ಧಿಗಾಗಿ;'ಸಮುದಾಯ ಪುನರ್ವಸತಿ ಯೋಜನೆ' ತರಬೇತಿಗೆ ಮತ್ತು ಉತ್ಪಾದನಾ ಕೇಂದ್ರಗಳ ಸ್ಥಾಪನೆಗೆ ಧನ ಸಹಾಯವನ್ನು ನೀಡಲು 'ತರಬೇತಿ ಹಾಗೂ ಉತ್ಪಾದನಾ ಘಟಕ ಸ್ಥಾಪಿಸುವ ಯೋಜನೆ' ಪಿ.ಯು.ಸಿ ಮತ್ತು ಬಿ.ಎ.ತರಗತಿಗಳಲ್ಲಿ ಓದುತ್ತಿರುವ ಅಂಧ ವಿದ್ಯಾರ್ಥಿಗಳಿಗೆ ಅವರ ಪಠ್ಯ ಪುಸ್ತಕಗಳನ್ನು ಆಡಿಯೋ ಕ್ಯಾಸೆಟ್‌ಗಳಲ್ಲಿ ಧ್ವನಿ ಮುದ್ರಿಸಿ ಟೇಪ್ ರೆಕಾರ್ಡರ್ ಸಹಿತ ಪ್ರಾಂಶುಪಾಲರ ಮುಖಾಂತರ ನೀಡುವಂಥ **'ಅಂಧ ವಿದ್ಯಾರ್ಥಿಗಳಿಗೆ ಶಬ್ದ ಗ್ರಂಥಾಲಯ'** ಎಂಬ ಕಾರ್ಯಕ್ರಮ; ಇನ್ನಿತರ ಹಲವಾರು ಕಾರ್ಯಕ್ರಮಗಳೊಂದಿಗೆ ಇಲಾಖೆಯು ರಾಜ್ಯದ ವಿವಿಧೆಡೆಗಳಲ್ಲಿ ಅನುಷ್ಠಾನಗೊಳಿಸುತ್ತಿದೆ.

## ಹಿರಿಯ ನಾಗರಿಕರ ಕಲ್ಯಾಣಕ್ಕಾಗಿ ಕಾರ್ಯಕ್ರಮಗಳು

**ಹಿರಿಯ ನಾಗರಿಕರಿಗಾಗಿ ರಾಜ್ಯ ಕಾರ್ಯ ನೀತಿ:** ದಿನಾಂಕ ೨೫.೮.೧೯೯೯ರ ಪತ್ರದಲ್ಲಿ ಹಿರಿಯ ನಾಗರಿಕರ ಕಲ್ಯಾಣಕ್ಕಾಗಿ ಸಂಯೋಜನಾ ಮಂತ್ರಾಲಯವಾಗಿರುವ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಅಧಿಕಾರಯುಕ್ತ ಮಂತ್ರಾಲಯವು ೧೯೯೯ನೇ ಸಾಲಿಗೆ ವೃದ್ಧರಿಗೆ ರಾಷ್ಟ್ರೀಯ ನೀತಿಯನ್ನು ರಚಿಸಿತು. ಈ ನೀತಿಯು, ವಯಸ್ಸಾದವರ ಸಮಸ್ಯೆಗಳ ಕುರಿತು ರಾಷ್ಟ್ರಕ್ಕೆ ಕಳಕಳಿ ಇದೆ ಎಂಬ ಅಂಶವನ್ನೂ, ಅವರು ರಕ್ಷಣೆರಹಿತರಾಗಿ ಇರುವುದಿಲ್ಲ ಮತ್ತು ನಿರ್ಲಕ್ಷ್ಯಕ್ಕೆ ಒಳಪಟ್ಟವರಲ್ಲ ಎಂಬ ಭರವಸೆಯನ್ನೂ ನೀಡುತ್ತದೆ. ಸಮಾಜದಲ್ಲಿ ಅವರ ಕಾನೂನು ಬದ್ಧ ಸ್ಥಾನವನ್ನು ಗಟ್ಟಿಗೊಳಿಸಿ, ಅವರಿಗೆ ಸಹಾಯ ನೀಡಿ ಅವರ ಜೀವಿತದ ಕೊನೆಯವರೆಗೂ ಶಾಂತಿ ಮತ್ತು ಗೌರವವನ್ನು ಬಲಪಡಿಸುವ ಉದ್ದೇಶವನ್ನು ಹೊಂದಿರುತ್ತದೆ. ಈ ಉದ್ದೇಶದಿಂದ, ವೃದ್ಧರಿಗಾಗಿ ಒಂದು ಕಾರ್ಯನೀತಿಯನ್ನು ಜಾರಿಗೊಳಿಸಬೇಕೆಂದು ಕೇಂದ್ರ ಸರ್ಕಾರವು, ರಾಜ್ಯ ಸರ್ಕಾರವನ್ನು ದಿನಾಂಕ ೧೩.೫.೨೦೦೩ರ ಪತ್ರದಲ್ಲಿ ಕೋರಿದ್ದು, ಅದರಂತೆ, ರಾಜ್ಯ ಸರ್ಕಾರದ ಸಂಖ್ಯೆ. ಡಬ್ಲೂಸಿಡಿ/೩೧೪/ ಎಸ್‌ಜೆಡಿ/೨೦೦೩, ದಿ ೫.೯.೨೦೦೩ರ ಆದೇಶದಲ್ಲಿ ಹಿರಿಯ ನಾಗರಿಕರಿಗಾಗಿ ಕಾರ್ಯ ನೀತಿಯನ್ನು ರೂಪಿಸಿ, ಈ ಆದೇಶವು ಕೂಡಲೇ ಜಾರಿಗೆ ಬರುವಂತೆ ಆದೇಶಿಸಿರುತ್ತದೆ. ಈ ಎಲ್ಲ ಅನುಕೂಲಗಳನ್ನು ಅಂಗವಿಕಲರ ಮತ್ತು ಹಿರಿಯ

ನಾಗರಿಕರ ಕಲ್ಯಾಣ ಇಲಾಖೆಯ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಜಿಲ್ಲಾ ಮಟ್ಟದಲ್ಲಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಹಾಗೂ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಹಿರಿಯ ನಾಗರಿಕರ ಕಲ್ಯಾಣಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನೂ ಜಾರಿಗೆ ತರುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

**ಹಿರಿಯ ನಾಗರಿಕರ ದಿನಾಚರಣೆ:** ಅರವತ್ತರ ವಯಸ್ಸನ್ನು ದಾಟಿದ ಯಾವುದೇ ವ್ಯಕ್ತಿ ಜೀವನದಲ್ಲಿ ನಿರುತ್ಸಾಹಗೊಳ್ಳದೆ ಕ್ರಿಯಾತ್ಮಕವಾಗಿ ಮತ್ತು ತೃಪ್ತಿಕರವಾಗಿ ಜೀವನವನ್ನು ನಡೆಸುವಂತಾಗಬೇಕೆಂಬ ದೃಷ್ಟಿಯಿಂದ ಹಾಗೂ ಅರವತ್ತು ವರ್ಷಗಳ ನಂತರದ ಹಂತವು ಆಶ್ರಿತ ಜೀವನದ ಪ್ರಾರಂಭ ಕಾಲವೆಂದು ಭಾವಿಸದಂತೆ ನೋಡಿಕೊಳ್ಳಬೇಕೆಂಬ ಕುರಿತು ಚಿಂತನೆಗಳು ನಡೆದು, ೧೯೯೯–೨೦೦೦ನೇ ಸಾಲನ್ನು, ವಯಸ್ಸಾದ ವ್ಯಕ್ತಿಗಳ ಅಥವಾ **ಹಿರಿಯ ನಾಗರಿಕರ ಅಂತರ ರಾಷ್ಟ್ರೀಯ ವರ್ಷ**ವೆಂದು ಒಕ್ಕೂಟ ರಾಷ್ಟ್ರಗಳು ಘೋಷಿಸಿದವು.

ಹಿರಿಯ ನಾಗರಿಕರ ಸರ್ವತೋಮುಖ ಅಭಿವೃದ್ಧಿಯ ಬಗ್ಗೆ ಸಮಗ್ರ ಕಾರ್ಯ ನೀತಿಯನ್ನು ಸಿದ್ಧಪಡಿಸುವ ಪ್ರಯತ್ನದಲ್ಲಿ ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ರಾಷ್ಟ್ರ ಹಾಗೂ ರಾಜ್ಯ ನೀತಿಯನ್ನು ರೂಪಿಸಿವೆ. ಈ ನೀತಿಯ ಉದ್ದೇಶದ ಕುರಿತು ಹಾಗೂ ಈ ಹಿರಿಯರಿಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಕುರಿತು ಅರಿವು ಮೂಡಿಸುವ ಸಲುವಾಗಿ ಪ್ರತಿ ವರ್ಷ ಅಕ್ಟೋಬರ್ ಒಂದರಂದು ವಿಶ್ವ ಹಿರಿಯ ನಾಗರಿಕರ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಕರ್ನಾಟಕ ರಾಜ್ಯದಲ್ಲಿಯೂ ಪ್ರಥಮ ಬಾರಿಗೆ ದಿನಾಂಕ ೧.೧೦.೨೦೦೪ರಂದು ವಿಶ್ವ ಹಿರಿಯ ನಾಗರಿಕರ ದಿನಾಚರಣೆಯನ್ನು ಆಚರಿಸಲಾಯಿತು.

ತುಮಕೂರು ಜಿಲ್ಲೆಯಲ್ಲಿ ಪ್ರತಿ ವರ್ಷ ಅಕ್ಟೋಬರ್ ಒಂದರಂದು ವಿಶ್ವ ಹಿರಿಯ ನಾಗರಿಕರ ದಿನಾಚರಣೆಯನ್ನು ಆಚರಿಸಲಾಗುತ್ತದೆ. ೨೦೦೮–೦೯ನೇ ಸಾಲಿನಲ್ಲಿ ಈ ಆಚರಣೆಗಾಗಿ ರೂ. ३೫,೦೦೦ ಗಳನ್ನು ಈ ಜಿಲ್ಲೆಯಲ್ಲಿ ಖರ್ಚು ಮಾಡಲಾಗಿದೆ. ಈ ಜಿಲ್ಲೆಯ ಹತ್ತು ತಾಲೂಕುಗಳ ವ್ಯಾಪ್ತಿಯಲ್ಲಿ ಬರುವ ೧೨,೫೦೦ ಹಿರಿಯ ನಾಗರಿಕ–ರಿಗೆ ಗುರುತಿನ ಚೀಟಿಯನ್ನು ವಿತರಿಸಲಾಗಿದೆ. ಮತ್ತು ಈ ಪೈಕಿ ೫೫೦ ದೂರುಗಳು ಬಂದಿದ್ದು, ಎಲ್ಲ ಪ್ರಕರಣಗಳನ್ನೂ ಇತ್ಯರ್ಥ ಮಾಡಲಾಗಿದೆ. ಇವರಿಗಾಗಿ ಸಹಾಯವಾಣಿಯನ್ನು ಶ್ರೀರಾಮ ಫೌಂಡೇಷನ್ ಹಾಗೂ ತುಮಕೂರು ರೂರಲ್ ಡೆವಲಪ್‌ಮೆಂಟ್ ಸಂಸ್ಥೆಗಳ ವತಿಯಿಂದ ನಡೆಸಲಾಗುತ್ತಿದೆ.

## ಸ್ವಯಂ ಸೇವಾ ಸಂಸ್ಥೆಗಳಿಗೆ ಕೇಂದ್ರ ಸರ್ಕಾರದ ಅನುದಾನ

ರಾಜ್ಯ ಅನುದಾನಿತ ವೃದ್ಧಾಶ್ರಮಗಳನ್ನು ಹೊರತು ಪಡಿಸಿ, ಹಿರಿಯ ನಾಗರಿಕರಿಗಾಗಿ ನಡೆಸುತ್ತಿರುವ ಇತರ ಸ್ವಯಂ ಸೇವಾ ಸಂಸ್ಥೆಗಳಿಗೆ, ಸಿಬ್ಬಂದಿ ಸಹಿತ ಉಚಿತ ಸೌಲಭ್ಯಗಳನ್ನು ನೀಡಲು ಕೇಂದ್ರ ಸರ್ಕಾರವು ಶೇಕಡ ೯೦ರಷ್ಟು ಅನುದಾನವನ್ನು ನೀಡಿ, ಈ ಸಂಸ್ಥೆಗಳನ್ನು ನಿರ್ವಹಿಸುವವರಿಗೆ ಪ್ರೋತ್ಸಾಹ ನೀಡುತ್ತಿದೆ. ಈ ಜಿಲ್ಲೆಯಲ್ಲಿ ಮೂರು ವೃದ್ಧಾಶ್ರಮಗಳು ಕೇಂದ್ರದಿಂದ ಈ ಅನುದಾನವನ್ನು ಪಡೆದು ಹಿರಿಯ ನಾಗರಿಕರಿಗೆ ಆಸರೆ ನೀಡುತ್ತಿವೆ.

## ಸ್ವಯಂ ಸೇವಾ ಸಂಸ್ಥೆಗಳಿಗೆ ಕೇಂದ್ರ ಸರ್ಕಾರದ ಅನುದಾನ

ಹಿರಿಯ ನಾಗರಿಕರಿಗಾಗಿ ನಡೆಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳಲ್ಲಿ ಎಲ್ಲ ವೃದ್ಧರಿಗೆ ಆಹಾರ, ವೈದ್ಯಕೀಯ ಸವಲತ್ತು ಮತ್ತು ಇತರ ಮೂಲಭೂತ ಸೌಲಭ್ಯಗಳನ್ನು ಉಚಿತವಾಗಿ ನೀಡಲು, ರಾಜ್ಯ ಸರ್ಕಾರವು ನೂರಕ್ಕೆ ನೂರರಷ್ಟು ಅನುದಾನವನ್ನು ನೀಡಿ, ಈ ಸಂಸ್ಥೆಗಳನ್ನು ನಿರ್ವಹಿಸುವವರಿಗೆ ನೆರವಾಗುತ್ತಿದೆ. ತುಮಕೂರು ಜಿಲ್ಲೆಯ ಪಾವಗಡದಲ್ಲಿ ಒಂದು ವೃದ್ಧಾಶ್ರಮವಿದೆ. ವೇಣು ಗೋಪಾಲಸ್ವಾಮಿಯ ದೇವಸ್ಥಾನದ ಹತ್ತಿರ ಇರುವ. ಶ್ರೀ ಸ್ವಾಮಿ ಸರ್ವಧರ್ಮ ಶರಣಾಲಯ ಟ್ರಸ್ಟ್‌ನ ಶ್ರೀ ಸಾಯಿ ವೃದ್ಧಾಶ್ರಮವು, ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಇಂಥ ಒಂದು ಸ್ವಯಂ ಸೇವಾ ಸಂಸ್ಥೆಯಾಗಿದೆ. ಇದರಲ್ಲಿರುವ ಫಲಾನುಭವಿಗಳ ಸಂಖ್ಯೆ ಇಪ್ಪತ್ತೈದು ವಯಸ್ಸಾದವರ ಸುರಕ್ಷತೆ, ಆರ್ಥಿಕ ಭದ್ರತೆ, ಆರೋಗ್ಯ ಪಾಲನೆ, ಕ್ಷೇಮಾಭಿವೃದ್ಧಿ, ತೃಪ್ತಿಕರ ಜೀವನ ನಡೆಸಲು ಅವಕಾಶ, ಆಸ್ತಿ ಮತ್ತು ಜೀವ ರಕ್ಷಣೆ, ವಸತಿ ಮತ್ತು ಆಶ್ರಮ, ವಯಸ್ಸಾದವರೂ ಸಂಪನ್ಮೂಲ ವ್ಯಕ್ತಿಗಳೆಂಬ ಸತ್ಯದ ಗುರುತಿಸುವಿಕೆ, ಇವೇ ಮುಂತಾದ ಅಂಶಗಳನ್ನು ಕರ್ನಾಟಕ ರಾಜ್ಯ ನೀತಿಯು ಒಳಗೊಂಡಿರುತ್ತದೆ. ಸಾರ್ವಜನಿಕ ವಾಹನಗಳಲ್ಲಿ ಸೀಟುಗಳನ್ನು ಮೀಸಲಿರಿಸುವುದು, ವಂಚನೆ ಮತ್ತು

ಮೋಸದ ಪ್ರಕರಣಗಳಿಗೆ ಸಂಬಂಧಿಸಿದಂತೆ ವಯಸ್ಸಾದ ವ್ಯಕ್ತಿಗಳ ದೂರುಗಳನ್ನು ವಿಳಂಬ ಮಾಡದೇ ವಿಲೇವಾರಿ ಮಾಡುವುದು ಮೊದಲಾದವು ರಾಷ್ಟ್ರೀಯ ನೀತಿಯಲ್ಲಿ ಅಳವಡಿಸಲಾಗಿರುವ ಇನ್ನಿತರ ಮುಖ್ಯ ಅಂಶಗಳಾಗಿವೆ.

## ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಮಂಡಳಿ

ದುರ್ಬಲ ವರ್ಗದವರು, ಮಹಿಳೆಯರು ಮತ್ತು ಮಕ್ಕಳ ಒಳಿತಿಗಾಗಿ ಶ್ರಮಿಸಬೇಕೆಂಬ ಉದ್ದೇಶದಿಂದ ಕೇಂದ್ರ ಸಮಾಜ ಕಲ್ಯಾಣ ಮಂಡಳಿಯು ೧೯೫೩ರಲ್ಲಿ ಸ್ಥಾಪನೆಗೊಂಡಿತು. ಇದು ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಈ ಮಂಡಳಿಯ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಪ್ರತಿಯೊಂದು ರಾಜ್ಯದಲ್ಲೂ ಸಮಾಜ ಕಲ್ಯಾಣ ಮಂಡಳಿಗಳು ರಚನೆಗೊಂಡವು. ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಮಂಡಳಿಯು ೧೯೫೪ರಲ್ಲಿ ಸ್ಥಾಪನೆಗೊಂಡಿದೆ. ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಮಂಡಳಿಯ ಸಿಬ್ಬಂದಿ ವೇತನ ಮತ್ತು ಆಡಳಿತಾತ್ಮಕ ವೆಚ್ಚವನ್ನು ಕೇಂದ್ರ ಸಮಾಜ ಕಲ್ಯಾಣ ಮಂಡಳಿ ಮತ್ತು ರಾಜ್ಯ ಸಮಾಜ ಕಲ್ಯಾಣ ಮಂಡಳಿಗಳು ಸಮನಾಗಿ ಶೇಕಡ ೫೦:೫೦ರಂತೆ ಭರಿಸುತ್ತವೆ.

### ರಾಜೀವ ಗಾಂಧಿ ರಾಷ್ಟ್ರೀಯ ಶಿಶು ಪಾಲನಾ ಕೇಂದ್ರ

ಈ ಕಾರ್ಯಕ್ರಮವು ೧೯೭೭ರಲ್ಲಿ ಕೇಂದ್ರ ಸರ್ಕಾರದಿಂದ ಪ್ರಾರಂಭವಾಗಿ ನಂತರ ಕೇಂದ್ರ ಸಮಾಜ ಕಲ್ಯಾಣ ಮಂಡಳಿಯಿಂದ ನಡೆಸಲ್ಪಡುತ್ತಿದೆ. ಉದ್ಯೋಗಸ್ಥ ತಾಯಂದಿರು, ಆಸ್ಪತ್ರೆಯಲ್ಲಿ ಸೇರಿಸಲ್ಪಟ್ಟ ಮಹಿಳೆಯರು, ಸಾಂಕ್ರಾಮಿಕ ರೋಗವಿರುವ ತಾಯಂದಿರು, ಪ್ರಸವದ ನಂತರ ಉಂಟಾದ ನ್ಯೂನತೆಗಳಿರುವ ತಾಯಂದಿರು, ಇವರ ಮಕ್ಕಳನ್ನು ನೋಡಿಕೊಳ್ಳಲು ಈ ಕಾರ್ಯಕ್ರಮವು ಅನುವು ಮಾಡಿ ಕೊಡುತ್ತದೆ. ಪ್ರತಿ ಘಟಕದಲ್ಲಿ ಆರು ವರ್ಷದ ಒಳಗಿನ ಇಪ್ಪತ್ತೈದು ಮಕ್ಕಳಿಗೆ ಪ್ರವೇಶಕ್ಕೆ ಅವಕಾಶವಿದೆ. ಈ ಪುಟ್ಟ ಮಕ್ಕಳಿಗೆ ಪೌಷ್ಠಿಕಾಂಶ ಪೂರೈಕೆ, ನಿದ್ರಿಸಲು ಅವಕಾಶ, ಆರೋಗ್ಯ ರಕ್ಷಣೆ ಅಲ್ಲದೆ ಆಟಕ್ಕೂ ಅನುಕೂಲ ಮಾಡಿಕೊಡಲಾಗುತ್ತದೆ. ತುಮಕೂರು ಜಿಲ್ಲೆಯಲ್ಲಿ ರಾಜ್ಯ ಮಂಡಳಿಯಿಂದ ಅನುದಾನ ಪಡೆದ ಶಿಶು ಪಾಲನಾ ಕೇಂದ್ರಗಳಲ್ಲಿ, ೨೦೦೮-೦೯ ರಿಂದ ೨೦೧೧-೧೨ರ ವರೆಗಿನ ಅವಧಿಯಲ್ಲಿ ಸೌಕರ್ಯವನ್ನು ಪಡೆದ ಫಲಾನುಭವಿಗಳು ಮತ್ತು ಆದ ಖರ್ಚಿನ ವಿವರವನ್ನು ಕೋಷ್ಟಕ ೧೬.೩೭ರಲ್ಲಿ ಕೊಡಲಾಗಿದೆ.

**ಕೋಷ್ಟಕ ೧೬.೩೭: ಶಿಶು ಪಾಲನಾ ಕೇಂದ್ರಗಳಲ್ಲಿ ೨೦೦೮-೦೯ ರಿಂದ ೨೦೧೧-೧೨ರ ವರೆಗಿನ ಅವಧಿಯಲ್ಲಿ ಸೌಕರ್ಯ ಪಡೆದ ಫಲಾನುಭವಗಳ ವಿವರ.**

| ವರ್ಷ | ಸಂಘ ಸಂಸ್ಥೆಗಳ ಸಂಖ್ಯೆ | | | ಅನುದಾನ ರೂ. ಗಳಲ್ಲಿ | ಘಟಕಗಳ ಸಂಖ್ಯೆ | ಫಲಾನು ಭವಿಗಳ ಸಂಖ್ಯೆ |
|---|---|---|---|---|---|---|
| | ನಗರ | ಗ್ರಾಮಾಂತರ | ಒಟ್ಟು | | | |
| ೨೦೦೮-೨೦೦೯ | ೦೭ | ೧೩ | ೨೦ | ೧೩,೯೮,೬೭೨ | ೩೩ | ೮೨೫ |
| ೨೦೦೯-೨೦೧೦ | ೦೭ | ೧೩ | ೨೦ | ೧೩,೯೮,೬೭೨ | ೩೩ | ೮೨೫ |
| ೨೦೧೦-೨೦೧೧ | ೦೬ | ೯ | ೧೫ | ೭,೨೦,೫೨೮ | ೧೭ | ೪೨೫ |
| ೨೦೧೧-೨೦೧೨ | ೦೫ | ೮ | ೧೩ | ೬,೩೫,೭೬೦ | ೧೬ | ೩೭೫ |

**ಆಧಾರ:ವಾರ್ಷಿಕ ವರದಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು**

**ಕೇಂದ್ರ ಮಂಡಳಿಯಿಂದ ಅನುದಾನ:** ತುಮಕೂರು ಜಿಲ್ಲೆಯ ಶಿಶು ಪಾಲನಾ ಕೇಂದ್ರದ ವಿವಿಧ ಘಟಕಗಳಿಗೆ ಕೇಂದ್ರ ಸಮಾಜ ಕಲ್ಯಾಣ ಮಂಡಳಿಯಿಂದ ನೇರವಾಗಿ ಅನುದಾನ ಬಿಡುಗಡೆಯಾಗಿದ್ದು, ೨೦೦೫-೦೬ನೇ ಸಾಲಿನಿಂದ ೨೦೦೭-೦೮ರ ವರೆಗಿನ ಅವಧಿಯಲ್ಲಿ ಸೌಕರ್ಯವನ್ನು ಪಡೆದ ಫಲಾನುಭವಿಗಳು ಮತ್ತು ಆದ ಖರ್ಚಿನ ವಿವರವನ್ನು ಕೋಷ್ಟಕ ೧೬.೩೮ರಲ್ಲಿ ನೀಡಲಾಗಿದೆ. ೨೦೦೮-೦೯ತ ರಿಂದ ೨೦೧೧-೧೨ರವರೆಗೆ ಕೇಂದ್ರ ಮಂಡಳಿಯಿಂದ ತುಮಕೂರಿಗೆ ಅನುದಾನವಿರುವುದಿಲ್ಲ.

**ಕೋಷ್ಟಕ ೧೬.೩೮: ಅನುದಾನ ಪಡೆದ ಸಂಘ ಸಂಸ್ಥೆಗಳು ಮತ್ತು ಆದ ಖರ್ಚಿನ ವಿವರ**

| ವರ್ಷ | ಸಂಘ ಸಂಸ್ಥೆಗಳ ಸಂಖ್ಯೆ | | | ಅನುದಾನ ರೂ. ಗಳಲ್ಲಿ | ಘಟಕಗಳ ಸಂಖ್ಯೆ | ಫಲಾನುಭವಿಗಳ ಸಂಖ್ಯೆ |
|---|---|---|---|---|---|---|
| | ನಗರ | ಗ್ರಾಮಾಂತರ | ಒಟ್ಟು | | | |
| ೨೦೦೫-೦೬ | ೦೧ | ೦೦ | ೦೧ | ೧೫,೨೯೮ | ೦೧ | ೨೫ |
| ೨೦೦೬-೦೭ | ೦೦ | ೦೧ | ೦೧ | ೪,೫೩,೨೦೦ | ೧೦ | ೨೫೦ |
| ೨೦೦೭-೦೮ | — | | | | | |

ಆಧಾರ: ವಾರ್ಷಿಕ ವರದಿಗಳು, ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಮಂಡಳಿ, ಬೆಂಗಳೂರು

## ಉದ್ಯೋಗಸ್ಥ ಮಹಿಳೆಯರ ವಸತಿ ಗೃಹಗಳು

ಕಡಿಮೆ ಆದಾಯವುಳ್ಳ ಮಹಿಳಾ ಉದ್ಯೋಗಿಗಳಿಗೆ ಊಟ ಮತ್ತು ವಸತಿ ಸೌಕರ್ಯಗಳನ್ನು ಒದಗಿಸುವ ಸೇವಾ ಸಂಸ್ಥೆಗಳಿಗೆ ಕನಿಷ್ಠ ಮಟ್ಟದ ಅಗತ್ಯಗಳ ಪೂರೈಕೆ, ಮನರಂಜನೆ, ವಾರ್ಡನ್‌ರ ಸಂಬಳ, ಕಟ್ಟಡದ ಬಾಡಿಗೆ – ಇವುಗಳಿಗಾಗಿ ಸಮಾಜ ಕಲ್ಯಾಣ ಮಂಡಳಿಯಿಂದ ಭಾಗಶಃ ಹಣದ ನೆರವನ್ನು ನೀಡಲಾಗುತ್ತದೆ.

ಈ ಜಿಲ್ಲೆಯಲ್ಲಿ ೨೦೦೫-೦೬ ರಿಂದ ೨೦೦೭-೦೮ರ ವರೆಗಿನ ಅವಧಿಯಲ್ಲಿ, ಉದ್ಯೋಗಸ್ಥ ಮಹಿಳೆಯರ ವಸತಿ ಗೃಹಗಳು ಮತ್ತು ಅವುಗಳಿಗೆ ನೀಡಲಾದ ಅನುದಾನದ ವಿವರಗಳನ್ನು ಕೋಷ್ಟಕ ೧೬.೩೯ರಲ್ಲಿ ನೀಡಲಾಗಿದೆ. ೨೦೦೮-೦೯ರಿಂದ ಉದ್ಯೋಗಸ್ಥ ಮಹಿಳೆಯರ ವಸತಿ ಗೃಹ ಕಾರ್ಯಕ್ರಮಗಳನ್ವಯ ಕೇಂದ್ರ ಮಂಡಳಿಯಿಂದ ರದ್ದು ಪಡಿಸಲಾಗಿದೆ.

**ಕೋಷ್ಟಕ ೧೬.೩೯: ಉದ್ಯೋಗಸ್ಥ ಮಹಿಳೆಯರ ವಸತಿ ಗೃಹಗಳು ಮತ್ತು ಅವುಗಳಿಗೆ ನೀಡಲಾದ ಅನುದಾನದ ವಿವರ**

| ವರ್ಷ | ಸಂಘ ಸಂಸ್ಥೆಗಳ ಸಂಖ್ಯೆ | | | ಅನುದಾನ ರೂ. ಗಳಲ್ಲಿ | ಘಟಕಗಳ ಸಂಖ್ಯೆ | ಫಲಾನುಭವಿಗಳ ಸಂಖ್ಯೆ |
|---|---|---|---|---|---|---|
| | ನಗರ | ಗ್ರಾಮಾಂತರ | ಒಟ್ಟು | | | |
| ೨೦೦೫-೦೬ | ೦೧ | ೦೦ | ೦೧ | ೧೦,೬೬೭ | ೦೧ | ೨೮ |
| ೨೦೦೬-೦೭ | ೦೧ | ೦೧ | ೦೨ | ೫೬,೦೦೦ | ೦೨ | ೫೦ |
| ೨೦೦೭-೦೮ | – | – | – | – | – | – |

ಆಧಾರ: ವಾರ್ಷಿಕ ವರದಿಗಳು, ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಮಂಡಳಿ, ಬೆಂಗಳೂರು

**ವಯಸ್ಕ ಹೆಣ್ಣು ಮಕ್ಕಳಿಗೆ ಸಂಕ್ಷಿಪ್ತ ಶಿಕ್ಷಣ:** ಈ ಯೋಜನೆಯನ್ನು ೧೯೫೮ರಲ್ಲಿ ಆರಂಭಿಸಲಾಯಿತು. ಹದಿನೈದು ವರ್ಷಗಳಿಗಿಂತ ಹೆಚ್ಚು ವಯಸ್ಸಿನ ಅವಿದ್ಯಾವಂತ ಹೆಣ್ಣು ಮಕ್ಕಳಿಗೆ ಒಂದು ಅಥವಾ ಎರಡು ವರ್ಷಗಳ ಅವಧಿಗೆ ಪ್ರಾಥಮಿಕ ಹಂತದ ತರಗತಿಗಳನ್ನು ನಡೆಸಲಾಗುತ್ತದೆ. ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದ ವಯಸ್ಕ ಮಹಿಳೆಯರ ಸ್ವಾವಲಂಬನೆಗೆ, ವೃತ್ತಿ ಶಿಕ್ಷಣಕ್ಕೆ ಅಥವಾ ಉದ್ಯೋಗಾವಕಾಶಕ್ಕೆ ಅನುವು ಮಾಡಿ ಕೊಡುವ ಉದ್ದೇಶದಿಂದ ಈ ಯೋಜನೆಯನ್ನು ಪ್ರಾರಂಭಿಸಲಾಗಿದೆ. ವಿಧವೆಯರು, ನಿರಾಶ್ರಿತರು, ಯೋಧರ ಕುಟುಂಬದ ಮಹಿಳೆಯರು ಹಾಗೂ ಗ್ರಾಮೀಣ ಮಹಿಳೆಯರಿಗೆ ಆದ್ಯತೆ ನೀಡಿ ಒಟ್ಟು ಇಪ್ಪತ್ತೈದು ಹೆಣ್ಣು ಮಕ್ಕಳಿಗೆ ಈ ಶಿಕ್ಷಣಕ್ಕೆ ಪ್ರವೇಶ ನೀಡಲಾಗುತ್ತದೆ ತುಮಕೂರು ಜಿಲ್ಲೆಯಲ್ಲಿ ೨೦೦೫-೦೬ ರಿಂದ ೨೦೧೧-೧೨ರ ವರೆಗಿನ ಅವಧಿಯಲ್ಲಿ ಸಂಕ್ಷಿಪ್ತ ಶಿಕ್ಷಣ ನೀಡಿದ ಸಂಸ್ಥೆಗಳ ಸಂಖ್ಯೆ, ಫಲಾನುಭವಿಗಳ ಸಂಖ್ಯೆ ಮತ್ತು ಖರ್ಚಾದ ಮೊತ್ತದ ವಿವರಗಳನ್ನು ಕೋಷ್ಟಕ ೧೬.೪೦ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೪೦: ತುಮಕೂರು ಜಿಲ್ಲೆಯಲ್ಲಿ ಸಂಕ್ಷಿಪ್ತ ಶಿಕ್ಷಣ ನೀಡಿದ ಸಂಸ್ಥೆಗಳು ಮತ್ತು ಫಲಾನುಭವಿಗಳ ಸಂಖ್ಯೆ ಹಾಗೂ ಖರ್ಚಾದ ಮೊತ್ತ ವಿವರ**

| ವರ್ಷ | ಸಂಘ ಸಂಸ್ಥೆಗಳ ಸಂಖ್ಯೆ | | | ಅನುದಾನ ರೂ. ಗಳಲ್ಲಿ | ಘಟಕಗಳ ಸಂಖ್ಯೆ | ಫಲಾನುಭವಿಗಳ ಸಂಖ್ಯೆ |
|---|---|---|---|---|---|---|
| | ನಗರ | ಗ್ರಾಮಾಂತರ | ಒಟ್ಟು | | | |
| ೨೦೦೫-೦೬ (ಒಂದುವರ್ಷದ ಕೋರ್ಸ್) | ೦೧ | ೦೦ | ೦೧ | ೬೫,೮೫೦ | ೦೧ | ೨೫ |
| ೨೦೦೫-೦೬ (ಎರಡು ವರ್ಷದ ಕೋರ್ಸ್) | ೦೨ | ೦೧ | ೦೩ | ೨,೯೫,೫೦೦ | ೦೩ | ೭೫ |
| ೨೦೦೬-೦೭ (ಎರಡು ವರ್ಷದ ಕೋರ್ಸ್) | ೦೦ | ೦೨ | ೦೨ | ೨,೧೪,೨೫೦ | ೦೨ | ೫೦ |
| ೨೦೦೭-೦೮ (ಎರಡು ವರ್ಷದ ಕೋರ್ಸ್) | - | ೦೧ | ೦೧ | ೯೪,೫೦೦ | ೦೧ | ೨೫ |
| ೨೦೦೮-೦೯ | - | ೦೧ | ೦೧ | ೯೪,೫೦೦ | ೦೧ | ೨೫ |
| ೨೦೦೯-೧೦ | ಮಂಜೂರಾತಿ ಇರುವುದಿಲ್ಲ(ಕೇಂದ್ರ ಮಂಡಳಿಯಿಂದ) | | | | | |
| ೨೦೧೦-೨೦೧೧ | ಮಂಜೂರಾತಿ ಇರುವುದಿಲ್ಲ(ಕೇಂದ್ರ ಮಂಡಳಿಯಿಂದ) | | | | | |
| ೨೦೧೧-೨೦೧೨ | ಮಂಜೂರು ನೀಡಿದ್ದರೂ ಸಂಸ್ಥೆಯವರು ನಡೆಸಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ, ಕಾರಣ ವಿದ್ಯಾರ್ಥಿಗಳ ಅಭಾವ) | | | | | |

**ಆಧಾರ: ವಾರ್ಷಿಕ ವರದಿಗಳು, ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಮಂಡಳಿ, ಬೆಂಗಳೂರು**

## ಗ್ರಾಮೀಣ ಮಹಿಳೆಯರಿಗಾಗಿ ಜಾಗೃತಿ ಮೂಡಿಸುವ ಶಿಬಿರಗಳು

ಸ್ತ್ರೀಯರ ಸ್ಥಾನ ಮಾನ, ಕಾನೂನು, ಆರೋಗ್ಯ, ತಂತ್ರಜ್ಞಾನ, ಪರಿಸರ, ಆರ್ಥಿಕತೆ, ಧರ್ಮ ಮತ್ತು ಸಂಸ್ಕೃತಿ, ರಾಜ್ಯ ಹಾಗೂ ಕೇಂದ್ರ ಸರ್ಕಾರದ ಯೋಜನೆಗಳು ಮತ್ತು ಸ್ತ್ರೀ-ಸಂಬಂಧಿ ವಿಷಯಗಳ ಕುರಿತು ಚರ್ಚೆ ಮತ್ತು ಸಂವಾದಗಳನ್ನು ಈ ಶಿಬಿರಗಳಲ್ಲಿ ಏರ್ಪಡಿಸಲಾಗುತ್ತದೆ. ಗ್ರಾಮೀಣ ಮಹಿಳೆಯರನ್ನು ಒಂದೆಡೆ ಒಗ್ಗೂಡಿಸಿ ಅವರ ಅನುಭವ ಮತ್ತು ಅಭಿಪ್ರಾಯಗಳ ಪರಸ್ಪರ ವಿನಿಮಯಕ್ಕೆ ಅವಕಾಶ ಕಲ್ಪಿಸುವ ಮೂಲಕ ಅವರ ವಸ್ತು ಸ್ಥಿತಿ ಅರಿತುಕೊಳ್ಳಲು ಹಾಗೂ ತಮ್ಮತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಂಡು ತಮ್ಮ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳಲು ಈ ಜಾಗೃತಿ ಶಿಬಿರವು ವೇದಿಕೆಯನ್ನು ಒದಗಿಸಿಕೊಡುತ್ತದೆ. ಇದೇ ಈ ಶಿಬಿರದ ಮುಖ್ಯ ಉದ್ದೇಶ. ತುಮಕೂರು ಜಿಲ್ಲೆಯಲ್ಲಿ ೨೦೦೮-೦೯ ರಿಂದ ೨೦೧೧-೧೨ರ ವರೆಗಿನ ಅವಧಿಯಲ್ಲಿ ಶಿಬಿರಗಳನ್ನು ನಡೆಸಿದ ಸಂಸ್ಥೆಗಳು, ಭಾಗವಹಿಸಿದ ಫಲಾನುಭವಿಗಳ ಸಂಖ್ಯೆ ಮತ್ತು ನೀಡಲಾದ ಅನುದಾನದ ವಿವರಗಳನ್ನು ಕೋಷ್ಟಕ ೧೬.೪೧ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೪೧: ಜಿಲ್ಲೆಯಲ್ಲಿ ನಡೆಸಿದ ಜಾಗೃತಿ ಶಿಬಿರಗಳು, ಭಾಗವಹಿಸಿದ ಫಲಾನುಭವಿಗಳ ಸಂಖ್ಯೆ ಮತ್ತು ನೀಡಲಾದ ಅನುದಾನದ ವಿವರ**

| ವರ್ಷ | ಸಂಘ ಸಂಸ್ಥೆಗಳ ಸಂಖ್ಯೆ | | | ಅನುದಾನ ರೂ. ಗಳಲ್ಲಿ | ಘಟಕಗಳ ಸಂಖ್ಯೆ | ಫಲಾನು ಭವಿಗಳ ಸಂಖ್ಯೆ |
|---|---|---|---|---|---|---|
| | ನಗರ | ಗ್ರಾಮಾಂತರ | ಒಟ್ಟು | | | |
| ೨೦೦೮-೨೦೦೯ | ೦ | ೪ | ೪ | ೬೨,೫೦೦ | ೭ | ೧೭೫ |
| ೨೦೦೯-೨೦೧೦ | ೩ | ೬ | ೯ | ೧,೬೫,೦೦೦ | ೧೭ | ೪೨೫ |
| ೨೦೧೦-೨೦೧೧ | ೦ | ೦ | ೦ | ೦ | ೦ | ೦ |
| ೨೦೧೧-೨೦೧೨ | ೧ | ೪ | ೫ | ೭೦,೦೦೦ | ೮ | ೨೦೦ |

**ಆಧಾರ: ವಾರ್ಷಿಕ ವರದಿಗಳು, ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಮಂಡಳಿ, ಬೆಂಗಳೂರು**

**ಪೂರ್ವಭಾವಿ ತರಬೇತಿ ಕಾರ್ಯಕ್ರಮ:** ಕರ್ನಾಟಕ ರಾಜ್ಯ ಸಮಾಜ ಮಂಡಳಿಯು ಪೂರ್ವಭಾವಿ ತರಬೇತಿಗಳನ್ನು ಅನುದಾನಿತ ಹಾಗೂ ಅನುದಾನ ರಹಿತ ಸಂಘ ಸಂಸ್ಥೆಗಳಿಗೆ ೨೦೦೫-೦೬ನೇ ಸಾಲಿನಲ್ಲಿ ನೀಡಿದೆ. ರಾಜ್ಯದ ಎಂಟು ಜಿಲ್ಲೆಗಳಲ್ಲಿ ಒಂಬತ್ತು ತರಬೇತಿಗಳನ್ನು ಏರ್ಪಡಿಸಿದ್ದು, ತುಮಕೂರು ಜಿಲ್ಲೆಯಲ್ಲಿ ಇಂಥ ಒಂದು ಕಾರ್ಯಕ್ರಮ ನಡೆಸಿದೆ. ಇಪ್ಪತ್ತೈದು ಫಲಾನುಭವಿಗಳು ಈ ಕಾರ್ಯಕ್ರಮದ ಪ್ರಯೋಜನ ಪಡೆದಿದ್ದು, ರೂ. ೧೫,೦೦೦ ಗಳನ್ನು ಇದಕ್ಕಾಗಿ ಖರ್ಚು ಮಾಡಲಾಗಿದೆ.

ಮೇಲಿನ ಕಾರ್ಯಕ್ರಮಗಳೇ ಅಲ್ಲದೆ, ನೊಂದ ಮಹಿಳೆಯರಿಗೆ ಸಹಾಯ ಮಾಡಲು ಮಹಿಳಾ ಸಹಾಯವಾಣಿ(ಹೆಲ್ಪ್‌ಲೈನ್), ಹೊಸ ಪದ್ಧತಿ ಯೋಜನೆ (ಇನ್ನೋವೇಟಿವ್ ಸ್ಕೀಮ್) ಎಂಬ ಕಾರ್ಯಕ್ರಮಗಳನ್ನೂ ಈ ಮಂಡಳಿಯಿಂದ ನಿರ್ವಹಿಸಲಾಗುತ್ತಿದ್ದು, ಈ ಜಿಲ್ಲೆಯಲ್ಲಿ ಇದು ಕಾರ್ಯಗತಗೊಂಡಿರುವುದಿಲ್ಲ.

## ಹಿಂದುಳಿದ ವರ್ಗಗಳ ಕಲ್ಯಾಣ

ಹಿಂದುಳಿದ ಜನಾಂಗಗಳ ಏಳಿಗೆಯು, ರಾಜ್ಯದ ಅಭಿವೃದ್ಧಿಗೆ ಮಾರ್ಗವಾಗುತ್ತದೆಂಬ ಬಗ್ಗೆ ಮೊಟ್ಟ ಮೊದಲಿಗೆ ಆಲೋಚಿಸಿದವರು, ಹಳೆಯ ಮೈಸೂರು ರಾಜ್ಯವನ್ನು ಆಳುತ್ತಿದ್ದ ಮಹಾರಾಜರು. ಈ ಜನರ ಕಲ್ಯಾಣಕ್ಕೆ ಅಗತ್ಯ ಕ್ರಮಗಳನ್ನು ಸೂಚಿಸುವುದಕ್ಕಾಗಿ, ಮೈಸೂರಿನ ಮುಖ್ಯ ನ್ಯಾಯಾಲಯದ ಅಂದಿನ ಮುಖ್ಯ ನ್ಯಾಯಾಧೀಶರಾಗಿದ್ದ ಸರ್. ಲೆಸ್ಲಿ ಮಿಲ್ಲರ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಹಾರಾಜರು ೧೯೧೮ ರಲ್ಲಿ ರಚಿಸಿದರು. ಸರ್ಕಾರದ ಹುದ್ದೆಗಳನ್ನು, ಇತರ ಹಿಂದುಳಿದ ಸಮುದಾಯಗಳಿಂದ ಭರ್ತಿ ಮಾಡುವ ಕುರಿತು ಈ ಸಮಿತಿಯು ಶಿಫಾರಸ್ಸು ಮಾಡಿತ್ತು.

ರಾಜ್ಯದ ಏಕೀಕರಣದ ನಂತರದಲ್ಲಿ, ಶಾಸಕರಾದ ಡಾ. ನಾಗನಗೌಡರವರ ಅಧ್ಯಕ್ಷತೆಯಲ್ಲಿ 'ಬ್ಯಾಕ್‌ವರ್ಡ್ ಕ್ಲಾಸಸ್ ಕಮಿಟಿ' ಯೊಂದನ್ನು ರಚಿಸಲಾಯಿತು. ನಂತರದಲ್ಲಿ, ಹೆತ್ತವರ ವಾರ್ಷಿಕ ಆದಾಯವು, ರೂ. ೧೨೦೦/– ಕ್ಕಿಂತ ಕಡಿಮೆ ಇರುವಂತಹ ಎಲ್ಲ ಅಭ್ಯರ್ಥಿಗಳೂ ಹಿಂದುಳಿದವರೆಂದು ಪರಿಗಣಿಸಿ, ಶೇಕಡ ೩೦ ರಷ್ಟು ಮೀಸಲಾತಿಯನ್ನು ಸರ್ಕಾರವು ಹೊರಡಿಸಿದ ದಿ. ೧೬.೯.೧೯೬೩ರ ಆದೇಶದಲ್ಲಿ ನಿಗದಿಪಡಿಸಿತು. ತುಮಕೂರು ಜಿಲ್ಲೆಯೂ ಸೇರಿದಂತೆ, ಇಡೀ ರಾಜ್ಯದಲ್ಲಿ ೧೯೬೩ರಿಂದ ೧೯೭೭ ರ ವರೆಗೆ ಈ ಆದೇಶವೇ ಜಾರಿಯಲ್ಲಿತ್ತು.

೧೯೬೯ ರಿಂದ ೧೯೮೦ರ ವರೆಗೆ ರಾಜ್ಯದ ಮುಖ್ಯ ಮಂತ್ರಿಯಾಗಿದ್ದ ಶ್ರೀ ದೇವರಾಜ ಅರಸುರವರು, ತಮ್ಮ ಅಧಿಕಾರಾವಧಿಯಲ್ಲಿ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಸರ್ವತೋಮುಖ ಏಳಿಗೆಗಾಗಿ ಮಾಡಿದ ಕಾರ್ಯಗಳು ಗಣನೀಯ. ಇವರ ಅವಧಿಯಲ್ಲಿ ಎಲ್. ಜಿ. ಹಾವನೂರುರವರ ಅಧ್ಯಕ್ಷತೆಯಲ್ಲಿ ೧೯೭೨ರಲ್ಲಿ ಮೊದಲನೇ ಹಿಂದುಳಿದ ವರ್ಗಗಳ ಆಯೋಗ ರಚನೆಯಾಯಿತು. ಈ ಆಯೋಗದ ಶಿಫಾರಸ್ಸಿನ ಮೇರೆಗೆ, ಸರ್ಕಾರವು ಹಿಂದುಳಿದ ಜನಾಂಗವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿ, ಶಿಕ್ಷಣ ಹಾಗೂ ನೇಮಕಾತಿ ವಿಷಯಗಳಲ್ಲಿ ಶೇ.೪೦ರಷ್ಟು ಮೀಸಲಾತಿಯನ್ನು ನಿಗದಿಸಿತು. ಮಾತ್ರವಲ್ಲದೆ ಅಕ್ಟೋಬರ್ ೧೯೭೭ರಲ್ಲಿ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿಯೇ ಪ್ರತ್ಯೇಕವಾದ ಒಂದು ಇಲಾಖೆಯನ್ನೂ; ಕಂಪೆನಿ ಕಾಯ್ದೆ ೧೯೫೬ರ ಅನುಸಾರ, ೧೯೭೭ರ ಅಕ್ಟೋಬರ್‌ನಲ್ಲಿ ಹಿಂದುಳಿದ ವರ್ಗಗಳ ನಿಗಮವನ್ನೂ ಸ್ಥಾಪಿಸಿತು. ಅದುವರೆಗೆ, ಸಮಾಜ ಕಲ್ಯಾಣ ಇಲಾಖೆಯಲ್ಲಿಯೇ ನಿರ್ವಹಿಸಲಾಗುತ್ತಿದ್ದ ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳು, ಈ ಹಿಂದುಳಿದ ವರ್ಗಗಳ ಇಲಾಖೆಗೆ ವರ್ಗಾವಣೆಗೊಂಡವು. ಸಮಾಜ ಕಲ್ಯಾಣ ಇಲಾಖೆಯ ದಿನಾಂಕ ೧೬.೦೨.೨೦೦೬ರ ಆದೇಶದ ಮೂಲಕ ಈ ಇಲಾಖೆಯ ಹೆಸರನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಎಂದು ಮರು ನಾಮಕರಣ ಮಾಡಲಾಗಿದೆ.

ಇಲಾಖೆಯ ಸ್ಥಾಪನೆಯಾದ ನಂತರವೂ, ಟಿ.ವೆಂಕಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ೧೯೮೩ರಲ್ಲಿ; ನ್ಯಾಯಮೂರ್ತಿ ಓ. ಚಿನ್ನಪ್ಪರೆಡ್ಡಿಯವರ ಅಧ್ಯಕ್ಷತೆಯಲ್ಲಿ ೧೯೮೮ರಲ್ಲಿ, ಕ್ರಮವಾಗಿ ಎರಡನೇ ಮತ್ತು ಮೂರನೇ ಹಿಂದುಳಿದ ವರ್ಗಗಳ ಆಯೋಗಗಳು ಸ್ಥಾಪನೆಗೊಂಡವು. ಈ ಆಯೋಗಗಳ ಶಿಫಾರಸ್ಸುಗಳ ಮೇರೆಗೆ, ಮೀಸಲಾತಿ ಪ್ರಮಾಣದಲ್ಲಿ ಸೂಕ್ತ ಬದಲಾವಣೆಗಳಾದುವು. ಕೊನೆಗೆ ಭಾರತದ ಸರ್ವೋಚ್ಚ ನ್ಯಾಯಾಲಯವು ಮಂಡಲ್ ಮೊಕದ್ದಮೆಯಲ್ಲಿ, ೧೯೯೨ರಲ್ಲಿ ನೀಡಿದ ತೀರ್ಪಿನಲ್ಲಿರುವ ನಿರ್ದೇಶನದನ್ವಯ, ೧೯೯೩ರಲ್ಲಿ ಕರ್ನಾಟಕ ರಾಜ್ಯದಲ್ಲಿ ಶಾಶ್ವತವಾಗಿಯೇ ಒಂದು ಹಿಂದುಳಿದ ವರ್ಗಗಳ ಆಯೋಗವನ್ನು ಸ್ಥಾಪಿಸಲಾಗಿದೆ. ಹಿಂದುಳಿದ ವರ್ಗಗಳ ಪಟ್ಟಿಗೆ, ಹೆಚ್ಚುವರಿಯಾಗಿ ಸೇರ್ಪಡೆಯಾಗಿರುವ ವಿವಿಧ ಜಾತಿ, ಉಪ ಜಾತಿಗಳ ಕುರಿತಂತೆ ಹಾಗೂ ಇವರಿಗಾಗಿ ಇರುವ ಕಾರ್ಯಕ್ರಮಗಳ ಜಾರಿ ಕುರಿತಂತೆ ಪರಿಶೀಲಿಸಿ ಸೂಕ್ತ ಶಿಫಾರಸ್ಸುಗಳನ್ನು ನೀಡುವುದು ಈ ಆಯೋಗದ ಪ್ರಧಾನ ಕಾರ್ಯಗಳಾಗಿವೆ.

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಶ್ರೀ ಹಾವನೂರು ಆಯೋಗದ ಶಿಫಾರಸ್ಸಿನ ಮೇರೆಗೆ ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಹಿಂದುಳಿದ ವರ್ಗಗಳ ಇಲಾಖೆಯು ೧೯೭೭ರಲ್ಲಿ ಪ್ರಾರಂಭಗೊಂಡಿತು. ಈ ಜಿಲ್ಲೆಯಲ್ಲಿನ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದು, ಇವನ್ನು ಈ ಜಿಲ್ಲೆಯ ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿಗಳ ಮೂಲಕ ಅನುಷ್ಠಾನಗೊಳಿಸುತ್ತದೆ.

ಆಯುಕ್ತರು ಈ ಇಲಾಖೆಯ ಮುಖ್ಯಸ್ಥರಾಗಿದ್ದು ಇವರ ಸಹಾಯಕ್ಕೆ ಇಬ್ಬರು ಜಂಟಿ ನಿರ್ದೇಶಕರು, ಮೂವರು ಉಪ ನಿರ್ದೇಶಕರು, ಐದು ಸಹಾಯಕ ನಿರ್ದೇಶಕರು, ಒಬ್ಬರು ಲೆಕ್ಕಾಧಿಕಾರಿಗಳು ಮತ್ತು ಒಬ್ಬರು ಗೆಜೆಟೆಡ್ ವ್ಯವಸ್ಥಾಪಕರು ಕೇಂದ್ರ ಸ್ಥಾನದಲ್ಲಿ ಇರುತ್ತಾರೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು, ಈ ಇಲಾಖೆಗೆ ಹಾಗೂ ಅಲ್ಪಸಂಖ್ಯಾತರ ಇಲಾಖೆಗೂ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ, ಆಯಾ ಜಿಲ್ಲೆಯ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಕಾರ್ಯ ನಿರ್ವಹಿಸುತ್ತಾರೆ.

**ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ನಿರ್ವಹಣೆ :** ಗ್ರಾಮಾಂತರ ಪ್ರದೇಶಗಳಿಗೆ ಸೇರಿದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಕಾಲೇಜುಗಳಲ್ಲಿ ವಿವಿಧ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ಶಿಕ್ಷಣವನ್ನು ಮುಂದುವರಿಸಿಕೊಂಡು ಹೋಗಲು ಅನುಕೂಲ ಕಲ್ಪಿಸಿಕೊಡುವ ಸಲುವಾಗಿ ಶಿಕ್ಷಣ ಸಂಸ್ಥೆಗಳು (ಕಾಲೇಜುಗಳು) ನಡೆಯುತ್ತಿರುವ ಸ್ಥಳಗಳಲ್ಲಿ ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳನ್ನು ನಡೆಸಲಾಗುತ್ತಿದೆ. ಈ ವಿದ್ಯಾರ್ಥಿ ನಿಲಯಗಳಲ್ಲಿ ಮಾಹೆಯಾನ ರೂ. ೬೫೦ ರ ವೆಚ್ಚದಲ್ಲಿ ೧೦ ತಿಂಗಳ ಅವಧಿಗೆ ಆಹಾರ ಮತ್ತು ವಸತಿ ಸೌಲಭ್ಯಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ಪ್ರತಿ ವಿದ್ಯಾರ್ಥಿನಿಲಯಕ್ಕೆ ಮಾಹೆಯಾನ ರೂ. ೧೦೦೦ರ ವೆಚ್ಚದಲ್ಲಿ ಹತ್ತು ತಿಂಗಳ ಅವಧಿಗೆ ಸಾದಿಲ್ವಾರು ವೆಚ್ಚ ಮಾಡಲಾಗುವುದಲ್ಲದೆ, ಪ್ರತಿ ನಿಲಯಕ್ಕೆ ಎರಡು ದಿನಪತ್ರಿಕೆಗಳ ಪೂರೈಕೆಗಾಗಿ ರೂ. ೧೫೦೦ಗಳ ವೆಚ್ಚ ಭರಿಸಲಾಗುತ್ತದೆ. ಈ ವಿದ್ಯಾರ್ಥಿ ನಿಲಯಗಳಿಗೆ ಸರ್ಕಾರಿ/ಸರ್ಕಾರಿ ಅಂಗೀಕೃತ ಶಿಕ್ಷಣ ಸಂಸ್ಥೆಗಳಲ್ಲಿ ಮೆಟ್ರಿಕ್ ನಂತರದ ಕೋರ್ಸುಗಳಾದ ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ, ಬಿ.ಇ, ಎಂಬಿಬಿಎಸ್, ಡಿಪ್ಲೊಮ, ವೃತ್ತಿಶಿಕ್ಷಣ ಕೋರ್ಸುಗಳು ಇತ್ಯಾದಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು, ಕಾಲೇಜುಗಳಿಂದ ಐದು ಕಿ.ಮೀ.ಗಿಂತ ದೂರದ ಸ್ಥಳಗಳಿಂದ ಬರುವ ವಿದ್ಯಾರ್ಥಿಗಳು ಮತ್ತು ಕುಟುಂಬದ ವಾರ್ಷಿಕ ವರಮಾನ ರೂ. ೧೫,೦೦೦ ಕ್ಕಿಂತ ಕಡಿಮೆ ಇರುವವರು ಮಾತ್ರ ಈ ನಿಲಯಗಳಲ್ಲಿ ಪ್ರವೇಶ ಪಡೆಯಲು ಅರ್ಹರು. ಸ್ಥಳೀಯ ವಿದ್ಯಾರ್ಥಿಗಳು ಪ್ರವೇಶಕ್ಕೆ ಅನರ್ಹರು. ಹೆಚ್ಚಿನ ವಿವರಗಳಿಗೆ ಕೋಷ್ಟಕ ೧೬.೪೨ ಹಾಗೂ ೧೬.೪೩ ಅನ್ನು ನೋಡಿ.

**ಕೋಷ್ಟಕ ೧೬.೪೨: ಜಿಲ್ಲೆಯಲ್ಲಿರುವ ಸರ್ಕಾರಿ ಮತ್ತು ಅನುದಾನಿತ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ವಿವರ**

| ಕ್ರ ಸಂ | ತಾಲೂಕುಗಳು | ಸರ್ಕಾರಿ ಮೆಟ್ರಿಕ್ ನಂತರ | | | | | |
|---|---|---|---|---|---|---|---|
| | | ಬಾಲಕರ | | ಬಾಲಕಿಯರ | | ಒಟ್ಟು | |
| | | ಸಂಖ್ಯೆ | ವಿದ್ಯಾರ್ಥಿಗಳು | ಸಂಖ್ಯೆ | ವಿದ್ಯಾರ್ಥಿಗಳು | ಸಂಖ್ಯೆ | ವಿದ್ಯಾರ್ಥಿಗಳು |
| ೧ | ಚಿಕ್ಕನಾಯಕನಹಳ್ಳಿ | – | – | ೨ | ೨೦೦ | ೨ | ೨೦೦ |
| ೨ | ಗುಬ್ಬಿ | – | – | ೧ | ೧೦೦ | ೧ | ೧೦೦ |
| ೩ | ಕೊರಟಗೆರೆ | – | – | ೧ | ೧೦೦ | ೧ | ೧೦೦ |
| ೪ | ಕುಣಿಗಲ್ | ೨ | ೨೦೦ | ೧ | ೧೦೦ | ೩ | ೩೦೦ |
| ೫ | ಮಧುಗಿರಿ | ೧ | ೧೫೦ | ೧ | ೧೧೨ | ೨ | ೨೬೨ |
| ೬ | ಪಾವಗಡ | ೨ | ೨೫೦ | ೨ | ೨೦೦ | ೪ | ೪೫೦ |
| ೭ | ಶಿರಾ | ೩ | ೩೫೦ | ೩ | ೩೦೦ | ೬ | ೬೫೦ |
| ೮ | ತಿಪಟೂರು | ೪ | ೪೦೦ | ೨ | ೨೦೦ | ೬ | ೬೦೦ |

**ಕೋಷ್ಟಕ ೧೬.೪೨ ಮುಂದು...**

| ಕ್ರ ಸಂ | ತಾಲೂಕುಗಳು | ಸರ್ಕಾರಿ ಮೆಟ್ರಿಕ್ ನಂತರ | | | | | |
|---|---|---|---|---|---|---|---|
| | | ಬಾಲಕರ | | ಬಾಲಕಿಯರ | | ಒಟ್ಟು | |
| | | ಸಂಖ್ಯೆ | ವಿದ್ಯಾರ್ಥಿಗಳು | ಸಂಖ್ಯೆ | ವಿದ್ಯಾರ್ಥಿಗಳು | ಸಂಖ್ಯೆ | ವಿದ್ಯಾರ್ಥಿಗಳು |
| ೧೦ | ತುರುವೇಕೆರೆ | – | – | ೧ | ೧೦೦ | ೧ | ೧೦೦ |
| | ಜಿಲ್ಲಾ ಮೊತ್ತ | ೧೮ | ೧೯೫೦ | ೨೨ | ೨೨೧೨ | ೪೦ | ೪೧೬೨ |

**ಕೋಷ್ಟಕ ೧೬.೪೩: ಜಿಲ್ಲೆಯ ೨೦೧೩-೧೪ರಲ್ಲಿದ್ದಂತೆ ಅನುದಾನಿತ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ವಿವರ**

| ಕ್ರ ಸಂ | ತಾಲೂಕುಗಳು | ಅನುದಾನಿತ ಮೆಟ್ರಿಕ್ ನಂತರ | | | | | |
|---|---|---|---|---|---|---|---|
| | | ಬಾಲಕರ | | ಬಾಲಕಿಯರ | | ಒಟ್ಟು | |
| | | ಸಂಖ್ಯೆ | ವಿದ್ಯಾರ್ಥಿಗಳು | ಸಂಖ್ಯೆ | ವಿದ್ಯಾರ್ಥಿಗಳು | ಸಂಖ್ಯೆ | ವಿದ್ಯಾರ್ಥಿಗಳು |
| ೧ | ಚಿಕ್ಕನಾಯಕನಹಳ್ಳಿ | – | – | – | – | – | – |
| ೨ | ಗುಬ್ಬಿ | – | – | – | – | – | – |
| ೩ | ಕೊರಟಗೆರೆ | – | – | – | – | – | – |
| ೪ | ಕುಣಿಗಲ್ | – | – | – | – | – | – |
| ೫ | ಮಧುಗಿರಿ | ೧ | ೫೦ | ೧ | ೫೦ | ೨ | ೧೦೦ |
| ೬ | ಪಾವಗಡ | – | – | – | – | – | – |
| ೭ | ಶಿರಾ | – | – | – | – | – | – |
| ೮ | ತಿಪಟೂರು | – | – | – | – | – | – |
| ೯ | ತುಮಕೂರು | ೧ | ೨೫ | – | – | ೧ | ೨೫ |
| ೧೦ | ತುರುವೇಕೆರೆ | – | – | – | – | – | – |
| ಮೊತ್ತ | | ೨ | ೭೫ | ೧ | ೫೦ | ೩ | ೧೨೫ |

**ಆಧಾರ: ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆ, ತುಮಕೂರು**

**ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ನಿರ್ವಹಣೆ:** ಗ್ರಾಮಾಂತರ ಪ್ರದೇಶಗಳಿಗೆ ಸೇರಿದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ, ಮೆಟ್ರಿಕ್ ಪೂರ್ವ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳನ್ನು ಇಲಾಖೆಯಿಂದ ನಡೆಸಲಾಗುತ್ತಿದೆ. ಈ ವಿದ್ಯಾರ್ಥಿ ನಿಲಯಗಳಲ್ಲಿನ ಮಂಜೂರಾತಿ ಸಂಖ್ಯೆಯ ಶೇಕಡ ೭೫ ರಷ್ಟು ಸ್ಥಾನಗಳನ್ನು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೂ, ಶೇಕಡ ೨೫ರಷ್ಟು ಸ್ಥಾನಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೂ ನೀಡಲಾಗುತ್ತಿದೆ. ಈ ವಿದ್ಯಾರ್ಥಿ ನಿಲಯಗಳಲ್ಲಿನ ನಿಲಯಾರ್ಥಿಗಳಿಗೆ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುವುದು.

ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ. ೬೦೦ ರ ವೆಚ್ಚದಲ್ಲಿ ೧೦ ತಿಂಗಳ ಅವಧಿಗೆ ಆಹಾರ; ಉಚಿತ ವಸತಿ ಸೌಕರ್ಯ; ಮಾಹೆಯಾನ ರೂ. ೫೦ರಂತೆ ೧೦ ತಿಂಗಳ ಅವಧಿಗೆ ಇತರೇ ವಸ್ತುಗಳು (ಸೋಪು, ಎಣ್ಣೆ ಇತ್ಯಾದಿ); ರೂ. ೨೦೦ ರ ವೆಚ್ಚದಲ್ಲಿ ವರ್ಷಕ್ಕೆ ಪಠ್ಯ ಪುಸ್ತಕ ಮತ್ತು ಲೇಖನ ಸಾಮಗ್ರಿಗಳು, ಮೂರು ವರ್ಷಕ್ಕೊಮ್ಮೆ ರೂ. ೪೫೦ ರ ವೆಚ್ಚದಲ್ಲಿ ಹಾಸಿಗೆ ಹೊದಿಕೆಗಳು, ರೂ. ೪೦೦ರ ವೆಚ್ಚದಲ್ಲಿ ವರ್ಷಕ್ಕೆ ಎರಡು ಜೊತೆ ಉಡುಪುಗಳ ಪೂರೈಕೆ. (ಒಂದು ಸೆಟ್ ಟೆರಿಕಾಟ್ ಮತ್ತು ಒಂದು ಸೆಟ್ ಕಾಟನ್); ಪ್ರತಿ ಬಾಲಕ ವಿದ್ಯಾರ್ಥಿಗೆ ವಾರ್ಷಿಕ ರೂ. ೫೦ ರಂತೆ ಕ್ಷೌರದ ವೆಚ್ಚ – ಇವು ಪ್ರತಿ ನಿಲಯಾರ್ಥಿಗಳಿಗೆ ನೀಡಲಾಗುತ್ತಿರುವ ಸೌಲಭ್ಯಗಳಾಗಿವೆ. ಇವಲ್ಲದೆ, ಪ್ರತಿ ವಿದ್ಯಾರ್ಥಿನಿಲಯಕ್ಕೆ ಮಾಹೆಯಾನ ರೂ. ೧೦೦ ರಂತೆ ೧೦ ತಿಂಗಳ ಅವಧಿಗೆ ವೈದ್ಯಕೀಯ ವೆಚ್ಚ ನೀಡಿಕೆ; ಮಂಜೂರಾತಿ ಸಂಖ್ಯೆ ೫೦ ಇರುವ ನಿಲಯಕ್ಕೆ ಮಾಹೆಯಾನ ರೂ. ೪೦೦ ಗೌರವಧನ ನೀಡಿ, ಮೂವರು ಅಲ್ಪಕಾಲಿಕ ಬೋಧಕರಿಂದ ಕಠಿಣ ವಿಷಯಗಳಲ್ಲಿ ಪಾಠ ಬೋಧನೆ; ಪ್ರತಿ ವಿದ್ಯಾರ್ಥಿ ನಿಲಯಕ್ಕೆ ವಾರ್ಷಿಕ ರೂ. ೭೫೦ರ ವೆಚ್ಚದಲ್ಲಿ ವಾರ್ತಾ ಪತ್ರಿಕೆ ಮತ್ತು ನಿಯತಕಾಲಿಕೆಗಳ ಸರಬರಾಜು ಮಾಡಲಾಗುತ್ತದೆ.

ಸರ್ಕಾರಿ ಅಥವಾ ಸರ್ಕಾರದಿಂದ ಅಂಗೀಕೃತ ಶಿಕ್ಷಣ ಸಂಸ್ಥೆಗಳಲ್ಲಿ ಐದರಿಂದ ಹತ್ತನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮತ್ತು ಶೈಕ್ಷಣಿಕ ಸಂಸ್ಥೆಯಿಂದ ಐದು ಕಿ.ಮೀ. ದೂರದಲ್ಲಿ ವಾಸಿಸುವ ವಿದ್ಯಾರ್ಥಿಗಳಿಗೆ ಶೇಕಡ ೯೦ರಷ್ಟು ಸ್ಥಾನಗಳನ್ನೂ ಹಾಗೂ ಐದು ಕಿ.ಮೀ.ಗಳಿಗಿಂತ ಕಡಿಮೆ ಅಂತರದ ಸ್ಥಳಗಳಿಂದ ಬರುವ ವಿದ್ಯಾರ್ಥಿಗಳಿಗೆ ಉಳಿದ ಹತ್ತು ಸ್ಥಾನಗಳನ್ನೂ ಕಾಯ್ದಿರಿಸಿ, ಈ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿಗೆ ಪ್ರವೇಶ ನೀಡಲಾಗುವುದು.

ಜಿಲ್ಲೆಯಲ್ಲಿರುವ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯಗಳ ತಾಲ್ಲೂಕು ವಿವರಗಳಿಗೆ ಕೋಷ್ಟಕ ೧೬.೪೪ ಹಾಗೂ ಅನುದಾನಿತ ಮೆಟ್ರಿಕ್‌ಪೂರ್ವ ಹಿಂದುಳಿದ ವಿದ್ಯಾರ್ಥಿನಿಲಯಗಳ ತಾಲ್ಲೂಕು ವಿವರಗಳಿಗೆ ಕೋಷ್ಟಕ ೧೬.೪೫ ಹಾಗೂ ಜಿಲ್ಲೆಯಲ್ಲಿರುವ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳ ನಿರ್ವಹಣೆಗೆ ಆದ ವೆಚ್ಚ ಮತ್ತು ಪ್ರಯೋಜನ ಪಡೆದವರ ವಿವರಗಳಿಗೆ ಕೋಷ್ಟಕ ೧೬.೪೬ರಲ್ಲಿ ನೋಡಿ.

**ಕೋಷ್ಟಕ ೧೬.೪೪: ಜಿಲ್ಲೆಯಲ್ಲಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು ಮತ್ತು ಬಾಲಕ, ಬಾಲಕಿಯರ ಸಂಖ್ಯೆಯ ವಿವರಗಳು**

| ಕ್ರ ಸಂ | ತಾಲೂಕುಗಳು | ಸರ್ಕಾರಿ ಮೆಟ್ರಿಕ್ ಪೂರ್ವ | | | | | |
|---|---|---|---|---|---|---|---|
| | | ಬಾಲಕರ | | ಬಾಲಕಿಯರ | | ಒಟ್ಟು | |
| | | ಸಂಖ್ಯೆ | ವಿದ್ಯಾರ್ಥಿಗಳು | ಸಂಖ್ಯೆ | ವಿದ್ಯಾರ್ಥಿಗಳು | ಸಂಖ್ಯೆ | ವಿದ್ಯಾರ್ಥಿಗಳು |
| ೧ | ಚಿಕ್ಕನಾಯಕನಹಳ್ಳಿ | ೫ | ೨೨೫ | ೧ | ೫೦ | ೬ | ೨೭೫ |
| ೨ | ಗುಬ್ಬಿ | ೩ | ೧೩೫ | ೧ | ೪೦ | ೪ | ೧೭೫ |
| ೩ | ಕೊರಟಗೆರೆ | ೬ | ೧೯೦ | ೧ | ೩೦ | ೭ | ೨೨೦ |
| ೪ | ಕುಣಿಗಲ್ | ೪ | ೧೭೫ | ೧ | ೧೫ | ೫ | ೧೯೦ |
| ೫ | ಮಧುಗಿರಿ | ೩ | ೧೫೦ | ೧ | ೧೦೫ | ೪ | ೨೫೫ |
| ೬ | ಪಾವಗಡ | ೭ | ೩೩೫ | ೧ | ೫೦ | ೮ | ೩೮೫ |
| ೭ | ಶಿರಾ | ೭ | ೨೪೬ | ೨ | ೪೫ | ೯ | ೨೯೧ |
| ೮ | ತಿಪಟೂರು | ೪ | ೧೯೫ | ೧ | ೫೦ | ೫ | ೨೪೫ |
| ೯ | ತುಮಕೂರು | ೨ | ೭೦ | ೧ | ೬೦ | ೩ | ೧೩೦ |
| ೧೦ | ತುರುವೇಕೆರೆ | ೭ | ೩೫೦ | ೧ | ೫೦ | ೮ | ೪೦೦ |
| ಮೊತ್ತ | | ೪೮ | ೨೦೭೧ | ೧೧ | ೪೯೫ | ೫೯ | ೨೫೬೬ |

ಆಧಾರ: ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆ, ತುಮಕೂರು.

**ಕೋಷ್ಟಕ ೧೬.೪೫: ಖಾಸಗಿ ಮೆಟ್ರಿಕ್‌ಪೂರ್ವ ಹಿಂದುಳಿದ ವಿದ್ಯಾರ್ಥಿನಿಲಯಗಳಿಗೆ ನೀಡಲಾದ ಅನುದಾನ ಮತ್ತು ಪ್ರಯೋಜನ ಪಡೆದವರ ವಿವರ**

| ಕ್ರ ಸಂ | ತಾಲೂಕುಗಳು | ಅನುದಾನಿತ ಮೆಟ್ರಿಕ್ ಪೂರ್ವ | | | | | |
|---|---|---|---|---|---|---|---|
| | | ಬಾಲಕರ | | ಬಾಲಕಿಯರ | | ಒಟ್ಟು | |
| | | ಸಂಖ್ಯೆ | ವಿದ್ಯಾರ್ಥಿಗಳು | ಸಂಖ್ಯೆ | ವಿದ್ಯಾರ್ಥಿಗಳು | ಸಂಖ್ಯೆ | ವಿದ್ಯಾರ್ಥಿಗಳು |
| ೧ | ಚಿಕ್ಕನಾಯಕನಹಳ್ಳಿ | ೨ | ೮೧ | | | ೨ | ೮೧ |
| ೨ | ಗುಬ್ಬಿ | – | – | – | – | – | – |
| ೩ | ಕೊರಟಗೆರೆ | – | – | – | – | – | – |
| ೪ | ಕುಣಿಗಲ್ | – | – | – | – | – | – |
| ೫ | ಮಧುಗಿರಿ | ೨ | ೧೦೦ | – | – | ೨ | ೧೦೦ |
| ೬ | ಪಾವಗಡ | – | – | – | – | – | – |
| ೭ | ಶಿರಾ | ೧ | ೭೫ | – | – | ೧ | ೭೫ |
| ೮ | ತಿಪಟೂರು | ೩ | ೧೨೬ | – | – | ೩ | ೧೨೬ |
| ೯ | ತುಮಕೂರು | – | – | – | – | – | – |
| ೧೦ | ತುರುವೇಕೆರೆ | – | – | – | – | – | – |
| ಮೊತ್ತ | | ೮ | ೩೮೨ | ೦ | ೦ | ೮ | ೩೮೨ |

ಆಧಾರ: ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆ,

### ಕೋಷ್ಟಕ ೧೬.೪೬: ಜಿಲ್ಲೆಯಲ್ಲಿರುವ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳ ನಿರ್ವಹಣೆಗೆ ಆದ ವೆಚ್ಚ ಮತ್ತು ಪ್ರಯೋಜನ ಪಡೆದವರ ವಿವರ (ಯೋಜನೆ+ಯೋಜನೇತರ)

| ವರ್ಷ | ಬಾಲಕರ ವಿದ್ಯಾರ್ಥಿನಿಲಯಗಳ ಸಂಖ್ಯೆ | ಬಾಲಕಿಯರ ವಿದ್ಯಾರ್ಥಿನಿಲಯಗಳ ಸಂಖ್ಯೆ | ಒಟ್ಟು ನಿಲಯಗಳ ಸಂಖ್ಯೆ | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ | ಆದ ವೆಚ್ಚ ರೂ. ಲಕ್ಷಗಳಲ್ಲಿ |
|---|---|---|---|---|---|
| ೨೦೦೮-೦೯ | ೪೭ | ೧೧ | ೫೮ | ೨೦೮೫ | ೨೦೧.೬೪ |
| ೨೦೦೯-೧೦ | ೪೭ | ೧೧ | ೫೮ | ೨೦೮೫ | ೨೫೩.೪೧ |
| ೨೦೧೦-೧೧ | ೪೭ | ೧೧ | ೫೮ | ೨೦೮೫ | ೪೩೯.೦೭ |
| ೨೦೧೧-೧೨ | ೪೭ | ೧೧ | ೫೮ | ೨೫೧೫ | ೭೩೭.೪೬ |

ಆಧಾರ: ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆ, ತುಮಕೂರು

## ಹೊಲಿಗೆ ತರಬೇತಿ ಕೇಂದ್ರಗಳು

ಕನಿಷ್ಠ ಏಳನೇ ತರಗತಿಯಲ್ಲಿ ತೇರ್ಗಡೆಯಾದ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ನಿರುದ್ಯೋಗಿ ಮಹಿಳೆಯರಿಗೆ, ಅವರು ಜೀವನದಲ್ಲಿ ಸ್ವಾವಲಂಬಿಗಳಾಗಲು ಇಲಾಖೆಯು ಹಿಂದುಳಿದ ವರ್ಗಗಳ ಮಹಿಳೆಯರಿಗೆ ಹೊಲಿಗೆ ವೃತ್ತಿಯಲ್ಲಿ ಒಂದು ವರ್ಷದ ತರಬೇತಿಯನ್ನು ನೀಡುತ್ತಿದೆ. ಈ ಕೇಂದ್ರಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ, ವಿಧವೆಯರು ಮತ್ತು ನಿರ್ಗತಿಕರಿಗೆ ಆದ್ಯತೆ ನೀಡಲಾಗುತ್ತದೆ. ತರಬೇತಿಯ ಅಂತ್ಯದಲ್ಲಿ ನಡೆಸುವ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಅಭ್ಯರ್ಥಿಗಳಿಗೆ ಇಲಾಖಾ ವತಿಯಿಂದ ಪ್ರಮಾಣ ಪತ್ರವನ್ನು ಮತ್ತು ಅವರು ಸ್ವಯಂ ಉದ್ಯೋಗದಲ್ಲಿ ತೊಡಗಲು ಅನುಕೂಲವಾಗುವಂತೆ ಉಚಿತವಾಗಿ ಒಂದು ಹೊಲಿಗೆ ಯಂತ್ರವನ್ನೂ ನೀಡಲಾಗುತ್ತದೆ. ಅನುತ್ತೀರ್ಣರಾಗುವ ಅಭ್ಯರ್ಥಿಗಳು ಎರಡು ವರ್ಷದೊಳಗೆ ಮತ್ತೊಮ್ಮೆ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಲಾಗುವುದು. ಈ ಕೇಂದ್ರಗಳಲ್ಲಿ ತಯಾರುಗೊಂಡ ಉಡುಪುಗಳನ್ನು ಪ್ರವಾಹ ಪೀಡಿತ ಅಥವಾ ಬರಪೀಡಿತ ಪ್ರದೇಶಗಳ ಮಕ್ಕಳಿಗೆ ಮತ್ತು ಕೊಳಚೆ ಪ್ರದೇಶದ ಹಾಗೂ ನಿರ್ಗತಿಕ ಮಕ್ಕಳಿಗೆ ಉಚಿತವಾಗಿ ಆದ್ಯತೆಯ ಮೇಲೆ, ಹಂಚಿಕೆ ಮಾಡಲಾಗುತ್ತದೆ. ತುಮಕೂರು ಜಿಲ್ಲೆಯಲ್ಲಿ ಯೋಜನೆ+ಯೋಜನೇತರದಡಿಯಲ್ಲಿ ನಿರ್ವಹಿಸಲಾಗುತ್ತಿರುವ, ಹೊಲಿಗೆ ತರಬೇತಿ ಕೇಂದ್ರಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಪ್ರಯೋಜನ ಪಡೆದವರ ಮತ್ತು ಆದ ಖರ್ಚಿನ ವಿವರಗಳನ್ನು ಕೋಷ್ಟಕ ೧೬.೪೭ರಲ್ಲಿ ನೋಡಬಹುದು.

### ಕೋಷ್ಟಕ ೧೬.೪೭: ಜಿಲ್ಲೆಯ ಹೊಲಿಗೆ ತರಬೇತಿ ಕೇಂದ್ರದಲ್ಲಿ ಪ್ರಯೋಜನ ಪಡೆದವರ ಮತ್ತು ಆದ ಖರ್ಚಿನ ವಿವರ (ಯೋಜನೆ+ಯೋಜನೇತರ)

| ವರ್ಷ | ತಾಲ್ಲೂಕು | ತರಬೇತಿ ಪಡೆದ ಮಹಿಳೆಯರ ಸಂಖ್ಯೆ | ತೇರ್ಗಡೆ ಯಾದವರ ಸಂಖ್ಯೆ | ವಿತರಿಸಿದ ಹೊಲಿಗೆ ಯಂತ್ರಗಳ ಸಂಖ್ಯೆ | ಮಾಡಲಾದ ಖರ್ಚು (ರೂ. ಲಕ್ಷ ಗಳಲ್ಲಿ) |
|---|---|---|---|---|---|
| ೨೦೦೮-೦೯ | ತುಮಕೂರು | ೨೦ | ೨೦ | ೨೦ | ೧.೪೧ |
| | ಮಧುಗಿರಿ | ೨೦ | ೨೦ | ೨೦ | ೧.೪೦ |
| ೨೦೦೯-೧೦ | ತುಮಕೂರು | ೨೦ | ೨೦ | ೨೦ | ೧.೫೦ |
| | ಮಧುಗಿರಿ | ೨೦ | ೨೦ | ೨೦ | ೧.೫೦ |
| ೨೦೧೦-೧೧ | ತುಮಕೂರು | ೨೦ | ೨೦ | ೨೦ | ೧.೫೬ |
| | ಮಧುಗಿರಿ | ೨೦ | ೨೦ | ೨೦ | ೧.೫೬ |
| ೨೦೧೧-೧೨ | ತುಮಕೂರು | ೨೦ | ೧೯ | - | ೧.೬೨ |
| | ಮಧುಗಿರಿ | ೨೦ | ೨೦ | - | ೧.೬೨ |

ಆಧಾರ: ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆ, ತುಮಕೂರು

### ಆಶ್ರಮ ಶಾಲೆಗಳು

ಹಿಂದುಳಿದ ವರ್ಗಗಳ ಪ್ರವರ್ಗ-೧ರಡಿಯಲ್ಲಿ ಸೇರ್ಪಡೆಯಾಗಿರುವ ಬಹುತೇಕ ಜಾತಿಗಳು ಅನಧಿಸೂಚಿತ, ಅಲೆಮಾರಿ ಹಾಗೂ ಅರೆ ಅಲೆಮಾರಿ ಜಾತಿಗೆ ಸೇರಿದವುಗಳಾಗಿವೆ. ಈ ಜನಾಂಗಗಳ ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಈ ಕಾರ್ಯಕ್ರಮವನ್ನು ಕಾರ್ಯಗತಗೊಳಿಸಲಾಗುತ್ತಿದೆ. ಈ ಜಿಲ್ಲೆಯಲ್ಲಿ ಒಂಬತ್ತು ಆಶ್ರಮ ಶಾಲೆಗಳಿದ್ದು, ೨೦೧೩-೧೪ರಲ್ಲಿ ೧೩೮ ಹುಡುಗರು ಹಾಗೂ ೧೩೭ ಹುಡುಗಿಯರು ಹೀಗೆ ಒಟ್ಟು ೨೭೫ ಮಂದಿ ಇದರ ಸೌಲಭ್ಯ ಪಡೆದಿದ್ದಾರೆ.

### ಖಾಸಗಿ ಅನುದಾನಿತ ಅನಾಥಾಲಯಗಳು

ಅನಾಥ ಮತ್ತು ನಿರ್ಗತಿಕ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗುವಂತೆ ಕೆಲವು ಸ್ವಯಂ ಸೇವಾ ಸಂಸ್ಥೆಗಳು ನಡೆಸುತ್ತಿರುವ, ಅನಾಥಾಲಯಗಳಿಗೆ ಪ್ರೋತ್ಸಾಹ/ನೆರವು ನೀಡುವ ದೃಷ್ಟಿಯಿಂದ ತಂದೆ, ತಾಯಿ ಅಥವಾ ಇಬ್ಬರೂ ಇಲ್ಲದ ಮಗುವಿನ ಪೋಷಕರ ವಾರ್ಷಿಕ ಆದಾಯವು, ಎಲ್ಲಾ ಮೂಲಗಳಿಂದ ರೂ. ೧೧,೦೦೦ ಮತ್ತು ಅದಕ್ಕಿಂತ ಕಡಿಮೆ ಇದ್ದಲ್ಲಿ ಅಂತಹವರನ್ನು ಅನಾಥರೆಂದು ಪರಿಗಣಿಸಿ ಮಾಹೆಯಾನ ರೂ. ೧೫೦ ರ ದರದಲ್ಲಿ ವರ್ಷದ ಹನ್ನೆರಡೂ ತಿಂಗಳುಗಳಿಗೆ ಆಹಾರದ ಬಾಬ್ತಾಗಿ ಸಹಾಯಧನ ಮಂಜೂರು ಮಾಡಲಾಗುತ್ತದೆ. ಅನಾಥ ಮತ್ತು ನಿರ್ಗತಿಕ ಮಕ್ಕಳು ಅವರ ಪ್ರೌಢಶಾಲಾ ಶಿಕ್ಷಣವನ್ನು ಮುಗಿಸುವವರೆಗೂ ಈ ಅನಾಥಾಲಯಗಳಲ್ಲಿ ಮುಂದುವರೆಯಲು ಅವಕಾಶವಿರುತ್ತದೆ. ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುವ ಅನಾಥ ಮತ್ತು ನಿರ್ಗತಿಕ ಮಕ್ಕಳು ಮಾತ್ರ ಸಹಾಯಧನಕ್ಕೆ ಅರ್ಹರಾಗಿರುತ್ತಾರೆ.

ಅನಾಥಾಲಯವು ಎಲ್ಲಾ ರೀತಿಯಲ್ಲಿಯೂ ತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತಿರುವುದು ಕಂಡು ಬಂದಲ್ಲಿ ಮಾತ್ರ ಸಹಾಯಧನ ಮಂಜೂರು ಮಾಡಲಾಗುವುದು. ನಿಲಯಾರ್ಥಿಗಳ ಶಾಲಾ ಮತ್ತು ಅನಾಥಾಲಯದ ಹಾಜರಾತಿ ಮತ್ತು ವಾಸ್ತವಿಕ ಖರ್ಚುಗಳಿಗೆ ಒಳಪಟ್ಟಂತೆ ಸಹಾಯಧನಕ್ಕೆ ಲೆಕ್ಕ ಹಾಕಲಾಗುವುದು. ತುಮಕೂರು ಜಿಲ್ಲೆಯಲ್ಲಿ ೨೦೦೮-೦೯ ರಿಂದ ೨೦೧೧-೧೨ ರವರೆಗೆ ಹಿಂದುಳಿದ ವರ್ಗಗಳ ಮೆಟ್ರಿಕ್ ಪೂರ್ವ ಖಾಸಗಿ ಅನಾಥಾಲಯಗಳಿಗೆ ನೀಡಲಾದ ಅನುದಾನ ಮತ್ತು ಪ್ರಯೋಜನ ಪಡೆದವರ ವಿವರಗಳನ್ನು ಕೋಷ್ಟಕ ೧೬.೪೮ ರಲ್ಲಿ ನೀಡಿದೆ.

**ಕೋಷ್ಟಕ ೧೬.೪೮: ಜಿಲ್ಲೆಯಲ್ಲಿರುವ ಹಿಂದುಳಿದ ವರ್ಗಗಳ ಮೆಟ್ರಿಕ್‌ಪೂರ್ವ ಖಾಸಗಿ ಅನಾಥಾಲಯಗಳಿಗೆ ನೀಡಲಾದ ಅನುದಾನ, ಖರ್ಚು ಮತ್ತು ಫಲಾನುಭವಿಗಳ ವಿವರ (ಯೋಜನೆ + ಯೋಜನೇತರ)**

| ವರ್ಷ | ಬಾಲಕರ ಅನಾಥಾಲಯಗಳ ಸಂಖ್ಯೆ | ಬಾಲಕಿಯರ ಅನಾಥಾಲಯಗಳ ಸಂಖ್ಯೆ | ಒಟ್ಟು ಅನಾಥಾಲಯಗಳ ಸಂಖ್ಯೆ | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ | ಆದ ವೆಚ್ಚ ರೂ. ಲಕ್ಷಗಳಲ್ಲಿ |
|---|---|---|---|---|---|
| ೨೦೦೮-೦೯ | ೧೦ | - | ೧೦ | ೨೭೫೦ | ೫೬.೮೪ |
| ೨೦೦೯-೧೦ | ೧೦ | - | ೧೦ | ೨೫೦೦ | ೬೦.೪೨ |
| ೨೦೧೦-೧೧ | ೧೦ | - | ೧೦ | ೩೦೦೧ | ೧೮೭.೩೦ |
| ೨೦೧೧-೧೨ | ೧೦ | - | ೧೦ | ೨೮೦೦ | ೯೮.೬೦ |

ಆಧಾರ: ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆ, ತುಮಕೂರು

### ಶುಲ್ಕ ವಿನಾಯಿತಿ

ಸರಕಾರಿ ಮತ್ತು ಸರಕಾರದಿಂದ ಮಾನ್ಯತೆ ಪಡೆದಿರುವ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಯಾವುದೇ ಜಾತಿ ಮತ್ತು ಧರ್ಮಗಳಿಗೆ ಸೇರಿರುವ ವಿದ್ಯಾರ್ಥಿಗಳ ಪೋಷಕರ ಕುಟುಂಬದ ವಾರ್ಷಿಕ ಆದಾಯ ರೂ. ೧೧,೦೦೦ ಅಥವಾ ಅದಕ್ಕಿಂತ ಕಡಿಮೆ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳು ಶುಲ್ಕ ವಿನಾಯಿತಿಗೆ ಅರ್ಹರಿರುತ್ತಾರೆ. ಈ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ ಮತ್ತು ಪರೀಕ್ಷಾ ಶುಲ್ಕಗಳಿಂದ

ವಿನಾಯಿತಿ ನೀಡಲಾಗುತ್ತದೆ. ಮತ್ತು ಇನ್ನಿತರ ನಿಯಮಗಳೊಂದಿಗೆ, ವಿದ್ಯಾರ್ಥಿಗಳ ಸದ್ವರ್ತನೆ ಮತ್ತು ನಿಯಮಿತ ಹಾಜರಾತಿಯನ್ನೂ ಗಮನಿಸಿ ಈ ಶುಲ್ಕ ವಿನಾಯಿತಿಯನ್ನು ನೀಡಲಾಗುತ್ತದೆ. ಈ ಜಿಲ್ಲೆಯಲ್ಲಿ ೨೦೦೮-೦೯ ರಿಂದ ೨೦೧೧-೧೨ ರವರೆಗೆ ಈ ಯೋಜನೆಯಡಿ ಪ್ರಯೋಜನ ಪಡೆದ ವಿದ್ಯಾರ್ಥಿಗಳು ಮತ್ತು ಮಾಡಲಾದ ಖರ್ಚಿನ ವಿವರಗಳನ್ನು ಕೋಷ್ಟಕ ೧೬.೪೯ರಲ್ಲಿ ನೀಡಲಾಗಿದೆ.

## ವಿದ್ಯಾರ್ಥಿ ನಿಲಯಾರ್ಥಿಗಳಿಗೆ ಪ್ರೋತ್ಸಾಹಧನ

ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಇಲಾಖಾ ವಿದ್ಯಾರ್ಥಿ ನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ವಿವಿಧ ಪಬ್ಲಿಕ್ ಪರೀಕ್ಷೆಗಳಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಲು ಸ್ಪರ್ಧಾತ್ಮಕ ಮನೋಭಾವ ಮೂಡಿಸುವ ದೃಷ್ಟಿಯಿಂದ ಈ ಕಾರ್ಯಕ್ರಮವನ್ನು ಜಾರಿಗೊಳಿಸಲಾಗುತ್ತಿದೆ. ಈ ಜಿಲ್ಲೆಯಲ್ಲಿ ೨೦೦೮-೦೯ ರಿಂದ ೨೦೧೧-೧೨ರ ವರೆಗೆ ಈ ಯೋಜನೆಯಡಿ ಪ್ರಯೋಜನ ಪಡೆದ ನಿಲಯವಾಸಿಗಳು ಮತ್ತು ಈ ಸಂಬಂಧವಾಗಿ ಮಾಡಲಾದ ಖರ್ಚಿನ ವಿವರಗಳನ್ನು ಕೋಷ್ಟಕ ೧೬.೪೯ರಲ್ಲಿ ನೀಡಲಾಗಿದೆ.

## ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ

ಕಾಲೇಜುಗಳಲ್ಲಿ ವಿವಿಧ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಅವರ ಶಿಕ್ಷಣವನ್ನು ಮುಂದುವರಿಸಿಕೊಂಡು ಹೋಗಲು ನೆರವಾಗುವ ದೃಷ್ಟಿಯಿಂದ, ಪ್ರವರ್ಗ-೧ಅನ್ನು ಹೊರತುಪಡಿಸಿ ವಾರ್ಷಿಕ ರೂ. ೧೫,೦೦೦ ಗಳಿಗಿಂತ ಕಡಿಮೆ ಆದಾಯವಿರುವ ವಿದ್ಯಾರ್ಥಿಗಳಿಗೆ, ಇತರೇ ನಿಯಮಗಳನ್ನನುಸರಿಸಿ, ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಲಾಗುತ್ತದೆ. ವಿವಿಧ ಕೋರ್ಸಿನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮೊತ್ತವನ್ನು ನಿಗದಿಸಲಾಗಿದ್ದು ಅದರಂತೆ ಮಂಜೂರು ಮಾಡಲಾಗುತ್ತದೆ. ಈ ಜಿಲ್ಲೆಯಲ್ಲಿ ೨೦೦೮-೦೯ ರಿಂದ ೨೦೧೧-೧೨ನೇ ಸಾಲಿನವರೆಗೆ ಈ ಯೋಜನೆಯಡಿ ಪ್ರಯೋಜನ ಪಡೆದ ವಿದ್ಯಾರ್ಥಿಗಳು ಮತ್ತು ಈ ಸಂಬಂಧವಾಗಿ ಮಾಡಲಾದ ಖರ್ಚಿನ ವಿವರಗಳನ್ನು ಕೋಷ್ಟಕ ೧೬.೪೯ರಲ್ಲಿ ನೀಡಲಾಗಿದೆ.

## ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ

ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಲ್ಲಿನ ವಿದ್ಯಾರ್ಥಿಗಳಿಗೆ ಶಿಕ್ಷಣದಲ್ಲಿ ಉತ್ತೇಜನ ನೀಡುವ ದೃಷ್ಟಿಯಿಂದ ಈ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ವಂಜೂರು ಮಾಡಲಾಗುತ್ತದೆ. ಈ ಜಿಲ್ಲೆಯಲ್ಲಿ ೨೦೦೮-೦೯ ರಿಂದ ೨೦೧೧-೧೨ನೇಸಾಲಿನವರೆಗೆ ಈ ಯೋಜನೆಯಡಿ ಪ್ರಯೋಜನ ಪಡೆದ ವಿದ್ಯಾರ್ಥಿಗಳು ಮತ್ತು ಈ ಸಂಬಂಧವಾಗಿ ಮಾಡಲಾದ ಖರ್ಚಿನ ವಿವರಗಳನ್ನು ಕೋಷ್ಟಕ ೧೬.೪೯ರಲ್ಲಿ ನೀಡಲಾಗಿದೆ.

## ಹೆಚ್ಚುವರಿ ಭೋಜನ ಮತ್ತು ವಸತಿ ವೆಚ್ಚ

ಇಲಾಖೆಯ ವಸತಿ ನಿಲಯಗಳಲ್ಲಿ ವಾಸ್ತವ್ಯ ಮಾಡದೆ ಸ್ವಂತ ವಾಸ್ತವ್ಯ ಕಲ್ಪಿಸಿಕೊಂಡಂತಹ ಕಾಲೇಜು ವಿದ್ಯಾರ್ಥಿಗಳಿಗೆ ಹೆಚ್ಚುವರಿ ಭೋಜನ ಮತ್ತು ವಸತಿ ವೆಚ್ಚವನ್ನು ೧೦ ತಿಂಗಳ ಅವಧಿಗೆ ಮಂಜೂರು ಮಾಡಲಾಗುತ್ತದೆ. ಪ್ರವರ್ಗ-೧ಕ್ಕೆ ಸೇರಿದ ವಿದ್ಯಾರ್ಥಿಗಳು ಮಾತ್ರ ಈ ಸೌಲಭ್ಯ ಪಡೆಯಲು ಅರ್ಹರು. ಈ ಜಿಲ್ಲೆಯಲ್ಲಿ ೨೦೦೮-೦೯ರಿಂದ ೨೦೧೧-೧೨ನೇ ಸಾಲಿನವರೆಗೆ ಈ ಯೋಜನೆಯಡಿ ಪ್ರಯೋಜನ ಪಡೆದ ವಿದ್ಯಾರ್ಥಿಗಳು ಮತ್ತು ಈ ಸಂಬಂಧವಾಗಿ ಮಾಡಲಾದ ಖರ್ಚಿನ ವಿವರಗಳನ್ನು ಕೋಷ್ಟಕ ೧೬.೪೯ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೪೯: ತುಮಕೂರು ಜಿಲ್ಲೆಯಲ್ಲಿ ವಿವಿಧ ಯೋಜನೆಗಳಿಗೆ ಮಾಡಿದ ವೆಚ್ಚ ಹಾಗೂ ಫಲಾನುಭವಿಗಳ ವಿವರಗಳು**

| ಕ್ರ ಸಂ | ವಿವಿಧ ಯೋಜನೆಗಳು | ೨೦೦೮–೦೯ | | ೨೦೦೯–೧೦ | | ೨೦೧೦–೧೧ | | ೨೦೧೧–೧೨ | |
|---|---|---|---|---|---|---|---|---|---|
| | | ಫಲಾನು ಭವಿಗಳ ಸಂಖ್ಯೆ | ವೆಚ್ಚ (ರೂ. ಲಕ್ಷಗಳಲ್ಲಿ) | ಫಲಾನು ಭವಿಗಳ ಸಂಖ್ಯೆ | ವೆಚ್ಚ (ರೂ. ಲಕ್ಷಗಳಲ್ಲಿ) | ಫಲಾನು ಭವಿಗಳ ಸಂಖ್ಯೆ | ವೆಚ್ಚ (ರೂ. ಲಕ್ಷಗಳಲ್ಲಿ) | ಫಲಾನು ಭವಿಗಳ ಸಂಖ್ಯೆ | ವೆಚ್ಚ (ರೂ. ಲಕ್ಷಗಳಲ್ಲಿ) |
| ೧ | **ಶುಲ್ಕ ವಿನಾಯಿತಿ** | ೩೨೯೬ | ೧೩೧.೦೦ | ೨೩೧೧೦ | ೧೮೧.೦೦ | ೨೦೭೩೯ | ೨೪೪.೦೦ | ೧೫೯೭೪ | ೨೫೨.೦೦ |
| ೨ | ಪ್ರೋತ್ಸಾಹಧನ ಪಡೆದ ನಿಲಯಾರ್ಥಿಗಳು | ೧೧೦೫ | ೧೨.೪೩ | ೧೧೭೦ | ೧೧.೬೮ | ೧೧೩೫ | ೧೪.೧೨ | ೧೩೯೮ | ೧೩.೭೮ |
| ೩ | ವಿದ್ಯಾರ್ಥಿ ವೇತನ | ೩೭೬೦೧ | ೩೭.೬೧ | ೪೯೩೬೯ | ೫೬.೬೨ | ೫೦೧೬೨ | ೬೧.೮೭ | ೪೦೬.೩೯ | ೬೨.೦೧ |
| ೪ | **ಹೆಚ್ಚುವರಿ ಭೋಜನ ವೆಚ್ಚ** | ೪೯೮ | ೮.೯೯ | ೧೧೬೭ | ೧೪.೪೩ | ೧೧೭೪೩ | ೧೫.೧೦ | ೧೨೦೫ | ೧೫.೦೭ |

**ಆಧಾರ: ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ತುಮಕೂರು**

## ಹಿಂದುಳಿದ ವರ್ಗಗಳ ಖಾಸಗಿ ಅನುದಾನಿತ ಅನಾಥಾಲಯಗಳು

ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುವ ಅನಾಥ ಮತ್ತು ನಿರ್ಗತಿಕ ಮಕ್ಕಳ, ಶಿಕ್ಷಣಕ್ಕೆ ಅನುಕೂಲವಾಗುವಂತೆ, ಕೆಲವು ಸ್ವಯಂ ಸೇವಾ ಸಂಸ್ಥೆಗಳು ನಡೆಸುವ ಅನಾಥಾಲಯಗಳಿಗೆ ಎಲ್ಲಾ ರೀತಿಯಲ್ಲಿಯೂ ತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತಿರುವುದು ಕಂಡು ಬಂದಲ್ಲಿ ಸಹಾಯಧನ ಮಂಜೂರು ಮಾಡಲಾಗುತ್ತದೆ. ಅನಾಥಾಲಯದಲ್ಲಿರುವ ಅನಾಥ ನಿರ್ಗತಿಕ ಮಕ್ಕಳ ಸಂಖ್ಯೆಗನುಗುಣವಾಗಿ, ಮಾಹೆಯಾನ ರೂ. ೧೫೦ರ ದರದಲ್ಲಿ ವರ್ಷದ ಹನ್ನೆರಡೂ ತಿಂಗಳುಗಳಿಗೆ ಆಹಾರದ ಬಾಬ್ತಾಗಿ ಸಹಾಯಧನ ಮಂಜೂರು ಮಾಡಲಾಗುತ್ತದೆ.

## ಕಾನೂನು ಪದವೀಧರರಿಗೆ ತರಬೇತಿ

ಸರಕಾರಿ ಆದೇಶ ದಿ ೩೦–೩–೧೯೫ರನ್ವಯ ಕಾನೂನು ಪದವಿಯನ್ನು ಪಡೆದಿರುವ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ನಿರುದ್ಯೋಗಿಗಳನ್ನು ಆಯ್ಕೆ ಮಾಡಿ ಅವರಿಗೆ ನಾಲ್ಕು ವರ್ಷಗಳ ಅವಧಿಗೆ ವಕೀಲ ವೃತ್ತಿಯಲ್ಲಿ ತರಬೇತಿ ನೀಡಲಾಗುತ್ತಿದೆ. ಪ್ರವರ್ಗ–೧ಕ್ಕೆ ಸೇರಿದ ಬಾರ್ ಕೌನ್ಸಿಲ್‌ನಲ್ಲಿ ಹೆಸರನ್ನು ನೊಂದಾಯಿಸಿದಂತಹ ೩೧ರ ವಯೋಮಿತಿಯೊಳಗಿನ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕಾಗಿದ್ದು, ಈ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ದೊರಕದಿದ್ದಲ್ಲಿ ಉಳಿದ ವರ್ಗಗಳಿಂದ ಅರ್ಹ ಅಭ್ಯರ್ಥಿಗಳನ್ನು ನಿಯಮಾನುಸಾರ ಆಯ್ಕೆ ಮಾಡಲಾಗುವುದು. ಪ್ರವರ್ಗ–೧ನ್ನು ಹೊರತುಪಡಿಸಿ ಇತರೆ ಪ್ರವರ್ಗಗಳಿಗೆ ಸೇರಿದ ಅಭ್ಯರ್ಥಿಗಳಿಗೆ ರೂ. ೧೫,೦೦೦ ಗಳ ವಾರ್ಷಿಕ ಆದಾಯ ಮಿತಿಯನ್ನು ನಿಗದಿಪಡಿಸಲಾಗಿದೆ. ತಿಂಗಳಿಗೆ ರೂ. ೧೦೦೦ದಂತೆ, ನಾಲ್ಕು ವರ್ಷಗಳ ಅವಧಿಗೆ ಶಿಷ್ಯ ವೇತನ ನೀಡಲಾಗುತ್ತದೆ. ತುಮಕೂರು ಜಿಲ್ಲೆಯಲ್ಲಿ ೨೦೦೮–೦೯ರಿಂದ ೨೦೧೧–೧೨ರವರೆಗಿನ ಅವಧಿಯಲ್ಲಿ ಕಾನೂನು ಪದವೀಧರ ತರಬೇತಿಯ ಸೌಲಭ್ಯ ಪಡೆದವರ ಮತ್ತು ಅವರಿಗಾಗಿ ಮಾಡಿದ ಖರ್ಚಿನ ವಿವರಗಳನ್ನು ಕೋಷ್ಟಕ ೧೬.೫೦ರಲ್ಲಿ ಕಾಣಿಸಲಾಗಿದೆ.

**ಕೋಷ್ಟಕ ೧೬.೫೦: ಜಿಲ್ಲೆಯಲ್ಲಿ ಕಾನೂನು ಪದವೀಧರ ತರಬೇತಿ ಸೌಲಭ್ಯ ಪಡೆದವರ ಮತ್ತು ಇದಕ್ಕಾಗಿ ಭರಿಸಿದ ಹಣದ ವಿವರಗಳು**

| ವರ್ಷ | ಪುರುಷರ ಸಂಖ್ಯೆ | ಮಹಿಳೆಯರ ಸಂಖ್ಯೆ | ಆದ ವೆಚ್ಚ ರೂ. ಲಕ್ಷಗಳಲ್ಲಿ |
|---|---|---|---|
| ೨೦೦೮–೦೯ | ೩೫ | ೧೨ | ೪.೬೭ |
| ೨೦೦೯–೧೦ | ೪೨ | ೧೫ | ೬.೧೦ |
| ೨೦೧೦–೧೧ | ೩೪ | ೧೨ | ೬.೮೪ |
| ೨೦೧೧–೧೨ | ೩೪ | ೧೨ | ೬.೮೬ |

**ಆಧಾರ: ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ, ತುಮಕೂರು**

**ಗಗನಸಖಿ ತರಬೇತಿ**

ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಗಗನ ಸಖಿ ತರಬೇತಿಯನ್ನು ನೀಡುವ ಕಾರ್ಯಕ್ರಮವನ್ನು ೨೦೦೬-೦೭ ರಿಂದ ಜಾರಿಗೊಳಿಸಲು ಸರ್ಕಾರವು ಅನುಮೋದನೆ ನೀಡಿದೆ. ಈ ತರಬೇತಿಯ ಅವಧಿ ಒಂದು ವರ್ಷದ್ದಾಗಿರುತ್ತದೆ. ಕುಟುಂಬದ ವಾರ್ಷಿಕ ವರಮಾನ ರೂ. ಒಂದು ಲಕ್ಷ ಮೀರಿರದ, ಹಿಂದುಳಿದ ವರ್ಗಗಳ ಅಭ್ಯರ್ಥಿಗಳಲ್ಲಿ ಶೇಕಡ ೮೦ರಷ್ಟು ಯುವತಿಯರಿಗೆ ಮತ್ತು ಶೇಕಡ ೨೦ರಷ್ಟು ಯುವಕರಿಗೆ ಗಗನ ಸಖಿ ತರಬೇತಿ ನೀಡಲು ಅವಕಾಶವಿದ್ದು, ಈ ತರಬೇತಿಗೆ ಅರ್ಹ ಅಭ್ಯರ್ಥಿಗಳನ್ನು ಬೆಂಗಳೂರಿನಲ್ಲಿರುವ ಇಲಾಖೆಯ ಕೇಂದ್ರ ಕಛೇರಿಯಿಂದ ಆಯ್ಕೆ ಮಾಡಲಾಗುತ್ತದೆ. ಉತ್ತಮ ತರಬೇತಿ ನೀಡುವ ಖ್ಯಾತ ಸಂಸ್ಥೆಗಳ ಮೂಲಕ ಈ ತರಬೇತಿಯನ್ನು ಕೊಡಿಸಲಾಗುವುದು. ಆಯ್ಕೆಯಾದ ಅಭ್ಯರ್ಥಿಗಳು ಪೂರ್ಣ ತರಬೇತಿಯನ್ನು ಪಡೆಯದೇ ಅರ್ಧಕ್ಕೆ ಬಿಟ್ಟರೆ, ಅವರನ್ನು ತಪ್ಪಿತಸ್ಥರೆಂದು ಪರಿಗಣಿಸಿ, ಆ ವರೆಗೆ ಅವರ ತರಬೇತಿಗಾಗಿ ಮಾಡಿದ ಖರ್ಚನ್ನು ಶೇಕಡ. ೧೨ರ ಬಡ್ಡಿಯೊಂದಿಗೆ ವಸೂಲಿ ಮಾಡಲಾಗುತ್ತದೆ.

ಮೇಲಿನ ಕಾರ್ಯಕ್ರಮಗಳಲ್ಲದೆ, ಈ ಇಲಾಖೆಯಿಂದ ಗ್ರಾಮೀಣ ಪ್ರತಿಭಾವಂತ ಮಾಧ್ಯಮಿಕ ಮತ್ತು ಪ್ರೌಢಶಾಲೆಯ ವಿದ್ಯಾರ್ಥಿಗಳಿಗಾಗಿ ಮೋರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗಳು; ವಿವಿಧ ವೃತ್ತಿಗಳಲ್ಲಿ ಕೌಶಲ್ಯ ಹೊಂದಲು ಮಹಿಳೆಯರಿಗೆ ಕೌಶಲ್ಯ ಎಂಬ ಕಾರ್ಯಕ್ರಮ; ವಿದೇಶ ವ್ಯಾಸಂಗಕ್ಕೆ ಬಡ್ಡಿ ರಹಿತ ಸಾಲದ ಸಹಾಯ; ನರ್ಸಿಂಗ್ ಅಭ್ಯರ್ಥಿಗಳಿಗೆ ಶಿಷ್ಯ ವೇತನ, ಸವಿತಾ ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ, ಉಪ್ಪಾರ ಸಮಾಜದ ಅಭಿವೃದ್ಧಿಗೆ ಕಾರ್ಯಕ್ರಮ, ಉಪ್ಪಾರ ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ ನೆರವು, ಉಪ್ಪಾರ ಸಮಾಜದ ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಾಣಕ್ಕೆ ಸಹಾಯ, ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗದವರ ಅಭಿವೃದ್ಧಿ ಇತ್ಯಾದಿ ವಿವಿಧ ಕಾರ್ಯಕ್ರಮಗಳನ್ನು ಈ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತದೆ.

## ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ

ಎರಡನೇ ಹಿಂದುಳಿದ ವರ್ಗಗಳ ಆಯೋಗವು ೧೯೭೫ರಲ್ಲಿ ಸಲ್ಲಿಸಿದ ವರದಿಯಲ್ಲಿ ಮಾಡಿದ ಶಿಫಾರಸ್ಸಿನ ಪ್ರಕಾರ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ೧೯೭೭ರ ಅಕ್ಟೋಬರ್ ೨೮ರಂದು, ಕಂಪನಿಗಳ ಕಾಯ್ದೆ ೧೯೫೬ರನ್ವಯ ಸ್ಥಾಪನೆಗೊಂಡಿತು. ಆಗಿನ ಮುಖ್ಯಮಂತ್ರಿಗಳ ದೂರದರ್ಶಿತ್ವದ ಪ್ರತೀಕವಾದ ಈ ನಿಗಮಕ್ಕೆ ಗೌರವ ಸೂಚಕವಾಗಿ, ೨೦೦೫ರ ಅಕ್ಟೋಬರ್ ೨೮ರಂದು ಅವರದೇ ಹೆಸರನ್ನಿಟ್ಟು 'ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ' ಎಂದು ಮರುನಾಮಕರಣ ಮಾಡಲಾಗಿದೆ. ರಾಜ್ಯದ ಜನಸಂಖ್ಯೆಯಲ್ಲಿ ಶೇಕಡಾ ಐವತ್ತಕ್ಕಿಂತ ಹೆಚ್ಚಾಗಿರುವ ಹಿಂದುಳಿದ ವರ್ಗಗಳ ಮತ್ತು ಗ್ರಾಮೀಣ ಜನರು ನಗರದ ಬದುಕಿನತ್ತ ಹೆಚ್ಚು ಆಕರ್ಷಿತರಾಗದಂತೆ ನೋಡಿಕೊಳ್ಳಲು ಮತ್ತು ಗ್ರಾಮೀಣ ಪ್ರದೇಶದಲ್ಲಿಯೇ, ವಿವಿಧ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಲು ಅಗತ್ಯ ಆರ್ಥಿಕ ನೆರವನ್ನು ನೀಡುವುದು ಹಾಗೂ ಈ ವರ್ಗದ ಯುವ ನಿರುದ್ಯೋಗಿಗಳು ವೃತ್ತಿ ಕುಶಲತೆ ಬೆಳೆಸಿಕೊಂಡು ಸ್ವಯಂ ಉದ್ಯೋಗಿಗಳಾಗಲು ಅವಕಾಶ ಕಲ್ಪಿಸುವುದು, ಅವರಿಗೆ ಅಗತ್ಯವಿರುವ ತರಬೇತಿ ನೀಡುವುದು, ಮತ್ತು ಆರ್ಥಿಕ ಅಸಮಾನತೆಗೆ ಒಳಗಾದ ಈ ದುರ್ಬಲ ವರ್ಗದ ಜನರ ಸರ್ವಾಂಗೀಣ ಅಭಿವೃದ್ಧಿಗೆ ಪ್ರಯತ್ನಿಸುವುದು– ಇವೇ ಮೊದಲಾದ ಉದ್ದೇಶಗಳಿಂದ ಹಿಂದುಳಿದ ವರ್ಗಗಳ ಜನರಿಗೆ ರಿಯಾಯಿತಿ ಬಡ್ಡಿದರದಲ್ಲಿ ಸಾಲ ಸೌಲಭ್ಯ ಒದಗಿಸುತ್ತದೆ ಮತ್ತು ನಿರುದ್ಯೋಗಿ ಯುವಕರಿಗೆ ವೃತ್ತಿ ಕುಶಲತೆ ಬೆಳೆಸಿಕೊಳ್ಳಲು ನಿಗಮವು ವಿವಿಧ ಯೋಜನೆಯಡಿ ತರಬೇತಿ ಹಾಗೂ ನೆರವು ಒದಗಿಸುತ್ತದೆ.

ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಎಲ್ಲಾ ಜಿಲ್ಲಾ ಕಚೇರಿಗಳಲ್ಲಿ ಜಿಲ್ಲಾ ವ್ಯವಸ್ಥಾಪಕರ ನೇತೃತ್ವದಲ್ಲಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಸಂಸ್ಥೆಯ ಆರಂಭದ ಮೂಲ ಬಂಡವಾಳ ಕೇವಲ ರೂ. ಐದು ಲಕ್ಷಗಳಾಗಿದ್ದು, ೨೦೦೮-೦೯ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿದ ಹಣ ರೂ. ೯೪೭೫.೨೫ ಲಕ್ಷಗಳಾಗಿರುತ್ತದೆ.

ಪ್ರಾರಂಭದಲ್ಲಿ ಚೈತನ್ಯ ಮಾರ್ಜಿನ್ ಹಣ ಸಾಲದ ಯೋಜನೆಯೊಂದನ್ನು ಮಾತ್ರ ಜಾರಿಗೊಳಿಸುತ್ತಿತ್ತು. ೧೯೮೩-೮೪ನೇ ಸಾಲಿನಿಂದ ಕುಶಲಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಉಪಕರಣಗಳನ್ನು ನೀಡುವ ಕ್ಯಾಶ್

ಪ್ರೋಗ್ರಾಂ ಯೋಜನೆಯನ್ನು; ೧೯೮೩-೮೪ನೇ ಸಾಲಿನಿಂದ ವಾಹನ ಚಾಲನಾ ತರಬೇತಿ ಮತ್ತಿತರ ವೃತ್ತಿಪರ ತರಬೇತಿ ಕಾರ್ಯಕ್ರಮಗಳನ್ನು; ೧೯೮೮-೮೯ನೇ ಸಾಲಿನಿಂದ ಘೋರ್ ಮನ್‌ಶಿಪ್ ತರಬೇತಿಯನ್ನು; ೧೯೯೫-೯೬ನೇ ಸಾಲಿನಿಂದ ಗಂಗಾಕಲ್ಯಾಣ ನೀರಾವರಿ ಯೋಜನೆಯನ್ನು; ೧೯೯೨-೯೩ನೇ ಸಾಲಿನಿಂದ ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಚಾನಲೈಸಿಂಗ್ ಏಜೆನ್ಸಿಯಾಗಿ ನೇರ ಸಾಲ ಯೋಜನೆಯನ್ನು; ೨೦೦೨-೨೦೦೩ನೇ ಸಾಲಿನಿಂದ ರಾಷ್ಟ್ರೀಯ ಅಂಗವಿಕಲರ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಚಾಲನಾ ಸಂಸ್ಥೆಯಾಗಿ ಅಂಗವಿಕಲರಿಗೆ ಅವಧಿ ಸಾಲ ನೀಡುವ ಯೋಜನೆಗಳನ್ನು; ೨೦೦೫-೦೬ನೇ ಸಾಲಿನಿಂದ ಕುಲ ಕಸುಬುದಾರರಿಗೆ ಅಗತ್ಯ ಆರ್ಥಿಕ ನೆರವು ನೀಡಲು 'ಶ್ರಮಶಕ್ತಿ' ಯೋಜನೆಯನ್ನು ಕೈಗೆತ್ತಿಕೊಂಡಿದೆ. ೨೦೦೬-೦೭ನೇ ಸಾಲಿನಿಂದ ಅತ್ಯಂತ ಹಿಂದುಳಿದ ಅಲೆಮಾರಿ ಮತ್ತು ಅರೆಅಲೆಮಾರಿ ಜನಾಂಗದವರಿಗೆ ಹಾಗೂ ಭೂರಹಿತ ಕೃಷಿ ಕೂಲಿ ಕಾರ್ಮಿಕರ ಏಳಿಗೆಗಾಗಿ ಕೆಲವು ವಿಶೇಷ ಯೋಜನೆಗಳನ್ನು ಜಾರಿಗೆ ತರುತ್ತಿದೆ.

ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮವು, ರಾಜ್ಯದ ಈ ನಿಗಮವನ್ನು ಅದರ ಕಾರ್ಯ ನಿರ್ವಹಣಾ ಸಂಸ್ಥೆಯಾಗಿ ಪರಿಗಣಿಸಿ, ಕೆಳಗಿನ ಅವಧಿ ಸಾಲ ಯೋಜನೆಗಳ ಅಡಿ ಹಿಂದುಳಿದ ವರ್ಗದವರಿಗೆ ಸಾಲ ಸೌಲಭ್ಯವನ್ನು ನೀಡುತ್ತದೆ.

**ಅ) ಸಾಮಾನ್ಯ ಅವಧಿ ಸಾಲ ಯೋಜನೆ:** ೧)ವ್ಯವಸಾಯ ಮತ್ತು ವ್ಯವಸಾಯಾಧಾರಿತ ಯೋಜನೆಗಳು, ೨) ಕುಶಲಕರ್ಮಿಗಳು ಹಾಗೂ ಸಣ್ಣ ವ್ಯಾಪಾರಿಗಳಿಗೆ ಪೂರಕ ಯೋಜನೆಗಳು ೩) ಸೇವಾವಲಯ ಯೋಜನೆಗಳು ೪) ಸಾರಿಗೆ ವಲಯ ಯೋಜನೆಗಳು.

**ಆ) ಇತರೆ ಅವಧಿ ಸಾಲ ಯೋಜನೆಗಳು :** ೧. ನ್ಯೂ ಸ್ವರ್ಣಿಮಾ ಯೋಜನೆ(ಮಹಿಳೆಯರಿಗೆ ಮಾತ್ರ), ೨. ಮಹಿಳಾ ಸಮೃದ್ಧಿ ಯೋಜನೆ (ಮಹಿಳೆಯರಿಗೆ ಮಾತ್ರ) ೩. ಸ್ವಯಂ ಸಕ್ಷಮ ಯೋಜನೆ(ವೃತ್ತಿಯಾಧಾರಿತ ಶಿಕ್ಷಣ ಮತ್ತು ತರಬೇತಿ ಪಡೆದವರಿಗೆ ಮಾತ್ರ) ೪. ಮೈಕ್ರೋ ಫೈನಾನ್ಸ್ ಹಾಗೂ ೫) ವಿದ್ಯಾಭಿವೃದ್ಧಿ/ಶೈಕ್ಷಣಿಕ ಸಾಲ, ರಾಷ್ಟ್ರೀಯ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಸಾಲ ಯೋಜನೆಗಳು, ರಾಷ್ಟ್ರೀಯ ಅಂಗವಿಕಲರ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಸಾಲ ಯೋಜನೆಗಳು, ಚೈತನ್ಯ ಸಬ್ಸಿಡಿ ರಹಿತ ಮೃದು ಸಾಲ ಯೋಜನೆ (ಸಾಫ್ಟ್ ಲೋನ್ ಸ್ಕೀಂ), ಅರಿವು ಯೋಜನೆ, ಗಂಗಾ ಕಲ್ಯಾಣ ನೀರಾವರಿ ಯೋಜನೆ, ಅ) ಸಾಮೂಹಿಕ ನೀರಾವರಿ ಯೋಜನೆ, ಆ) ವೈಯುಕ್ತಿಕ ನೀರಾವರಿ ಯೋಜನೆ, ಇ) ಏತ ನೀರಾವರಿ ಯೋಜನೆ, ವೃತ್ತಿಪರ ತರಬೇತಿ ಯೋಜನೆ ಮುಂತಾದವು ಈ ನಿಗಮದಿಂದ ಕಾರ್ಯಗತಗೊಳ್ಳುತ್ತಿರುವ ಇತರ ಯೋಜನೆಗಳಾಗಿವೆ.

## ಶ್ರಮಶಕ್ತಿ ಯೋಜನೆ

ರಾಜ್ಯದ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಸಮುದಾಯಕ್ಕೆ ಸೇರಿದ ಸಾಂಪ್ರದಾಯಿಕ ಕುಶಲಕರ್ಮಿಗಳು ಹಾಗೂ ಕಸುಬುದಾರರು, ಆಧುನಿಕ ತಂತ್ರಜ್ಞಾನ ಬಳಕೆಯಿಂದಾಗಿ, ತಮ್ಮ ಸಾಂಪ್ರದಾಯಿಕ ಮಾರು ಕಟ್ಟೆ ಮತ್ತು ವೃತ್ತಿ ಕುಶಲತೆಯನ್ನು ಕಳೆದುಕೊಳ್ಳುತ್ತಿರುವ ಹಿನ್ನೆಲೆಯಲ್ಲಿ, ಅವರ ಕುಶಲತೆ ಮತ್ತು ವೃತ್ತಿ ತಂತ್ರಜ್ಞಾನವನ್ನು ಮೇಲ್ದರ್ಜೆಗೇರಿಸಿ ಜೀವನ ಮಟ್ಟವನ್ನು ಸುಧಾರಿಸಲು ಅಗತ್ಯವಿರುವ ಆರ್ಥಿಕ ನೆರವನ್ನು ಒದಗಿಸುವ ದಿಸೆಯಲ್ಲಿ ಶ್ರಮಶಕ್ತಿ ಎಂಬ ನೂತನ ಯೋಜನೆಯನ್ನು ೨೦೦೫ರ ಮಾರ್ಚ್ ಒಂಬತ್ತರ ಆದೇಶದಲ್ಲಿ ಜಾರಿಗೆ ತರಲಾಗಿದೆ. ಶ್ರಮಶಕ್ತಿ ಯೋಜನೆಯು ಗರಿಷ್ಠ ರೂ. ೨೫,೦೦೦ ಸಾಲದ ಯೋಜನೆಯನ್ನೂ ಹಾಗೂ ವೃತ್ತಿ ಕುಶಲತೆಯನ್ನು ಹೆಚ್ಚಿಸುವ ತರಬೇತಿ ಯೋಜನೆಯನ್ನೂ ಒಳಗೊಂಡಿರುತ್ತದೆ. ಅರ್ಜಿದಾರರಿಗೆ ಮೊದಲಿಗೆ ಘಟಕ ವೆಚ್ಚವನ್ನು ಸಾಲವಾಗಿ ನೀಡಿ, ಅರ್ಜಿದಾರರು ಶೇಕಡ ೭೫ರಷ್ಟು ಸಾಲವನ್ನು ಬಡ್ಡಿ ಸಮೇತ ಮರುಪಾವತಿಸಿದಾಗ ಅವರ ಖಾತೆಗೆ ಶೇ.೨೫ರಷ್ಟು ಸಹಾಯ ಧನವನ್ನು ಬ್ಯಾಕ್ ಎಂಡ್ ಸಬ್ಸಿಡಿಯಾಗಿ ಹೊಂದಾಣಿಕೆ ಮಾಡಿಕೊಳ್ಳಲಾಗುತ್ತದೆ.

## ಅತಿ ಹಿಂದುಳಿದ ಅಲೆಮಾರಿ ಜನಾಂಗದವರಿಗೆ ಸಹಾಯ ಯೋಜನೆ

ಅಲೆಮಾರಿ ಜನಾಂಗದವರು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುವುದನ್ನು ತಡೆಗಟ್ಟಿ ಒಂದೆಡೆ ನೆಲೆಯೂರುವಂತೆ ಮಾಡಲು ಹಾಗೂ ಅವರಿಗಿರುವ ಕುಲಕಸುಬಿನ ನೈಪುಣ್ಯತೆಯನ್ನು ಆರ್ಥಿಕಾನುಕೂಲಕ್ಕೆ

ಪರಿವರ್ತಿಸುವಂತೆ ಮಾಡಲು, ಅವರಿಗೆ ಅಗತ್ಯವಿರುವ ಆರ್ಥಿಕ ನೆರವನ್ನು ನೀಡುವುದು ಅಥವಾ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದ್ದು, ಈ ಯೋಜನೆಯನ್ನು ೨೦೦೬ರಲ್ಲಿ ಜಾರಿಗೆ ತರಲಾಗಿದೆ. ದಿ.೩೦.೩.೨೦೦೨ರ ಸರ್ಕಾರಿ ಆದೇಶದಲ್ಲಿ ಪ್ರವರ್ಗ-೧ ರಡಿಯಲ್ಲಿ ಸೇರ್ಪಡೆಯಾಗಿರುವ ಅತಿ ಹಿಂದುಳಿದ ಜಾತಿಗಳಾದ ಜೋಗಿ, ಬುಡಬುಡುಕೆ, ಹೆಳವ, ಹಾಲಕ್ಕಿ ಒಕ್ಕಲ್, ಕುಡುಬಿ ಮುಂತಾದ ಅಲೆಮಾರಿ ಜನಾಂಗಕ್ಕೆ ಸೇರಿದ ರೂ. ೨೨,೦೦೦ಕ್ಕಿಂತ ಕಡಿಮೆ ವಾರ್ಷಿಕ ವರಮಾನವಿರುವವರಿಗೆ ಈ ಯೋಜನೆಯ ಸೌಲಭ್ಯಗಳು ದೊರೆಯುತ್ತವೆ.

ಈ ನಿಗಮವು ಕೇವಲ ಸಾಲ ಮತ್ತು ತರಬೇತಿಗಳನ್ನು ಮಾತ್ರ ನೀಡುವ ಸಂಸ್ಥೆಯಾಗಿರದೇ, ನಿಗಮದ ಯೋಜನೆಗಳ ಬಗ್ಗೆ ಅರಿವು ಮೂಡಿಸಲು, ಯೋಜನೆಗಳ ಅನುಷ್ಠಾನದಲ್ಲಿರುವ ಕೊರತೆಗಳನ್ನು ನಿವಾರಿಸಲು, ಸಾಲ ಹಾಗೂ ಸಬ್ಸಿಡಿಗಳ ಮಹತ್ವವನ್ನು ಜನರಿಗೆ ತಿಳಿಸಲು, ಪರಸ್ಪರ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳಲು ಮತ್ತು ಸಾಧನೆಗಳ ಬಗ್ಗೆ ಸಾರ್ವಜನಿಕರಲ್ಲಿ ಪ್ರಕಟ ಪಡಿಸಲು, ಸಾಧಕರ ಉದಾಹರಣೆಗಳನ್ನು ಪರಿಚಯಿಸಲು, ಕೆಲವಾರು ಕಾರ್ಯಕ್ರಮಗಳನ್ನೂ ನಡೆಸುತ್ತದೆ. ಸಂವಾದ, ಸಾಲ ವಿತರಣಾ ಪೂರ್ವ ಸಮಾಲೋಚನೆ, ಸಾಲ ವಿತರಣಾ ಪರ್ಯಾಲೋಚನೆ, ಮಂಥನ, ಪ್ರಾದೇಶಿಕ ರೈತರ ವಿಚಾರ ವಿನಿಮಯ ಕಾರ್ಯಕ್ರಮ ಮುಂತಾದವು ಇಂಥ ಕೆಲವು ಕಾರ್ಯಕ್ರಮಗಳಾಗಿದ್ದು, ಇದರಲ್ಲಿ ಫಲಾನುಭವಿಗಳು ಹಾಗೂ ಫಲಾಸಕ್ತರೆಲ್ಲ ಭಾಗವಹಿಸಿ ತಮ್ಮ ತಮ್ಮ ಸಾಧನೆಗಳನ್ನು ಹೊರಗೆಡಹಲು ಹಾಗೂ ಅನುಮಾನಗಳಿದ್ದಲ್ಲಿ ಪ್ರಶ್ನಿಸಲು ಮತ್ತು ಯಾವುದೇ ಸೋಲು ಗೆಲವುಗಳ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳಲು ಅವಕಾಶ ಒದಗಿಸಲಾಗುತ್ತದೆ. ಇದರಿಂದ ಸಾಲ ಅಥವಾ ಸ್ವ-ಉದ್ಯೋಗ ಕೈಗೊಳ್ಳುವವರಿಗೂ ಅದರ ಪ್ರಯೋಜನ ಪಡೆದು ಸಾಧನೆ ಮಾಡಿದವರಿಗೂ ಪರಿಚಯ ಮತ್ತು ಆತ್ಮವಿಶ್ವಾಸಗಳನ್ನೂ ಬೆಳೆಸುವಲ್ಲಿ ಈ ನಿಗಮವು ಸಹಾಯಿಸುತ್ತದೆ.

ನಿಗಮದ ಈ ತೃಪ್ತಿಕರ ಕಾರ್ಯ ನಿರ್ವಹಣೆಯು ಕೇಂದ್ರ ಸರ್ಕಾರದ ಗಮನಕ್ಕೆ ಬಂದಿದ್ದು, ರಾಷ್ಟ್ರದಲ್ಲಿಯೇ ಉತ್ತಮವಾಗಿ ಸಾಲ ಯೋಜನೆಯ ಕಾರ್ಯ ನಿರ್ವಹಣೆ ಮಾಡಿದ ಸಂಸ್ಥೆಯಾಗಿ ಈ ನಿಗಮವು, ೨೦೦೧-೦೨, ೨೦೦೨-೦೩, ೨೦೦೪-೦೫ ಮತ್ತು ೨೦೦೬-೦೭ನೇ ಸಾಲುಗಳಲ್ಲಿ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವರಿಂದ 'ಅತ್ಯುತ್ತಮ' ಕಾರ್ಯಕ್ಷಮತಾ ಪ್ರಶಸ್ತಿ'ಗಳನ್ನು ಪಡೆದಿರುತ್ತದೆ.

## ಅಲ್ಪ ಸಂಖ್ಯಾತರ ಕಲ್ಯಾಣ

ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಕಾರ್ಯಕ್ರಮಗಳನ್ನು ೧೯೯೮ರ ವರೆಗೆ ಒಂದೇ ಇಲಾಖೆಯಲ್ಲಿ ನಿರ್ವಹಿಸಲಾಗುತ್ತಿದ್ದು, ಕರ್ನಾಟಕ ಸರ್ಕಾರವು, ೧೯೯೮ರ ಡಿಸೆಂಬರ್ ಒಂಬತ್ತರ ಆದೇಶದಲ್ಲಿ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯನ್ನು ರಚಿಸಿ, ಈ ಸಂಬಂಧದ ಕಾರ್ಯಕ್ರಮಗಳ ಜವಾಬ್ದಾರಿಯನ್ನು ಪ್ರತ್ಯೇಕಗೊಳಿಸಿದೆ. ಅದರಂತೆ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯು ೧೯೯೯ ರ ಮೇ ತಿಂಗಳ ಇಪ್ಪತ್ತನೇ ತಾರೀಖಿನಿಂದ ಕಾರ್ಯಾರಂಭ ಮಾಡಿದೆ. ಆದರೆ ಜಿಲ್ಲಾ ಮಟ್ಟದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳೇ ಈ ನಿರ್ದೇಶನಾಲಯದ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ.

ರಾಜ್ಯದಲ್ಲಿ ಮುಸಲ್ಮಾನರು, ಕ್ರಿಶ್ಚಿಯನ್ನರು, ಜೈನರು, ಬೌದ್ಧರು, ಸಿಖ್ಖರು ಮತ್ತು ಪಾರ್ಸಿಗಳನ್ನು ಮತೀಯ ಅಲ್ಪ ಸಂಖ್ಯಾತರೆಂದು ಪರಿಗಣಿಸಲಾಗಿದೆ. ೨೦೦೧ರ ಜನಗಣತಿಯ ಪ್ರಕಾರ ಈ ಅಲ್ಪ ಸಂಖ್ಯಾತರ ಜನಸಂಖ್ಯೆಯು ರಾಜ್ಯದಲ್ಲಿ ೮೨.೯೩ ಲಕ್ಷಗಳಿದ್ದು, ಇದು ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡ ೧೫.೬೪ರಷ್ಟಿರುತ್ತದೆ.

ಹಿಂದುಳಿದ ವರ್ಗಗಳ ಇಲಾಖೆಯಿಂದ ಜಾರಿಗೊಳಿಸಲಾಗುವ ಬಹುತೇಕ ಯೋಜನೆಗಳು ಮತ್ತು ಅದೇ ನಿಯಮಗಳೇ ಈ ಇಲಾಖೆಯಿಂದಲೂ ಅನುಷ್ಠಾನಗೊಳಿಸಲಾಗುತ್ತದೆ.

### ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು

ಈ ಇಲಾಖೆಯಿಂದ ೨೦೧೩-೧೪ರಲ್ಲಿ ತುಮಕೂರಿನಲ್ಲಿ ಅಲ್ಪಸಂಖ್ಯಾತರಿಗಾಗಿ ಒಂದು ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯವನ್ನೂ, ಒಂದು ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯವನ್ನೂ ನಡೆಸಲಾಗತ್ತಿದ್ದು ಇವುಗಳಲ್ಲಿ ಕ್ರಮವಾಗಿ ೫೦ ವಿದ್ಯಾರ್ಥಿಗಳೂ, ೭೫ ವಿದ್ಯಾರ್ಥಿನಿಯರೂ ಒಟ್ಟು ೧೨೫ ನಿಲಯವಾಸಿಗಳಿದ್ದಾರೆ.

## ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು

ಜಿಲ್ಲೆಯಲ್ಲಿ ೨೦೧೪ರ ಮಾರ್ಚಿ ಅಂತ್ಯಕ್ಕೆ ಒಟ್ಟು ಮೂರು (ಒಂದು ಬಾಲಕರ ವಿದ್ಯಾರ್ಥಿನಿಲಯ ಹಾಗೂ ಎರಡು ಬಾಲಕಿಯರ ವಿದ್ಯಾರ್ಥಿನಿಲಯಗಳು) ಸರ್ಕಾರಿ ಅಲ್ಪಸಂಖ್ಯಾತರ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿದ್ದು, ೧೫೦ ವಿದ್ಯಾರ್ಥಿಗಳಿದ್ದರು ಹಾಗೂ ಒಂದು ಅನುದಾನಿತ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು ಒಟ್ಟು ೫೦ ವಿದ್ಯಾರ್ಥಿನಿಯರುಗಳಿದ್ದರು. ಈ ನಿಲಯಗಳಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಸಂಖ್ಯೆ, ಇರುವ ಸ್ಥಳಗಳ ವಿವರಗಳನ್ನು ಕೋಷ್ಟಕ ೧೬.೫೧ ರಲ್ಲಿ ನೀಡಿದೆ.

**ಕೋಷ್ಟಕ ೧೬.೫೧: ಜಿಲ್ಲೆಯಲ್ಲಿರುವ ಅಲ್ಪಸಂಖ್ಯಾತರ ಸರ್ಕಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು ಮತ್ತು ವಿದ್ಯಾರ್ಥಿಗಳ ವಿವರ (ಯೋಜನೆ+ಯೋಜನೇತರ)**

| ಕ್ರ. ಸಂ | ತಾಲ್ಲೂಕು | ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ಸಂಖ್ಯೆ | | | ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳ ಸಂಖ್ಯೆ | | |
|---|---|---|---|---|---|---|---|
| | | ಬಾಲಕರದು | ಬಾಲಕಿಯರದು | ಒಟ್ಟು | ಬಾಲಕರು | ಬಾಲಕಿರಯರು | ಒಟ್ಟು |
| ೧ | ತುರುವೇಕೆರೆ | ೧ | – | ೧ | ೫೦ | – | ೫೦ |
| ೨ | ಶಿರಾ | – | ೧ | ೧ | – | ೫೦ | ೫೦ |
| ೩ | ಪಾವಗಡ | – | ೧ | ೧ | – | ೫೦ | ೫೦ |

**ಆಧಾರ: ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳು, ತುಮಕೂರು**

ಜಿಲ್ಲೆಯಲ್ಲಿ ೫೦ ವಿದ್ಯಾರ್ಥಿಗಳ ಸಾಮರ್ಥ್ಯದ ಒಂದು ಬಾಲಕರ ಹಾಗೂ ೭೫ ವಿದ್ಯಾರ್ಥಿನಿಯರ ಸಾಮರ್ಥ್ಯದ ಒಂದು ಬಾಲಕಿಯರ ಹೀಗೆ ಎರಡು ಅಲ್ಪಸಂಖ್ಯಾತರ ಮೆಟ್ರಿಕ್ ನಂತರ ಹಾಗೂ ಮೂರು ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ನಿರ್ವಹಣೆಗೆ ಬಿಡುಗಡೆಯಾಗಿರುವ ಮೊತ್ತ ರೂ. ೪೩ ಲಕ್ಷಗಳಲ್ಲಿ, ರೂ. ೩೭.೩೭ ಲಕ್ಷ ಖರ್ಚು ಮಾಡಲಾಗಿದೆ.

## ಕಾನೂನು ಪದವೀಧರರಿಗೆ ತರಬೇತಿ

ಐ.ಟಿ.ಐ. / ಡಿಪ್ಲೋಮೊ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ, ಅಲ್ಪ ಸಂಖ್ಯಾತರ ಖಾಸಗಿ ಸ್ವಯಂ ಸೇವಾ ಸಂಸ್ಥೆಗಳು ನಡೆಸುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ನಿರ್ವಹಣೆಗೆ ಅನುದಾನ ಮತ್ತು ನಿಲಯಗಳ ಕಟ್ಟಡ ನಿರ್ಮಾಣಕ್ಕೆ ಅನುದಾನ, ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗುವವರಿಗೆ ತರಬೇತಿ, ಕಂಪ್ಯೂಟರ್ ತರಬೇತಿ, ಕೌಶಲ್ಯ ಅಭಿವೃದ್ಧಿ ಯೋಜನೆ, ಗಗನ ಸಖಿಯರ ತರಬೇತಿ, ವಿಮಾನ ಚಾಲನೆ ತರಬೇತಿ ಮುಂತಾದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಜಾರಿಗೊಳಿಸುವ ಹಲವಾರು ಕಾರ್ಯಕ್ರಮಗಳನ್ನೇ ಹೆಚ್ಚಿನ ಪ್ರಮಾಣದಲ್ಲಿ ಅದೇ ನಿಯಮಗಳನ್ನನುಸರಿಸಿ ಅಲ್ಪ ಸಂಖ್ಯಾತರಿಗಾಗಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜಾರಿಗೊಳಿಸಬೇಕಾಗಿರುತ್ತದೆ. ಈ ಜಿಲ್ಲೆಯಲ್ಲಿ ೨೦೦೭-೦೮ನೇ ಸಾಲಿನಲ್ಲಿ ಆರು ಕಾನೂನು ಪದವೀಧರರು ತರಬೇತಿಯ ಸೌಲಭ್ಯ ಪಡೆಯುತ್ತಿದ್ದಾರೆ.ಇವರಲ್ಲಿ ಒಬ್ಬ ಮಹಿಳೆಯೂ ಇದ್ದು ಈ ಕಾರ್ಯಕ್ರಮಕ್ಕಾಗಿ ಸದರಿ ಸಾಲಿನಲ್ಲಿ ರೂ. ೫೮ ಸಾವಿರ ಗಳನ್ನು ಖರ್ಚು ಮಾಡಲಾಗಿದೆ.

## ಬೆರಳಚ್ಚು ಮತ್ತು ಶೀಘ್ರಲಿಪಿ ತರಬೇತಿ

ಈ ಜಿಲ್ಲೆಯಲ್ಲಿ ೨೦೦೪-೦೫ನೇ ಸಾಲಿನಲ್ಲಿ ಈ ಯೋಜನೆಯಡಿ ಮೂರು ಅಲ್ಪ ಸಂಖ್ಯಾತ ವರ್ಗದ ಅಭ್ಯರ್ಥಿಗಳು ಪ್ರಯೋಜನ ಪಡೆದಿದ್ದು ಈ ಸಂಬಂಧವಾಗಿ ರೂ. ೧೨೦೦ಗಳನ್ನು ಖರ್ಚು ಮಾಡಲಾಗಿದೆ.

ಅಲ್ಪ ಸಂಖ್ಯಾತರ ಸಮುದಾಯ ಭವನ/ಶಾದಿ ಮಹಲ್ ನಿರ್ಮಾಣಕ್ಕೆ ಅನುದಾನ ನೀಡುವಂತಹ ಒಂದು ಪ್ರತ್ಯೇಕ ಕಾರ್ಯಕ್ರಮವನ್ನು ಈ ಇಲಾಖೆಯಿಂದ ಜಾರಿಗೊಳಿಸಲು ಸರ್ಕಾರವು ೨೦೦೦ನೇ ಸಾಲಿನ ಅಕ್ಟೋಬರ್ ಐದರ ಆದೇಶದಲ್ಲಿ ಮಂಜೂರಾತಿ ನೀಡಿದೆ. ಅಲ್ಪ ಸಂಖ್ಯಾತರ ಸಮುದಾಯದವರು ಸಾಂಸ್ಕೃತಿಕ, ಸಾಮಾಜಿಕ ಕಾರ್ಯಕ್ರಮಗಳನ್ನು, ಮದುವೆ, ಔತಣ ಇತ್ಯಾದಿಗಳನ್ನು ನಡೆಸಲು ಅನುಕೂಲವಾಗುವಂತಹ ಸಮುದಾಯ ಭವನ ಅಥವಾ ಶಾದಿ ಮಹಲ್‌ಗಳನ್ನು ನಿರ್ಮಿಸಲು ರೂ. ೫,೦೦,೦೦೦ ಅನುದಾನವನ್ನು ನಿಗದಿತ ನಿಯಮಗಳನ್ನನುಸರಿಸಿ

ಈ ಕಾರ್ಯಕ್ರಮದ ಅಡಿಯಲ್ಲಿ ಮಂಜೂರು ಮಾಡಲಾಗುತ್ತದೆ. ರೂ. ಐದು ಲಕ್ಷಕ್ಕಿಂತ ಹೆಚ್ಚಿನ ಮೊತ್ತವನ್ನು ಸ್ವಯಂ ಸಂಸ್ಥೆಯವರೇ ಹೊಂದಿಸಬೇಕಾಗುತ್ತದೆ. ಈ ಮಹಲ್‌ಗಳನ್ನು ರಾಜಕೀಯ ಚಟುವಟಿಕೆಗಳಿಗೆ ಬಳಸಲು ಅವಕಾಶವಿಲ್ಲ.

## ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ

ಅಲ್ಪ ಸಂಖ್ಯಾತರಿಗೆ ಅಗತ್ಯ ಸಂದರ್ಭಗಳಲ್ಲಿ ಆರ್ಥಿಕ ನೆರವನ್ನು ನೀಡಿ ಅವರ ಅಭಿವೃದ್ಧಿಗೆ ದಾರಿ ಮಾಡಿ ಕೊಡುವ ಉದ್ದೇಶದಿಂದ, ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮವನ್ನು ೧೯೮೬ರ ಫೆಬ್ರವರಿ ಏಳರಂದು ಸ್ಥಾಪನೆ ಮಾಡಲಾಗಿದೆ. ರಾಜ್ಯ ಸರ್ಕಾರವು ಬಿಡುಗಡೆ ಮಾಡುವ ಅನುದಾನದಲ್ಲಿ ನಿಗಮವು ಮುಂದೆ ತಿಳಿಸಿರುವ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿದೆ. ಸ್ವಾವಲಂಬನ ಮಾರ್ಜಿನ್ ಹಣ ಸಾಲದ ಯೋಜನೆ, ಸಹಾಯಧನ ಯೋಜನೆ, ಅರಿವು ಯೋಜನೆ (ವಿದ್ಯಾಭ್ಯಾಸ ಸಾಲದ ಯೋಜನೆ), ಗಂಗಾ ಕಲ್ಯಾಣ ಯೋಜನೆ, ಶ್ರಮಶಕ್ತಿ ಯೋಜನೆ, ಸಣ್ಣ ಸಾಲದ ಯೋಜನೆ, ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸಿನ ನಿಗಮದ ನೇರ ಸಾಲ ಯೋಜನೆಗಳಡಿ ಅಲ್ಪಸಂಖ್ಯಾತರಿಗೆ ನೆರವನ್ನು ನೀಡಲಾಗುತ್ತದೆ. ವಿವರಗಳಿಗೆ ಕೋಷ್ಟಕ ೧೬.೫೨ ಅನ್ನು ನೋಡಿ.

**ಕೋಷ್ಟಕ ೧೬.೫೨: ತುಮಕೂರು ಜಿಲ್ಲೆಯಲ್ಲಿ ೨೦೦೭-೦೮ರಲ್ಲಿ ವಿವಿಧ ಯೋಜನೆಗಳಡಿ ನೀಡಲಾದ ನೆರವಿನ ಸಾಧನೆಯ ವಿವರ**

| ಕ್ರ. ಸಂ | ಯೋಜನೆಗಳು | ಗುರಿ | | ಸಾಧನೆ | |
|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| ೧ | ಸ್ವಾವಲಂಬನ ಮಾರ್ಜಿನ್ ಹಣ ಸಾಲದ ಯೋಜನೆ | ೨೧೬ | ೨೭,೦೦,೦೦೦ | ೧೬೯ | ೧೯,೬೧,೯೮೭ |
| ೨ | ಅರಿವು (ಶಿಕ್ಷಣ ಸಾಲ) ಯೋಜನೆ | ೧೦೮ | ೧೮,೯೦,೦೦೦ | ೨೭೪ | ೩೬,೦೪,೧೮೦ |
| ೩ | ಶ್ರಮಶಕ್ತಿ ಯೋಜನೆ | ೫೪ | ೧೩,೫೦,೦೦೦ | ೪೪ | ೪,೫೫,೦೦೦ |
| ೪ | ಗಂಗಾ ಕಲ್ಯಾಣ ಯೋಜನೆ | ೬೦ | ೬೦,೦೦,೦೦೦ | ೧೧೧ | ೯೫,೪೬,೦೦೦ |
| ೫ | ಮೈಕ್ರೋ ಸಣ್ಣ ಸಾಲದ ಯೋಜನೆ | ೨೪ | ೨,೪೦,೦೦೦ | ೨೪ | ೨,೪೦,೦೦೦ |

**ಆಧಾರ: ವ್ಯವಸ್ಥಾಪಕ ನಿರ್ದೇಶಕರು, ಅಲ್ಪಸಂಖ್ಯಾತರ ನಿಗಮ ನಿಯಮಿತ**

## ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ

ನಾಮಕರಣ, ಮದುವೆ, ಮುಂಜಿ, ಮನರಂಜನೆ ಮುಂತಾದ ಹಲವು ರೀತಿಯ ಕೌಟುಂಬಿಕ ಸಂಭ್ರಮ, ಮೋಜುಗಳ ಕಡೆ ಗಮನವೇ ಹರಿಸದೇ, ಸಾಂಸಾರಿಕ ಸುಖ-ಸವಲತ್ತುಗಳನ್ನು ನೆಮ್ಮದಿಯಾಗಿ ಅನುಭವಿಸದೆ; ಜಾತಿ, ಮತ ಪಂಥಗಳ ಮಿತಿ ಹಾಕಿಕೊಳ್ಳದೆ; ಕೇವಲ ದೇಶದ ರಕ್ಷಣೆಗಾಗಿಯೇ ತಮ್ಮ ಜೀವನವನ್ನೇ ಮುಡಿಪಾಗಿಡುವ ಸೈನಿಕರ ಮತ್ತು ಮಾಜಿ ಸೈನಿಕರ ಕುಟುಂಬಗಳ ರಕ್ಷಣೆ ಮತ್ತು ಪೋಷಣೆಗಳು ಅಗತ್ಯ ಎಂಬುದನ್ನು ಮೊದಲ ಮಹಾ ಯುದ್ಧದ ಸಮಯದಲ್ಲಿ ಭಾರತೀಯ-ಬ್ರಿಟಿಷ್ ಸರ್ಕಾರ ಕಂಡುಕೊಂಡಿತು ಮತ್ತು ಅವರ ಕುಟುಂಬಗಳ ಸರ್ವ ರೀತಿಯ ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು ರೂಪಿಸಿ, ಬುನಾದಿ ಹಾಕಿ ಕೊಟ್ಟಿತು. ದಕ್ಷಿಣ ಆಫ್ರಿಕಾ, ಇಟಲಿ, ಬರ್ಮಾ, ಇಂಡೋನೇಷಿಯಾ ಹೀಗೆ ಹಲವಾರು ದೇಶಗಳಿಗಾಗಿ ತಮ್ಮ ದೇಶದ ನೆಲದಿಂದ ಬಹುದೂರದ ರಣರಂಗಗಳ ಸೇನಾಪಡೆಯಲ್ಲಿದ್ದ ಭಾರತೀಯ ಸೈನಿಕರು, ಯುದ್ಧ ನಿರತರಾಗಿದ್ದರು. ಬಹುತೇಕ ಸೈನಿಕರು ಗ್ರಾಮೀಣ ಹಿನ್ನೆಲೆ ಹೊಂದಿದವರಾಗಿದ್ದು ಅವರ ಮಡದಿಯರು ಅಶಿಕ್ಷಿತರಾಗಿದ್ದರು. ಇದರಿಂದ ಈ ಸೈನಿಕರು ತಮ್ಮ ಕುಟುಂಬಗಳೊಂದಿಗೆ ಸಂಪರ್ಕಿಸಲು ಸಮಸ್ಯೆಯಾಗುತ್ತಿತ್ತು. ತಮ್ಮ ಕುಟುಂಬಗಳಿಂದ ದೀರ್ಘಕಾಲ ದೂರವಿರುತ್ತಿದ್ದ ಸೈನಿಕರ ಮನಸ್ಥಿತಿಯನ್ನು ಮತ್ತು ನೈತಿಕ ಬಲವನ್ನು ಉನ್ನತ ಮಟ್ಟದಲ್ಲಿಟ್ಟರೆ, ಅವರು ಉತ್ಸಾಹದಿಂದ ರಣರಂಗದಲ್ಲಿ ಕಾರ್ಯೋನ್ಮುಖರಾಗಲು ಸಾಧ್ಯ ಎಂಬುದನ್ನು ಮನಗಂಡ ಆಗಿನ ಬ್ರಿಟಿಷ್ ಸರ್ಕಾರವು ಈ ಸೈನಿಕರ ಕುಟುಂಬಗಳನ್ನು ಪೋಷಣೆ ಮತ್ತು ಪ್ರಗತಿಯ ಅವಶ್ಯಕತೆಯತ್ತ ಗಮನ ಹರಿಸಿತು. ಈ ಕಾರ್ಯಕ್ಕಾಗಿ ಸೈನಿಕರ ಮಂಡಳಿಯನ್ನು (The Indian Soldiers Board) ರಚನೆ ಮಾಡಲಾಯಿತು.

ಭಾರತೀಯ ನೌಕಾ ಪಡೆ ಮತ್ತು ವಾಯು ಪಡೆಗಳು ವಿಸ್ತೃತಗೊಂಡಾಗ ಭಾರತೀಯ ಸೈನಿಕ ಮಂಡಳಿಗೆ ನೌಕಾದಳ ಮತ್ತು ವಾಯು ದಳಗಳಲ್ಲಿದ್ದ ಸೈನಿಕರ ಕುಟುಂಬಗಳನ್ನೂ ನೋಡಿಕೊಳ್ಳುವ ಹೆಚ್ಚಿನ ಜವಾಬ್ದಾರಿಯನ್ನು ವಹಿಸಿ, ಇದರ ಹೆಸರನ್ನು 'ಇಂಡಿಯನ್ ಸೋಲ್ಡ್ಜರ್ಸ್, ಸೇಲರ್ಸ್ ಅಂಡ್ ಏರ್‌ಮೆನ್ಸ್ ಬೋರ್ಡ್' (Indian Soldiers, Sailors and Airmen's Board) ಎಂಬುದಾಗಿ ಮಾರ್ಪಡಿಸಲಾಯಿತು. ನಂತರದಲ್ಲಿ ಸೈನಿಕರ ಸಂಖ್ಯೆ ಹೆಚ್ಚುತ್ತಾ ಹೋದಂತೆ ಈ ಮಂಡಳಿಯ ಹೊಣೆಗಾರಿಕೆ ಮತ್ತು ಕಾರ್ಯ ಒತ್ತಡಗಳೂ ಹೆಚ್ಚಿ, ಸೈನಿಕರ ಕುಟುಂಬಗಳ ಪೋಷಣೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು, ಎಲ್ಲ ರಾಜ್ಯಗಳಲ್ಲಿ ನಂತರ ಜಿಲ್ಲೆಗಳಲ್ಲಿ ಮಂಡಳಿಗಳನ್ನು ಸ್ಥಾಪಿಸುವುದು ಅಗತ್ಯವೆಂಬುದನ್ನು ಮನಗಾಣಲಾಯಿತು.

ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರಿನ ಮಹಾರಾಜರು ಮೈಸೂರು ರಾಜ್ಯದ ಸೇನೆಯ ಮತ್ತು ಈ ಸೇನೆಯಲ್ಲಿ ಸೇವೆ ಸಲ್ಲಿಸಿದ ಮಾಜಿ ಸೈನಿಕರ ಕುಟುಂಬ ಕಲ್ಯಾಣಕ್ಕಾಗಿ 'ಸೋಲ್ಡ್ಜರ್ಸ್, ಸೇಲರ್ಸ್ ಅಂಡ್ ಏರ್‌ಮೆನ್ಸ್ ಬೋರ್ಡ್' (Soldiers, Sailors and Airmens Board) ನ್ನು ಆರಂಭಿಸಿದ್ದರು. ೧೯೫೬ರಲ್ಲಿ ರಾಜ್ಯದ ಏಕೀಕರಣವಾದ ಮೇಲೆ ರಾಜ್ಯದಲ್ಲಿದ್ದ ಹತ್ತೊಂಬತ್ತು ಜಿಲ್ಲೆಗಳ ಕಾರ್ಯಭಾರವನ್ನು ಆಗ ಅಸ್ತಿತ್ವದಲ್ಲಿದ್ದ ಎಂಟು ಜಿಲ್ಲಾ ಸೈನಿಕ, ನಾವಿಕ ವೈಮಾನಿಕ ಮಂಡಳಿಗಳಿಗೆ ಮರುಹಂಚಿಕೆ ಮಾಡಲಾಯಿತು. ೧೯೬೩ರಲ್ಲಿ ಸೈನಿಕ ಮಂಡಳಿ ವ್ಯವಸ್ಥೆಯನ್ನು ಶಾಶ್ವತ ಗೊಳಿಸಿ, ಜಿಲ್ಲಾ ಸೈನಿಕ, ನಾವಿಕ ಮತ್ತು ವೈಮಾನಿಕ ಮಂಡಳಿಗಳ ಎಂಟು ಕಛೇರಿಗಳ ನೌಕರರನ್ನು ಸರ್ಕಾರಿ ನೌಕರರೆಂಬುದಾಗಿ ಪರಿಗಣಿಸಲಾಯಿತು. ೧೯೬೦ರಲ್ಲಿ ಅಧಿಕ ಕಾರ್ಯ ಒತ್ತಡಗಳನ್ನು ಮನಗಂಡು, ಮೈಸೂರು ರಾಜ್ಯ ಸೈನಿಕ, ನಾವಿಕ ವೈಮಾನಿಕ ಮಂಡಳಿಯನ್ನು, ಇದಕ್ಕಾಗಿಯೇ ಸಂಪೂರ್ಣ ಮೀಸಲಾದ ಕಾರ್ಯದರ್ಶಿಯೊಂದಿಗೆ ಸ್ಥಾಪಿಸಿ, ಗೃಹ ಇಲಾಖೆಯ ಅಧೀನದಲ್ಲಿಡಲಾಯಿತು. ಈ ಮಂಡಳಿಯ ಕಾರ್ಯದರ್ಶಿ ಹುದ್ದೆಯನ್ನು ಕಿರಿಯ ಇಲಾಖೆಯ ಮುಖ್ಯಸ್ಥ ಹುದ್ದೆಯನ್ನಾಗಿ ಮಾಡಲಾಯಿತು. ೧೯೭೬ರಲ್ಲಿ ಭಾರತ ಸರ್ಕಾರದ ಕೋರಿಕೆಯಂತೆ ಈ ಮಂಡಳಿಗಳು ಕ್ರಮವಾಗಿ ಕರ್ನಾಟಕ ರಾಜ್ಯ ಸೈನಿಕ, ನಾವಿಕ ವೈಮಾನಿಕ ಮಂಡಳಿ ಹಾಗೂ ಜಿಲ್ಲಾ ಸೈನಿಕ, ನಾವಿಕ ವೈಮಾನಿಕ ಮಂಡಳಿಗಳೆಂದು ನಾಮಕರಣಗೊಂಡವು. ೧೯೮೦ರಲ್ಲಿ ಈ ಇಡೀ ವ್ಯವಸ್ಥೆಯು ಸೈನಿಕರ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯೆಂಬುದಾಗಿ ಹೆಸರು ಹೊಂದಿ ಅದೇ ರೀತಿ ಈವರೆಗೆ ಮುಂದುವರಿಯುತ್ತಿದೆ. ಕರ್ನಾಟಕ ರಾಜ್ಯ ಸೈನಿಕ, ನಾವಿಕ ವೈಮಾನಿಕ ಮಂಡಳಿಯ ಕಾರ್ಯದರ್ಶಿಗಳು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ನಿರ್ದೇಶಕರಾಗಿಯೂ, ಜಿಲ್ಲಾ ಸೈನಿಕ, ನಾವಿಕ, ವೈಮಾನಿಕ ಮಂಡಳಿಯ ಕಾರ್ಯದರ್ಶಿಗಳು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪ ನಿರ್ದೇಶಕರಾಗಿಯೂ ನಾಮಾಂಕಿತಗೊಂಡವರಾಗಿದ್ದಾರೆ.

ರಾಜ್ಯದಲ್ಲಿ ಜಿಲ್ಲೆಗಳ ಕಾರ್ಯವನ್ನು ಈ ಇಲಾಖೆಯ ಐದು ಜಂಟಿ ನಿರ್ದೇಶಕರು ಮತ್ತು ಎಂಟು ಉಪ ನಿರ್ದೇಶಕರ ಕಾರ್ಯಾಲಯಗಳು ನೋಡಿಕೊಳ್ಳುತ್ತಿವೆ. ಈ ಅಧಿಕಾರಿಗಳಿರುವ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯಾ ಕಾರ್ಯವ್ಯಾಪ್ತಿಯ ಜಿಲ್ಲೆಗಳ ಜಿಲ್ಲಾ ಸೈನಿಕ ಮಂಡಳಿಯನ್ನು ರಚಿಸಲಾಗಿದೆ. ಈ ಮಂಡಳಿಗಳು ಕಾಲ ಕಾಲಕ್ಕೆ ಸಭೆ ಸೇರಿ, ಜಿಲ್ಲಾ ಮಟ್ಟದಲ್ಲಿ ಮಾಜಿ ಸೈನಿಕರ ಹಾಗೂ ಅವರ ಅವಲಂಬಿತರ ಕಲ್ಯಾಣ ಮತ್ತು ಪುನರ್ವಸತಿಗಾಗಿ ಸೂಕ್ತ ಸಲಹೆ ನೀಡುತ್ತವೆ.

ಭಾರತ ಸಮಿತಿಯ(ಯೂನಿಯನ್) ಸಕ್ರಮ ಸೇನಾ ದಳ, ನಾವಿಕ ದಳ ಮತ್ತು ವಾಯು ದಳಗಳಲ್ಲಿ ಯೋಧನಾಗಿ ಅಥವಾ ಯೋಧನಲ್ಲದೆ ಯಾವುದೇ ದರ್ಜೆಯಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿಯನ್ನು 'ಮಾಜಿ ಸೈನಿಕ' ಎಂದು ಪರಿಗಣಿಸಲಾಗುತ್ತದೆ. (ಡಿಫೆನ್ಸ್ ಕಾರ್ಪ್ಸ್, ಜನರಲ್ ರಿಸರ್ವ್ ಎಂಜಿನಿಯರಿಂಗ್ ಫೋರ್ಸ್, ಲೋಕ ಸಹಾಯಕ್ ಮತ್ತು ಇತರ ವ್ಯತಿರಿಕ್ತ (ಪ್ಯಾರಾ) ಮಿಲಿಟರಿ ಸೇನಾ ಪಡೆಗಳಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿಯನ್ನು ಇದು ಒಳಗೊಳ್ಳುವುದಿಲ್ಲ)

ಮೈಸೂರಿನ ಝಾನ್ಸಿ ಲಕ್ಷ್ಮಿ ಬಾಯಿ ರಸ್ತೆಯಲ್ಲಿರುವ ಕಛೇರಿಯ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪ ನಿರ್ದೇಶಕರ ಕಾರ್ಯಾಲಯದ ವ್ಯಾಪ್ತಿಗೆ ತುಮಕೂರು ಜಿಲ್ಲೆಯು ಸೇರಿದ್ದು, ಜಿಲ್ಲೆಯಲ್ಲಿ ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವ ಅಧಿಕಾರಿಗಳಾಗಿರುತ್ತಾರೆ. ಸೈನಿಕರ ಅವಲಂಬಿತರು, ಮಾಜಿ ಸೈನಿಕರು ಮತ್ತು ಮಾಜಿ ಸೈನಿಕರ ಅವಲಂಬಿತರಿಗೆ ಸಂಬಂಧಿಸಿದಂತಹ ಎಲ್ಲ ರೀತಿಯ ಕಲ್ಯಾಣ ಮತ್ತು ಪುನರ್ವಸತಿ ಕಾರ್ಯಕ್ರಮಗಳನ್ನು ಈ ಕಛೇರಿಯು ನಿರ್ವಹಿಸುತ್ತದೆ. ಜಿಲ್ಲಾ ಮಟ್ಟದಲ್ಲಿನ ಉಪ ನಿರ್ದೇಶಕರೇ ಜಿಲ್ಲಾ ಸೈನಿಕ ಮಂಡಳಿಯ ಕಾರ್ಯದರ್ಶಿಯೂ ಆಗಿದ್ದು, ಜಿಲ್ಲಾ ಸೈನಿಕ ಮಂಡಳಿಯ ಸಭೆಗಳನ್ನು ಕರೆಯುವ ಅಧಿಕಾರ ಹೊಂದಿರುತ್ತಾರೆ.

ಕರ್ನಾಟಕ ರಾಜ್ಯದಲ್ಲಿ ಸುಮಾರು ಒಂದು ಲಕ್ಷ ಮಾಜಿ ಸೈನಿಕರಿದ್ದು, ಅವರ ಅವಲಂಬಿತರು ಸುಮಾರು ಮೂರು ಲಕ್ಷ ಇರುತ್ತಾರೆಂದು ಈ ಇಲಾಖೆಯ ೨೦೦೪-೦೫ನೇ ಸಾಲಿನ ವರದಿ ತಿಳಿಸುತ್ತದೆ. ಅವರ ಕಲ್ಯಾಣ ಮತ್ತು ಪುನರ್ವಸತಿಗಾಗಿ ಕರ್ನಾಟಕ ಸರ್ಕಾರವು ಈ ಮುಂದಿನ ಹಲವಾರು ಸವಲತ್ತುಗಳನ್ನು ಒದಗಿಸಲು ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದೆ. ಉದ್ಯೋಗದಲ್ಲಿ ಮೀಸಲಾತಿ ಮತ್ತು ಸ್ವ ಉದ್ಯೋಗ, ವೇತನ ನಿಗದಿ, ತಾಂತ್ರಿಕ ಶಿಕ್ಷಣದಲ್ಲಿ ಸೀಟುಗಳ ಕಾಯ್ದಿರಿಸುವಿಕೆ, ಅವಲಂಬಿತರ ಮಕ್ಕಳಿಗೆ ಪುಸ್ತಕ ನೆರವು, ಸ್ಥಳ ನೆರವು, ಯುದ್ಧದಲ್ಲಿ ಮಡಿದ ಯೋಧರ ವಿಧವೆಯರಿಗೆ ವಿಧವಾ ವೇತನ; ಜಿಲ್ಲಾ ಯೋಧರಿಗೆ ವಾರ್ಷಿಕ ಪರಿಹಾರ ಧನ ಮಂಜೂರಾತಿ; ಅಪಾಯಕಾರಿ ಸನ್ನಿವೇಷಗಳಲ್ಲಿ ಶೌರ್ಯದಿಂದ ಹೋರಾಡಿ ಗ್ಯಾಲಂಟರಿ/ ಗ್ಯಾಲಂಟರಿಯಲ್ಲದ ಪ್ರಶಸ್ತಿಗಳನ್ನು ಪಡೆದ ಯೋಧರಿಗೆ ನಗದು ಹಣ ಮತ್ತು ವರ್ಷಾಸನ ನೀಡಿಕೆ; ವೈದ್ಯಕೀಯ ವೆಚ್ಚ ಮರುಪಾವತಿ, ಮುಂತಾದ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವುದಲ್ಲದೆ, ಮಾಜಿ ಸೈನಿಕರಿಗೆ, ಯೋಧರ ವಿಧವೆಯರಿಗೆ ಮತ್ತು ಅವರ ಅವಲಂಬಿತರಿಗೆ ನೌಕರಿ ಕೊಡಿಸಿಕೊಡುವುದು; ಮಾಜಿ ಮತ್ತು ಸೇವೆಯಲ್ಲಿರುವ ಸೈನಿಕರಿಗೆ ನಿವೇಶನ/ಮನೆ/ಅಂಗಡಿಗಳನ್ನು ಮಂಜೂರು ಮಾಡುವುದು; ಆಸ್ತಿ ಮತ್ತು ಜೀವಗಳ ರಕ್ಷಣೆ; ಆಸ್ಪತ್ರೆಗಳಲ್ಲಿ ವೈದ್ಯಕೀಯ ಅನುಕೂಲತೆ; ವಿದ್ಯಾರ್ಥಿ ವೇತನ ಮಂಜೂರಾತಿ; ಯೋಧರ ವಿಧವೆಯರಿಗೆ ಮತ್ತು ಸೇವೆಯಲ್ಲಿ ಮಡಿದವರ ವಿಧವೆಯರಿಗೆ ವಿವಾಹನುದಾನ ಮುಂತಾದ ಕಾರ್ಯಗಳನ್ನೂ ನಿರ್ವಹಿಸುವುದು ಈ ಕಛೇರಿಯ ಜವಾಬ್ದಾರಿಯಾಗಿರುತ್ತದೆ. ಬಾವುಟಗಳ ಮಾರಾಟ, ಜಾಹಿರಾತುಗಳು, ಕಲ್ಯಾಣ ನಿಧಿ, ಸಶಸ್ತ್ರ ಪಡೆಗಳ ಧ್ವಜದಿನದ ನಿಧಿ, ಮಾಜಿ ಸೈನಿಕರ ಪಿಂಚಣಿ ಅಹವಾಲುಗಳನ್ನು ಸಂಬಂಧಿತ ಅಧಿಕಾರಿಗಳ ಮುಂದಿಟ್ಟು ಇತ್ಯರ್ಥಗೊಳಿಸುವಿಕೆ – ಇವೇ ಮುಂತಾದುವು ಈ ಇಲಾಖೆಯು ನಿರ್ವಹಿಸುವ ಇನ್ನಿತರ ವಿಭಿನ್ನ ಕಾರ್ಯಕ್ರಮಗಳಾಗಿವೆ. ಹೆಚ್ಚಿನ ವಿವರಗಳಿಗೆ ಕೋಷ್ಟಕ ೧೬.೫೩ಅನ್ನು ನೋಡಿ.

**ಕೋಷ್ಟಕ ೧೬.೫೩: ಜಿಲ್ಲೆಯಲ್ಲಿ ಬಾವುಟಗಳ ಮಾರಾಟ, ಜಾಹೀರಾತು ಇತ್ಯಾದಿಗಳ ಮೂಲಕ ನಿಧಿ ಸಂಗ್ರಹಣೆಯಾದ ವಿವರಗಳು**

| ವರ್ಷ | ಕಾರ್ಯಕ್ರಮಗಳ ಹೆಸರು | ಸಂಗ್ರಹಿಸಲಾದ ಹಣ ರೂ. ಗಳಲ್ಲಿ | ಮೊತ್ತವನ್ನು ಬಳಸಿದ ವಿಧಾನ |
|---|---|---|---|
| ೨೦೦೮-೦೯ | ಸೈನಿಕ ಧ್ವಜ ದಿನಾಚರಣೆ | ೪,೩೧,೪೦೦ | ಮೊತ್ತವನ್ನು ನಿರ್ದೇಶನಾಲಯಕ್ಕೆ ಸಲ್ಲಿಸಲಾಗುವುದು. ಅದನ್ನು ಕಲ್ಯಾಣ ಕಾರ್ಯಕ್ರಮಗಳಾದ ಸ್ಥಳೀಯ/ ವಾರ್ಷಿಕ/ ಮರಣ ಪರಿಹಾರ, ಪುಸ್ತಕ ಅನುದಾನ, ಓರ್ವ ಹೆಣ್ಣು ಮಕ್ಕಳ ಮದುವೆಗೆ ಅನುದಾನ, ವೀರಯೋಧರ ಮನೆ ತೆರಿಗೆ, ವಿದ್ಯಾರ್ಥಿ ನಿಲಯಗಳಿಗೆ ಹೆಚ್ಚುವರಿ ಅನುದಾನ ನೀಡಲಾಗುತ್ತಿದೆ |
| ೨೦೦೯-೧೦ | | ೬೩,೩೫೦ | |
| ೨೦೧೦-೧೧ | | ೩,೬೭೦ | |
| ೨೦೧೧-೧೨ | | ೮೬,೫೪೬ | |

## ಪ್ರಶಸ್ತಿ ವಿಜೇತರಿಗೆ ವರ್ಷಾಸನ ನೀಡಿಕೆ

ದೇಶದ ರಕ್ಷಣೆಗಾಗಿ ನಿಷ್ಠೆಯಿಂದ ದುಡಿಯುವ ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ಮತ್ತು ಅಗತ್ಯ ಸಂದರ್ಭಗಳಲ್ಲಿ ಭಯಭೀತಿಗೊಳ್ಳದೆ ಶೌರ್ಯದಿಂದ ಕಾರ್ಯ ಸಾಧಿಸುವ ವೀರಯೋಧರಿಗೆ ಕೇಂದ್ರ ಸರ್ಕಾರದಿಂದ ವೀರ ಚಕ್ರ, ಕೀರ್ತಿ ಚಕ್ರ, ಯುದ್ಧ ಸೇವಾ ಮೆಡಲ್, ಪರಮ ವಿಶಿಷ್ಟ ಸೇವಾ ಮೆಡಲ್ ಮುಂತಾದ ಶೌರ್ಯ ಹಾಗೂ ಶೌರ್ಯೇತರ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಈ ಪ್ರಶಸ್ತಿ ವಿಜೇತರಿಗೆ ಅವರಿಗೆ ಸಂಬಂಧಿಸಿದ ಜಿಲ್ಲೆಗಳಲ್ಲಿ ಒಂದು ಬಾರಿ ನಗದು ಹಣ ಮತ್ತು ವರ್ಷಾಸನಗಳನ್ನು ಕೊಡಲಾಗುತ್ತದೆ.

## ವೈದ್ಯಕೀಯ ಚಿಕಿತ್ಸೆ ಮತ್ತು ಮರುಪಾವತಿ

ರಾಜ್ಯದ ಮಿಲಿಟರಿ ಆಸ್ಪತ್ರೆಗಳಲ್ಲಿ ಸೇನಾ ನಿವೃತ್ತರ ಪಿಂಚಣಿದಾರರಿಗೆ ಮತ್ತು ಅವರ ಕುಟುಂಬದವರಿಗೆ ಉಚಿತ ವೈದ್ಯಕೀಯ ಚಿಕಿತ್ಸೆ ನೀಡುವ ಸೌಲಭ್ಯವಿದೆ. ಸೇನಾ ನಿವೃತ್ತರಿಗೆ ಮತ್ತು ಅವರ ಕಿರಿಯ ವಯಸ್ಸಿನ ಮಕ್ಕಳಿಗೆ ಹಾಗೂ ಸೇನಾ ಪಡೆಯಲ್ಲಿರುವಾಗಲೇ ಮಡಿದಂತಹವರ ಪತ್ನಿಯರು ಮತ್ತು ಕಿರಿವಯಸ್ಸಿನ ಮಕ್ಕಳಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿಯೂ ಉಚಿತ ವೈದ್ಯಕೀಯ ಚಿಕಿತ್ಸೆ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಮಾಜಿ ಸೈನಿಕರು ಮತ್ತು ಅವರ ಅವಲಂಬಿತರು, ಅನಾರೋಗ್ಯದ ಸಮಯದಲ್ಲಿ ಮಾಡಿದ ವೆಚ್ಚಗಳನ್ನು ಈ ಇಲಾಖೆಯು ನಿಯಮಗಳನ್ವಯ ಭರಿಸಿಕೊಡುತ್ತದೆ.

## ಸಶಸ್ತ್ರ ಪಡೆಗಳ ಧ್ವಜ ನಿಧಿ

ಸ್ವಾತಂತ್ರ್ಯ ಪೂರ್ವದಲ್ಲಿ ಮಾಜಿ ಸೈನಿಕರ ಕಲ್ಯಾಣಕ್ಕಾಗಿ ನಿಧಿಯನ್ನು ಸಂಗ್ರಹಿಸಲು ಪ್ರತಿ ವರ್ಷ ಹನ್ನೊಂದನೇ ನವೆಂಬರ್‌ನಂದು 'ಸ್ಮರಣೆಯ ದಿನ' ಎಂದು ಆಚರಿಸಲಾಗುತ್ತಿತ್ತು. ೧೯೪೯ರ ಆಗಸ್ಟ್ ಇಪ್ಪತ್ತೆಂಟರಂದು ರಕ್ಷಣಾ ಮಂತ್ರಿಗಳ ಕಮಿಟಿಯು ೧೯೪೯ರ ನಂತರ ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆಯನ್ನು ದೇಶಾದ್ಯಂತ ಏಳನೇ ಡಿಸೆಂಬರ್‌ನಂದು ಆಚರಿಸಬೇಕೆಂದು ನಿರ್ಧರಿಸಿತು. ಅದರಂತೆ, ಈ ಇಲಾಖೆಯಿಂದ ಪ್ರತಿ ವರ್ಷ ಡಿಸೆಂಬರ್ ಏಳರಂದು ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಆ ದಿನ ಸಶಸ್ತ್ರ ಪಡೆಗಳ ಸಾಂಕೇತಿಕ ಮತ್ತು ವಾಹನ ಧ್ವಜಗಳನ್ನು ಬಿಡುಗಡೆಗೊಳಿಸಲಾಗುತ್ತದೆ ಮತ್ತು ಸಶಸ್ತ್ರ ಪಡೆಗಳು ಮಾಡಿರುವ ಸೇವೆ ಹಾಗೂ ತ್ಯಾಗಗಳ ಕುರಿತು ವಿವಿಧ ಮಾಧ್ಯಮಗಳ ಮೂಲಕ ಜನರ ಅರಿವಿಗೆ ತರಲಾಗುವುದು. ಅಲ್ಲದೆ ಸಾರ್ವಜನಿಕ ಸ್ಥಳಗಳಲ್ಲಿ, ಸೇನೆಯ ಯೂನಿಟ್‌ಗಳಲ್ಲಿ; ನಾಟಕ, ವಿವಿಧ ವಿನೋದ ಕಾರ್ಯಕ್ರಮಗಳನ್ನೂ ಆಯೋಜಿಸಲಾಗುವುದು. ಅಂದು ಎಲ್ಲಾ ವರ್ಗದ ಜನರು, 'ಸಶಸ್ತ್ರ ಪಡೆಗಳ ಧ್ವಜ ನಿಧಿ'ಗೆ ತಮ್ಮ ದೇಣಿಗೆಯನ್ನು ನೀಡಿ, ದೇಶಕ್ಕಾಗಿ ಜೀವ ತೆತ್ತ ಹುತಾತ್ಮ ಯೋಧರಿಗೆ ತಮ್ಮ ಗೌರವಗಳನ್ನು ಮತ್ತು ದೇಶದ ಬಗೆಗಿನ ಕಾಳಜಿ ಹಾಗೂ ಭಕ್ತಿಯನ್ನು ಸೂಚಿಸಲು ಸರ್ಕಾರವು ಒದಗಿಸಿರುವ ಒಂದು ಸದಾವಕಾಶವಿದು. ಈ ಒಂದು ದಿನವಲ್ಲದೆ, ನಾಗರಿಕರು ವರ್ಷ ಪೂರ್ತಿ ಈ ನಿಧಿಗೆ ದೇಣಿಗೆಯನ್ನು ನೀಡಬಹುದು. ಈ ದೇಣಿಗೆ ನೀಡುವವರಿಗೆ ಆದಾಯ ತೆರಿಗೆಯಲ್ಲಿ ವಿನಾಯಿತಿ ಸಿಗುತ್ತದೆ. ಸರ್ಕಾರಿ ಕಛೇರಿಗಳು, ಶಾಲಾ, ಕಾಲೇಜುಗಳಿಗೆ ಮತ್ತಿತರರಿಗೆ ಬಾವುಟಗಳನ್ನು ಮಾರಿ ಹಣ ಸಂಗ್ರಹಿಸಲಾಗುತ್ತದೆ. ಈ ಮೂಲಕ ಸಂಗ್ರಹಿಸಿದ ನಿಧಿಯ ಹಣವನ್ನು ಮಾಜಿ ಸೈನಿಕರಿಗೆ, ಅವರ ಅವಲಂಬಿತರಿಗೆ, ಗಾಯಗೊಂಡವರಿಗೆ, ಅವರುಗಳ ವೈದ್ಯಕೀಯ ಮರುಪಾವತಿಗೆ ಮತ್ತಿತರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಖರ್ಚು ಮಾಡಲಾಗುತ್ತದೆ.

## ವಿದ್ಯಾರ್ಥಿ ವೇತನ

ಸೇನೆಯಲ್ಲಿ ದುಡಿಯುವವರು ಮತ್ತು ಸೇನಾ ನಿವೃತ್ತರ ಮಕ್ಕಳಿಗೆ ಹಾಗೂ ಅವರ ಅವಲಂಬಿಗಳಿಗೆ ಪೂರ್ಣ ಶೈಕ್ಷಣಿಕ ರಿಯಾಯಿತಿಯನ್ನು ಕೊಡಲಾಗುತ್ತದೆ. ಈ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗಲು, ಅವರಿಗೆ ನಿಗದಿತ ನಿಯಮಗಳನ್ನನುಸರಿಸಿ, ವಿದ್ಯಾರ್ಥಿವೇತನವನ್ನೂ ಮತ್ತು ಪುಸ್ತಕ ನೆರವನ್ನೂ ನೀಡಲಾಗುತ್ತದೆ. ಮಾಜಿ ಸೈನಿಕರ ಮಕ್ಕಳಿಗಾಗಿ ಜಿಲ್ಲೆಯಲ್ಲಿ ಯಾವುದೇ ಮಿಲಿಟರಿ ಶಾಲೆಗಳಿರುವುದಿಲ್ಲ. ಮಾಜಿ ಸೈನಿಕರು ಇತರೇ ಜಿಲ್ಲೆಗಳಿಗೆ ಯಾವುದೇ ಕೆಲಸಗಳಿಗೆ ಹೋದಾಗ, ಅವರಿಗೆ ಒಳ್ಳೆಯ ಹಾಗೂ ಎಲ್ಲ ಸೌಕರ್ಯಗಳಿರುವ ತಾತ್ಕಾಲಿಕ ವಸತಿಗೃಹಗಳಾಗಿ ಈ ಇಲಾಖೆಯಿಂದ ಕೆಲವು ಆರಾಮ ಗೃಹಗಳನ್ನು ನಡೆಸಲಾಗುತ್ತದೆ. ಆದರೆ ಈ ಜಿಲ್ಲೆಯಲ್ಲಿ ಯಾವುದೇ ಆರಾಮ ಗೃಹವು ಇರುವುದಿಲ್ಲ. ಜಿಲ್ಲೆಯಲ್ಲಿ ಮಾಜಿ ಸೈನಿಕರ ಮಕ್ಕಳಿಗಾಗಿ ಮಂಜೂರಾದ ವಿದ್ಯಾರ್ಥಿ ವೇತನದ ವಿವರಗಳಿಗೆ ಕೋಷ್ಟಕ ೧೬.೫೪ ಅನ್ನು ನೋಡಿ

**ಕೋಷ್ಟಕ ೧೬.೫೪: ಜಿಲ್ಲೆಯಲ್ಲಿ ಇಲಾಖೆಯಿಂದ ಈ ಜಿಲ್ಲೆಯ ಮಾಜಿ ಸೈನಿಕರ ಮಕ್ಕಳಿಗೆ ಮಂಜೂರು ಮಾಡಲಾದ ವಿದ್ಯಾರ್ಥಿ ವೇತನದ ವಿವರ**

| ವರ್ಷ | ವಿದ್ಯಾರ್ಥಿ ವೇತನ ಪಡೆದ ವಿದ್ಯಾಥಿಗಳ ಸಂಖ್ಯೆ | | | ವಿದ್ಯಾರ್ಥಿ ವೇತನದ ಮೊತ್ತ(ರೂ. ಗಳಲ್ಲಿ) | | |
|---|---|---|---|---|---|---|
| | ಬಾಲಕರು | ಬಾಲಕಿಯರು | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು |
| ೨೦೦೮-೦೯ | ೧೩೨ | ೯೦ | ೨೨೨ | ೯೯,೯೨೯ | ೮೧,೭೬೧ | ೧,೮೧,೬೯೦ |
| ೨೦೦೯-೧೦ | ೧೪೨ | ೧೧೭ | ೨೫೯ | ೧,೧೯,೪೭೭ | ೯೭,೭೫೪ | ೨,೧೭,೨೩೧ |
| ೨೦೧೦-೧೧ | ೧೫೫ | ೧೦೪ | ೨೫೯ | ೧,೪೭,೪೩೨ | ೯೮,೨೮೮ | ೨,೪೫,೭೨೦ |
| ೨೦೧೧-೧೨ | ೧೩೪ | ೧೧೧ | ೨೪೫ | ೧,೩೩,೮೩೦ | ೧,೦೯,೪೯೮ | ೨,೪೩,೩೨೮ |

## ಯುದ್ಧ ಪ್ರಶಸ್ತಿಗಳು

ಸೇನೆಯಲ್ಲಿ ಸೇವೆ ಸಲ್ಲಿಸಲು ಸೇರಿಸುವ ತಂದೆ ತಾಯಿಯರಿಗೆ ಅವರ ಒಪ್ಪಿಗೆ, ಧೈರ್ಯ ಮತ್ತು ತ್ಯಾಗಗಳನ್ನು ಗುರುತಿಸಿ, ಯುದ್ಧ ಪ್ರಶಸ್ತಿ ಎಂಬ ಹೆಸರಿನಲ್ಲಿ ನಿಗದಿತ ಮೊತ್ತವನ್ನು ವರ್ಷಾಸನವಾಗಿ ನೀಡುವ ಒಂದು ಯೋಜನೆ ಇದು. ಕುಟುಂಬದಲ್ಲಿ ಮೂರು ಮಕ್ಕಳು ರಕ್ಷಣಾ ಪಡೆಯಲ್ಲಿದ್ದರೆ ರೂ. ೮೫೦ಗಳನ್ನು; ಇಬ್ಬರು ಮಕ್ಕಳಿದ್ದರೆ ರೂ.

೬೫೦ಗಳನ್ನು ಮತ್ತು ಒಬ್ಬ ಮಗ ಮಾತ್ರ ಇದ್ದರೆ ರೂ. ೪೫೦ಗಳನ್ನು ಈ ಸೈನಿಕರ ಕುಟುಂಬ ಪಾಲಕರಿಗೆ ವಾರ್ಷಿಕವಾಗಿ ನೀಡಲಾಗುತ್ತದೆ.

**ಮಾಜಿ ಸೈನಿಕರ ಮರು ನೇಮಕಾತಿಗೆ ನೆರವು**

ಅ) ಸೈನಿಕರ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಎಲ್ಲ ಹುದ್ದೆಗಳನ್ನೂ, ಮಾಜಿ ಸೈನಿಕರು ಮತ್ತು ಸೇವಾ ನಿವೃತ್ತರು, ಇವರುಗಳಿಂದಲೇ ತುಂಬಲಾಗುತ್ತದೆ. ಆದರೆ ಈ ಒಂದು ಇಲಾಖೆಯಲ್ಲಿಯೇ ಎಲ್ಲರನ್ನೂ ನೇಮಿಸಿಕೊಳ್ಳುವುದು ಸಾಧ್ಯವಿಲ್ಲವಾದ್ದರಿಂದ, ಖಾಸಗಿ ಮತ್ತು ಸರ್ಕಾರದ ಇತರ ಸಂಸ್ಥೆ ಹಾಗೂ ಇಲಾಖೆಗಳಲ್ಲೂ ಇವರನ್ನು ನೇಮಿಸಿಕೊಳ್ಳಲು ಹಲವು ರೀತಿಯಲ್ಲಿ ಈ ಇಲಾಖೆಯು ಸಾಧ್ಯವಾದ ಸಹಾಯವನ್ನು ಮಾಡುತ್ತದೆ. ನೌಕರಿಗೆ ಸೇರ ಬಯಸುವ ಮಾಜಿ ಸೈನಿಕರು, ಬೆಂಗಳೂರಿನಲ್ಲಿರುವ ನಿರ್ದೇಶಕರನ್ನು ಅಥವಾ ಜಿಲ್ಲಾ ಮಟ್ಟದಲ್ಲಿ ಉಪ ನಿರ್ದೇಶಕರನ್ನು ಸಂಪರ್ಕಿಸಿ, ನೋಂದಣಿ ಮಾಡಿಸಬೇಕು.

(ಆ) ಸರ್ಕಾರದ ಎ.ಬಿ.ಸಿ ಮತ್ತು ಡಿ ದರ್ಜೆಯ ನೇಮಕಾತಿಗಳಲ್ಲಿ ಶೇಕಡ ಹತ್ತರಷ್ಟು ಹುದ್ದೆಗಳನ್ನು ಮಾಜಿ ಸೈನಿಕರಿಗಾಗಿ ಮೀಸಲಿರಿಸಲು ಕರ್ನಾಟಕ ಸರ್ಕಾರವು ಆದೇಶ ಮಾಡಿದ್ದು ಜಾರಿಯಲ್ಲಿದೆ. ಅದರಂತೆ ಸರ್ಕಾರದ ಯಾವುದೇ ಇಲಾಖೆಯಲ್ಲಿ ಮತ್ತು ರಾಜ್ಯಾಧೀನ ಸಾರ್ವಜನಿಕ ಉದ್ದಿಮೆ ಸಂಸ್ಥೆಗಳಲ್ಲಿ ಮಾಜಿ ಸೈನಿಕರಿಗೆ ಶೇಕಡ ಹತ್ತರಷ್ಟು ಹುದ್ದೆಗಳನ್ನು ಮೀಸಲಿಟ್ಟು ಭರ್ತಿ ಮಾಡುವುದು ಕಡ್ಡಾಯವಾಗಿ ಜಾರಿಗೊಳ್ಳುತ್ತಿರುವ ಒಂದು ನಿಯಮ.

## ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ

ಪರ್ಶಿಯನ್ ಭಾಷೆಯ 'ಮುಜರ್' ಪದದಿಂದ ಬಂದಂತಹ 'ಮುಜರಾಯಿ' ಎಂಬ ಪದವನ್ನು ಧಾರ್ಮಿಕ ಮತ್ತು ಮತ–ಸಂಬಂಧಿತ ಉದ್ದೇಶಗಳಿಗೆ ಭತ್ಯೆಯನ್ನು ಕೊಡುವುದು ಎಂಬ ಅರ್ಥದಲ್ಲಿ ಬಳಸಲಾಗುತ್ತದೆ. ಧಾರ್ಮಿಕ ಸಂಸ್ಥೆಗಳ ಅಭ್ಯುದಯಕ್ಕೆ ಮತ್ತು ಧರ್ಮದ ಏಳಿಗೆಗೆ, ದತ್ತಿ ನಿಧಿಯ ಹಣದಿಂದ ಅಗಾಧವಾದ ನೆರವು ಸಿಗುತ್ತದೆ. ಧರ್ಮ ಹಾಗೂ ಪಾವಿತ್ರ್ಯಕ್ಕೆ ಪೂಜ್ಯವೆಂದು ಹೆಸರಾದ ಕೆಲವು ಪ್ರಾಚೀನ ಸಂಸ್ಥೆಗಳನ್ನು, ಮುಜರಾಯಿ ಸಂಸ್ಥೆಗಳೆಂದು ವಿಂಗಡಿಸಲ್ಪಟ್ಟಿದ್ದು, ಈ ಸಂಸ್ಥೆಗಳ ಕ್ರಮಬದ್ಧ ನಿರ್ವಹಣೆಗೆ, ಸಂಬಂಧಿತ ಅಧಿಕಾರಿಗಳು ಕೆಲವು ನಿಯಮ ಮತ್ತು ಕಾಯ್ದೆಗಳನ್ನು ರಚಿಸಿದ್ದರು. ಆ ನಂತರದಲ್ಲಿ, ಈ ಸಂಸ್ಥೆಗಳನ್ನು ನೋಡಿಕೊಳ್ಳಲು ಪ್ರತ್ಯೇಕವಾದೊಂದು ಇಲಾಖೆಯೂ ಮತ್ತು ಧಾರ್ಮಿಕ ದತ್ತಿ ನಿಧಿಗಳ ನಿರ್ವಹಣೆಗೆ ಸಮಗ್ರವಾದೊಂದು ಕರಡು ವಿಧೇಯಕವೂ ರಚನೆಗೊಂಡವು. ಕ್ರಿ.ಶ. ೧೭೮೮ರ ಮೈಸೂರು ಅರಸರ ಆಳ್ವಿಕೆಯ ಕಾಲದಲ್ಲೇ ಮುಜರಾಯಿ ಇಲಾಖೆಯ ಉಗಮವಾಗಿರುವುದು ಕಂಡು ಬರುತ್ತದೆ.

ಮೈಸೂರು ಧಾರ್ಮಿಕ ಮತ್ತು ದತ್ತಿ ಸಂಸ್ಥೆಗಳ ಕಾಯ್ದೆ ೧೯೨೭ರ ನಿಯಮಗಳನ್ವಯ ಕಾರ್ಯ ನಿರ್ವಹಿಸುತ್ತಿದ್ದ ಹಳೆಯ ಮೈಸೂರು ಪ್ರದೇಶದ ಮುಜರಾಯಿ ಸಂಸ್ಥೆಗಳನ್ನು ಆಡಳಿತ ನಿರ್ವಹಣೆಯ ದೃಷ್ಟಿಯಿಂದ ಮೂರು ಗುಂಪುಗಳಾಗಿ ವಿಭಾಗಿಸಲಾಗಿತ್ತು. ವಾರ್ಷಿಕ ರೂ. ೧೦೦೦ಕ್ಕಿಂತ ಹೆಚ್ಚಿನ ಆದಾಯವಿರುವ ಹಾಗೂ ಆಯಾ ಕಾಲದಲ್ಲಿ ವಿಶೇಷ ಸಂಸ್ಥೆಗಳೆಂದು ಸೂಚಿಸಲಾದವನ್ನು ಹಿರಿಯ ಸಂಸ್ಥೆಗಳೆಂದೂ; ರೂ. ೧೦೦ ರಿಂದ ರೂ. ೧೦೦೦ದ ವರೆಗಿನ ವಾರ್ಷಿಕ ಆದಾಯವಿರುವ ಸಂಸ್ಥೆಗಳಿಗೆ ಕಿರಿಯ ಸಂಸ್ಥೆಗಳೆಂದೂ; ಹಾಗೂ ವಾರ್ಷಿಕ ರೂ. ೧೦೦ಕ್ಕಿಂತ ಕಡಿಮೆ ಆದಾಯವಿರುವಂತಹವು ಗ್ರಾಮೀಣ ಸಂಸ್ಥೆಗಳೆಂದೂ ವಿಂಗಡಣೆಗೊಂಡಿದ್ದವು.

ತುಮಕೂರು ಜಿಲ್ಲೆಯಲ್ಲಿ ಹಲವಾರು ಹಳೆಯ ಮುಜರಾಯಿ ಸಂಸ್ಥೆಗಳಿದ್ದು, ಇವುಗಳ ಪಾವಿತ್ರ್ಯತೆಗಾಗಿ ಇವು ಬಹಳ ಪೂಜನೀಯವೆಂದು ಪರಿಗಣಿಸಲಾಗುತ್ತದೆ. ೧೯೬೬–೬೭ರಲ್ಲಿ ಈ ಜಿಲ್ಲೆಯಲ್ಲಿ ಹೀಗೆ ವಿಂಗಡಣೆಗೊಂಡ ೩೧ ಹಿರಿಯ ಸಂಸ್ಥೆಗಳು, ೧೮೨ ಕಿರಿಯ ಮತ್ತು ೧೯ ಮಠಗಳು, ಐದು ಛತ್ರಗಳು, ನಾಲ್ಕು ಕಿರಿಯ ಜೈನ ಬಸದಿಗಳು ಮತ್ತು ಮೂರು ಗ್ರಾಮೀಣ ಸಂಸ್ಥೆಗಳಿದ್ದವು. ಈ ಎಲ್ಲ ಧಾರ್ಮಿಕ ಸಂಸ್ಥೆಗಳು ಸರ್ಕಾರ ರಚಿಸಿದ್ದ ಪ್ರಾದೇಶಿಕ ಸಮಿತಿಯ ಉಸ್ತುವಾರಿ–ವ್ಯಾಪ್ತಿಯಲ್ಲಿದ್ದು, ಸದರಿ ಸಮಿತಿಯು ಆ ಸಮಯದಲ್ಲಿ ಜಾರಿಯಲ್ಲಿದ್ದ ಕಾಯ್ದೆ ಹಾಗೂ ಅಧಿನಿಯಮಗಳನ್ವಯ ಈ ಸಂಸ್ಥೆಗಳ ಆಡಳಿತದ ನಿರ್ವಹಣೆ ಮಾಡುತ್ತಿತ್ತು. ನಿತ್ಯದ ಸೇವೆ ಹಾಗೂ ಪ್ರಾಸಂಗಿಕ(ಅಕೇಷನಲ್) ವಿಶೇಷ ಕಾರ್ಯಕ್ರಮಗಳಲ್ಲಿ ಮಾತ್ರವಲ್ಲದೆ, ಸ್ವಾತಂತ್ರ್ಯ ದಿನ, ಗಣರಾಜ್ಯ ದಿನ ಮತ್ತು ಇತರ ಮುಖ್ಯ ಸಂದರ್ಭಗಳಲ್ಲಿ ವಿಶೇಷ ಪೂಜೆ ಮತ್ತು ಪ್ರಾರ್ಥನೆಗಳನ್ನು ಸಲ್ಲಿಸಲಾಗುತ್ತದೆ.

ಜಿಲ್ಲೆಯ ಹಲವಾರು ಮಹನೀಯರು ದೇವರ ಸೇವೆಗಳನ್ನು ಆಚರಿಸಲು ದತ್ತಿಗಳನ್ನು ಸ್ಥಾಪಿಸಿದ್ದಾರೆ. ಇಂತಹ ಕೆಲವು ಪ್ರಮುಖ ದೇವಸ್ಥಾನಗಳು ಹಾಗೂ ೧೯೬೭ಕ್ಕೂ ಮೊದಲು ಸ್ಥಾಪಿಸಲಾದ ದತ್ತಿಯ ಮೊತ್ತವನ್ನು ಮಾಹಿತಿಗಾಗಿ ಇಲ್ಲಿ ಪರಿಚಯಿಸಬಹುದಾಗಿದೆ. ೧. ಶ್ರೀ ಕಣಿವೆ ನರಸಿಂಹಸ್ವಾಮಿ, ಪಾವಗಡ, ರೂ. ೯,೦೦೦, ೨. ಶ್ರೀ ಗಂಗಾಧರೇಶ್ವರಸ್ವಾಮಿ, ತುರುವೇಕೆರೆ, ರೂ. ೨,೫೦೦ ಮತ್ತು ೩. ಶ್ರೀ ವೆಂಕಟರಮಣಸ್ವಾಮಿ, ಸಂಪಿಗೆ (ತುರುವೇಕೆರೆ ತಾಲೂಕು), ರೂ. ೧,೪೦೦.

ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ಹಿಂದೂಪುರ ತಾಲೂಕಿನಲ್ಲಿರುವ ಶ್ರೀ ಸತ್ಯನಾರಸಿಂಹಸ್ವಾಮಿ ದೇವಸ್ಥಾನ, ಸಂತೆಬಿದನೂರು ಮತ್ತು ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ, ಸಂತೆಬಿದನೂರು – ಈ ಎರಡು ಸಂಸ್ಥೆಗಳೂ ಸರ್ಕಾರದಿಂದ ರೂ. ೩೪೮ ವಾರ್ಷಿಕ ಅನುದಾನವನ್ನು ಜಿಲ್ಲಾ ಖಜಾನೆಯಿಂದ ಪ್ರತಿ ವರ್ಷ ಪಡೆಯುತ್ತಿದ್ದವು. ಈಗ ಇವುಗಳು ಈ ಜಿಲ್ಲೆಯ ಅಧೀನಕ್ಕೆ ಒಳಪಡುವುದಿಲ್ಲ.

೧. ಶ್ರೀ. ಸಿ. ಡಿ. ರಾಮಸ್ವಾಮಿಯವರ ಛತ್ರ, ಕುಣಿಗಲ್, ೨) ಶ್ರೀ ಭೀಮಪ್ಪನವರ ಛತ್ರ, ಪಾವಗಡ ಮತ್ತು ೩) ಗೂಳೂರು ಛತ್ರ, ಗೂಳೂರು, ತುಮಕೂರು ತಾಲೂಕು – ಈ ಮೂರು ಖಾಸಗಿ ಛತ್ರಗಳು, ೧೯೬೭ಕ್ಕೂ ಮೊದಲಿನಿಂದ ಈ ವರೆವಿಗೂ ಕರ್ನಾಟಕ ಸರ್ಕಾರದ ಉಸ್ತುವಾರಿಯಡಿ ನಿರ್ವಹಿಸಲ್ಪಡುತ್ತಿವೆ. ಅನುಕ್ರಮವಾಗಿ ಕುಣಿಗಲ್ ತಾಲೂಕು, ಪಾವಗಡ ತಾಲೂಕು ಹಾಗೂ ತುಮಕೂರು ತಾಲೂಕಿನ ತಹಸಿಲ್ದಾರರು ಇವುಗಳ ನೇರ ನಿಯಂತ್ರಕರಾಗಿರುತ್ತಾರೆ. ಮೊದಲ ಎರಡು ದೇವಸ್ಥಾನಗಳ ಆಭರಣಗಳಿಗೆ ಸಂಬಂಧಿಸಿದ ಖಾತೆಗಳನ್ನು ತಾಲೂಕು ಕಛೇರಿಗಳಲ್ಲಿ ಹಾಗೂ ಹಿರಿಯ ಮತ್ತು ಕಿರಿಯ ಸಂಸ್ಥೆಗಳಲ್ಲಿಯೂ ನಿರ್ವಹಿಸಲಾಗುತ್ತದೆ. ದೇವಸ್ಥಾನಗಳಲ್ಲಿನ ಈ ಆಭರಣಗಳು ಖಾತೆಗಳಲ್ಲಿನ ದಾಖಲಾತಿಗೆ ಅನುಗುಣವಾಗಿ ಇವೆಯೇ ಎಂಬುದು ತನಿಖಾಧಿಕಾರಿಗಳ ತನಿಖೆಯಿಂದ ಗೊತ್ತಾಗಲಿದ್ದು, ಏನಾದರೂ ವ್ಯತ್ಯಾಸಗಳಿದ್ದಲ್ಲಿ, ಈ ವಿಷಯವನ್ನು ಮುಂದಿನ ಅಗತ್ಯ ಕ್ರಮಕ್ಕಾಗಿ ಮೇಲಧಿಕಾರಿಗಳ ಗಮನಕ್ಕೆ ತರುವುದು ಇವರ ಜವಾಬ್ದಾರಿಯಾಗಿರುತ್ತದೆ.

ಈ ಜಿಲ್ಲೆಯಲ್ಲಿ, ೧೯೬೬–೬೭ರಲ್ಲಿ ಮುಜರಾಯಿ ಸಂಸ್ಥೆಗಳ ಒಟ್ಟು ಆದಾಯವು ರೂ. ೭,೭೨,೬೪೭.೬೦ ಆಗಿದ್ದು, ಇವುಗಳಿಗೆ ಮಾಡುತ್ತಿದ್ದ ಖರ್ಚಿನ ಮೊತ್ತ ರೂ. ೪,೧೩,೬೫೭.೮೧ ಆಗಿದ್ದಿತು. ೧೯೬೬–೬೭ರಲ್ಲಿ ಜಿಲ್ಲೆಯಲ್ಲಿದ್ದ ಹಿಂದೂ ಧಾರ್ಮಿಕ ಸಂಸ್ಥೆಗಳ ಜಮಾ, ಖರ್ಚು ಮತ್ತು ಕೊನೆಯ ಉಳಿಕೆಗಳ ಕುರಿತು ತಾಲೂಕುವಾರು ವಿವರಗಳನ್ನು ಮುಂದಿನ ಕೋಷ್ಟಕ ೧೬.೫೫ರಲ್ಲಿ ಕಾಣಬಹುದಾಗಿದೆ.

**ಕೋಷ್ಟಕ ೧೬.೫೫: ಜಿಲ್ಲೆಯಲ್ಲಿ ೧೯೬೬–೬೭ರಲ್ಲಿದ್ದ ಹಿಂದೂ ಧಾರ್ಮಿಕ ಸಂಸ್ಥೆಗಳ ಆದಾಯ, ವೆಚ್ಚ ಹಾಗೂ ಉಳಿಕೆಯ ವಿವರ**

| ಕ್ರ. ಸಂ | ತಾಲೂಕು | ಆರಂಭದ ಮೊತ್ತ (ರೂ. ಗಳಲ್ಲಿ) | ಜಮಾ (ರೂ. ಗಳಲ್ಲಿ) | ಒಟ್ಟು (ರೂ. ಗಳಲ್ಲಿ) | ಖರ್ಚು (ರೂ. ಗಳಲ್ಲಿ) | ಉಳಿಕೆ (ರೂ. ಗಳಲ್ಲಿ) |
|---|---|---|---|---|---|---|
| ೧ | ತುಮಕೂರು | ೧,೧೭,೭೮೧.೮೧ | ೪೫,೫೭೪.೮೭ | ೧,೬೪,೩೫೬.೬೮ | ೪೮,೨೮೪.೮೪ | ೧,೧೬೦೭೧.೮೪ |
| ೨ | ಗುಬ್ಬಿ | ೫೦,೯೭೨.೧೪ | ೩೧,೧೩೧.೬೪ | ೮೨,೦೨೩.೭೭ | ೫೧,೬೪೦.೨೧ | ೩೦,೩೮೩.೫೬ |
| ೩ | ಕುಣಿಗಲ್ | ೧,೦೦,೬೭೨.೨೦ | ೫೭,೫೭೬.೩೮ | ೧,೫೮,೨೪೮.೫೮ | ೯೯,೫೪೫.೮೧ | ೬೮,೭೦೨.೭೭ |
| ೪ | ತುರುವೇಕೆರೆ | ೫೩,೭೫೬.೯೫ | ೧೫,೯೩೮.೪೬ | ೬೯,೬೯೫.೪೧ | ೨೪,೦೮೯.೧೪ | ೪೫,೬೦೬.೨೭ |
| ೫ | ತಿಪಟೂರು | ೫೭,೬೬೨.೩೮ | ೯,೨೭೮.೬೧ | ೬೬,೯೪೦.೯೯ | ೩೬,೦೦೧.೭೧ | ೩೦,೯೩೯.೨೮ |
| ೬ | ಚಿಕ್ಕನಾಯಕನ ಹಳ್ಳಿ | ೨೩,೨೭೧.೦೩ | ೧೯,೦೦೩.೭೮ | ೪೨,೨೭೪.೮೧ | ೧೭,೮೮೦.೭೧ | ೨೪,೩೯೪.೧೦ |
| ೭ | ಶಿರಾ | ೨೧,೨೭೮.೩೧ | ೧೧,೩೦೩.೫೭ | ೩೨,೫೮೧.೮೮ | ೬,೬೫೦.೪೬ | ೨೫,೯೩೧.೪೨ |
| ೮ | ಮಧುಗಿರಿ | ೩೭,೬೭೯.೪೬ | ೭,೭೨೮.೮೧ | ೪೫,೪೦೮.೨೭ | ೧೯,೮೦೫.೫೬ | ೨೫,೬೦೨.೭೧ |
| ೯ | ಪಾವಗಡ | ೨೫,೯೮೪.೯೨ | ೧೭,೩೬೫.೮೫ | ೪೩,೩೫೦.೭೭ | ೨೪,೬೦೮.೩೫ | ೧೮,೭೪೨.೪೨ |
| ೧೦ | ಕೊರಟಗೆರೆ | ೨೧,೮೧೪.೫೯ | ೪೫,೯೫೧.೮೫ | ೬೭,೭೬೬.೪೪ | ೪೦,೪೮೩.೦೦ | ೨೭,೨೮೩.೪೪ |

**ಆಧಾರ: ತುಮಕೂರು ಜಿಲ್ಲಾ ಗ್ಯಾಸೆಟಿಯರ್, ೧೯೬೮**

ಜಿಲ್ಲೆಯಲ್ಲಿ ಜಾರಿಯಲ್ಲಿದ್ದ ೧೯೨೭ರ ಕರ್ನಾಟಕ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮವು ನಿರಸನಗೊಂಡು, ಈಗ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಅಧಿನಿಯಮಗಳು ೧೯೯೭ ಎಂಬ ಏಕ ರೂಪ ಕಾಯ್ದೆ ಮತ್ತು ೨೦೦೨ರ ನಿಯಮಗಳು ಪಾಲನೆಯಲ್ಲಿವೆ. ಇವು ೨೦೦೩ರ ಮೇ ತಿಂಗಳ ಒಂದರಿಂದ ಪಾಲನೆಗೆ ಬಂದಿವೆ.

ಈಗಿರುವ ವ್ಯವಸ್ಥೆಯ ಪ್ರಕಾರ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಗೆ, ಇಲಾಖೆಯ ಆಯುಕ್ತರು ಮುಖ್ಯಸ್ಥರಾಗಿರುತ್ತಾರೆ. ಇವರು ರಾಜ್ಯ ಹಾಗೂ ಹೊರ ರಾಜ್ಯಗಳಲ್ಲಿರುವ ಇಲಾಖೆಗೆ ಸೇರಿದ ಅಧಿಸೂಚಿತ ಸಂಸ್ಥೆಗಳು, ಧರ್ಮಾದಾಯ ದತ್ತಿಗಳು, ಛತ್ರಗಳು ಇವುಗಳ ಆಡಳಿತ ವ್ಯವಸ್ಥೆಯ ನಿಯಂತ್ರಣ, ಉಸ್ತುವಾರಿ ಮತ್ತು ಇವುಗಳ ಬಗ್ಗೆ ಸರ್ಕಾರದ ನೀತಿ, ನಿಯಮ ಹಾಗೂ ಆದೇಶಗಳನ್ನು ಸರ್ಕಾರದ ಪರವಾಗಿ ಕಾರ್ಯಗತಗೊಳಿಸಲು ಹೊಣೆಗಾರರಾಗಿರುತ್ತಾರೆ. ಇಲಾಖೆಯ ಇತರ ವಿವಿಧ ಪ್ರಾಧಿಕಾರಿಗಳು ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಕಾಯ್ದೆ ೧೯೯೭ ಮತ್ತು ಅದರಡಿ ರೂಪಿತವಾಗಿರುವ ನಿಯಮ ೨೦೦೨ರಲ್ಲಿ ನೀಡಲಾದ ಅಧಿಕಾರದನ್ವಯ ರಾಜ್ಯಮಟ್ಟದಲ್ಲಿ ಕಾರ್ಯ ನಿರ್ವಹಿಸಲು ಅಧಿಕಾರ ಹೊಂದಿರುತ್ತಾರೆ. ತುಮಕೂರು ಜಿಲ್ಲೆಯಲ್ಲಿ ಈಗ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಮುಜರಾಯಿ ಶಾಖೆಯನ್ನು ನಡೆಸಲಾಗುತ್ತಿದ್ದು, ಈ ಶಾಖೆಯನ್ನು ೧೯೯೧–೧೯೯೨ನೇ ಸಾಲಿನಿಂದ ಪ್ರಾರಂಭಿಸಲಾಗಿದೆ.

ಪ್ರಸ್ತುತ ಜಾರಿಗೆ ಬಂದಿರುವ ನೂತನ ಕಾಯ್ದೆಯು ಒಂದು ಮಠಕ್ಕೆ ಅಥವಾ ಅದಕ್ಕೆ ಸೇರಿದ ಒಂದು ದೇವಸ್ಥಾನಕ್ಕೆ ಇಲ್ಲವೇ ಹಿಂದೂ ಧಾರ್ಮಿಕ ಪಂಗಡವೊಂದು ಸ್ಥಾಪಿಸಿರುವ, ವ್ಯವಸ್ಥೆಗೊಳಿಸಿರುವ ಅಥವಾ ನಿರ್ವಹಿಸುತ್ತಿರುವ ಯಾವುದೇ ಧಾರ್ಮಿಕ ಸಂಸ್ಥೆಗಳು ಅಥವಾ ಧರ್ಮಾದಾಯ ದತ್ತಿಗೆ ಅನ್ವಯಿಸುವುದಿಲ್ಲ. ಆದ್ದರಿಂದ ಒಂದೇ ವರ್ಗದ ಜನರಿಗೆ ಸಂಬಂಧಿಸಿದ್ದು, ಇಲಾಖಾ ವ್ಯಾಪ್ತಿಗೆ ಒಳ ಪಟ್ಟಂತೆ ಜಿಲ್ಲೆಯಲ್ಲಿ ಇದ್ದ ಧರ್ಮ ಛತ್ರಗಳನ್ನು ಮತ್ತು ಮಠಗಳನ್ನು ೧೯೯೭ರ ಕಾಯ್ದೆಯನ್ವಯ ಇಲಾಖೆಯ ಆಡಳಿತ ವ್ಯಾಪ್ತಿಯಿಂದ ಹೊರತಾಗಿಸಲಾಗುತ್ತದೆ.

೨೦೦೬–೦೭ನೇ ಸಾಲಿಗೆ ಅನ್ವಯಿಸುವಂತೆ ಹೇಳಬಹುದಾದರೆ, ಈ ಜಿಲ್ಲೆಯ ಕುಣಿಗಲ್ ತಾಲೂಕಿನ ಎಡೆಯೂರಿನಲ್ಲಿರುವ ಶ್ರೀ ಸಿದ್ದಲಿಂಗೇಶ್ವರ ದೇವಾಲಯ ಹಾಗೂ ತುಮಕೂರು ತಾಲೂಕಿನ ದೇವರಾಯನ ದುರ್ಗದಲ್ಲಿರುವ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ದೇವಾಲಯಗಳು ಇಂದಿನ ಎರಡು ಪ್ರಮುಖ ದೇವಸ್ಥಾನಗಳಾಗಿವೆ. ಈ ಎರಡೂ ದೇವಾಲಯಗಳಿಗೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಪೂಜೆ, ಪ್ರಾರ್ಥನೆ, ಕಾಣಿಕೆಗಳನ್ನು ಸಲ್ಲಿಸುತ್ತಾರೆ. ಮೊದಲನೆಯ ದೇವಾಲಯದಲ್ಲಿ, ತ್ರಿಕಾಲ ಪೂಜೆ, ಅಭಿಷೇಕ, ಉತ್ಸವಗಳು ನಡೆದರೆ, ಇನ್ನೊಂದರಲ್ಲಿ ಪೂಜೆ, ಅನ್ನ ದಾಸೋಹ, ಅಭಿಷೇಕಗಳು ನಡೆಯುತ್ತವೆ. ಎರಡೂ ದೇವಾಲಯಗಳು ಪ್ರೇಕ್ಷಣೀಯ ಸ್ಥಳಗಳೂ ಆಗಿವೆ.

೧೯೯೭ರ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಕಾಯ್ದೆಯಲ್ಲಿ ಸಮಾಜದಲ್ಲಿ ಸಮಾನತೆ ತರುವ ಕೆಲವಾರು ಅಂಶಗಳ ಕುರಿತೂ ನಿರ್ದೇಶನಗಳಿವೆ. ಮೇಲೆ ತಿಳಿಸಿದ ಸಾಮಾನ್ಯ ಶೇಖರಣ ನಿಧಿಯಿಂದ ಖರ್ಚು ಭರಿಸಿ, ಅರ್ಚಕರಿಗೆ ತರಬೇತಿ ನೀಡುವುದಕ್ಕಾಗಿ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲು ಅವಕಾಶ ಕಲ್ಪಿಸಿದ್ದು ಅದರಲ್ಲಿ ಆಸಕ್ತ ಮಹಿಳೆಯರೂ ತರಬೇತಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಈ ಜಿಲ್ಲೆಯಲ್ಲಿ ತರಬೇತಿ ಸಂಸ್ಥೆಗಳು ಇರುವುದಿಲ್ಲ. ಆದರೆ ತುಮಕೂರಿನಲ್ಲಿರುವ ಜಿಲ್ಲೆಯ ಅರ್ಚಕರ ಸಂಘದ ವತಿಯಿಂದ ಜಿಲ್ಲೆಯ ಮುಜರಾಯಿ ಸಂಸ್ಥೆಗಳ ಅರ್ಚಕರಿಗೆ ತರಬೇತಿ ನೀಡಲಾಗುತ್ತದೆ.

೧೯೯೭ರ ಕಾಯ್ದೆಯ ವಿಧಿ ೨೩ರ ಅಡಿಯಲ್ಲಿ ಪ್ರಸ್ತುತ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ ಮುಜರಾಯಿ ಸಂಸ್ಥೆಗಳನ್ನು ಅಧಿಸೂಚಿತ ಸಂಸ್ಥೆಗಳನ್ನಾಗಿ ಘೋಷಿಸಿ ಸರ್ಕಾರವು ಪ್ರಕಟಣೆ ನೀಡಿರುತ್ತದೆ. ನೂತನ ಕಾಯ್ದೆಯನ್ವಯ ದಿ.೧.೫.೨೦೦೩ರಿಂದ ವಾರ್ಷಿಕ ಆದಾಯದ ಆಧಾರದ ಮೇಲೆ, ಪ್ರವರ್ಗ ಎ, ಬಿ, ಮತ್ತು ಸಿ ಎಂದು ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ. ಅದರಂತೆ ವಾರ್ಷಿಕ ರೂ. ಹತ್ತು ಲಕ್ಷಕ್ಕಿಂತ ಹೆಚ್ಚಿನ ಆದಾಯವಿರುವ ಸಂಸ್ಥೆಗಳು ಪ್ರವರ್ಗ 'ಎ'ನಲ್ಲೂ; ವಾರ್ಷಿಕ ರೂ. ಒಂದು ಲಕ್ಷಕ್ಕಿಂತ ಹೆಚ್ಚು ಆದರೆ

ರೂ. ಹತ್ತು ಲಕ್ಷಗಳಿಗಿಂತ ಕಡಿಮೆ ಆದಾಯವಿರುವ ಸಂಸ್ಥೆಗಳು ಪ್ರವರ್ಗ 'ಬಿ' ನಲ್ಲೂ; ವಾರ್ಷಿಕ ಒಂದು ಲಕ್ಷಕ್ಕಿಂತ ಕಡಿಮೆ ಆದಾಯವಿರುವ ಸಂಸ್ಥೆಗಳು ಪ್ರವರ್ಗ 'ಸಿ' ನಲ್ಲೂ ಬರುತ್ತವೆ. ತುಮಕೂರು ಜಿಲ್ಲೆಯಲ್ಲಿರುವ ಪ್ರವರ್ಗವಾರು ಅಧಿಸೂಚಿತ ಸಂಸ್ಥೆಗಳ ಸಂಖ್ಯಾವಾರು ವಿವರವನ್ನು ಕೋಷ್ಟಕ ೧೬.೫೬ ರಲ್ಲೂ ಹಾಗೂ ೨೦೧೦-೧೧ ರಿಂದ ೨೦೧೨-೧೩ ರವರೆಗಿನ ದೇವಾಲಯಗಳ ಆದಾಯ ಮತ್ತು ವೆಚ್ಚದ ವಿವರಗಳನ್ನು ಕೋಷ್ಟಕ ೧೬.೫೭ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೫೬: ತುಮಕೂರು ಜಿಲ್ಲೆಯಲ್ಲಿರುವ ಹಿರಿಯ, ಕಿರಿಯ ಮತ್ತು ಗ್ರಾಮೀಣ ಸಂಸ್ಥೆಗಳ (ಪ್ರವರ್ಗವಾರು ಅಧಿಸೂಚಿತ ಸಂಸ್ಥೆಗಳು) ಸಂಖ್ಯಾವಾರು ವಿವರಗಳು**

| ಕ್ರ ಸಂ | ತಾಲೂಕು | 'ಎ' ವರ್ಗದ ಸಂಸ್ಥೆಗಳ ಸಂಖ್ಯೆ | 'ಬಿ' ವರ್ಗದ ಸಂಸ್ಥೆಗಳ ಸಂಖ್ಯೆ | 'ಸಿ' ವರ್ಗದ ಸಂಸ್ಥೆಗಳ ಸಂಖ್ಯೆ | ಒಟ್ಟು |
|---|---|---|---|---|---|
| ೧ | ತುಮಕೂರು | ೦೧ | ೦೨ | ೩೫೭ | ೩೬೦ |
| ೨ | ಗುಬ್ಬಿ | – | ೦೧ | ೩೮೦ | ೩೮೧ |
| ೩ | ಕುಣಿಗಲ್ | ೦೧ | ೦೨ | ೪೫೦ | ೪೫೩ |
| ೪ | ತಿಪಟೂರು | – | ೦೨ | ೨೮೨ | ೨೮೪ |
| ೫ | ತುರುವೇಕೆರೆ | – | ೦೪ | ೪೧೦ | ೪೧೪ |
| ೬. | ಚಿಕ್ಕನಾಯಕನಹಳ್ಳಿ | – | ೦೨ | ೨೨೧ | ೨೨೩ |
| ೭ | ಮಧುಗಿರಿ | – | ೦೨ | ೩೬ | ೩೮ |
| ೮ | ಕೊರಟಗೆರೆ | – | ೦೩ | ೧೩೬ | ೧೩೯ |
| ೯ | ಶಿರಾ | – | ೦೧ | ೮೧ | ೮೨ |
| ೧೦ | ಪಾವಗಡ | – | ೦೧ | ೮೭ | ೮೮ |
| ಒಟ್ಟು | | ೦೨ | ೨೦ | ೨೪೪೦ | ೨೪೬೨ |

**ಆಧಾರ: ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು**

**ಕೋಷ್ಟಕ ೧೬.೫೭: ತುಮಕೂರು ಜಿಲ್ಲೆಯ 'ಎ' ಮತ್ತು 'ಬಿ' ಪ್ರವರ್ಗದ ದೇವಾಲಯಗಳ ಆದಾಯ ಮತ್ತು ವೆಚ್ಚದ ವಿವರ**

| ಕ್ರ ಸಂ | ತಾಲೂಕು | ದೇವಸ್ಥಾನ | ೨೦೧೦-೧೧ | | ೨೦೧೧-೧೨ | |
|---|---|---|---|---|---|---|
| | | | ಆದಾಯ | ಖರ್ಚು | ಆದಾಯ | ಖರ್ಚು |
| ೧ | **ಕುಣಿಗಲ್** | ಶ್ರೀ ಎಡಿಯೂರು ಸಿದ್ದಲಿಂಗೇಶ್ವರಸ್ವಾಮಿ ದೇವಸ್ಥಾನ, ಎಡಿಯೂರು. | ೩,೨೨,೧೭,೨೪೧ | ೨,೪೦,೫೦,೩೦೨ | ೪,೦೫,೭೫,೪೩೨ | ೩,೧೫,೫೧,೫೫೬ |
| ೨ | **ತುಮಕೂರು** | ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ, ದೇವರಾಯನ ದುರ್ಗ. | ೭೨,೩೨,೧೧೭ | ೬೭,೩೭,೮೦೭ | ೭೮,೭೦,೯೭೦ | ೫,೮೭,೧೭೧ |
| ೩ | **ತುಮಕೂರು** | ಶ್ರೀ ಆಂಜನೇಯಸ್ವಾಮಿ ದೇವಸ್ಥಾನ,ಶೆಟ್ಟಿಹಳ್ಳಿ | ೩,೨೯,೭೩೯ | ೬೦,೦೦೦ | ೧,೪೯,೪೯೦ | ೨,೭೫,೦೦೦ |
| ೪ | **ತುಮಕೂರು** | ಶ್ರೀ ಮಾರಮ್ಮ ದೇವಸ್ಥಾನ ಎತ್ತೇನಹಳ್ಳಿ | ೩,೨೦,೫೦೦ | ೬೫,೦೦೦ | ೪,೭೯,೫೦೦ | ೫೩,೦೦೦ |
| ೫ | **ಗುಬ್ಬಿ** | ಶ್ರೀ ಚನ್ನಬಸವೇಶ್ವರ ಸ್ವಾಮಿ ದೇವಸ್ಥಾನ | ೫೧,೩೨,೨೪೦ | ೩೨,೪೨,೫೮೦ | ೫,೪೫,೨೦೯ | ೩,೬೩,೭೦೭ |

| | | | | | | |
|---|---|---|---|---|---|---|
| ೬ | ಕುಣಿಗಲ್ | ಶ್ರೀ ಹುಲಿಯೂರಮ್ಮ ದೇವಸ್ಥಾನ, ಹಳೇವೂರು | ೧,೯೪,೩೭೭ | ೩೦,೫೯೪ | ೩೪,೨೨,೩೦೭ | ೧,೫೦,೦೦೦ |
| ೭ | ಕುಣಿಗಲ್ | ಶ್ರೀ ಬೆಟ್ಟದ ರಂಗನಾಥಸ್ವಾಮಿ ದೇವಸ್ಥಾನ, ಮೆಣಸಿನಹಳ್ಳಿ | ೮,೪೭,೭೭೩ | ೨೨,೦೦೦ | ೨೪,೨೧,೪೦೩ | ೨೫,೦೦೦ |
| ೮ | ತಿಪಟೂರು | ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ, ಹತ್ಯಾಳು | ೨೨,೨೪,೧೬೦ | ೨೨,೨೦,೨೦೦ | ೨೧,೪೬,೬೦೦ | ೨೨,೨೫,೬೮೭ |
| ೯ | ತಿಪಟೂರು | ಶ್ರೀ ಬೇಟರಾಯಸ್ವಾಮಿ ದೇವಸ್ಥಾನ ನೊಣವಿನಕೆರೆ | ೫೦,೫೦೦ | ೫೦,೫೯೦ | ೧,೮೮,೪೮೬ | ೩,೭೪,೪೯೮ |
| ೧೦ | ಚಿ.ನಾ.ಹಳ್ಳಿ | ಶ್ರೀ ಯಳನಾಡು ಸಿದ್ಧರಾಮೇಶ್ವರಸ್ವಾಮಿ ದೇವಸ್ಥಾನ | ೧,೦೦,೦೦೦ | ೫,೭೩,೦೨೨ | ೧೧,೮೫,೦೦೦ | ೫,೮೮,೧೬೦ |
| ೧೧ | ಚಿ.ನಾ.ಹಳ್ಳಿ | ಶ್ರೀ ಸಿದ್ಧರಾಮೇಶ್ವರಸ್ವಾಮಿ ದೇವಸ್ಥಾನ, ಗೋಡೇಕೆರೆ | ೩,೪೮,೪೬೦ | ೧,೮೪,೩೦೦ | ೩,೯೭,೭೯೦ | ೨,೨೦,೬೦೦ |
| ೧೨ | ತುರುವೇಕೆರೆ | ಶ್ರೀ ಬೇಟರಾಯಸ್ವಾಮಿ ದೇವಸ್ಥಾನ, | ೯೨,೦೯೧ | ೩೧,೧೫೦ | ೧,೭೪,೨೮೪ | ೩೧,೦೦೦ |
| ೧೩ | ತುರುವೇಕೆರೆ | ಶ್ರೀ ಹೊನ್ನಾದೇವಿ ದೇವಸ್ಥಾನ, ದಂಡಿನಶಿವರ | ೧,೪೫,೪೦೪ | ೧೮,೭೫೧ | ೨,೨೩,೩೭೪ | ೧೯,೭೫೬ |
| ೧೪ | ತುರುವೇಕೆರೆ | ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ, ಸಂಪಿಗೆ | ೩,೯೮,೫೯೯ | ೮೫,೪೫೦ | ೨,೨೯,೪೩೪ | ೭೪,೫೭೦ |
| ೧೫ | ತುರುವೇಕೆರೆ | ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನ, ಡಿ.ಎನ್.ಪುರ | ೨,೫೫,೦೫೧ | ೬೯,೯೨೧ | ೨,೪೮,೭೦೦ | ೪೯,೭೮೦ |
| ೧೬ | ಮಧುಗಿರಿ | ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ,ದೊಡ್ಡದಾಲವಟ್ಟ | ೯,೧೪,೬೩೫ | ೭,೮೯,೦೩೫ | ೯,೫೧,೦೩೨ | ೯,೩೬,೦೩೬ |
| ೧೭ | ಮಧುಗಿರಿ | ಶ್ರೀ ದಂಡಿನಮಾರಮ್ಮ ದೇವಸ್ಥಾನ | ೩೨,೬೨,೦೧೭ | ೧೧,೮೧,೫೯೧ | ೧೩,೭೦,೯೦೦ | ೯,೦೪,೬೦೦ |
| ೧೮ | ಶಿರಾ | ಶ್ರೀ ಬಂಡಿರಂಗನಾಥಸ್ವಾಮಿ ದೇವಸ್ಥಾನ, ತಾವರೆಕೆರೆ | ೨,೭೦,೦೧೫ | ೧,೨೮,೪೭೦ | ೩,೨೨,೦೪೧ | ೧,೨೮,೪೭೭ |
| ೧೯ | ಪಾವಗಡ | ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ, ನಾಗಲಮಡಿಕೆ | ೨೨,೯೧,೫೨೩ | ೬,೫೨,೪೩೨ | ೧೯,೨೬,೦೦೮ | ೬,೪೨,೨೦೨ |
| ೨೦ | ಕೊರಟಗೆರೆ | ಶ್ರೀ ಸಿದ್ಧರಬೆಟ್ಟ | ೫,೦೦,೦೦೦ | ೨,೦೦,೦೦೦ | – | – |
| ೨೧ | ಕೊರಟಗೆರೆ | ಶ್ರೀ ಆಂಜನೇಯ, ಕ್ಯಾಮೇನಹಳ್ಳಿ | – | – | – | – |
| ೨೨ | ಕೊರಟಗೆರೆ | ಶ್ರೀ ಕುಮಾರರಾಮ ದೇವಸ್ಥಾನ, ದೊಡ್ಡಪಾಲನ ಹಳ್ಳಿ | ೨,೨೦,೯೫೮ | ೨,೦೧,೨೪೧ | – | – |

| ಕ್ರ. ಸಂ | ತಾಲೂಕು | ದೇವಸ್ಥಾನ | ೨೦೧೨–೧೩ | |
|---|---|---|---|---|
| | | | ಆದಾಯ | ಖರ್ಚು |
| ೧ | ಕುಣಿಗಲ್ | ಶ್ರೀ ಎಡಿಯೂರು ಸಿದ್ದಲಿಂಗೇಶ್ವರಸ್ವಾಮಿ ದೇವಸ್ಥಾನ, ಎಡಿಯೂರು. | ೫,೭೭,೩೫,೨೮೫ | ೫,೭೦,೦೯,೬೩೫ |
| ೨ | ತುಮಕೂರು | ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ, ದೇವರಾಯನ ದುರ್ಗ. | ೧,೦೭,೮೦,೮೩೩ | ೧,೦೨,೧೪,೬೬೧ |
| ೩ | ತುಮಕೂರು | ಶ್ರೀ ಆಂಜನೇಯಸ್ವಾಮಿ ದೇವಸ್ಥಾನ,ಶೆಟ್ಟಿಹಳ್ಳಿ | ೧೮,೭೯,೪೭೧ | ೪೭,೩೬೦ |
| ೪ | ತುಮಕೂರು | ಶ್ರೀ ಮಾರಮ್ಮ ದೇವಸ್ಥಾನ ಎತ್ತೇನಹಳ್ಳಿ | ೮,೧೯,೦೯೫ | ೧೪,೧೯೫ |
| ೫ | ಗುಬ್ಬಿ | ಶ್ರೀ ಚನ್ನಬಸವೇಶ್ವರ ಸ್ವಾಮಿ ದೇವಸ್ಥಾನ | ೫,೬೫,೨೯೦ | ೩,೭೩,೭೭೦ |
| ೬ | ಕುಣಿಗಲ್ | ಶ್ರೀ ಹುಲಿಯೂರಮ್ಮ ದೇವಸ್ಥಾನ, ಹಳೇವೂರು | ೪೪,೪೦,೭೫೪ | ೧೨,೦೨,೧೯,೫೬೫ |
| ೭ | ಕುಣಿಗಲ್ | ಶ್ರೀ ಬೆಟ್ಟದ ರಂಗನಾಥಸ್ವಾಮಿ ದೇವಸ್ಥಾನ, ಮೆಣಸಿನಹಳ್ಳಿ | ೭,೧೫,೦೯೦ | ೨೫,೦೦೦ |

| | | | | |
|---|---|---|---|---|
| ೮ | **ತಿಪಟೂರು** | ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ, ಹತ್ಯಾಳು | ೨೭,೩೬,೭೦೬ | ೬,೨೨,೨೪೪ |
| ೯ | **ತಿಪಟೂರು** | ಶ್ರೀ ಬೇಟರಾಯಸ್ವಾಮಿ ದೇವಸ್ಥಾನ ನೊಣವಿನಕೆರೆ | ೨,೮೭,೩೬೦ | ೧,೭೩,೪೧೮ |
| ೧೦ | **ಚಿ.ನಾ.ಹಳ್ಳಿ** | ಶ್ರೀ ಯಳನಾಡು ಸಿದ್ಧರಾಮೇಶ್ವರಸ್ವಾಮಿ ದೇವಸ್ಥಾನ | ೧೩,೨೦,೭೫೯ | ೭,೨೭,೨೮೦ |
| ೧೧ | **ಚಿ.ನಾ.ಹಳ್ಳಿ** | ಶ್ರೀ ಸಿದ್ಧರಾಮೇಶ್ವರಸ್ವಾಮಿ ದೇವಸ್ಥಾನ, ಗೋಡೇಕೆರೆ | ೫,೦೨,೨೦೦ | ೨,೮೦,೨೦೦ |
| ೧೨ | **ತುರುವೇಕೆರೆ** | ಶ್ರೀ ಬೇಟರಾಯಸ್ವಾಮಿ ದೇವಸ್ಥಾನ, | ೧,೫೪,೧೩೦ | ೫೧,೧೨೦ |
| ೧೩ | **ತುರುವೇಕೆರೆ** | ಶ್ರೀ ಹೊನ್ನಾದೇವಿ ದೇವಸ್ಥಾನ, ದಂಡಿನಶಿವರ | ೧,೩೧,೪೧೮ | ೬೮,೩೦೮ |
| ೧೪ | **ತುರುವೇಕೆರೆ** | ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ, ಸಂಪಿಗೆ | ೨,೬೦,೪೬೦ | ೭೮,೫೯೦ |
| ೧೫ | **ತುರುವೇಕೆರೆ** | ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನ, ಡಿ.ಎನ್.ಪುರ | ೧,೩೦,೩೨೨ | ೬೦,೬೩೯ |
| ೧೬ | **ಮಧುಗಿರಿ** | ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ,ದೊಡ್ಡದಾಲವಟ್ಟ | ೧೪,೪೦,೬೪೬ | ೧೦,೭೬,೮೭೯ |
| ೧೭ | **ಮಧುಗಿರಿ** | ಶ್ರೀ ದಂಡಿನಮಾರಮ್ಮ ದೇವಸ್ಥಾನ | ೧೫,೧೧,೨೦೦ | ೧೦,೭೦,೧೬೮ |
| ೧೮ | **ಶಿರಾ** | ಶ್ರೀ ಬಂಡಿರಂಗನಾಥಸ್ವಾಮಿ ದೇವಸ್ಥಾನ, ತಾವರೆಕೆರೆ | ೩,೬೨,೯೬೧ | ೧,೨೫,೪೭೪ |
| ೧೯ | **ಪಾವಗಡ** | ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ, ನಾಗಲಮಡಿಕೆ | ೨೩,೯೭,೩೨೯ | ೭೧,೪೩,೯೨೫ |
| ೨೦ | **ಕೊರಟಗೆರೆ** | ಶ್ರೀ ಸಿದ್ಧರಬೆಟ್ಟ | ೨೬,೬೪,೦೦೮ | ೯,೮೧,೮೧೪ |
| ೨೧ | **ಕೊರಟಗೆರೆ** | ಶ್ರೀ ಆಂಜನೇಯ, ಕ್ಯಾಮೇನಹಳ್ಳಿ | ೬,೬೦,೦೦೦ | ೨,೪೪,೩೦೦ |
| ೨೨ | **ಕೊರಟಗೆರೆ** | ಶ್ರೀ ಕುಮಾರರಾಮ ದೇವಸ್ಥಾನ, ದೊಡ್ಡಪಾಲನ ಹಳ್ಳಿ | ೨,೫೨,೧೪೬ | ೫೬,೦೦೦ |

## ವಕ್ಫ್ ಸಂಸ್ಥೆಗಳು

ಕೇಂದ್ರ ವಕ್ಫ್ ೧೯೫೪ ರ ಕಾನೂನನ್ನು, ೧೯೫೫ರ ಹದಿನೈದನೇ ಜನವರಿಯಿಂದ ಹಳೇ ಮೈಸೂರಿನಲ್ಲಿ ಜಾರಿಗೆ ತರಲಾಯಿತು(ಗೆಜೆಟ್ ಆಫ್ ಇಂಡಿಯಾ ಭಾಗ–೨) ಮತ್ತು ೧೯೫೬ರಿಂದ ಕರ್ನಾಟಕ ರಾಜ್ಯಾದ್ಯಂತ ಬಳಸಲಾಯಿತು. ೧೯೫೯, ೧೯೬೪ ಮತ್ತು ೧೯೬೮ ರಲ್ಲಿ ಇದನ್ನು ತಿದ್ದುಪಡಿ ಮಾಡಲಾಯಿತು. ೧೯೫೪ರ ಕೇಂದ್ರ ವಕ್ಫ್ ಕಾನೂನಿಗಿಂತ ಮೊದಲು ಮೈಸೂರು ಪ್ರದೇಶದ ಮುಸಲ್ಮಾನರ ಮುಜರಾಯಿ ಸಂಸ್ಥೆಗಳ ಆಡಳಿತವು ದತ್ತಿ ಇಲಾಖೆಯ ಕೈ ಕೆಳಗಿತ್ತು. ಹಾಗೂ ಮುಸಲ್ಮಾನ ಮುಜರಾಯಿ ಸಂಸ್ಥೆಗಳೆಲ್ಲವು ೧೯೨೭ರ ಮೈಸೂರು ಮತೀಯ ಮತ್ತು ಧಾರ್ಮಿಕ ಸಂಸ್ಥೆಗಳ ಅಧಿನಿಯಮಗಳಿಗೆ ಒಳಪಟ್ಟಿದ್ದವು.

೧೯೫೪ರ ಕಾಯ್ದೆಯ ಸೆಕ್ಷನ್ ಹತ್ತರ ಪ್ರಕಾರ, ರಾಜ್ಯ ಸರ್ಕಾರವು ಏಳು ಸದಸ್ಯರಿದ್ದ ಒಂದು ಮಂಡಳಿಯನ್ನು ರಚಿಸಿತು. ಧಾರ್ಮಿಕ ಮತ್ತು ಧರ್ಮಾರ್ಥಕ ದತ್ತಿ ಇಲಾಖೆಯ ಆಯುಕ್ತರನ್ನು ಈ ಮಂಡಳಿಯ ಅಧ್ಯಕ್ಷರನ್ನಾಗಿ ನೇಮಿಸಲಾಯಿತು. ಈ ಕಾಯ್ದೆಯನ್ವಯ ಅಗತ್ಯವಾಗಿದ್ದ ನಿಯಮಗಳನ್ನು ಸರ್ಕಾರವು ರೂಪಿಸಿತು. ತುಮಕೂರು ಜಿಲ್ಲೆಯಲ್ಲಿ ಅನೇಕ ಮಸೀದಿಗಳು, ದರ್ಗಾಗಳು, ಇಮಾಂಬಾರಗಳು ಮತ್ತು ಇನ್ನಿತರ ಮುಸಲ್ಮಾನ ಸಂಸ್ಥೆಗಳಿದ್ದವು. ಧಾರ್ಮಿಕ ಮತ್ತು ಧರ್ಮಾರ್ಥಕ ದತ್ತಿ ಇಲಾಖೆಯ ವಶದಲ್ಲಿದ್ದ ಈ ಎಲ್ಲಾ ಮುಸ್ಲಿಂ ಮುಜರಾಯಿ ಸಂಸ್ಥೆಗಳು, ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ ೨೬ ಸಿಡಬ್ಲ್ಯೂಎಫ್ ೬೭, ದಿ: ೬.೪.೧೯೭೩ರನ್ವಯ ಮುಜರಾಯಿ ಇಲಾಖೆಯಿಂದ ವಕ್ಫ್ ಮಂಡಲಿಗೆ ೧೯೭೩ರಲ್ಲಿ ವರ್ಗಾವಣೆಗೊಂಡವು.

ಜಿಲ್ಲೆಯ ವಕ್ಫ್ ಸಲಹಾ ಸಮಿತಿಯನ್ನು ೧೯೫೪ನೇ ಮತ್ತು ೧೯೯೫ರ ವಕ್ಫ್ ಕಾಯ್ದೆಯನ್ವಯ ರಚಿಸಲಾಗಿದೆ. ಈ ವಕ್ಫ್ ಸಮಿತಿಗೆ ೧೯೬೪ನೇ ವಕ್ಫ್ ಕಾಯ್ದೆ ಮತ್ತು ೧೯೯೫ನೇ ವಕ್ಫ್ ಕಾಯ್ದೆಗಳು ಅನ್ವಯಿಸುತ್ತವೆ. ಈ ಜಿಲ್ಲೆಯ ವಕ್ಫ್ ಆಸ್ತಿಯ ಉಸ್ತುವಾರಿಗೆ ಪ್ರತ್ಯೇಕ ಕಛೇರಿಯನ್ನು ತುಮಕೂರಿನಲ್ಲಿ ಸ್ಥಾಪಿಸಲಾಗಿದೆ. ಈಗ ತುಮಕೂರು ಜಿಲ್ಲೆಯ ವಕ್ಫ್ ಆಸ್ತಿಯ ಆಡಳಿತ ನಿರ್ವಹಣೆಗೆ ೨೦೦೮ರ ಮಾರ್ಚ್‌ನಲ್ಲಿ ಕರ್ನಾಟಕ ಸರ್ಕಾರದಿಂದ ಮೂರು ವರ್ಷಗಳ ಅವಧಿಗಾಗಿ ರಚಿತವಾದ ಜಿಲ್ಲಾ ವಕ್ಫ್ ಸಮಿತಿಯು ಇರುತ್ತದೆ. ತುಮಕೂರು ಜಿಲ್ಲೆಯಲ್ಲಿ ಗೆಜೆಟ್‌ನಲ್ಲಿ ಅಧಿಸೂಚಿಸಲಾದ ಮತ್ತು ಹೊಸದಾಗಿ ನೋಂದಣಿ ಮಾಡಿಸಲಾದ ವಕ್ಫ್ ಸಂಸ್ಥೆಗಳ ಒಟ್ಟು ಸಂಖ್ಯೆಯನ್ನು ಕೋಷ್ಟಕ ೧೬.೫೮ ರಲ್ಲೂ ಹಾಗೂ ಕೋಷ್ಟಕ ೧೬.೫೯ ರಲ್ಲಿ ವಕ್ಫ್ ಸಂಸ್ಥೆಗಳಿಗೆ ಬಿಡುಗಡೆಯಾದ ಅನುದಾನದ ವಿವರಗಳನ್ನು ನೀಡಿದೆ.

### ಕೋಷ್ಟಕ ೧೬.೫೮: ಜಿಲ್ಲೆಯಲ್ಲಿರುವ ವಕ್ಫ್ ಸಂಸ್ಥೆಗಳ ಸಂಖ್ಯಾ ವಿವರ

| ಕ್ರ ಸಂ | ಧಾರ್ಮಿಕ ಸಂಸ್ಥೆಗಳು | ಗೆಜೆಟ್ ಪ್ರಕಟಣೆ | ಹೊಸ ನೋಂದಾವಣೆ |
|---|---|---|---|
| ೧ | ಮಸೀದಿಗಳು | ೧೧೩ | ೨೩೩ |
| ೨ | ದರ್ಗಾಗಳು | ೫೧ | ೦೭ |
| ೩ | ಈದ್ಗಾ | ೪೫ | ೨೫ |
| ೪ | ಖಬರಸ್ಥಾನ | ೧೭೬ | ೪೫ |
| ೫ | ಆಶೂರ್ಖಾನ | ೮೦ | ೦೪ |
| ೬ | ಅರೇಬಿ ಮದರಸಾ ಇತ್ಯಾದಿ | – | ೧೭ |

ಆಧಾರ: ವಕ್ಫ್ ಅಧಿಕಾರಿ, ಜಿಲ್ಲಾ ವಕ್ಫ್ ಸಲಹಾ ಸಮಿತಿಯ ಕಛೇರಿ, ತುಮಕೂರು

### ಕೋಷ್ಟಕ ೧೬.೫೯: ತುಮಕೂರು ಜಿಲ್ಲೆಯಲ್ಲಿನ ವಕ್ಫ್ ಸಂಸ್ಥೆಗಳಿಗೆ ಬಿಡುಗಡೆಯಾದ ಅನುದಾನದ ವಿವರ

| ವರ್ಷ | ವಕ್ಫ್ ಸಂಸ್ಥೆಗಳ ಸಂಖ್ಯೆ | ಅನುದಾನದ ಮೊತ್ತ (ರೂ. ಲಕ್ಷ ಗಳಲ್ಲಿ) |
|---|---|---|
| ೨೦೦೮–೦೯ | ೮೦ | ೩೨.೭೮ |
| ೨೦೦೯–೧೦ | ೦೯ | ೭.೫೦ |
| ೨೦೧೦–೧೧ | ೮೭ | ೫೪.೦೦ |
| ೨೦೧೧–೧೨ | ೫೬ | ೩೯.೨೫ |

ಆಧಾರ: ವಕ್ಫ್ ಅಧಿಕಾರಿ, ಜಿಲ್ಲಾ ವಕ್ಫ್ ಸಲಹಾ ಸಮಿತಿಯ ಕಛೇರಿ, ತುಮಕೂರು

ವಕ್ಫ್ ಸಂಸ್ಥೆಗಳ ನಿರ್ವಹಣೆಯ ಖರ್ಚನ್ನು ಭರಿಸಿದ ನಂತರ ಉಳಿಯುವ ಆದಾಯದ ಆಧಾರದ ಮೇಲೆ ವಕ್ಫ್ ಸಂಸ್ಥೆಗಳಿಂದ ಶೇಕಡ ಏಳರಷ್ಟು ಮೊತ್ತವನ್ನು ವಂತಿಗೆಯಾಗಿ ವಸೂಲಿಸಲಾಗುತ್ತದೆ. ೨೦೦೭–೦೮ ರಿಂದ ೨೦೧೧–೧೨ ರವರೆಗಿನ ವರ್ಷಗಳಲ್ಲಿ ಸಂಗ್ರಹಿಸಲಾದ ವಂತಿಕೆಯ ವಿವರಗಳನ್ನು ಕೋಷ್ಟಕ ೧೬.೬೦ರಲ್ಲಿ ನೀಡಿದೆ.

### ಕೋಷ್ಟಕ ೧೬.೬೦: ತುಮಕೂರು ಜಿಲ್ಲೆಯಲ್ಲಿ ೨೦೦೭–೦೮ರಿಂದ ೨೦೧೧–೧೨ ರವರೆಗೆ ಇಲಾಖೆಯ ವಕ್ಫ್ ಸಂಸ್ಥೆಗಳಿಂದ ಸಂಗ್ರಹಿಸಲಾದ ವಂತಿಗೆಯ ವಿವರಗಳು

| ವರ್ಷ | ವಂತಿಗೆ ಹಣ (ರೂ.ಲಕ್ಷ ಗಳಲ್ಲಿ) |
|---|---|
| ೨೦೦೭–೦೮ | ೬.೨೧ |
| ೨೦೦೮–೦೯ | ೧೨.೫೧ |
| ೨೦೦೯–೧೦ | ೧೦.೮೪ |
| ೨೦೧೦–೧೧ | ೧೧.೮೮ |
| ೨೦೧೧–೧೨ | ೯.೨೦ |

ಆಧಾರ: ವಕ್ಫ್ ಅಧಿಕಾರಿ, ಜಿಲ್ಲಾ ವಕ್ಫ್ ಸಲಹಾ ಸಮಿತಿ, ತುಮಕೂರು

### ವಕ್ಫ್ ಅಭಿವೃದ್ಧಿ ನಿಗಮ

ಮಂಡಲಿಯು ಕರ್ನಾಟಕ ಸರ್ಕಾರದ ಅನುಮತಿಯನ್ನು ಪಡೆದು ೧೯೭೮ ರಲ್ಲಿ ವಕ್ಫ್ ಅಭಿವೃದ್ಧಿ ಕಾರ್ಪೋರೇಷನ್ (ಲಿಮಿಟೆಡ್) ಅನ್ನು ರೂಪಿಸಿತು. ಇದರ ಅಧಿಕೃತ ಪಾಲು ಬಂಡವಾಳವು ರೂ. ೧.೫೦ ಕೋಟಿ ಆಗಿತ್ತು. ಈ ಕಾರ್ಪೋರೇಷನ್‌ನಲ್ಲಿ ಅಧ್ಯಕ್ಷರನ್ನೊಳಗೊಂಡಂತೆ ಒಂಬತ್ತು ಜನ ನಿರ್ದೇಶಕರು ಇರುತ್ತಾರೆ. ಕೈಗಾರಿಕೆಗಳನ್ನು ನಡೆಸಲು ವಕ್ಫ್ ಸಂಸ್ಥೆಗಳಿಗೆ ಧನ ಸಹಾಯ ನೀಡುವುದು, ಹೌಸಿಂಗ್ ಕೋ–ಆಪರೇಟಿವ್, ಬಳಕೆದಾರರ ಸಂಘ, ಕೈಗಾರಿಕಾ ಸಹಕಾರ ಸಂಘ ಮತ್ತು ರೈತರ ಸಹಕಾರ ಸಂಘಗಳ ಸ್ಥಾಪನೆಗೆ ನೆರವು ನೀಡುವುದು, ಯಾತ್ರಾರ್ಥಿಗಳಿಗೆ ಅನುಕೂಲವನ್ನು ಒದಗಿಸಲು ವಿಶ್ರಾಂತಿ ಗೃಹಗಳನ್ನು ನಿರ್ಮಾಣ ಮಾಡುವುದು ಮತ್ತು ಸಾರಿಗೆ ವ್ಯವಸ್ಥೆಯನ್ನು ಒದಗಿಸುವುದು, ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವುದು, ವ್ಯವಸಾಯ ಚಟುವಟಿಕೆಗಳನ್ನು ಕೈಗೊಳ್ಳಲು ಸಹಾಯ ಮಾಡುವುದು, ಇವೇ ಮುಂತಾದ ಉದ್ದೇಶಗಳೊಂದಿಗೆ, ವಕ್ಫ್ ಅಭಿವೃದ್ಧಿ ನಿಗಮವು ರಾಜ್ಯ ಮಟ್ಟದಲ್ಲಿ ಸ್ಥಾಪನೆಗೊಂಡಿದೆ.

### ವೃದ್ಧಾಪ್ಯ ವೇತನ, ಅಂಗವಿಕಲ ವೇತನ ಮತ್ತು ವಿಧವಾ ವೇತನಗಳು

ಜೀವನಕ್ಕೆ ಯಾವುದೇ ಆಧಾರವಿಲ್ಲದ, ೨೦ ವರ್ಷಕ್ಕಿಂತ ಹೆಚ್ಚು ವಯಸ್ಸಿನ ಮಕ್ಕಳು ಅಥವಾ ಮೊಮ್ಮಕ್ಕಳು ಇಲ್ಲದಿರುವ ಹಾಗೂ ಕರ್ನಾಟಕದಲ್ಲಿ ಮೂರು ವರ್ಷಗಳ ಕಾಲ ನಿರಂತರವಾಗಿ ವಾಸಿಸುತ್ತಿರುವ, ರೂ. ೨೦,೦೦೦ ಕ್ಕಿಂತ ಹೆಚ್ಚು ಆದಾಯವಿಲ್ಲದ, ೬೫ ವರ್ಷ ಅಥವಾ ಅದರ ಮೇಲ್ಪಟ ವೃದ್ಧರಿಗೆ ವೃದ್ಧಾಪ್ಯ ವೇತನವನ್ನು ನೀಡುವ ಒಂದು ಯೋಜನೆಯನ್ನು ಸರ್ಕಾರವು ಕಂದಾಯ ಇಲಾಖೆಯ ಮೂಲಕ ಜಾರಿಗೆ ತಂದಿತು. ಈ ವೃದ್ಧಾಪ್ಯ ವೇತನ ಯೋಜನೆಯನ್ನು ಕರ್ನಾಟಕ ಸರ್ಕಾರವು ೧೯೬೫ರಲ್ಲಿ ಪ್ರಾರಂಭಿಸಿತು. ಅದೇ ವರ್ಷದಲ್ಲಿ ೨೭೫ ವೃದ್ಧರು ಇದರ ಸೌಲಭ್ಯವನ್ನು ಪಡೆದರು. ಇದಕ್ಕಾಗಿ ರೂ. ೪೧೨೫ ಗಳನ್ನು ವೆಚ್ಚ ಮಾಡಲಾಯಿತು.

ರಾಜ್ಯದಲ್ಲಿ ಅರವತ್ತೈದು ವರ್ಷವಾದ ಅರ್ಹ ಹಿರಿಯ ನಾಗರಿಕರಿಗೆ ನೀಡಲಾಗುತ್ತಿರುವ ವೃದ್ಧಾಪ್ಯ ವೇತನವನ್ನು ೨೦೦೭ರ ಆಗಸ್ಟ್ ಒಂದರಿಂದ ಮಾಸಿಕ ನಾಲ್ಕು ನೂರು ರೂ. ಗಳಿಗೆ ಹೆಚ್ಚಿಸಿದೆ. ತುಮಕೂರು ಜಿಲ್ಲೆಯಲ್ಲಿ, ೨೦೦೮–೦೯ರಿಂದ ೨೦೧೧–೧೨ರ ವರಗೆ ವೃದ್ಧಾಪ್ಯ ವೇತನವನ್ನು ಪಡೆದವರ ಸಂಖ್ಯೆ ಮತ್ತು ಖರ್ಚು ಮಾಡಿದ ಮೊತ್ತದ ತಾಲೂಕುವಾರು ವಿವರಗಳನ್ನು ಇಲ್ಲಿರುವ ಕೋಷ್ಟಕ ೧೬.೬೧ರಲ್ಲಿ ನೀಡಿದೆ.

**ಕೋಷ್ಟಕ ೧೬.೬೧: ಜಿಲ್ಲೆಯಲ್ಲಿ ೨೦೦೮–೦೯ರಿಂದ ೨೦೧೧–೧೨ರವರೆಗೆ ವೃದ್ಧಾಪ್ಯ ವೇತನ ಪಡೆದವರ ಫಲಾನುಭವಿಗಳ ಸಂಖ್ಯೆ ಹಾಗೂ ವೆಚ್ಚದ ವಿವರ**

| ಕ್ರ. ಸಂ. | ತಾಲ್ಲೂಕು | ೨೦೦೮–೦೯ | | ೨೦೦೯–೧೦ | |
|---|---|---|---|---|---|
| | | ಫಲಾನುಭವಿಗಳು | ವೆಚ್ಚ (ರೂ. ಗಳಲ್ಲಿ) | ಫಲಾನುಭವಿಗಳು | ವೆಚ್ಚ (ರೂ. ಗಳಲ್ಲಿ) |
| ೧ | ತುಮಕೂರು | ೩೬೩೧ | ೧೫೨೫೦೨೦ | ೪೩೨೭ | ೧೮೧೭೩೪೦ |
| ೨ | ಶಿರಾ | ೯೧೦ | ೮೦೨೨೦೦ | ೯೯೧ | ೮೩೬೨೨೦ |
| ೩ | ಮಧುಗಿರಿ | ೩೩೨೩ | ೧೩೯೫೬೬೦ | ೩೭೨೬ | ೧೫೬೪೯೨೦ |
| ೪ | ಕುಣಿಗಲ್ | ೩೧೮೯ | ೧೩೩೯೩೮೦ | ೩೧೨೫ | ೧೩೧೨೫೦೦ |
| ೫ | ತಿಪಟೂರು | ೨೭೩೬ | ೧೧೪೯೧೨೦ | ೩೭೮೫ | ೧೫೮೯೭೦೦ |
| ೬ | ತುರುವೇಕೆರೆ | ೧೩೦೩ | ೫೪೭೨೬೦ | ೨೧೩೮ | ೮೯೭೯೬೦ |
| ೭ | ಚಿ.ನಾ.ಹಳ್ಳಿ | ೧೦೧೭ | ೪೨೭೧೪೦ | ೧೩೪೯ | ೫೬೬೫೮೦ |
| ೮ | ಪಾವಗಡ | ೧೬೦೮ | ೬೭೫೩೬೦ | ೧೯೫೩ | ೮೨೦೨೬೦ |
| ೯ | ಕೊರಟಗೆರೆ | ೨೭೮೧ | ೧೧೬೮೦೨೦ | ೨೯೭೯ | ೧೨೫೧೧೮೦ |
| ೧೦ | ಗುಬ್ಬಿ | ೧೨೮೯ | ೫೪೧೩೮೦ | ೧೩೯೩ | ೫೮೫೦೬೦ |

| ಕ್ರ. ಸಂ. | ತಾಲ್ಲೂಕು | ೨೦೧೦-೨೦೧೧ | | ೨೦೧೧-೨೦೧೨ | |
|---|---|---|---|---|---|
| | | ಫಲಾನುಭವಿಗಳು | ವೆಚ್ಚ (ರೂ. ಗಳಲ್ಲಿ) | ಫಲಾನುಭವಿಗಳು | ವೆಚ್ಚ (ರೂ. ಗಳಲ್ಲಿ) |
| ೧ | ತುಮಕೂರು | ೪೦೮೩ | ೧೭೧೪೮೬೦ | ೨೩೫೦ | ೯೮೭೦೦೦ |
| ೨ | ಶಿರಾ | ೧೮೯೦ | ೭೯೩೮೦೦ | ೧೨೭೮ | ೫೩೬೭೬೦ |
| ೩ | ಮಧುಗಿರಿ | ೩೩೧೫ | ೧೩೯೨೩೦೦ | ೨೭೧೦ | ೧೧೩೮೨೦೦ |
| ೪ | ಕುಣಿಗಲ್ | ೩೦೨೧ | ೧೨೬೮೮೨೦ | ೧೯೭೯ | ೮೩೧೮೦ |
| ೫ | ತಿಪಟೂರು | ೧೬೭೦ | ೧೫೪೧೪೦೦ | ೨೯೮೧ | ೧೨೫೨೦೨೦ |
| ೬ | ತುರುವೇಕೆರೆ | ೨೧೦೨ | ೮೮೨೮೪೦ | ೧೨೮೮ | ೫೪೯೯೬೦ |
| ೭ | ಚಿ.ನಾ.ಹಳ್ಳಿ | ೧೩೪೯ | ೫೬೬೫೮೦ | ೮೧೩ | ೩೪೧೪೬೦ |
| ೮ | ಪಾವಗಡ | ೧೯೯೨ | ೮೩೬೬೪೦ | ೧೧೭೦ | ೪೯೧೪೦೦ |
| ೯ | ಕೊರಟಗೆರೆ | ೩೦೩೪ | ೧೨೭೪೨೮೦ | ೨೧೨೯ | ೮೯೪೧೮೦ |
| ೧೦ | ಗುಬ್ಬಿ | ೧೩೩೨ | ೫೫೯೪೪೦ | ೯೮೪ | ೪೧೩೨೮೦ |

**ಆಧಾರ: ಜಿಲ್ಲಾ ಖಜಾನಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು**

## ವಿಕಲಚೇತನರ ವೇತನ

ವಿಕಲಚೇತನರಾದರೆ, ಈ ವೃದ್ಧಾಪ್ಯ ವೇತನ ಪಡೆಯಲು ಕನಿಷ್ಠ ಅರವತ್ತೈದು ವರ್ಷವಾಗಿರಬೇಕೆಂಬ ನಿಯಮ ಮೊದಲಿಗೆ ಇತ್ತು. ಕಾಲಕ್ರಮೇಣ, ಈ ವಯೋಮಿತಿಯನ್ನು ವಿಕಲಚೇತನರಿಗೆ ೧೯೭೪ರಲ್ಲಿ ೪೫ ವರ್ಷಕ್ಕೂ, ೧೯೭೭ರಲ್ಲಿ ೧೭ ವರ್ಷಕ್ಕೂ ಇಳಿಸಲಾಯಿತು. ದಿ.೮.೧೧.೧೯೭೭ರ ಸರ್ಕಾರಿ ಆದೇಶದಂತೆ, ವಿಕಲಚೇತನರಿಗೆ ವಯಸ್ಸಿನ ನಿರ್ಬಂಧವನ್ನು ಸಂಪೂರ್ಣವಾಗಿಯೇ ತೆಗೆದುಹಾಕಲಾಯಿತು. ಐದು ವರ್ಷಗಳ ಕಾಲ ಖಾಯಂ ನಿವಾಸಿಯಾಗಿದ್ದು, ವರ್ಷಕ್ಕೆ ರೂ. ಆರು ಸಾವಿರಗಳಿಗಿಂತ ಕಡಿಮೆ ಆದಾಯವಿರುವ, ವಿಕಲಚೇತನರು ತಮಗಿರುವ ಅಂಗ ವಿಕಲತೆಯ ಬಗ್ಗೆ ತಾಲೂಕು ವೈದ್ಯಾಧಿಕಾರಿಯವರಿಂದ ಪ್ರಮಾಣ ಪತ್ರ ನೀಡಿದಲ್ಲಿ ಅಂಥವರು ವಿಕಲಚೇತನ ವೇತನವನ್ನು ಪಡೆಯಲು ಅರ್ಹರಾಗುತ್ತಾರೆ. ಈ ವೇತನವು ತಿಂಗಳಿಗೆ ರೂ. ೧೨೫ಗಳಿದ್ದು, ೧.೪.೨೦೦೬ ರಿಂದ ರೂ. ೨೦೦ ಗಳಿಗೆ ಹೆಚ್ಚಿಸಲಾಗಿದೆ. ಜಿಲ್ಲೆಯಲ್ಲಿ ೨೦೦೮-೦೯ರಿಂದ ೨೦೧೧-೧೨ರವರೆಗೆ ವಿಕಲಚೇತನ ವೇತನ ಪಡೆದವರ ಸಂಖ್ಯೆ ಮತ್ತು ಖರ್ಚು ಮಾಡಿದ ಮೊತ್ತದ ವಿವರಗಳನ್ನು ಕೋಷ್ಟಕ ೧೬.೬೨ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೬೨: ವಿಕಲಚೇತನ ವೇತನ ಪಡೆದ ಫಲಾನುಭವಿಗಳ ಸಂಖ್ಯೆ ಹಾಗೂ ವೆಚ್ಚದ ವಿವರ**

| ಕ್ರ. ಸಂ | ತಾಲ್ಲೂಕು | ೨೦೦೮-೦೯ | | ೨೦೦೯-೧೦ | |
|---|---|---|---|---|---|
| | | ಫಲಾನುಭವಿಗಳು | ವೆಚ್ಚ (ರೂ. ಗಳಲ್ಲಿ) | ಫಲಾನುಭವಿಗಳು | ವೆಚ್ಚ (ರೂ. ಗಳಲ್ಲಿ) |
| ೧ | ತುಮಕೂರು | ೪೩೭೭ | ೧೮೩೮೩೪೦ | ೪೬೧೫ | ೧೯೩೮೩೦೦ |
| ೨ | ಶಿರಾ | ೩೧೮೩ | ೧೩೩೬೮೬೦ | ೩೨೩೩ | ೧೩೫೭೮೬೦ |

| | | | | | |
|---|---|---|---|---|---|
| ೩ | ಮಧುಗಿರಿ | ೩೧೨೯ | ೧೩೧೪೧೮೦ | ೪೧೩೭ | ೧೭೩೭೫೪೦ |
| ೪ | ಕುಣಿಗಲ್ | ೩೦೪೫ | ೧೨೭೮೯೦೦ | ೩೦೮೦ | ೧೨೯೩೬೦೦ |
| ೫ | ತಿಪಟೂರು | ೨೬೭೪ | ೧೧೨೩೦೮೦ | ೨೭೭೨ | ೧೧೬೪೨೪೦ |
| ೬ | ತುರುವೇಕೆರೆ | ೧೮೦೭ | ೭೫೮೯೪೦ | ೨೪೧೪ | ೧೦೧೩೮೮೦ |
| ೭ | ಚಿಕ್ಕನಾಯಕನಹಳ್ಳಿ | ೨೦೫೬ | ೮೬೩೫೨೦ | ೨೨೯೫ | ೯೬೩೯೦೦ |
| ೮ | ಪಾವಗಡ | ೩೦೭೧ | ೧೨೮೯೮೨೦ | ೩೩೧೮ | ೧೩೯೩೫೬೦ |
| ೯ | ಕೊರಟಗೆರೆ | ೨೩೪೮ | ೯೮೬೧೬೦ | ೨೭೦೮ | ೧೧೩೭೩೬೦ |
| ೧೦ | ಗುಬ್ಬಿ | ೨೩೧೬ | ೯೭೨೭೨೦ | ೨೭೫೩ | ೧೧೫೬೨೬೦ |

| ಕ್ರ. ಸಂ | ೨೦೧೦–೨೦೧೧ | | ೨೦೧೧–೨೦೧೨ | |
|---|---|---|---|---|
| | ಫಲಾನುಭವಿಗಳು | ವೆಚ್ಚ (ರೂ. ಗಳಲ್ಲಿ) | ಫಲಾನುಭವಿಗಳು | ವೆಚ್ಚ (ರೂ. ಗಳಲ್ಲಿ) |
| ೧ | ೪೨೯೦ | ೧೮೦೧೮೦೦ | ೨೯೫೯ | ೧೨೪೨೭೮೦ |
| ೨ | ೩೧೭೩ | ೧೩೩೨೬೬೦ | ೨೧೫೭ | ೯೦೫೯೪೦ |
| ೩ | ೩೯೫೯ | ೧೬೬೨೭೮೦ | ೨೯೦೪ | ೧೨೧೯೬೮೦ |
| ೪ | ೩೭೪೦ | ೧೫೭೦೮೦೦ | ೧೯೬೫ | ೮೨೫೩೦೦ |
| ೫ | ೨೭೦೭ | ೧೧೩೬೯೪೦ | ೨೩೧೬ | ೯೭೨೭೨೦ |
| ೬ | ೨೨೯೮ | ೯೬೫೧೬೦ | ೧೪೪೬ | ೬೦೭೩೨೦ |
| ೭ | ೨೧೯೦ | ೯೧೯೮೦೦ | ೧೫೩೬ | ೬೪೫೧೨೦ |
| ೮ | ೩೧೩೭ | ೧೩೧೭೫೪೦ | ೨೦೮೧ | ೮೭೪೦೨೦ |
| ೯ | ೨೬೦೩ | ೧೦೯೩೨೬೦ | ೨೦೩೬ | ೮೫೫೧೨೦ |
| ೧೦ | ೨೫೯೪ | ೧೦೮೯೪೮೦ | ೨೦೩೩ | ೮೫೩೮೬೦ |

ಆಧಾರ: ಜಿಲ್ಲಾ ಖಜಾನಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು

## ವಿಧವಾ ವೇತನ

ಜೀವನ ನಿರ್ವಹಣೆಗೆ ಯಾವುದೇ ಆಧಾರವಿಲ್ಲದೆ, ಯಾರ ನೆರವೂ ಇಲ್ಲದೆ, ಬದುಕು ನಡೆಸುವುದೇ ಕಷ್ಟವೆನಿಸುವ ಪರಿಸ್ಥಿತಿ ಇರುವವರಿಗೆ, ಆರ್ಥಿಕ ಸಹಾಯವನ್ನು ನೀಡಬೇಕೆಂಬ ಉದ್ದೇಶದಿಂದ ದಿನಾಂಕ ೧೫.೧೨.೧೯೬೪ರ ಸರ್ಕಾರಿ ಆದೇಶದ ಮೂಲಕ ಈ ಯೋಜನೆಯನ್ನು ಸರ್ಕಾರವು ಪ್ರಾರಂಭಿಸಿರುತ್ತದೆ. ತುಮಕೂರು ಜಿಲ್ಲಾ ಪ್ರದೇಶವನ್ನೂ ಒಳಗೊಂಡಿದ್ದ ಮೈಸೂರು ಜಿಲ್ಲೆಯಲ್ಲಿ ದಿನಾಂಕ ೧೯೮೪ರ ಏಪ್ರಿಲ್ ಒಂದರಿಂದ ಈ ಯೋಜನೆಯು ಕಾರ್ಯರೂಪಕ್ಕೆ ಬಂದಿರುತ್ತದೆ. ಯಾವುದೇ ದುಡಿಮೆಗೆ ದಾರಿ ಇಲ್ಲದೆ ತೊಂದರೆಯಲ್ಲಿರುವ ವಿಧವೆಯರಿಗೆ ಆಕೆಯ ಸಾವಿನ ವರೆಗೆ ಅಥವಾ ಮರು ಮದುವೆಯಾಗುವವರೆಗೆ ಅಥವಾ ವಾರ್ಷಿಕ ನಿಗದಿತ ಆದಾಯ ಗಳಿಸಿಕೊಡುವಂತಹ ನೌಕರಿ ಸಿಗುವವರೆಗೆ, ಆಕೆಯ ಜೀವನೋಪಾಯಕ್ಕೆ ನೆರವಾಗಲು ಈ ಪಿಂಚಣಿಯನ್ನು ನೀಡಲು ಸರ್ಕಾರವು ಇದನ್ನು ಯೋಜಿಸಿದೆ. ಅರ್ಜಿದಾರರು ಅಥವಾ ಮೃತ ಪತಿ, ಕನಿಷ್ಠ ಮೂರು ವರ್ಷಗಳ ಕಾಲ ಸತತವಾಗಿ ಸಂಬಂಧಿತ ಪ್ರದೇಶದ ನಿವಾಸಿಯಾಗಿದ್ದರೆ ಮತ್ತು ವಾರ್ಷಿಕ ವರಮಾನವು ಆಯಾ ಕಾಲಕ್ಕೆ ಸರ್ಕಾರವು ನಿಗದಿಸುವ ಮೊತ್ತದ ಮಿತಿಯೊಳಗಿದ್ದು, ಆಕೆಯ ವಯಸ್ಸು ಹದಿನೆಂಟಕ್ಕಿಂತ ಮೇಲ್ಪಟ್ಟಿದ್ದರೆ ಅಂತಹ ವಿಧವೆಯರಿಗೆ ವಿಧವಾ ವೇತನವನ್ನು ನೀಡಲಾಗುತ್ತದೆ. ಆರಂಭದಲ್ಲಿ ಈ ವೇತನವು ರೂ. ಐವತ್ತು ಗಳಾಗಿದ್ದು, ಆ ನಂತರ ಮಾಸಿಕ ರೂ. ನೂರು ಗಳಾಗಿ, ಏಪ್ರಿಲ್ ೨೦೦೭ರಿಂದ ತಿಂಗಳಿಗೆ ರೂ. ನಾಲ್ಕು ನೂರು ಗಳಿಗೆ ಹೆಚ್ಚಿಸಲಾಗಿದೆ. ೨೦೦೮–೦೯ರಿಂದ ೨೦೧೧–೧೨ರವರೆಗಿನ ಸಾಲಿನಲ್ಲಿ ಮಾಡಲಾದ ಖರ್ಚು ಮತ್ತು ಫಲಾನುಭವಿಗಳ ವಿವರಗಳನ್ನು ಕೋಷ್ಟಕ ೧೬.೬೩ರಲ್ಲಿ ನೀಡಿದೆ.

**ಕೋಷ್ಟಕ ೧೬.೬೩: ಜಿಲ್ಲೆಯಲ್ಲಿ ತಾಲೂಕುವಾರು ವಿಧವಾ ವೇತನ ಪಡೆದ ಫಲಾನುಭವಿಗಳ ಸಂಖ್ಯೆ ಹಾಗೂ ವೆಚ್ಚದ ವಿವರ**

| ಕ್ರ. ಸಂ. | ತಾಲ್ಲೂಕು | ೨೦೦೮–೦೯ | | ೨೦೦೯–೧೦ | |
|---|---|---|---|---|---|
| | | ಫಲಾನುಭವಿಗಳು | ವೆಚ್ಚ ರೂ. ಗಳಲ್ಲಿ | ಫಲಾನುಭವಿಗಳು | ವೆಚ್ಚ ರೂ. ಗಳಲ್ಲಿ |
| ೧ | ತುಮಕೂರು | ೬೭೩೦ | ೨೮೨೬೬೦೦ | ೭೯೩೧ | ೩೩೩೧೦೨೦ |
| ೨ | ಶಿರಾ | ೩೨೯೯ | ೧೩೮೫೫೮೦ | ೩೬೦೧ | ೧೫೧೨೪೨೦ |
| ೩ | ಮಧುಗಿರಿ | ೪೪೯೯ | ೧೮೮೯೫೮೦ | ೫೧೨೫ | ೨೧೫೨೫೦೦ |
| ೪ | ಕುಣಿಗಲ್ | ೩೬೨೨ | ೧೫೨೧೨೪೦ | ೪೩೧೯ | ೧೮೧೩೯೮೦ |
| ೫ | ತಿಪಟೂರು | ೩೬೮೦ | ೧೫೪೫೬೦೦ | ೪೦೪೧ | ೧೬೯೭೨೨೦ |
| ೬ | ತುರುವೇಕೆರೆ | ೨೨೫೬ | ೯೪೭೫೨೦ | ೨೭೫೨ | ೧೧೫೫೮೪೦ |
| ೭ | ಚಿ.ನಾ.ಹಳ್ಳಿ | ೩೩೨೬ | ೧೩೯೬೯೨೦ | ೩೭೦೨ | ೧೫೫೪೮೪೦ |
| ೮ | ಪಾವಗಡ | ೩೪೧೦ | ೧೪೩೨೨೦೦ | ೩೭೪೫ | ೧೫೭೨೯೦೦ |
| ೯ | ಕೊರಟಗೆರೆ | ೩೫೭೪ | ೧೫೦೧೦೮೦ | ೩೮೩೬ | ೧೬೧೧೧೨೦ |
| ೧೦ | ಗುಬ್ಬಿ | ೩೭೧೩ | ೧೫೫೯೪೬೦ | – | – |

| ಕ್ರ. ಸಂ. | ತಾಲ್ಲೂಕು | ೨೦೧೦–೨೦೧೧ | | ೨೦೧೧–೨೦೧೨ | |
|---|---|---|---|---|---|
| | | ಫಲಾನುಭವಿಗಳು | ವೆಚ್ಚ ರೂ. ಗಳಲ್ಲಿ | ಫಲಾನುಭವಿಗಳು | ವೆಚ್ಚ ರೂ. ಗಳಲ್ಲಿ |
| ೧ | ತುಮಕೂರು | ೮೯೯೭ | ೩೭೭೮೭೪೦ | ೬೩೯೫ | ೨೬೮೫೯೦೦ |
| ೨ | ಶಿರಾ | ೪೦೨೭ | ೧೬೯೧೩೪೦ | ೩೦೭೨ | ೧೨೯೦೨೪೦ |
| ೩ | ಮಧುಗಿರಿ | ೫೮೪೯ | ೨೪೫೬೫೮೦ | ೪೮೯೬ | ೨೦೫೬೩೨೦ |
| ೪ | ಕುಣಿಗಲ್ | ೫೧೦೪ | ೨೧೪೩೬೮೦ | ೪೦೩೮ | ೧೬೯೫೯೬೦ |

| | | | | | |
|---|---|---|---|---|---|
| ೫ | ತಿಪಟೂರು | ೪೨೦೭ | ೧೭೬೯೪೦ | ೩೭೭೫ | ೧೫೮೫೫೦೦ |
| ೬ | ತುರುವೇಕೆರೆ | ೩೦೧೧ | ೧೨೬೪೨೦೦ | ೨೧೮೮ | ೯೧೮೯೬೦ |
| ೭ | ಚಿ.ನಾ.ಹಳ್ಳಿ | ೪೦೯೯ | ೧೭೦೦೫೮೦ | ೨೭೮೧ | ೧೧೬೮೦೨೦ |
| ೮ | ಪಾವಗಡ | ೪೯೯೦ | ೧೯೬೯೮೦೦ | ೩೩೯೬ | ೧೪೨೬೩೨೦ |
| ೯ | ಕೊರಟಗೆರೆ | ೪೨೮೭ | ೧೮೦೦೫೪೦ | ೩೧೭೬ | ೧೩೩೩೯೨೦ |
| ೧೦ | ಗುಬ್ಬಿ | ೪೦೭೩ | ೧೭೧೦೬೬೦ | ೩೪೮೧ | ೧೪೬೨೦೨೦ |

**ಆಧಾರ: ಜಿಲ್ಲಾ ಖಜಾನಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು.**

## ಸ್ವಾತಂತ್ರ್ಯ ಯೋಧರ ವಿಶ್ರಾಂತಿ ವೇತನ

ಸ್ವಾತಂತ್ರ್ಯಕ್ಕಾಗಿ ನಡೆದ ಯಾವುದೇ ಚಳುವಳಿ ಅಥವಾ ಹೋರಾಟದಲ್ಲಿ ಭಾಗವಹಿಸಿದ ಯೋಧರಿಗೆ ಮಾಸಿಕ ವಿಶ್ರಾಂತಿ ವೇತನವನ್ನು ನೀಡುವಂತಹ ಒಂದು ಯೋಜನೆಯನ್ನು ಸರ್ಕಾರವು ೧೯೬೯ರ ಡಿಸೆಂಬರ್ ಇಪ್ಪತ್ತೊಂದರಲ್ಲಿ ಜಾರಿಗೊಳಿಸಿತು. ಸ್ವಾತಂತ್ರ್ಯ ಹೋರಾಟಗಾರರೆಂಬ ಬಗ್ಗೆ ರಾಜ್ಯ ಪತ್ರವನ್ನು ಅಥವಾ ಕೇಂದ್ರ ಸರ್ಕಾರದಿಂದ ತಾಮ್ರ ಪತ್ರವನ್ನು ಹೊಂದಿದ್ದು, ಸ್ವಾತಂತ್ರ್ಯ ಸಂದರ್ಭದಲ್ಲಿನ ಯಾವುದೇ ಚಳವಳಿಯಲ್ಲಿ ಭಾಗವಹಿಸಿದ ಕುರಿತು ಆ ಚಳುವಳಿಯ ಅಧ್ಯಕ್ಷರು ನೀಡಿದ ದೃಢೀಕರಣ ಪತ್ರವಿದ್ದಲ್ಲಿ ಅಂತಹ ಯೋಧರು, ಈ ಮಾಸಿಕ ವಿಶ್ರಾಂತಿ ವೇತನವನ್ನು ಪಡೆಯಲು ಅರ್ಹರಾಗುತ್ತಾರೆ. ೨೦೧೧-೧೨ನೇ ಸಾಲಿನಲ್ಲಿ ತುಮಕೂರು ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಹಾಗೂ ಗೋವಾ ವಿಮೋಚನಾ ಹೋರಾಟಗಾರರ ವಿಶ್ರಾಂತಿ ವೇತನ ಪಡೆಯುತ್ತಿರುವವರ ವಿವರಗಳನ್ನು ಕೋಷ್ಟಕ ೧೬.೬೪ರಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೬೪: ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಹಾಗೂ ಗೋವಾ ವಿಮೋಚನಾ ಹೋರಾಟಗಾರರ ವಿಶ್ರಾಂತಿ ವೇತನ ಪಡೆಯುತ್ತಿರುವವರ ವಿವರ**

| ವಿವಿಧ ಪ್ರಕರಣಗಳ ಹೆಸರು | ಸರ್ಕಾರದ ಆದೇಶ ಮತ್ತು ದಿನಾಂಕ | ನೀಡಲಾಗುವ ಧನ/ಪಿಂಚಣಿ |
|---|---|---|
| ಸ್ವಾತಂತ್ರ್ಯ ಹೋರಾಟಗಾರರ ವಿಶ್ರಾಂತಿ ವೇತನದಾರರು(೭೨೦ ಜನ) | ನಂ.ಪಿ.ಎ./ಹೆಚ್/೦೮-೦೯/೪೪೦, ದಿನಾಂಕ:೩೧-೧೨-೨೦೦೮ | ರೂ. ೫೦೦೦ |
| ಗೋವಾ ಸ್ವಾತಂತ್ರ್ಯ ಹೋರಾಟಗಾರರು(೪೫ ಜನ) | ಸ.ಆ.ಸ.ಆ.ಇ.೮೦/ಬಿ.ಸಿ.ಎಫ್/೨೦೧೧ ಬೆಂಗಳೂರು | ರೂ. ೨೦೦೦ |

## ಇತರ ಸೇವೆಗಳು

ಶುದ್ಧ ಕುಡಿಯುವ ನೀರು ಸರಬರಾಜು, ಕೊಳಚೆ ನಿರ್ಮೂಲನೆ ಹಾಗೂ ಉತ್ತಮ ನೈರ್ಮಲ್ಯ ವ್ಯವಸ್ಥೆಗಳಿಂದ ಆರೋಗ್ಯವಂತ ಸಮಾಜದ ನಿರ್ಮಾಣ ಸಾಧ್ಯ ಎಂಬುದನ್ನು ಕಂಡುಕೊಂಡಿರುವ ಸರ್ಕಾರವು ಈ ಅಂಶಗಳತ್ತಲೂ ಗಮನ ಹರಿಸಿರುತ್ತದೆ. ರಾಜ್ಯದ ಎಲ್ಲಾ ಜನವಸತಿಗಳಿಗೆ ಸಮಾಧಾನಕರ ರೀತಿಯಲ್ಲಿ ನೀರು ಒದಗಿಸುವ ವ್ಯವಸ್ಥೆ ಮಾಡಿದೆ.

ಶುದ್ಧ ಕುಡಿಯುವ ನೀರಿನ ಪೂರೈಕೆಗಾಗಿ, ನವೆಂಬರ್ ೨೦೦೨ರಲ್ಲಿ ಹೊರಡಿಸಿದ ಸುತ್ತೋಲೆ ಪ್ರಕಾರ, ಬೀದಿ ನಲ್ಲಿಯ ಬಳಕೆದಾರರು, ತಿಂಗಳಿಗೆ ರೂ. ಹತ್ತು ಮತ್ತು ಮನೆಗೆ ಸಂಪರ್ಕ ಹೊಂದಿದವರು ತಿಂಗಳಿಗೆ ರೂ. ಇಪ್ಪತ್ತೈದು ಗ್ರಾಮ ಪಂಚಾಯತಿಗೆ ತೆರಿಗೆಯಾಗಿ ಕಟ್ಟಿ ತಮ್ಮ ಗ್ರಾಮ ಪಂಚಾಯತಿ ಮೂಲಕ ನಿರಂತರವಾಗಿ ಶುದ್ಧ ಕುಡಿಯುವ ನೀರು ಸರಬರಾಜು ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಈ ಜಲ ನಿರ್ಮಲ ಯೋಜನೆಯು ತುಮಕೂರು ಜಿಲ್ಲೆಯಲ್ಲೂ ಜಾರಿಗೊಳಿಸಲಾಗಿದೆ.

# ಇತರ ಸಮಾಜ ಸೇವಾ ನಿರತ ವ್ಯಕ್ತಿಗಳು ಮತ್ತು ಸಂಸ್ಥೆಗಳು

ಸಾಮಾಜಿಕ ಸುಧಾರಣೆಯ ಉದ್ದೇಶದ ವಿಭಿನ್ನ ಚಳವಳಿಗಳು ದೇಶದ ಸ್ವಾತಂತ್ರ್ಯ ಸಂಗ್ರಾಮ ಸಮಯದಲ್ಲಿ ನಡೆದವು. ಈ ಚಳವಳಿಗಳಲ್ಲಿ ಜಿಲ್ಲೆಯ ಹಲವಾರು ವ್ಯಕ್ತಿಗಳು ಭಾಗವಹಿಸಿ ಸಮಾಜದ ಏಳಿಗೆಗಾಗಿ ಕೆಳವರ್ಗದವರ ಸುಧಾರಣೆಗಾಗಿ ತಮ್ಮಿಂದಾದ ನೆರವು ನೀಡಿದರು. ಹರಿಜನೋದ್ಧಾರ, ಮದ್ಯಪಾನ ನಿಷೇಧ, ಅಸ್ಪೃಶ್ಯತಾ ನಿವಾರಣೆ, ದೇವಸ್ಥಾನ ಮತ್ತು ಹೋಟೆಲ್‌ಗಳಿಗೆ ಹರಿಜನರ ಪ್ರವೇಶ, ಸ್ತ್ರೀ ಪ್ರಗತಿ, ಗ್ರಾಮೋದ್ಯೋಗಗಳ ಉತ್ಥಾನ, ಖಾದೀ ಪ್ರಚಾರ, ಹಾಗೂ ಪ್ರಾಣಿಬಲಿ ನಿಷೇಧ – ಇವು ಅತ್ಯಂತ ಪ್ರಮುಖ ಚಳವಳಿಗಳಾಗಿದ್ದವು. ಅಲ್ಲದೆ ರೈತಾಪಿ ಜನರ ಸಂಕಷ್ಟಗಳ ನಿವಾರಣೆ, ಬ್ರಿಟಿಷರ ವಿರುದ್ಧ ಕರ ನಿರಾಕರಣೆಗೆ, ದುಡಿಯುವ ಕೈಗೆ ಚರಕದಿಂದ ಹಿಡಿಕಾಸು ಸಂಪಾದನೆಗೆ ಅವಕಾಶ, ಕ್ಷಾಮ ಪರಿಹಾರಕ್ಕೆ, ಕಂದಾಯ ವಜಾಕ್ಕೆ, ಹೀಗೇ ಹಲವಾರು ಸಂದರ್ಭಗಳಲ್ಲಿ ಆಗಿನ ಕಾಂಗ್ರೆಸಿಗರು ತನುಮನದಿಂದ ದುಡಿದು, ಸಮಾಜಕ್ಕೆ ನೆರವಾಗಿದ್ದಾರೆ. ರಾಷ್ಟ್ರೀಯ ಶಾಲೆಗಳನ್ನು ತೆರೆದು ಶಿಕ್ಷಣಕ್ಕೆ ವ್ಯವಸ್ಥೆ ಮಾಡಿದ್ದಾರೆ. ಈ ಜಿಲ್ಲೆಯಲ್ಲಿ ಇಂತಹ ರಾಷ್ಟ್ರಭಕ್ತಿಯ ಮತ್ತು ರಾಜಕೀಯ ಆಸಕ್ತಿಯಿಂದ ಸಮಾಜ ಸೇವೆಯ ಕಾರ್ಯಗಳನ್ನು ಮಾಡಿದ ವ್ಯಕ್ತಿಗಳು, ಸ್ವಾತಂತ್ರ್ಯ ಪೂರ್ವ ಕಾಲದಿಂದಲೂ ಬಹು ಸಂಖ್ಯೆಯಲ್ಲಿ ದೊರಕುತ್ತಾರೆ. ಸಿ.ಟಿ. ಹನುಮಂತಯ್ಯ, ಸೋಂಪುರದ ಎಸ್. ಆರ್. ಶೆಟ್ಟಿ, ತಿಪಟೂರಿನ ಕೆ.ಎನ್. ರಂಗಪ್ಪ, ಕುಣಿಗಲ್‌ನ ಕೆ.ವಿ. ಕೃಷ್ಣಸ್ವಾಮಿ, ಕೊರಟಗೆರೆ ಟಿ. ಆರ್ ಚೆನ್ನಗರಾಮಯ್ಯ, ತುಮಕೂರಿನ ರಂಗೈಯ್ಯಂಗಾರ್ ಮತ್ತು ಬಿ.ಸಿ. ನಂಜುಂಡಯ್ಯ, ಚಿಕ್ಕನಾಯಕನಹಳ್ಳಿಯ ಜಿ.ವಿ ನಾರಾಯಣಮೂರ್ತಿ, ಆರ್.ಎಸ್. ಆರಾಧ್ಯ. ತಾಳಕೆರೆ ಸುಬ್ರಹ್ಮಣ್ಯ, ತುಮಕೂರಿನ ಎಸ್.ವಿ. ಆಚಾರ್, ಟಿ.ಕೆ. ಗೋವಿಂದಯ್ಯ, ಜಿ. ಆರ್. ಚಂಗಲಾರಾಧ್ಯ, ಶಿರಾದ ಮಾಲಿ ಮರಿಯಪ್ಪ, ಮಧುಗಿರಿಯ ಎಂ.ಜಿ. ನಾರಾಯಣರಾವ್, ಪುಟ್ಟ ತಿಮ್ಮಯ್ಯ, ಟಿ.ಎ. ದಾಸಪ್ಪ, ಎನ್. ರುದ್ರಯ್ಯ, ಅನಂತರಾಮಯ್ಯ ಶೆಟ್ಟಿ, ಟಿ. ತಿಮ್ಮಯ್ಯ, ಟಿ.ವಿ. ವೆಂಕಟಸ್ವಾಮಿ, ತುರುವೇಕೆರೆ ನರಸಿಂಹಯ್ಯ, ಬಾಗಿಸಂದ್ರದ ಹುಚ್ಚೇಗೌಡ, ಡಾ॥ ಟಿ.ಎಸ್ ಮಲ್ಲಿಕಾರ್ಜುನಯ್ಯ, ಟಿ.ಪಿ ಬ್ರಹ್ಮಪ್ಪ, ಜಿ.ಸಿ. ಭಾಗೀರತಮ್ಮ ಮುಂತಾದವರು ಸ್ವಾತಂತ್ರ್ಯ ಪೂರ್ವದಿಂದಲೂ ಈ ರೀತಿಯ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿ ಸಮಾಜ ಸುಧಾರಣೆ ಮತ್ತು ಸೇವೆ ಮಾಡಿದಂತಹ ವ್ಯಕ್ತಿಗಳಾಗಿದ್ದಾರೆ.

೧೯ನೇ ಶತಮಾನದ ಉತ್ತರಾರ್ಧದಲ್ಲಿ ಬ್ರಿಟಿಷರ ಆಳ್ವಿಕೆಯ ಸಂದರ್ಭದಲ್ಲಿ, ಶಿಕ್ಷಣ ಸಂಸ್ಥೆಗಳು ಹೆಚ್ಚಿನ ಸಂಖ್ಯೆಯಲ್ಲಿ ಆರಂಭಗೊಂಡವು. ಗ್ರಾಮೀಣ ಮಕ್ಕಳು, ಈ ಶಿಕ್ಷಣ ಸಂಸ್ಥೆಗಳಿಂದ ಸಿಗುವ ಶಿಕ್ಷಣವನ್ನು ಪಡೆಯಲು ಅನುವು ಮಾಡಿಕೊಟ್ಟಿವೆ. ಇವು ಲಿಂಗಾಯತ ಹಾಗೂ ಮಠಗಳು. ಒಕ್ಕಲಿಗ ಹಾಗೂ ಮಠಗಳು ಮಕ್ಕಳಿಗೆ ಆಹಾರ ಮತ್ತು ವಸತಿಯನ್ನು ಒದಗಿಸಿಕೊಟ್ಟಿರುತ್ತವೆ. ಈ ಮಠಗಳಲ್ಲಿ ನಡೆಯುತ್ತಿದ್ದ "ದಾಸೋಹ"ದ ಮೂಲಕ ದೂರದ ಗ್ರಾಮಗಳಿಂದ ಹಸಿದು ಬಂದ ವಿದ್ಯಾರ್ಥಿಗಳಿಗೆ ಅನ್ನದಾನ ಮಾಡಿ, ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸ ಪಡೆಯಲು ನೆರವು ನೀಡಿದವು. ಜಿಲ್ಲೆಯಲ್ಲಿ ಸ್ಥಾಪನೆಗೊಂಡ ಮಠಗಳಲ್ಲಿ ತುಮಕೂರಿನ ಸಿದ್ಧಗಂಗಾ ಮಠವೂ ಒಂದು. ಇದು ಕೇವಲ ಲಿಂಗಾಯಿತ ಸಮುದಾಯದ ವಿದ್ಯಾರ್ಥಿಗಳಿಗಲ್ಲದೆ, ಇತರ ಧರ್ಮೀಯ ವಿದ್ಯಾರ್ಥಿಗಳಿಗೂ ಆಸರೆ ನೀಡಲು ನಿರ್ಣಯ ಕೈಗೊಂಡಿದ್ದು ಶ್ರೀ ಉದ್ದಾನ ಸ್ವಾಮಿಗಳಿದ್ದಾಗ. ಆಧುನಿಕ ಶಿಕ್ಷಣ ಪಡೆಯ ಬಯಸಿದ ವಿದ್ಯಾರ್ಥಿಗಳಿಗೆ ತಮ್ಮ ಉಚಿತ ಪ್ರಸಾದ ನಿಲಯದಲ್ಲಿ ವಾಸಿಸಲು ಮೊಟ್ಟ ಮೊದಲಿಗೆ ಅವಕಾಶ ಮಾಡಿಕೊಟ್ಟಿದ್ದು ೧೯೧೭ರಲ್ಲಿ. ಉದ್ದಾನ ಸ್ವಾಮಿಗಳು ಆರಂಭಿಸಿದ ಇದೇ ಮಾರ್ಗದಲ್ಲಿ ನಡೆದವರು ಅವರ ಶಿಷ್ಯರಾದ ಶ್ರೀ ಶಿವಕುಮಾರ ಸ್ವಾಮಿಗಳು. 'ಕರ್ನಾಟಕ ರತ್ನ' ಎಂಬ ಬಿರುದು ಗಳಿಸಿರುವ ಶತಾಯುಷಿ ಡಾ: ಶಿವಕುಮಾರ ಸ್ವಾಮಿಯವರು ಸಿದ್ದಗಂಗಾ ಮಠದ ಅಧ್ಯಕ್ಷರು. ಇವರು ಈವರೆಗೆ ಅಸಂಖ್ಯಾತ ಬಡ ವಿದ್ಯಾರ್ಥಿಗಳಿಗೆ ಆಸರೆ ನೀಡುತ್ತ ಬಂದಿದ್ದಾರೆ. "ಸಿದ್ಧಗಂಗಾ ಮಠ"ವನ್ನು ನಿತ್ಯ ದಾಸೋಹದ ಅಕ್ಷಯ ನಿಧಿಯನ್ನಾಗಿ ಪರಿವರ್ತಿಸಿದ್ದಾರೆ. ಕೇವಲ ಊಟ, ವಸತಿಗಳೇ ಅಲ್ಲದೆ, ಜ್ಞಾನಾರ್ಥಿಗಳ ಜ್ಞಾನಾಭಿವೃದ್ಧಿಗೆ ನೆರವಾಗುವಂತಹ ನೂರಾರು ಸದ್‌ಗ್ರಂಥಗಳನ್ನು ಬರೆಯಿಸಿ ಪ್ರಕಟಣೆ ಮಾಡಿದ್ದಾರೆ, 'ಸಿದ್ಧಗಂಗಾ' ಮಾಸಪತ್ರಿಕೆಯೂ ಈ ಮಠದಿಂದ ಪ್ರಕಟಗೊಳ್ಳುತ್ತಿದೆ. ಡಾ: ಶಿವಕುಮಾರ ಸ್ವಾಮಿಗಳ ಶತಮಾನೋತ್ಸವ ಸಂದರ್ಭದಲ್ಲಿಯೇ ಹಲವು ಮಠಪೀಠಗಳು, ಸಂಸ್ಥಾನಗಳು, ವಿವಿಧ ಕ್ಷೇತ್ರಗಳ ಸಾಧಕರು, ಸೇವಾ ನಿರತರು, ಸಮಾಜ ಸುಧಾರಕರು, ಶಿಕ್ಷಣ ಸಂಸ್ಥೆಗಳು, ತತ್ವಜ್ಞಾನಿಗಳು, ಮುಂತಾಗಿ ಹಲವಾರು ವಿಷಯಗಳಿಗೆ ಸಂಬಂಧಿಸಿದಂತೆ ಒಟ್ಟು ೧೦೮ ಪುಸ್ತಕಗಳನ್ನು ಹೊರತರಲಾಗಿದೆ. ಹೀಗೆ ಪ್ರಕಟಗೊಂಡ ಪುಸ್ತಕಗಳಿಂದ ಲೇಖಕರಿಗೆ, ಜ್ಞಾನಾರ್ಥಿಗಳಿಗೆ, ಸಮಾಜಕ್ಕೆ, ಮಕ್ಕಳಿಗೆ ವಿವಿಧ ದೃಷ್ಟಿಯಲ್ಲಿ ಸಹಾಯವಾಗಿದೆ.

ದೇವರಾಯನದುರ್ಗದಲ್ಲಿ ೧೯೯೭ರಿಂದ ಅನಾಥಾಲಯವೊಂದನ್ನು ನಡೆಸುತ್ತಿರುವ, ಶಿರಾ ತಾಲೂಕಿನ ತಡಕಲೂರು ಗ್ರಾಮದ ಲೇಪಾಕ್ಷಪ್ಪ ಎಂಬುವವರು, ದಲಿತ ವರ್ಗಕ್ಕೆ ಸೇರಿದವರು. ಬಾಲ್ಯದಲ್ಲಿ ಜೀತಕ್ಕೆಂದು ಕುಟುಂಬದಿಂದ ಹೊರದೂಡಲ್ಪಟ್ಟ ಇವರು, ಶಾಲೆಯ ಮುಖ್ಯೋಪಾಧ್ಯಾಯರ ಸಹಾಯದಿಂದಾಗಿ, ಜೀತವಿಮುಕ್ತನಾಗಿ ಶಾಲೆಯಲ್ಲಿ ಪ್ರವೇಶ ಪಡೆದಿದ್ದು, ಈ ಅನುಭವದ ಹಿನ್ನೆಲೆಯಲ್ಲಿ ಅನಾಥ ಮಕ್ಕಳನ್ನು ರಕ್ಷಿಸುವ ಪ್ರವೃತ್ತಿಗೆ ಇಳಿದಿದ್ದಾರೆ. ಅರಣ್ಯ ಇಲಾಖೆಯಲ್ಲಿ ಗಾರ್ಡ್ ಆಗಿ ಕರ್ತವ್ಯ ನಿರ್ವಹಿಸುತ್ತಲೇ ಪತ್ನಿ ಲಕ್ಷ್ಮಮ್ಮನ ಜೊತೆಗೂಡಿ, ಅನಾಥ ಮಕ್ಕಳ ಪೋಷಣೆ, ಶಿಕ್ಷಣ ಮತ್ತು ಅವರ ಅಭಿವೃದ್ಧಿಗೆ ತಮ್ಮ ಜೀವನದ ಧ್ಯೇಯವಾಗಿಸಿಕೊಂಡಿದ್ದಾರೆ. ಇವರ ಅನಾಥಾಲಯದಲ್ಲಿ ೨೦೦೭–೦೮ರಲ್ಲಿ ಎಂಬತ್ತೂರು ಮಕ್ಕಳಿದ್ದು ಅವರಲ್ಲಿ ನಲವತ್ತು ಹೆಣ್ಣು ಮಕ್ಕಳಿದ್ದಾರೆ. ಇವರಲ್ಲಿ ಐವತ್ತು ಮಕ್ಕಳಿಗೆ ಮಾತ್ರ ಭೋಜನ ವೆಚ್ಚವಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ತಿಂಗಳಿಗೆ ತಲಾ ರೂ. ೪೦೦ ನೆರವು ಸಿಗುತ್ತದೆ. ಉಳಿದ ಅನಾಥ ಮಕ್ಕಳ ಸಂಪೂರ್ಣ ಹೊಣೆ ಲೇಪಾಕ್ಷಪ್ಪನವರೇ ವಹಿಸಿಕೊಂಡು ಸೇವಾ ದೃಷ್ಟಿಯಿಂದ ನೋಡಿಕೊಳ್ಳುತ್ತಿದ್ದಾರೆ.

ಇದೇ ರೀತಿ ಮಕ್ಕಳ ಶೈಕ್ಷಣಿಕ ಸುಧಾರಣೆಯ ಉದ್ದೇಶಕ್ಕಾಗಿ ಸ್ಥಾಪನೆಗೊಂಡಿರುವ ಈ ಜಿಲ್ಲೆಯ ಇನ್ನೊಂದು ಸಂಸ್ಥೆ 'ಶಿವ ಶೈಕ್ಷಣಿಕ ಮಂದಿರ'. ಸಮಾಜದ ಪ್ರಗತಿಯಾಗಿ ದುಡಿಯುವ ಇಂಥ ಮಠ, ಮಂದಿರ ಮತ್ತು ಸರ್ಕಾರೇತರ ಸಂಸ್ಥೆಗಳು ಜಿಲ್ಲೆಯ ಧೀನ ದಲಿತರ ಸರ್ವತೋಮುಖ ಅಭಿವೃದ್ಧಿಗೆ ಬೆಂಬಲಿಸುತ್ತಿವೆ.

****